"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

(159ನೇ ಅಧಿವೇಶನ)

ಸೋಮವಾರ, 17ನೇ ಆಗಸ್ಟ್ 2026

## ವಿಷಯಾನುಕ್ರಮಣಿಕೆ (INDEX)

1. ಸಂತಾಪ ಸೂಚನೆ

"ಕರ್ನಾಟಕ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಶ್ರೀಮತಿ ಜಯಮ್ಮ ಮಲ್ಲಿಕಾರ್ಜುನಸ್ವಾಮಿಯವರ ನಿಧನದ ಕುರಿತು"

- ಡಾ: ಯತೀಂದ್ರ ಎಸ್. (ಸಭಾನಾಯಕರು)
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)

2. ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಕಾವೇರಿ ವನ್ಯಜೀವಿ ಅಭಯಾರಣ್ಯದ ಹನೂರು ವನ್ಯಜೀವಿ ವಲಯದಲ್ಲಿ ನಡೆದಿರುವ ಶೂಟೌಟ್ ಪ್ರಕರಣದ ಬಗ್ಗೆ.

- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಡಾ: ಯತೀಂದ್ರ ಎಸ್. (ಸಭಾನಾಯಕರು)
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಐವನ್ ಡಿ'ಸೋಜಾ
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಶಿವರಾಜ್ ಎಸ್.ತಂಗಡಗಿ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)
- ಶ್ರೀ ಯು.ಟಿ.ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)
- ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು)
- ಶ್ರೀ ಬಿ.ಝಡ್. ಜಮೀರ್ ಅಹಮದ್ ಖಾನ್ (ವಸತಿ ಸಚಿವರು)

3. ಪ್ರಶ್ನೋತ್ತರ ಕಲಾಪವನ್ನು ಬದಿಗೊತ್ತಿ, ಪ್ರಸ್ತುತ ವಿದ್ಯಮಾನಗಳ ಬಗ್ಗೆ ಸದನದಲ್ಲಿ ಚರ್ಚಿಸಲು ಅವಕಾಶ ಕೋರಿ ವಿರೋಧ ಪಕ್ಷದವರಿಂದ ಒತ್ತಾಯ.

- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಡಾ ಯತೀಂದ್ರ ಎಸ್. (ಸಭಾನಾಯಕರು)
- ಶ್ರೀ ಯು.ಟಿ.ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

**4. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**56 – ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಮೊಟ್ಟೆ ವಿತರಿಸುತ್ತಿರುವ ಬಗ್ಗೆ.**
- ಶ್ರೀ ರಾಮೋಜಿಗೌಡ
- ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**21 – ಸಿಂಧನೂರು ತಾಲ್ಲೂಕಿಗೆ ಇಂಜಿನಿಯರಿಂಗ್ ಕಾಲೇಜು ಮಂಜೂರು ಮಾಡುವ ಬಗ್ಗೆ.**
- ಶ್ರೀ ಬಸನಗೌಡ ಬಾದರ್ಲಿ
- ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು)

**160 – ಮಕ್ಕಳಿಗೆ ಶೂ ಮತ್ತು ಸಾಕ್ಸ್ ವಿತರಿಸುವ ಬಗ್ಗೆ.**
- ಶ್ರೀಮತಿ ಬಲ್ಕೀಸ್ ಬಾನು
- ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**88 – ರಾಜ್ಯದಲ್ಲಿ ಕೋಲಿ ಸಮುದಾಯದ ಅಭಿವೃದ್ಧಿಗಾಗಿ ವಿಶೇಷ ಪ್ಯಾಕೇಜ್ ಕುರಿತು**
- ಶ್ರೀ ತಿಪ್ಪಣ್ಣಪ್ಪ ಕಮಕನೂರ
- ಶ್ರೀ ಶಿವರಾಜ್ ಎಸ್.ತಂಗಡಗಿ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**5. ನಿಯಮ 58ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವನೆಗಳು**

**ಅ) ರಾಜ್ಯದಲ್ಲಿ ಶಿಕ್ಷಕರನ್ನು ಆಡಳಿತಾತ್ಮಕ ಕಾರ್ಯಗಳಿಗೆ ನಿಯೋಜಿಸುತ್ತಿರುವುದರಿಂದ ಉಂಟಾಗುತ್ತಿರುವ ಸಮಸ್ಯೆಗಳ ಬಗ್ಗೆ.**
- ಶ್ರೀ ಡಿ.ಟಿ.ಶ್ರೀನಿವಾಸ (ಡಿ.ಟಿ.ಎಸ್)
- ಡಾ: ಯತೀಂದ್ರ ಎಸ್. (ಸಭಾನಾಯಕರು)

**ಆ) ರಾಜ್ಯದಲ್ಲಿ 27 ಜಿಲ್ಲೆಗಳ ಅಂತರ್ಜಲದಲ್ಲಿ ಅತ್ಯಂತ ಅಪಾಯಕಾರಿಯಾದ ನೈಟ್ರೇಟ್ ಸಾಂದ್ರತೆ ಹೆಚ್ಚಾಗಿರುವ ಹಾಗೂ ಕಲುಷಿತ ನೀರು ಕುಡಿದು ಸಾರ್ವಜನಿಕರ ಆರೋಗ್ಯ ಕ್ಷೀಣಿಸುತ್ತಿರುವ ಬಗ್ಗೆ.**
- ಶ್ರೀ ತಿಪ್ಪಣ್ಣಪ್ಪ ಕಮಕನೂರ
- ಡಾ: ಯತೀಂದ್ರ ಎಸ್. (ಸಭಾನಾಯಕರು)

**ಇ) ಬ್ಯಾಂಕ್‌ಗಳಿಂದ ಕಳೆದ 12 ವರ್ಷಗಳಲ್ಲಿ ₹10 ಲಕ್ಷ ಕೋಟಿ ಕಾರ್ಪೋರೇಟ್ ಸಾಲ 'ರೈಟ್ ಆಫ್' ಮಾಡಿರುವ ಕುರಿತು.**
- ಶ್ರೀಮತಿ ಬಲ್ಕೀಸ್ ಬಾನು
- ಡಾ: ಯತೀಂದ್ರ ಎಸ್. (ಸಭಾನಾಯಕರು)

6. ಸಭೆಯ ಮುಂದಿಡಲಾದ ಕಾಗದಪತ್ರಗಳು

7. ಕಾರ್ಯದರ್ಶಿಯವರ ವರದಿ

8. ವರದಿಯನ್ನೊಪ್ಪಿಸುವುದು

9. ಖಂಡನಾ ನಿರ್ಣಯ

"ದಿನಾಂಕ: 08.08.2026 ರಂದು ಉತ್ತರಾಖಂಡ ರಾಜ್ಯದ ಹಲ್ದವಾನಿ ರಾಮಲೀಲಾ ಮೈದಾನದಲ್ಲಿ ಕಾಂಗ್ರೆಸ್ ಪಕ್ಷ ಏರ್ಪಡಿಸಿದ್ದ ಸಾರ್ವಜನಿಕ ಸಭೆಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಮತ್ತು ರಾಜ್ಯ ಸಭೆಯ ವಿರೋಧ ಪಕ್ಷದ ನಾಯಕರಾದ ಡಾ॥ ಮಲ್ಲಿಕಾರ್ಜುನ ಖರ್ಗೆರವರು ಭಾಗವಹಿಸಿ ಮಾತನಾಡಿ ನಿರ್ಗಮಿಸಿದ ಮೇಲೆ ಮನುವಾದಿಗಳು ಡಾ॥ ಮಲ್ಲಿಕಾರ್ಜುನ ಖರ್ಗೆಯವರು ನಿಂತು ಭಾಷಣ ಮಾಡಿದ ಸ್ಥಳವನ್ನು ಹೋಮ ಹವನ ಮುಖಾಂತರ ಶುದ್ಧಿಗೊಳಿಸಿ ಸಾರ್ವಜನಿಕವಾಗಿ ಅಸ್ಪೃಶ್ಯತೆಯನ್ನು ಆಚರಿಸಿ ಭಾರತ ಸಂವಿಧಾನಕ್ಕೆ ಅಪಮಾನ ಮಾಡಿರುವ ಕುರಿತು."

– ಶ್ರೀ ಎಫ್.ಹೆಚ್. ಜಕ್ಕಪ್ಪನವರ್

(ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು)

(ಭೋಜನ ವಿರಾಮ)

10. ಸದನವು ಆರ್ಡರ್‌ನಲ್ಲಿ ಇಲ್ಲದಿರುವಾಗ ಕಲಾಪ ನಡೆಸುವುದು ನಿಯಮಬಾಹಿರ ಎಂದು ವಿರೋಧ ಪಕ್ಷದವರಿಂದ ಆಕ್ಷೇಪ."

– ಶ್ರೀ ಸಿ.ಟಿ.ರವಿ
– ಶ್ರೀ ಡಿ.ಎಸ್.ಅರುಣ್
– ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
– ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು)
– ಶ್ರೀ ಎಸ್.ಎಲ್.ಭೋಜೇಗೌಡ
– ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
– ಡಾ: ಯತೀಂದ್ರ ಎಸ್. (ಸಭಾನಾಯಕರು)

11. ಸಚಿವರ ಹೇಳಿಕೆ

"ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಕಾವೇರಿ ವನ್ಯಜೀವಿ ಅಭಯಾರಣ್ಯದ ಪ್ರಮುಖ ಭಾಗವಾಗಿರುವ ಹನೂರು ವನ್ಯಜೀವಿ ವಲಯದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಗುಂಡಿಗೆ 3 ಜನರು ಬಲಿಯಾಗಿರುವ ಕುರಿತು."

– ಶ್ರೀ ರಾಮಲಿಂಗರೆಡ್ಡಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)
– ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
– ಶ್ರೀ ಕೆ.ಶಿವಕುಮಾರ್

- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಪಿ.ಹೆಚ್.ಪೂಜಾರ್
- ಶ್ರೀ ಎಂ.ನಾಗರಾಜು
- ಶ್ರೀ ಕೇಶವ ಪ್ರಸಾದ್ ಎಸ್.
- ಶ್ರೀ ಕಿಶೋರ್ ಕುಮಾರ್ ಪುತ್ತೂರ್
- ಶ್ರೀ ಕೆ.ಎಸ್.ನವೀನ್
- ಶ್ರೀ ಸಿ.ಟಿ.ರವಿ
- ಶ್ರೀ ಪುಟ್ಟಣ್ಣ
- ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಶಿವಣ್ಣ ಬಿ.ಎಸ್.
- ಶ್ರೀ ರಘು ಆರ್.
- ಶ್ರೀ ರಾಮೋಜಿಗೌಡ
- ಶ್ರೀ ಡಿ.ಎಸ್.ಅರುಣ್
- ಡಾ: ಧನಂಜಯ ಸರ್ಜಿ
- ಶ್ರೀ ಹೆಚ್.ಪಿ.ಸುಧಾಮ್ ದಾಸ್
- ಶ್ರೀ ಬಿ.ಝಡ್. ಜಮೀರ್ ಅಹ್ಮದ್ ಖಾನ್ (ವಸತಿ ಸಚಿವರು)
- ಶ್ರೀಮತಿ ಬಲ್ಕೀಸ್ ಬಾನು
- ಶ್ರೀ ಯು.ಟಿ.ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

~ ~ ~ ~ ~ ~ ~

(704) 17.08.2026 11.10 TCH-AK

# ಕರ್ನಾಟಕ ವಿಧಾನ ಪರಿಷತ್ತು

ಸೋಮವಾರ, 17ನೇ ಆಗಸ್ಟ್ 2026

ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಬೆಳಗ್ಗೆ 11 ಗಂಟೆ 12 ನಿಮಿಷಕ್ಕೆ ಸಮಾವೇಶಗೊಂಡಿತು

ಸಭಾಪತಿಯವರಾದ ಶ್ರೀ ಸಲೀಂ ಅಹ್ಮದ್ ಅವರು ಪೀಠದಲ್ಲಿ ಉಪಸ್ಥಿತರಾದರು.

1. ಸಂತಾಪ ಸೂಚನೆ

**ವಿಷಯ:- ಕರ್ನಾಟಕ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಶ್ರೀಮತಿ ಜಯಮ್ಮ ಮಲ್ಲಿಕಾರ್ಜುನಸ್ವಾಮಿ ಅವರು ನಿಧನರಾದ ಕುರಿತು.**

- - - -

**ಶ್ರೀಮತಿ ಜಯಮ್ಮ ಮಲ್ಲಿಕಾರ್ಜುನಸ್ವಾಮಿ**

**ಸಭಾಪತಿಯವರು:-** ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀಮತಿ ಜಯಮ್ಮ ಮಲ್ಲಿಕಾರ್ಜುನಸ್ವಾಮಿ ಅವರು ದಿನಾಂಕ 15.08.2026ರಂದು ನಿಧನ ಹೊಂದಿರುತ್ತಾರೆ.

1940ರ ಏಪ್ರಿಲ್, 28 ರಂದು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಹಾನವಾಡಿ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಬಿ.ಎ., ಪದವೀದರರಾಗಿದ್ದರು. ವೃತ್ತಿಯಲ್ಲಿ ಕೃಷಿಕರಾಗಿದ್ದರಲ್ಲದೆ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಮೈಸೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ, ಬಾಲ ಕಾರ್ಮಿಕ ಸಲಹಾ ಸಮಿತಿಯ ಸದಸ್ಯರಾಗಿ ಹಾಗೂ ವಿಕಲಚೇತನರ ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು 1980-1986 ಮತ್ತು 1986-1992ರ ಅವಧಿಗೆ ವಿಧಾನಸಭಾ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಸರಳ ಸಜ್ಜನ ಹಿರಿಯ ರಾಜಕಾರಣಿ ಹಾಗೂ ಸಮಾಜ ಸೇವಕರೊಬ್ಬರನ್ನು ಕಳೆದುಕೊಂಡಂತಾಗಿದೆ.

**ಡಾ: ಯತೀಂದ್ರ. ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ತಾವು ತಂದಿರತಕ್ಕಂಥ ಸಂತಾಪ ಸೂಚನೆಯನ್ನು ಅನುಮೋದನೆ ಮಾಡುತ್ತೇನೆ. ಶ್ರೀಮತಿ ಜಯಮ್ಮ ಮಲ್ಲಿಕಾರ್ಜುನಸ್ವಾಮಿ ಅವರು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನವರು. ಅವರು 80ರ ದಶಕದಲ್ಲೇ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಎರಡು ಬಾರಿ ಸದಸ್ಯರಾಗಿದ್ದರು. ಹಲವು ಸಮಾಜ ಸೇವೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಂಥವರು. ಅಂತಹವರು ನಮ್ಮನ್ನೆಲ್ಲಾ ಬಿಟ್ಟು ಅಗಲಿದ್ದಾರೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹೇಳಿ ನಾನು ಈ ಸದನದ ಮೂಲಕ ಕೋರಿಕೊಳ್ಳುತ್ತಿದ್ದೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಶ್ರೀಮತಿ ಜಯಮ್ಮ ಮಲ್ಲಿಕಾರ್ಜುನಸ್ವಾಮಿಯವರು ಈ ಸದನದ ಸದಸ್ಯರಾಗಿದ್ದವರು. ಇವತ್ತು ಅವರು ನಿಧನರಾಗಿದ್ದಾರೆಂದು ಕೇಳಿ ನಮಗೆ ನೋವಾಗಿದೆ. ಈ ಸದನದಲ್ಲಿ ಸೇವೆ ಸಲ್ಲಿಸಿರತಕ್ಕಂಥ ಅವರ ಆತ್ಮಕ್ಕೆ ಶಾಂತಿ ಸಿಗಲಿ. ಅವರನ್ನು ಕಳೆದುಕೊಂಡಿರತಕ್ಕಂಥ ಕುಟುಂಬಕ್ಕೆ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ

ಎಂದು ನಾನು ಕೂಡ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

**ಸಭಾಪತಿಯವರು:-** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಸದನದ ಎಲ್ಲಾ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದಲ್ಲಿ ಉಪಸ್ಥಿತರಿದ್ದ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

**ಸಭಾಪತಿಯವರು:-** ಈ ಸದನವು ಅಂಗೀಕರಿಸಿದ ಸಂತಾಪ ಸೂಚನೆಯ ನಿರ್ಣಯವನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

**2. ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಕಾವೇರಿ ವನ್ಯಜೀವಿ ಅಭಯಾರಣ್ಯದ ಹನೂರು ವನ್ಯಜೀವಿ ವಲಯದಲ್ಲಿ ನಡೆದಿರುವ ಶೂಟೌಟ್ ಪ್ರಕರಣದ ಬಗ್ಗೆ**

- - - - -

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಒಂದು ಅಮಾನವೀಯ ಘಟನೆ ನಡೆದಿದೆ. ಕೊಳ್ಳೆಗಾಲ ತಾಲ್ಲೂಕಿನಲ್ಲಿ 3 ಜನರನ್ನು encounter ಮಾಡಲಾಗಿದೆ. ಇದು ಒಂದು ರೀತಿಯ ಅಮಾನವೀಯ ಘಟನೆ ಮತ್ತು ಅವರನ್ನು ನೇರವಾಗಿ ಗುಂಡಿಕ್ಕಿ ಕೊಲ್ಲಲಾಗಿದೆ. ಅವರೇನಾದರು ಇವರ ಮೇಲೆ ಮೇಲೆ attack ಮಾಡಿದ್ದಾರೆಂದರೆ . . .

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಮೊದಲು Question Hour ತೆಗೆದುಕೊಳ್ಳೋಣ. ಅದಾದ ನಂತರ ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ಘಟನೆ ಸದನ ನಡೆಯತಕ್ಕಂಥ ಸಂದರ್ಭದಲ್ಲಿ ಆಗಿದೆ. ಕ್ಷುಲ್ಲಕ ವಿಷಯವಾಗಿದ್ದರೆ question and answer ತೆಗೆದುಕೊಳ್ಳಬೇಡಿ ಎಂದು ನಾವು ಹೇಳುವುದಿಲ್ಲ. ಮೊದಲು ಸರ್ಕಾರ ಅದರ ಬಗ್ಗೆ ಹೇಳಿಕೆ ಮಾಡಲಿ. Immediately, ಅದನ್ನು inquiry ಮಾಡುವುದಕ್ಕೆ ತಹಶೀಲ್ದಾರ್‌ರವರನ್ನು ನೇಮಿಸಿದ್ದಾರೆ. ಇದು ಸಾಧುವಾದುದಲ್ಲ. Judicial Inquiry ಆಗಬೇಕು. ಮೊದಲು ಅದಕ್ಕೆ ಸರ್ಕಾರ ಉತ್ತರ ಕೊಡಲಿ. ಅದಾದ ನಂತರ, ಬೇರೆ ವಿಷಯ ತೆಗೆದುಕೊಳ್ಳಲಿ.

**ಸಭಾಪತಿಯವರು:-** ನಮ್ಮಲ್ಲಿ ಎಲ್ಲಾ ವಿಚಾರಗಳಲ್ಲೂ ಕೂಡ ಮೊದಲು Question Hour ತೆಗೆದುಕೊಳ್ಳುವುದು ಸಂಪ್ರದಾಯ. ಮೊದಲು ಪ್ರಶ್ನೋತ್ತರ ತೆಗೆದುಕೊಳ್ಳುತ್ತೇವೆ. ಅದಾದ ನಂತರ ಸರ್ಕಾರ ಅದಕ್ಕೆ ಉತ್ತರ ಕೊಡುತ್ತದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಕ್ರಮದ ಬಗ್ಗೆ ನಮ್ಮ ಪ್ರಶ್ನೆ ಇಲ್ಲ.

**ಸಭಾಪತಿಯವರು:-** ಈಗ ಪ್ರಶ್ನೋತ್ತರ ತೆಗೆದುಕೊಳ್ಳುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಒಂದು ಅಮಾನವೀಯ ಘಟನೆ. ಒಂದೇ ಕುಟುಂಬದ ಮೂವರನ್ನು ಗುಂಡಿಕ್ಕಿ ಕೊಲ್ಲುವುದೆಂದರೆ, ಅವರು ಮಾಡಿದ್ದೇನು? ಸರ್ಕಾರ ಇದನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಿದೆ. ದಯವಿಟ್ಟು . . .

**(ಗೊಂದಲ)**

**ಸಭಾಪತಿಯವರು:-** ಸರ್ಕಾರ ಅದರ ಬಗ್ಗೆ ಹೇಳಿಕೆ ಕೊಡುತ್ತದೆ. ಅದಕ್ಕೆ ಮುಂಚೆ . . .

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ದಾರಿ ತಪ್ಪಿಸುವಂಥ ಪರಿಸ್ಥಿತಿ ಇದೆ. ಆದ್ದರಿಂದ ಮೊದಲು ಅದರ ಬಗ್ಗೆ ಸರ್ಕಾರ ಹೇಳಿಕೆ ಮಾಡಲಿ. ಅದಾದ ನಂತರ question and answer ತೆಗೆದುಕೊಳ್ಳಿ.

**(ಗೊಂದಲ)**

**ಡಾ: ಯತೀಂದ್ರ. ಎಸ್:-** ಮಾನ್ಯ ಸಭಾಪತಿಯವರೇ, ನನಗೆ ಬಂದಿರುವ ಮಾಹಿತಿ ಪ್ರಕಾರ ಮಾನ್ಯ ಅರಣ್ಯ ಸಚಿವರು Magisterial Inquiry ಗೆ ಆದೇಶಿಸಿದ್ದಾರೆ. ಒಂದು ವೇಳೆ ಅಮಾಯಕರ ಪ್ರಾಣ ಹೋಗಿದ್ದರೆ, ನಮ್ಮ ಸರ್ಕಾರ ಅದನ್ನು ಗಂಭೀರವಾಗಿ ಪರಿಗಣಿಸುತ್ತದೆ. **(ಗೊಂದಲ)** ಈಗಾಗಲೇ ಮಾನ್ಯ ಅರಣ್ಯ ಸಚಿವರು ತನಿಖೆಗೆ ಆದೇಶ ಮಾಡಿದ್ದಾರೆ. **(ಗೊಂದಲ)** Magisterial Inquiry ಮಾಡಲು ಆದೇಶ ಕೊಟ್ಟಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಸಭಾನಾಯಕರೇ, ಒಂದು ನಿಮಿಷ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ದಯಮಾಡಿ ಆ ನೊಂದ ಕುಟುಂಬಗಳಿಗೆ ರೂ.10 ಲಕ್ಷಗಳು ಕೊಟ್ಟ ತಕ್ಷಣವೇ ಅವರ ಪ್ರಾಣ ಮತ್ತೆ ವಾಪಸ್ಸು ಬರುವುದಿಲ್ಲ.

**(ಗೊಂದಲ)**

**ಸಭಾಪತಿಯವರು:-**. ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರೇ, ನಾನು ನಿಮಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರ ಕುಟುಂಬದ ಪರಿಸ್ಥಿತಿ ಹೇಗಿದೆಯೆಂದು ಅರ್ಥ ಮಾಡಿಕೊಳ್ಳಿ.

**(ಗೊಂದಲ)**

**ಸಭಾಪತಿಯವರು:-** ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರೇ, ದಯವಿಟ್ಟು ತಾವು ಹೇಳಿದ್ದೀರಿ. ನಾನು ಸರ್ಕಾರದಿಂದ ಉತ್ತರ ಕೊಡಿಸುತ್ತೇನೆ. ತಾವು ಕುಳಿತುಕೊಳ್ಳಿ. ಈಗ Question Hour ತೆಗೆದುಕೊಳ್ಳೋಣ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮೊದಲು ಸರ್ಕಾರ ಉತ್ತರ ಕೊಡಲಿ. ಅದಾದ ನಂತರ ನಾವು ಮುಂದುವರೆಯೋಣ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಶ್ರೀ ಪುಟ್ಟರಂಗಶೆಟ್ಟಿಯವರೇ ಹೇಳಿದ್ದಾರೆ. ಏನೆಂದರೆ ಇದು brutal...

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿರುವಾಗ ನೀವು ಎದ್ದು ನಿಂತು ಏಕೆ ಕೇಳುತ್ತೀರಾ?

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇದು magistrate ಗೆ ಕೊಡತಕ್ಕಂಥ ಘಟನೆಯೇ? ಇದು ನ್ಯಾಯಾಂಗ ತನಿಖೆ ಆಗಬೇಕು. ಇದು ಒಂದು ದೊಡ್ಡ ಘಟನೆ. ಹತ್ತಿರದಿಂದ shootout ಮಾಡಿದ್ದಾರೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದನ್ನು Judicial Inquiry ಗೆ ಕೊಡಬೇಕು. ಅರಣ್ಯಕ್ಕೆ ಹೋದವರನ್ನೆಲ್ಲಾ shoot ಮಾಡುತ್ತಾ ಹೋದರೆ, forest ಎಲ್ಲಾ ಉಳಿದುಬಿಡುತ್ತದೆಯೇ? ಇವತ್ತಿನ ದಿವಸ forestನಲ್ಲಿ ಕಾಡನ್ನು ಕಾಯುವ ಅಧಿಕಾರಿಗಳೇ ಕಾಡುಕಳ್ಳರು.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಅಧಿಕಾರಿಗಳು **ಕೊಲೆಗೆ** . . . ಅಧಿಕಾರಿಗಳೇ ಅವರನ್ನು ಕೊಂದಿದ್ದಾರೆಂದರೆ ಇದು ಬಹಳ ಸುಲಭದ ವಿಚಾರವೇನಲ್ಲ. ಇದರ ಬಗ್ಗೆ ತನಿಖೆಯಾಗಬೇಕಾದಂಥ ಅವಶ್ಯಕತೆ ಇದೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ರೀತಿ ಅಮಾನುಷವಾಗಿ shoot ಮಾಡಿದ್ದಾರೆ. ಅದರಲ್ಲೂ ಅವರು minorities ಆಗಿದ್ದಾರೆ. ಇವರು ಅವರನ್ನು ರಕ್ಷಣೆ ಮಾಡಬೇಕೋ, ಬೇಡವೋ?

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಅವರನ್ನು ಗುಂಡಿಕ್ಕಿ ಕೊಲ್ಲುವುದೆಂದರೆ, encounter ಮಾಡುವುದಾದರೆ, encounter ಮಾಡುವುದಕ್ಕೆ **(ಗೊಂದಲ)** ಅವರ ಹತ್ತಿರ ಬಂದೂಕು . . .

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾ ರವರೇ, ತಾವು ಕುಳಿತುಕೊಳ್ಳಿ.

**Sri CHALAVADI T. NARAYANASWAMY:** They are minorities.

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ನಾನು ಈಗಾಗಲೇ ತಮಗೆ ಹೇಳಿದ್ದೇನೆ. ಸರ್ಕಾರದಿಂದ ಉತ್ತರ ಕೊಡಿಸುತ್ತೇನೆ. ಆದರೆ ಈಗಲ್ಲ. I cannot compromise question-answers.

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅಲ್ಲಿ F.I.R ಆಗಿದೆ ಎಂದು ಸರ್ಕಾರ ಹೇಳಿದೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಹೇಮಲತಾ ನಾಯಕ್ ರವರೇ, ತಾವು ತಮ್ಮ ಪ್ರಶ್ನೆ ಕೇಳಿ. ತಾವು ಪ್ರಶ್ನೆ ಕೇಳದಿದ್ದರೆ ನಾನು ಬೇರೆಯವರ ಹೆಸರನ್ನು ಕರೆಯುತ್ತೇನೆ. If you don't ask, I will have to call somebody else.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮೊದಲು ಅಧಿಕಾರಿಗಳನ್ನು arrest ಮಾಡಬೇಕು. ಅವರನ್ನೆಲ್ಲಾ ಓಡಾಡುವುದಕ್ಕೆ ಬಿಟ್ಟರೆ ನ್ಯಾಯ ಕೊಡುವುದು ಯಾವಾಗ?

**(ಗೊಂದಲ)**

**ಸಭಾಪತಿಯವರು:–** ನಾನು ಸರ್ಕಾರದಿಂದ ಉತ್ತರ ಕೊಡಿಸುತ್ತೇನೆಂದು ಹೇಳಿದ್ದೇನೆ. ನಾನೇ ಉತ್ತರ ಕೊಡಿಸುತ್ತೇನೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಮಾತನಾಡುತ್ತಾರೆ, ಅವರಿಗೆ ಅವಕಾಶ ಕೊಡಿ.

**ಸಭಾಪತಿಯವರು:–** ಆಯಿತು. ಮಾನ್ಯ ಸಭಾನಾಯಕರೇ, ತಾವು ಮಾತನಾಡಿ.

**ಡಾ: ಯತೀಂದ್ರ. ಎಸ್:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಎಲ್ಲರ ಪ್ರಾಣವನ್ನು ರಕ್ಷಣೆ ಮಾಡುವುದಕ್ಕೆ ಸರ್ಕಾರ ಬದ್ಧವಾಗಿದೆ. ಒಂದು ವೇಳೆ ಅನ್ಯಾಯವಾಗಿದ್ದರೆ ಅದನ್ನು ಸರಿಪಡಿಸುವುದಕ್ಕೆ ನಾವು ತಯಾರಿದ್ದೇವೆ. ಆದರೆ ನಂತರ ಅದನ್ನು ಚರ್ಚೆಗೆ ತೆಗೆದುಕೊಳ್ಳಲಿ. ಚರ್ಚೆಗೆ ತೆಗೆದುಕೊಂಡಾಗ ಮಾನ್ಯ ಸಚಿವರೇ ಬಂದು ಸರ್ಕಾರದ ಪರವಾಗಿ ಉತ್ತರ ಕೊಡುತ್ತಾರೆ. ಈಗ ದಯವಿಟ್ಟು ಪ್ರಶ್ನೋತ್ತರಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳುತ್ತಿದ್ದೇನೆ.

(ಮುಂದು)

(705)17.8.2026/11.20/ಎಂ.ಎಂ–ಆರ್.ಎನ್ (ಸಭಾಪತಿಯವರ ಉಪಸ್ಥಿತಿ)

**ಡಾ: ಯತೀಂದ್ರ. ಎಸ್ (ಸಭಾನಾಯಕರು) (ಮುಂದು):**

ನಂತರ ಚರ್ಚೆಗೆ ತೆಗೆದುಕೊಂಡಾಗ ಮಂತ್ರಿಗಳೇ ಬಂದು ಸರ್ಕಾರದ ಪರವಾಗಿ ಉತ್ತರ ಕೊಡುತ್ತಾರೆ. ಈಗ ದಯವಿಟ್ಟು ಪ್ರಶ್ನೋತ್ತರಗಳಿಗೆ ಅವಕಾಶ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)**:– ಮಾನ್ಯ ಸಭಾಪತಿಯವರೇ, ಈಗಾಗಲೇ ಎಫ್.ಐ.ಆರ್. ಹಾಕಿದ್ದಾರೆ. Judicial Enquiry ಗೆ ಕೊಡಿ ಎಂದರೆ ತಾಲ್ಲೂಕು ಮ್ಯಾಜಿಸ್ಟ್ರೇಟ್‌ಗೆ ಕೊಟ್ಟಿದ್ದಾರೆ. ಮೂರು ಜನರು ಪ್ರಾಣ ಕಳೆದುಕೊಂಡಿರುವುದು ಸಣ್ಣ ವಿಷಯವೇ?

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ ಒಂದು ನಿಮಿಷ ಕೇಳಿ. ಮಾನ್ಯ ಸಭಾನಾಯಕರು ಮಂತ್ರಿಗಳು ಬಂದು ಉತ್ತರ ಕೊಡುತ್ತಾರೆ ಎಂದು ಹೇಳಿದ ಮೇಲೂ ಕೂಡ ನೀವು ಮತ್ತೆ ಅದನ್ನೇ ಕೇಳುತ್ತಿದ್ದೀರಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಈಗ ಬರಲಿ ಉತ್ತರ ಕೊಡಲಿ, ಮಂತ್ರಿಗಳನ್ನು ಕರೆಸಿ.

**ಡಾ: ಯತೀಂದ್ರ. ಎಸ್** (**ಸಭಾನಾಯಕರು**):- ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಯಾವುದೇ ನೋಟಿಸನ್ನು ಸಹ ಕೊಟ್ಟಿಲ್ಲ (**ಗೊಂದಲ**) ತಕ್ಷಣ ಹೇಗೆ ಕೊಡುವುದಕ್ಕಾಗುತ್ತದೆ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಅದನ್ನು Judicial Enquiry ಕ್ಕೆ ಕೊಡಲಿ ಅವರಿಗೆ ಒಂದು ಕೋಟಿ ರೂಪಾಯಿಗಳ ಪರಿಹಾರವನ್ನು ಕೊಡಲಿ. ಅವರಿಗೆ ಕೆಲಸ ಕೊಡಬೇಕು. ಸರ್ಕಾರ ಇಷ್ಟ ಬಂದ ಹಾಗೆ ಗುಂಡು ಹೊಡೆದು ಯಾರನ್ನಾದರೂ ಕೊಲ್ಲಬಹುದು ಎಂದು ಇದೆಯೇ?

**(ಗೊಂದಲ)**

**ಶ್ರೀ ಶಿವರಾಜ್ ಎಸ್. ತಂಗಡಗಿ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು):-** ಮಾನ್ಯ ಸಭಾಪತಿಯವರೇ, ಸಚಿವರು ಬಂದು ಉತ್ತರ ಕೊಡುತ್ತಾರೆ. ನಾವು ಉತ್ತರ ಕೊಡುವುದಕ್ಕೆ ಸಿದ್ಧರಿದ್ದೇವೆ.

**ಶ್ರೀ ಎನ್. ರವಿಕುಮಾರ್(ವಿರೋಧಪಕ್ಷದ ಮುಖ್ಯಸಚೇತಕರು):-** ಮಾನ್ಯ ಸಭಾಪತಿಯವರೇ, 5 ಲಕ್ಷ ರೂಪಾಯಿಗಳ ಭಿಕ್ಷೆ ಕೊಡುತ್ತಾರಾ? ಒಂದು ಕುಟುಂಬಕ್ಕೆ 5 ಕೋಟಿ ರೂಪಾಯಿಗಳ ಪರಿಹಾರ ಕೊಡಬೇಕು. ಇದನ್ನು ನ್ಯಾಯಾಂಗ ತನಿಖೆ ಮಾಡಿಸಬೇಕು.

**(ಗೊಂದಲ)**

**ಡಾ: ಯತೀಂದ್ರ. ಎಸ್:-** ಮೊದಲು ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳಿ.

**ಶ್ರೀ ಬಿ.ಝಡ್. ಜಮೀರ್ ಅಹಮದ್ ಖಾನ್:-** ಸಂಬಂಧಪಟ್ಟ ಮಂತ್ರಿಗಳು ಬಂದು ಉತ್ತರ ಕೊಡುತ್ತಾರೆ.

**ಸಭಾಪತಿಯವರು:-** ದಯವಿಟ್ಟು ಕುಳಿತುಕೊಳ್ಳಿ. ಸರ್ಕಾರ ಹೇಳಿದೆ. ಮಂತ್ರಿಗಳಿಂದ ಉತ್ತರ ಕೊಡಿಸುತ್ತೇವೆಂದು ಮಾನ್ಯ ಸಭಾನಾಯಕರು ಹೇಳಿದ್ದಾರೆ. ಸರ್ಕಾರದ ಉತ್ತರವನ್ನು ಕೇಳಿದ ಮೇಲೆ ಅಲ್ಲವೇ ನೀವು ಮತ್ತೆ ಏನಾದರೂ ಕೇಳಬೇಕು. Already, Hon'ble Floor Leader has made it very clear. Wait for some time. ಅವರನ್ನು ಕರೆಸಿ ಉತ್ತರ ಕೊಡಿಸುತ್ತೇವೆ ಎಂದು ಹೇಳಿದ್ದಾರೆ. ಅಲ್ಲಿಯವರೆಗೂ ತಾಳ್ಮೆ ಇರಲಿ. ಪ್ರಶ್ನೋತ್ತರಗಳಲ್ಲಿ ನಿಮ್ಮದೇ ಪ್ರಶ್ನೆಗಳು ಜಾಸ್ತಿ ಇವೆ. ಪ್ರಶ್ನೆಗಳಿಗೆ ಇವತ್ತು ಎಷ್ಟು ಕಷ್ಟದಲ್ಲಿ ಉತ್ತರಗಳು ಬರುತ್ತವೆ ಅದನ್ನು ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ ಎಂದರೆ ಹೇಗೆ? ಪ್ರಶ್ನೋತ್ತರಗಳಾಗಲಿ ನಂತರ ಅದನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಜಿಂಕೆ ಮಾಂಸ ಬಂದಿದೆ ಎಂದು ಹೇಳುತ್ತಾರೆ.

**ಶ್ರೀ ಯು.ಟಿ. ಖಾದರ್(ಅಲ್ಪಸಂಖ್ಯಾತರ ಕಲ್ಯಾಣ, ಹಜ್ & ವಕ್ಫ್ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರು ತೀರ್ಮಾನ ಕೊಟ್ಟ ಮೇಲೂ ಮತ್ತೆ ಏತಕ್ಕೆ ಮಾತನಾಡುತ್ತೀರಿ? ಗೋಲಿಬಾರ್ ಆದಂತಹ ಸಾವಿನಲ್ಲಿ ನೀವು ರಾಜಕೀಯ ಮಾಡುತ್ತೀರಾ? ಗೋಲಿಬಾರ್ ಆದಂತಹ ಸಾವಿನಲ್ಲಿ ರಾಜಕೀಯ ಮಾಡುವುದಕ್ಕೆ ನೀವು ಬಂದಿದ್ದೀರಾ? ಮಂತ್ರಿಗಳು ಉತ್ತರ ಕೊಡುತ್ತಾರೆ.

**(ಗೊಂದಲ)**

**ಸಭಾಪತಿಯವರು:-** ಈಗ ಪ್ರಶ್ನೋತ್ತರಗಳು. ಶ್ರೀಮತಿ ಹೇಮಲತಾ ನಾಯಕ್‌ರವರ ಪ್ರಶ್ನೆ.

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:-** ಏನು ಉತ್ತರ ಕೊಡುತ್ತಾರೆ? ಯಾರಿಗೆ ಉತ್ತರ ಕೊಡುತ್ತಾರೆ?

**ಶ್ರೀ ಶಿವರಾಜ್ ಎಸ್. ತಂಗಡಗಿ:-** ಮಾನ್ಯ ಸಭಾಪತಿಯವರೇ, ಅರೆಸ್ಟ್ ಮಾಡಿದ್ದಾರೋ ಇಲ್ಲವೋ ಎಂಬ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಬಂದು ಉತ್ತರ ಕೊಡುತ್ತಾರೆ. ಗೋಲಿಬಾರ್ ಸಾವಿನಲ್ಲಿ ಇವರು ರಾಜಕಾರಣ ಮಾಡುತ್ತಿದ್ದಾರಾ?

**ಸಭಾಪತಿಯವರು:-** ಯಾವುದೂ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶದಂತೆ ಈ ಹಂತದಲ್ಲಿನ ನಡವಳಿಯನ್ನು ದಾಖಲಿಸಿರುವುದಿಲ್ಲ)**

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಎಫ್.ಐ.ಆರ್. ಆಗಿದೆ ಎಂದು ಸರ್ಕಾರ ಹೇಳಿದೆ. **(ಗೊಂದಲ)**

**ಶ್ರೀ ಯು.ಟಿ. ಖಾದರ್:-** ಅದಕ್ಕೆ ಗೃಹ ಸಚಿವರು ಬಂದು ಉತ್ತರ ಕೊಡುತ್ತಾರೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧಪಕ್ಷದ ನಾಯಕರಾಗಲೀ, ವಿರೋಧ ಪಕ್ಷದ ಸದಸ್ಯರಾಗಲೀ ಸದನದ ನಿಯಮಾವಳಿ ಪ್ರಕಾರ ಯಾವುದೇ; ನಿಯಮಾವಳಿ ಪುಸ್ತಕ ಇರುವುದು ಯಾಕೆ? Why there is a Rules Book? ಸದನದ ನಿಯಮಾವಳಿ ಪ್ರಕಾರ ನೀವು ಯಾವುದೇ ಸೂಚನೆಯನ್ನು ಸಭಾಪತಿಗಳಿಗೆ ಕೊಟ್ಟಿಲ್ಲ.

**(ಗೊಂದಲ)**

**ಡಾ: ಯತೀಂದ್ರ. ಎಸ್:-** ಏಕಾಏಕಿ ಪ್ರಶ್ನೆ ಕೇಳಿದರೆ ಹೇಗೆ ಉತ್ತರ ಕೊಡುವುದಕ್ಕಾಗುತ್ತದೆ?

**ಶ್ರೀ ಎಸ್.ಎಲ್. ಭೋಜೇಗೌಡ:-** ಅಧಿಕಾರಿಗಳನ್ನು ಅರೆಸ್ಟ್ ಮಾಡಿ.

**ಶ್ರೀ ಶಿವರಾಜ್ ಎಸ್. ತಂಗಡಗಿ:-** ಸಂಬಂಧಪಟ್ಟ ಮಂತ್ರಿಗಳು ಬಂದು ಉತ್ತರ ಕೊಡುತ್ತಾರೆ ಎಂದು ಸಭಾನಾಯಕರು ಹೇಳಿದ್ದಾರಲ್ಲವೇ?

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅವರ ಎದೆಗೆ ಗುಂಡು ಹಾರಿಸಿದ್ದಾರೆ.

**(ಗೊಂದಲ)**

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ವಿರೋಧಪಕ್ಷದ ಸದಸ್ಯರಿಗೆ ಹೇಳುವುದಕ್ಕೆ ಇಷ್ಟ ಪಡುವುದೇನೆಂದರೆ, ದಯವಿಟ್ಟು ಸದನದ ನಿಯಮಾವಳಿಗಳನ್ನು ಪಾಲಿಸಿ. ನೀವು ಸೂಚನೆಗಳನ್ನು ಕೊಟ್ಟಿಲ್ಲ, ಆದರೂ ಚರ್ಚೆ ಮಾಡುವುದಕ್ಕೆ ನಮ್ಮ ಅಭ್ಯಂತರವಿಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮೂರು ಜನ ಅಮಾಯಕರು ಬಲಿಯಾಗಿದ್ದಾರೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಇದಕ್ಕೆ ಸರ್ಕಾರ ಸಮರ್ಪಕವಾದ ಉತ್ತರ ಕೊಡುವುದಕ್ಕೆ ತಯಾರಿದೆ. ದಯವಿಟ್ಟು ಸದನದ ನಿಯಮಾವಳಿಯನ್ನು ಪಾಲಿಸಬೇಕು. ಸಭಾಪತಿಗಳಿಗೆ ಮುಂಚಿತವಾಗಿ ನೋಟಿಸ್ ಕೊಟ್ಟಿಲ್ಲ ಮತ್ತು ಸರ್ಕಾರಕ್ಕೆ ಇದರ ಬಗ್ಗೆ ಸರಿಯಾಗಿ ಮಾಹಿತಿ ಇಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇವೆಲ್ಲವನ್ನೂ ಗಾಳಿಗೆ ತೂರಿ ಮಂತ್ರಿಗಳು ಹೇಳಿಕೆ ಮಾಡುತ್ತಾರೆ (ಗೊಂದಲ) ಅವರಿಗೆ ಎಲ್ಲಿ ಸಿಕ್ಕಿತು?

**ಡಾ: ಯತೀಂದ್ರ. ಎಸ್:-** ಮಾನ್ಯ ಸಭಾಪತಿಯವರೇ, ಅವರು ಏನೇ ಪ್ರಶ್ನೆ ಕೇಳಿದರೂ ನಾವು ಉತ್ತರ ಕೊಡುತ್ತೇವೆ. ಪ್ರಶ್ನೋತ್ತರಗಳಾದ ನಂತರ ನಾವು ಉತ್ತರ ಕೊಡುತ್ತೇವೆ. ಅಲ್ಲಿಯವರೆಗೂ ಸ್ವಲ್ಪ ತಾಳ್ಮೆಯಿಂದ ಇರಲು ತಿಳಿಸಿ.

**ಶ್ರೀ ಎನ್. ರವಿಕುಮಾರ್(ವಿರೋಧ ಪಕ್ಷದ ಮುಖ್ಯಸಚೇತಕರು):-** ಮಾನ್ಯ ಸಭಾಪತಿಯವರೇ, ರೂಲ್ಸ್ ಪ್ರಕಾರ ಮೊಣಕಾಲಿನಿಂದ ಕೆಳಗೆ 'ಶೂಟ್ ಔಟ್' ಮಾಡಬೇಕು. ಆದರೆ ಎದೆಗೆ ಗುಂಡು ಹಾರಿಸಿದ್ದಾರೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಈ ರೀತಿ ಆಕ್ಷೇಪಣೆ ಮಾಡುವುದು ಸರಿಯಲ್ಲ.

**ಸಭಾಪತಿಯವರು:-** ಮಾನ್ಯ ವಿರೋಧಪಕ್ಷದ ಮುಖ್ಯಸಚೇತಕರೇ, ಸರ್ಕಾರ ಉತ್ತರ ಕೊಡಲು ತಯಾರಿದೆ ಎಂದು ಹೇಳಿದೆ, ನೀವು ದಯವಿಟ್ಟು ಸಹಕಾರ ಕೊಡಬೇಕು. ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳುವುದು ಬೇಡವೇ?

**ಶ್ರೀ ಎನ್. ರವಿಕುಮಾರ್:-** ಮೊದಲು ಇದನ್ನು ಮುಗಿಸಿ.

**ಸಭಾಪತಿಯವರು:-** ಪ್ರಶ್ನೋತ್ತರಗಳನ್ನು ತೆಗೆದುಕೊಂಡ ನಂತರ ಅದನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಬಿ.ಝೆಡ್. ಜಮೀರ್ ಅಹಮದ್ ಖಾನ್:-** ಮಾನ್ಯ ಸಭಾಪತಿಯವರೇ, ಎದೆಗೆ ಗುಂಡು ಹೊಡೆದಿದ್ದಾರೆಂದು ಮಾನ್ಯ ರವಿಕುಮಾರ್‌ರವರು ಹೇಳುತ್ತಿದ್ದಾರೆ. ಅವರನ್ನು ಕೇಳಬಯಸುವುದೇನೆಂದರೆ, ಅವರೇ post-mortem ಮಾಡಿದ್ದಾರಾ?

**(ಗೊಂದಲ)**

**ಡಾ: ಯತೀಂದ್ರ. ಎಸ್:-** ಮಾನ್ಯ ಸಭಾಪತಿಯವರು ರೂಲಿಂಗ್ ಕೊಟ್ಟಾಗಿದೆ ಮತ್ತೆ ಏತಕ್ಕೆ ಇದರ ಬಗ್ಗೆ ಚರ್ಚೆ ಮಾಡುತ್ತೀರಿ? ನಾವು ಉತ್ತರ ಕೊಡುವುದಕ್ಕೆ ತಯಾರಿದ್ದೇವೆ. ಆದರೆ ನಿಯಮಾವಳಿ ಪ್ರಕಾರ ಸೂಚನೆ ಕೊಟ್ಟು ಕೇಳಿ. ಸದನ ನಿಯಮಾವಳಿ ಪ್ರಕಾರ ನಡೆಯಬೇಕು ಎಂದು ಹೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಬಸವರಾಜ ರಾಯರೆಡ್ಡಿ:-** ನಾವು ಚರ್ಚೆ ಮಾಡುವುದಕ್ಕೆ ರೆಡಿ ಇದ್ದೇವೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು **[XXX]**

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಇದನ್ನು ಕಡತದಿಂದ ತೆಗೆದು ಹಾಕಬೇಕು.

**ಡಾ: ಯತೀಂದ್ರ. ಎಸ್:-** ಮಾನ್ಯ ಸಭಾಪತಿಯವರೇ, **[XXX]** ಎಂಬುದನ್ನು ಕಡತದಿಂದ ತೆಗೆದು ಹಾಕಬೇಕು.

**ಸಭಾಪತಿಯವರು:- ಇದ್ಯಾವುದೂ ಕಡತಕ್ಕೆ ಹೋಗಬಾರದು. ಇದನ್ನು ಮಾಧ್ಯಮಗಳು ಸಹ ಕಡತಕ್ಕೆ ತೆಗೆದುಕೊಳ್ಳಬಾರದು.**

**ಡಾ: ಯತೀಂದ್ರ. ಎಸ್:-** ಸರ್ಕಾರದಿಂದ ಯಾರೂ ಆದೇಶ ಕೊಟ್ಟಿಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಅದನ್ನು ಏತಕ್ಕೆ ನೀವು ಕಂಟ್ರೋಲ್ ಮಾಡಿಲ್ಲ? ಅದಕ್ಕೆ ಸಮಜಾಯಿಷಿ ಕೊಡಿ.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರುಗಳು ಎದ್ದು ನಿಂತು ಘೋಷಣೆ ಕೂಗುತ್ತಿದ್ದರು)**

**ಡಾ: ಯತೀಂದ್ರ. ಎಸ್:-** ಉತ್ತರ ಕೊಡುತ್ತೇವೆಂದರೂ ನೀವು ಕೇಳುವುದಕ್ಕೆ ತಯಾರಿಲ್ಲವಲ್ಲಾ? ಉತ್ತರ ಕೊಡಲು ಸಮಯ ಕೊಡಿ ಸಚಿವರು ಬಂದು ಉತ್ತರ ಕೊಡುತ್ತಾರೆ.

**ಶ್ರೀ ಬಸವರಾಜ ರಾಯರೆಡ್ಡಿ:-** ನಿಮಗೆ ಉತ್ತರ ಬೇಡವೇ?

**ಡಾ: ಯತೀಂದ್ರ. ಎಸ್:-** ಮಾನ್ಯ ಸಭಾಪತಿಯವರೇ, ಇವರಿಗೆ ಉತ್ತರವೂ ಬೇಡ, ಚರ್ಚೆಯೂ ಬೇಡ ಎಂದನಿಸುತ್ತದೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಇದು ಸರಿಯಲ್ಲ. ಅವರು ಉತ್ತರ ಕೊಡುತ್ತೇವೆ ಎಂದು ಹೇಳಿದರೂ ಕೂಡ ನೀವು ಸದನವನ್ನು ಈ ತರಹ ನಡೆಸುವುದು ಸರಿಯಲ್ಲ. ಮಂತ್ರಿಗಳು ಉತ್ತರ

ಕೊಡುವುದಿಲ್ಲ ಎಂದರೆ ನೀವು ಮಾಡಬಹುದಾಗಿತ್ತು. ಅವರು ಉತ್ತರ ಕೊಡುತ್ತೇವೆ ಎಂದು ಹೇಳಿದರೂ ಕೂಡ ದಯವಿಟ್ಟು ಸದನದ ಸಮಯವನ್ನು ಹಾಳು ಮಾಡಬೇಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮೂರು ಜನರನ್ನು ಗುಂಡುಗಳನ್ನು ಹೊಡೆದು ಕೊಂದಿದ್ದಾರೆ. ನಡೆದಿರುವ ಘಟನೆಯ gravity ಯನ್ನು ತಾವು ಅರ್ಥ ಮಾಡಿಕೊಳ್ಳಿ.

**ಸಭಾಪತಿಯವರು:-** ಸಭಾನಾಯಕರು ಮಂತ್ರಿಗಳು ಉತ್ತರ ಕೊಡುತ್ತಾರೆ ಎಂದು ಹೇಳಿದರೂ ಕೂಡ ಹೀಗೆ ವಾದ ಮಾಡುವುದು ಸರಿಯಲ್ಲ. ಈಗ ಸದನ ನಡೆಯಬೇಕು. ಪ್ರಶ್ನೋತ್ತರಗಳಾಗಬೇಕು.

**(ಗೊಂದಲ)**

**ಶ್ರೀ ಶಿವರಾಜ್ ಎಸ್. ತಂಗಡಗಿ:-** ಮಂತ್ರಿಗಳು ಬಂದು ಉತ್ತರ ಕೊಡುತ್ತಾರೆ.

**ಸಭಾಪತಿಯವರು:-** ಈಗ ನಾನು ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳುತ್ತೇನೆ. ಮಂತ್ರಿಗಳು ಬಂದು ಉತ್ತರ ಕೊಡುತ್ತಾರೆ ನಂತರ ಇದರ ಬಗ್ಗೆ ಚರ್ಚೆ ಮಾಡಿ. ದಯವಿಟ್ಟು ಅರ್ಥಮಾಡಿಕೊಳ್ಳಿ. ಎಲ್ಲರೂ ಹೀಗೆ ಎದ್ದು ನಿಂತು ಮಾತನಾಡಿದರೆ ಹೇಗೆ?

**(ಗೊಂದಲ)**

**ಶ್ರೀ ಶಿವರಾಜ್ ಎಸ್. ತಂಗಡಗಿ:-** ನಿಮಗೆ ಉತ್ತರ ಬೇಕಲ್ಲವೇ? ಅರಣ್ಯ ಇಲಾಖೆ ಸಚಿವರು, ಗೃಹ ಸಚಿವರು ಬಂದು ಉತ್ತರ ಕೊಡುತ್ತಾರೆ.

**(ಗೊಂದಲ)**

**ಶ್ರೀ ಸಿ.ಟಿ. ರವಿ:-** ನಿಮಗೆ ನಾಚಿಕೆಯಾಗಬೇಕು.

**(ಗೊಂದಲ)**

**ಸಭಾಪತಿಯವರು:-** ಈಗ ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

**(ಸದನವನ್ನು ಬೆಳಗ್ಗೆ 11 ಗಂಟೆ 28 ನಿಮಿಷದಲ್ಲಿ 10 ನಿಮಿಷಗಳ ಕಾಲ ಮುಂದೂಡಲಾಯಿತು)**

(706) 17.8.2026 11.40 ಪಿಕೆವಿಕೆ

**(10 ನಿಮಿಷಗಳ ಕಾಲ ಮುಂದೂಡಲ್ಪಟ್ಟಿದ್ದ ಸದನವು ಪುನಃ ಬೆಳಗ್ಗೆ 11.45 ಗಂಟೆಗೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**೩. ಪ್ರಶ್ನೋತ್ತರ ಕಲಾಪವನ್ನು ಬದಿಗೊತ್ತಿ, ಪ್ರಸ್ತುತ ವಿದ್ಯಮಾನಗಳ ಬಗ್ಗೆ ಸದನದಲ್ಲಿ ಚರ್ಚಿಸಲು ಅವಕಾಶ ಕೋರಿ ವಿರೋಧ ಪಕ್ಷದವರಿಂದ ಒತ್ತಾಯ.**

**ಡಾ: ಯತೀಂದ್ರ ಎಸ್.(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ವಿರೋಧ ಪಕ್ಷದ ನಾಯಕರು ಏನು ವಿಷಯ ಎತ್ತಿದ್ದಾರೋ ಆ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಲು ಸರ್ಕಾರ ತಯಾರಾಗಿದೆ. ಸಂಬಂಧಪಟ್ಟ ಸಚಿವರು ವಿಧಾನಸಭೆಯಲ್ಲಿ ಇದೇ ವಿಷಯವಾಗಿ ಉತ್ತರ ಕೊಡುತ್ತಿದ್ದಾರೆ. ಹಾಗಾಗಿ, ಅವರು ಅಲ್ಲಿಂದ ಬಂದಮೇಲೆ ನಾವು ಈ ವಿಷಯವನ್ನು ಚರ್ಚೆಗೆ ತೆಗೆದುಕೊಂಡು ಮಾನ್ಯ ವಿರೋಧ ಪಕ್ಷದ ನಾಯಕರು ಕೇಳುತ್ತಿರುವ ಪ್ರಶ್ನೆಗಳಿಗೆ ಉತ್ತರ ಕೊಡಿಸುತ್ತೇವೆ. ಮೊದಲು ಪ್ರಶ್ನೋತ್ತರವನ್ನು ತೆಗೆದುಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ನಾವು ಪ್ರಸ್ತಾಪಿಸುತ್ತಿರುವುದು ಅಮಾನವೀಯ ಘಟನೆಯಾಗಿದೆ. ಈ ವಿಷಯವನ್ನು ತುರ್ತಾಗಿ ತೆಗೆದುಕೊಳ್ಳಬೇಕಾಗಿತ್ತು. ಮಾನ್ಯ ಸಚಿವರು ಕೆಳಮನೆಯಲ್ಲಿ ಉತ್ತರ ಕೊಡುತ್ತಿದ್ದಾರೆ ಎಂಬುದನ್ನು ನಾವೂ ನೋಡಿದ್ದೇವೆ. ಇಲ್ಲಿಗೆ ತಕ್ಷಣ ಬಂದು, ಈ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡಬೇಕು, ನ್ಯಾಯಾಂಗ ತನಿಖೆಯೇ ಆಗಬೇಕು. ಒಬ್ಬೊಬ್ಬರಿಗೆ ಒಂದು ಕೋಟಿ ಮೊತ್ತದ ಪರಿಹಾರವನ್ನು ಘೋಷಣೆ ಮಾಡಬೇಕು. ಮಾನ್ಯ ಸಭಾಪತಿಗಳೆ, ಇನ್ನೊಂದು ಘನವಾದ ವಿಷಯ ಇದೆ.

**ಸಭಾಪತಿಯವರು:-** ಮೊದಲು ಒಂದು ವಿಷಯ ಮುಗಿಯಲಿ. ನಂತರ ಬೇರೆ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳೋಣ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೆ, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ರೂ. 187 ಕೋಟಿ ರೂಪಾಯಿಗಳ ಅವ್ಯವಹಾರದ ಕಾರಣ . . .**(ಗೊಂದಲ)**

**ಸಭಾಪತಿಯವರು:-** ಈಗಾಗಲೇ ನಾವು ನನ್ನ ಕೊಠಡಿಯಲ್ಲಿ ಚರ್ಚೆ ಮಾಡಿದಂತೆ, ಮೊದಲು ಪ್ರಶ್ನೋತ್ತರ ವೇಳೆ ಆಗಲಿ, ನಂತರ ಇತರ ವಿಷಯಗಳನ್ನು ತೆಗೆದುಕೊಳ್ಳೋಣ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಅಂತಹ ಮಂತ್ರಿಯಿಂದ ರಾಜಿನಾಮೆ ಕೊಡಿಸಿದರು. ಇನ್ನೂ ಕೇಸ್ ಪೆಂಡಿಂಗ್ ಇರುವಾಗಲೇ, ಮತ್ತೆ ಅವರನ್ನು ಸಚಿವರನ್ನಾಗಿ ಮಾಡಿದ್ದಾರೆ. ಮೊದಲು ಅವರ ರಾಜಿನಾಮೆ ಆಗಬೇಕು.

**(ಗೊಂದಲ)**

**ಸಭಾಪತಿಯವರು:-** ಆ ವಿಷಯಗಳನ್ನು ನಂತರ ಮಾತನಾಡೋಣ.

**(ಗೊಂದಲ)**

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಗಳೆ, ಅಂತಹ ವಿಷಯಗಳನ್ನು ನಿಯಮಾಳಗಳ ಪ್ರಕಾರ ಚರ್ಚೆ ಮಾಡುವುದಕ್ಕೆ ಅವಕಾಶಗಳವೆ. ಅವರು ವಿಷಯವನ್ನು ಡೈವರ್ಟ್ ಮಾಡಬಾರದು.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಇಂತಹ ಅಚಾತುರ್ಯ ಘಟನೆಗಳು ನಡೆದಾಗ ಅದನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಬೇಕು. ಹಗುರವಾಗಿ ತೆಗೆದುಕೊಳ್ಳಬಾರದು . . .

**(ಗೊಂದಲ)**

**ಶ್ರೀ ಬಸವರಾಜ ರಾಯರೆಡ್ಡಿ:-** ಸದನವನ್ನು ಉತ್ತಮ ರೀತಿಯಲ್ಲಿ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಮನವಿ ಮಾಡುತ್ತೇನೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದು, ಶ್ರೀ ನಾಗೇಂದ್ರರವರು ರಾಜಿನಾಮೆ ಕೊಟ್ಟಿದ್ದಾರೆ ಎಂದು ಹೇಳಬೇಕು.

**(ಗೊಂದಲ)**

**ಸಭಾಪತಿಯವರು:-** ನಾವು ಈಗಾಗಲೇ ನಮ್ಮ ಕೊಠಡಿಯಲ್ಲಿ ಚರ್ಚೆ ಮಾಡಿದ ಹಾಗೆ, ಮೊದಲು ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳೋಣ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶ ಮೇರೆಗೆ ನಡವಳಿಯನ್ನು ದಾಖಲಿಸಿರುವುದಿಲ್ಲ)**

**(ಮುಂದು)**

(707) 17-8-2026 11.50 ಡಿಎಸ್-ವಿಕೆ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು (ಸ್ವಸ್ಥಾನದಲ್ಲಿ ನಿಂತು):-** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ನಾವೆಲ್ಲರೂ ನಾವು ನನ್ನ ಕೊಠಡಿಯಲ್ಲಿ ಕುಳಿತುಕೊಂಡು ಚರ್ಚೆ ಮಾಡಿದಾಗ, ಸರ್ಕಾರ ಉತ್ತರ ಕೊಡುತ್ತದೆ ಎಂದು ಒಪ್ಪಿಕೊಂಡಾಗ, ಪ್ರಶ್ನೋತ್ತರ ವೇಳೆಯನ್ನು ಪ್ರಾರಂಭಿಸಿ ಎಂದು ನೀವು ಹೇಳಿದ್ದೀರೋ ಇಲ್ಲವೋ? ತಕ್ಷಣವೇ ಪ್ರಶ್ನೋತ್ತರ ವೇಳೆಯನ್ನು ಪ್ರಾರಂಭಿಸಿ, ಅದಾದ ಮೇಲೆ ಉತ್ತರ ಕೊಡುತ್ತೇವೆ ಎನ್ನುವ ಮಾತನ್ನು ಸರ್ಕಾರದವರು ಹೇಳಿದ್ದಾರೆ. ನಮ್ಮ ಸದನಕ್ಕೆ ಗೌರವ ಇದೆ. ನಾವೆಲ್ಲಾ ಒಳಗಡೆ ಕುಳಿತು ಚರ್ಚೆ ಮಾಡಿದ ಮೇಲೆ ನೀವು ಭಾಗಿಯಾಗಿದ್ದೀರಿ,

ವಿರೋಧ ಪಕ್ಷದ ಮುಖ್ಯ ಸಚೇತಕರು ಭಾಗಿಯಾಗಿದ್ದಾರೆ. ಪ್ರಶ್ನೋತ್ತರ ತೆಗೆದುಕೊಳ್ಳೋಣ, ಅದಾದ ಮೇಲೆ ಮಂತ್ರಿಗಳು ಬಂದು ಉತ್ತರ ಕೊಡುತ್ತಾರೆ ಎಂದು ಹೇಳಿದಾಗ ನೀವು ಒಪ್ಪಿ ಇಲ್ಲಿಗೆ ಬಂದಿದ್ದೀರಿ. ಅದನ್ನು ನೀವು ಪಾಲಿಸಬೇಕಲ್ಲವೇ? ದಯವಿಟ್ಟು ಪ್ರಶ್ನೋತ್ತರ ವೇಳೆಯನ್ನು ಪ್ರಾರಂಭಿಸುವುದಕ್ಕೆ ಅವಕಾಶ ಮಾಡಿಕೊಡಿ. ಇನ್ನು ಸಮಯ ಇದೆ. ಈ ಸರ್ಕಾರ ಇದ್ದೇ ಇರುತ್ತದೆ, ಎಲ್ಲೂ ಹೋಗುವುದಿಲ್ಲ. ನಾನೂ ಕೂಡ ಇಲ್ಲೇ ಇರುತ್ತೇನೆ. ಆದ್ದರಿಂದ ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ. ಪ್ರಶ್ನೋತ್ತರವಾದ ಮೇಲೆ ನೀವು ಅರಣ್ಯ ಇಲಾಖೆಯ ವಿಷಯವನ್ನು ಕೇಳಿರುವಂತೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ಅದಾದ ಮೇಲೆ ಮುಂದೆ ಏನು ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಳ್ಳೋಣ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮೊದಲು ಅವರು ರಾಜೀನಾಮೆಯನ್ನು ಕೊಡಬೇಕು.

**ಶ್ರೀ ಯು.ಟಿ.ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಕೋರ್ಟ್ ತೀರ್ಮಾನ ಕೊಟ್ಟಿದೆ. ಕೋರ್ಟ್ ತೀರ್ಮಾನ ಕೊಟ್ಟಾದ ಮೇಲೆ ಇದನ್ನು ಕೇಳುವುದಕ್ಕೆ ಇವರು ಯಾರು? ಕೋರ್ಟ್ ಆದೇಶ ಕೊಟ್ಟಿರುವಂಥದ್ದು. ಇವರು ಕೋರ್ಟ್‌ಗೆ ಹೋಗಿ ಪ್ರಶ್ನೆ ಮಾಡಲಿ. ಈ ದೇಶದ ಸಂವಿಧಾನದಲ್ಲಿ ಕೋರ್ಟ್ ಇದೆ, ಇದನ್ನು ಕೇಳುವುದಕ್ಕೆ ಇವರು ಯಾರು? ಇವರು ಬರೀ ರಾಜಕೀಯ ಮಾಡುವುದಕ್ಕೆ ಬಂದಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ನಿಮಗೆ ಪ್ರಶ್ನೋತ್ತರ ಬೇಕೋ ಬೇಡವೋ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಬೇಕು.

**ಸಭಾಪತಿಯವರು:-** ಪ್ರಶ್ನೋತ್ತರ ಬೇಕು ಎಂದು ನೀವು ಒಪ್ಪಿಕೊಂಡು ಬಂದಾದ ಮೇಲೆ ಪ್ರಶ್ನೋತ್ತರವನ್ನು ನಡೆಸಬೇಕಲ್ಲವೇ?

**ಡಾ॥ ಯತೀಂದ್ರ ಎಸ್.:-** ಮಾನ್ಯ ಸಭಾಪತಿಯವರೇ, ತಾವು ಪ್ರಶ್ನೋತ್ತರ ಕಲಾಪವನ್ನು ತೆಗೆದುಕೊಳ್ಳಿ.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)**

## 4. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

ಪ್ರಶ್ನೆ ಸಂಖ್ಯೆ: 56

(ಉತ್ತರ ಲಗತ್ತಿಸಲಾಗಿದೆ)

**ಶ್ರೀ ರಾಮೋಜಿಗೌಡ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಮೊಟ್ಟೆ ವಿತರಿಸಲು ಸರ್ಕಾರ ಒಂದು ಮೊಟ್ಟೆ ಖರೀದಿಸಲು ನಿಗದಿಪಡಿಸಿರುವ ಮೊತ್ತ ಎಷ್ಟು ಎಂದು ನಾನು ಪ್ರಶ್ನೆ ಕೇಳಿದ್ದೆ; ಪ್ರತಿ ವಿದ್ಯಾರ್ಥಿಗೆ ಪ್ರತಿ ದಿನ ಒಂದು ಮೊಟ್ಟೆ ವಿತರಣೆಗೆ 6 ರೂಪಾಯಿಗಳ ಘಟಕ ವೆಚ್ಚವನ್ನು ನಿಗದಿಪಡಿಸಲಾಗಿದೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಒಂದು ಮೊಟ್ಟೆ ಆರು ರೂಪಾಯಿಗಳು ಎಂದು ಹೇಳುತ್ತಿದ್ದಾರೆ, ಆದರೆ ಈಗ ಸುಮಾರು ಒಂದು ವರ್ಷದಿಂದ ಒಂದು ಮೊಟ್ಟೆ ಬೆಲೆ 7 ರೂಪಾಯಿಗಳಿಗಿಂತ ಜಾಸ್ತಿ ಇದೆ. ಅಂದರೆ, ಈಗ ಸುಮಾರು ಎಂಟೂವರೆ ರೂಪಾಯಿಗಳಿದೆ. ಆದರೆ ಸರಾಸರಿ 6 ರೂಪಾಯಿಗಳಾಗುತ್ತದೆಂದು ಮಾನ್ಯ ಮಂತ್ರಿಯವರು ಹೇಳುತ್ತಿದ್ದಾರೆ. ಇದಕ್ಕೆ 6 ರೂಪಾಯಿ ಅಲ್ಲ, 5 ರೂಪಾಯಿ ಮಾತ್ರ ಸೇರುತ್ತದೆ. ಕನಿಷ್ಟ 2 ರೂಪಾಯಿಯನ್ನು ವ್ಯತ್ಯಾಸ ಮಾಡಿದರೆ ಕೈಯಿಂದ ಕೊಡಬೇಕಾಗುತ್ತದೆ. ಹಾಗಾಗಿ ಸರ್ಕಾರ ತಕ್ಷಣ ಇವತ್ತೇನು ಸರಾಸರಿ 7 ರೂಪಾಯಿ, 8 ರೂಪಾಯಿ, 9, ರೂಪಾಯಿ, ಮಾರುಕಟ್ಟೆ ದರ ಇದೆ ಆ ಮಾರುಕಟ್ಟೆ ದರದಲ್ಲಿ ಮೊಟ್ಟೆಯನ್ನು ಕೊಡಬೇಕು. ಇಲ್ಲದಿದ್ದರೆ ಯಾವಾದರೂಂದು ಏಜೆನ್ಸಿಗೆ ವಹಿಸಿದರೂ ಪರವಾಗಿಲ್ಲ.

ಮಾನ್ಯ ಸಭಾಪತಿಯವರೇ, ಈಗಾಗಲೇ ಅವರಿಗೆ ಆರ್ಥಿಕ ಹೊರೆಯಿಂದ ನಿರಂತರವಾಗಿ ತೊಂದರೆಯಾಗುತ್ತಿದೆ. All the teachers and staff must use facial recognition to mark their attendance twice a day. ಹಾಗಾಗಿ ಒಂದು ಗಂಟೆ, ಎರಡು ಗಂಟೆ ಬೇಕಾಗುತ್ತದೆ. ಆದ್ದರಿಂದ ಇದನ್ನು ಒಂದು ಬಾರಿ ಮಾಡಬೇಕು. ಈಗಾಗಲೇ ಶಿಕ್ಷಕರಿಗೆ ಅನೇಕ ಹೊರೆಯಾಗಿದೆ. ಈಗಾಗಲೇ ಶಿಕ್ಷಕರಿಗೆ ಎಸ್.ಐ.ಆರ್. ಬಂದಿದೆ, ಜನಗಣತಿ, ಜಾತಿಗಣತಿ ಬಂದಿದೆ. ಸುಮಾರು 3-4 ತಿಂಗಳುಗಳಿಂದ ಯಾರೂ ಪಾಠ ಮಾಡುವುದಕ್ಕಾಗುತ್ತಿಲ್ಲ. ಇವತ್ತು ಎಸ್.ಐ.ಆರ್. ಮುಗಿಯುತ್ತಿದೆ. ಮುಂದಿನ ದಿನಮಾನಗಳಲ್ಲಿ ಎಸ್.ಐ.ಆರ್. ನಿಂದ ಶಿಕ್ಷರುಗಳಿಗೆ ಆಗುತ್ತಿರುವ ತೊಂದರೆಯನ್ನು ನಿಲ್ಲಿಸಬೇಕು. ಸುಮಾರು 4 ತಿಂಗಳುಗಳಿಂದ ವಿದ್ಯಾರ್ಥಿಗಳಿಗೆ ಯಾವುದೇ ಕಲಿಕೆ ಆಗುತ್ತಿಲ್ಲ.

**ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, ರಾಷ್ಟ್ರ ಮಟ್ಟದಲ್ಲಿ ಮೊಟ್ಟೆ ಎಷ್ಟು ಬೆಲೆ ಇರುತ್ತದೆಯೋ, ಅಷ್ಟು ಬೆಲೆಯನ್ನು ನಾವು ನಿಗದಿ ಮಾಡುತ್ತೇವೆ. ಕಳೆದ ವರ್ಷಕ್ಕೂ ಈ ವರ್ಷಕ್ಕೂ ಜಾಸ್ತಿಯಾಗಿರುವುದು ಕಂಡುಬಂದಿದೆ. ಅದರ ಮಧ್ಯ ಏನಾಗಿದೆ ಎಂದರೆ ಕೆಲವು ಕಡೆಗಳಲ್ಲಿ ಮಕ್ಕಳ ಹಾಜರಾತಿ ಕಡಿಮೆ ಇದ್ದಾಗ ಇಷ್ಟು ದಿವಸ ಮ್ಯಾನೇಜ್ ಮಾಡುತ್ತಿದ್ದೆವು. Facial attendance ಬಂದ ಮೇಲೆ ಹಾಜರಾತಿ ಎಲ್ಲಿ ನೂರರಷ್ಟು ಇದೆ, ಅಲ್ಲಿ ತೊಂದರೆಯಾಗುತ್ತಿರುವುದು ಗೊತ್ತಿದೆ. ಕಳೆದ ತಿಂಗಳು ರಾಷ್ಟ್ರ ಮಟ್ಟದಲ್ಲಿ

7.10 ಪೈಸೆ ಇದೆ, ಆಗಸ್ಟ್‌ನಲ್ಲಿ ಅಂದರೆ, ಈ ತಿಂಗಳು 5.33 ಪೈಸೆ ಇದೆ, ಮೈಸೂರಿನಲ್ಲಿ 5.93 ಪೈಸೆ ಇದೆ. ನಾನು ಯಾವ ರೀತಿ ಇದೆ ಎಂದು ತಿಳಿದುಕೊಂಡು ಆರ್ಥಿಕ ಇಲಾಖೆಯ ಜೊತೆ ಚರ್ಚೆ ಮಾಡುತ್ತೇನೆ. ಏಕೆಂದರೆ, ಕಳೆದ ವರ್ಷಕ್ಕೂ, ಈ ವರ್ಷಕ್ಕೂ ಜಾಸ್ತಿಯಾಗಿರುವುದು ನಿಜ. ಈಗ facial attendance ಮಾಡುವುದರಿಂದ genuinity ಬಂದಿದೆ. Genuinity ಬಂದಿರುವುದರಿಂದ ಆದಷ್ಟು ಬೇಗ ಇದರ ಬಗ್ಗೆ ಆರ್ಥಿಕ ಇಲಾಖೆಯ ಜೊತೆ ಮಾತನಾಡಿ ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳುತ್ತೇನೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದಷ್ಟು ಬೇಗ ಆರ್ಥಿಕ ಇಲಾಖೆಯವರ ಜೊತೆ ನಾನು ಮಾತನಾಡಿಕೊಂಡು ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ರಾಮೋಜಿಗೌಡ:–** ಮಾನ್ಯ ಸಭಾಪತಿಯವರೇ, ಕಳೆದ ತಿಂಗಳು 6 ರೂಪಾಯಿ, 7 ರೂಪಾಯಿ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಆದರೆ, ಕೈಯಿಂದ ಎರಡು ರೂಪಾಯಿ ಬಿತ್ತು. ಆದರೆ, ಈ ತಿಂಗಳು ಎಂಟೂವರೆ ರೂಪಾಯಿಗಳಾಗಿದೆ. ಮೊಟ್ಟೆಯ ಬೆಲೆ ಜಾಸ್ತಿಯಾಗಿರುವುದರಿಂದ 3 ರೂಪಾಯಿ ವ್ಯತ್ಯಾಸವಾಗುತ್ತದೆ. ನಾನು ಸುಮಾರು ಹತ್ತು ಜನರನ್ನು ಕೇಳಿ ಪ್ರಶ್ನೆಯನ್ನು ಕೇಳಿದ್ದೇನೆ. ಹಾಗಾಗಿ ಇದನ್ನು ಸರ್ಕಾರ ಯಾವುದಾದರೂಂದು ಏಜೆನ್ಸಿಗೆ ಕೊಟ್ಟರೆ ಬಹಳ ಒಳ್ಳೆಯದು. ಏಜೆನ್ಸಿಗೆ ಕೊಟ್ಟುಬಿಟ್ಟರೆ ಸರ್ಕಾರಕ್ಕೆ ಯಾವುದೇ ಹೊರೆ ಇರುವುದಿಲ್ಲ.

ಮಾನ್ಯ ಸಭಾಪತಿಯವರೇ, ಇದರ ಜೊತೆಯಲ್ಲಿ ಶಿಕ್ಷಕರಿಗೆ ಎಸ್.ಐ.ಆರ್. ಬಂದಿದೆ. ಎಷ್ಟು ಜನ ಶಿಕ್ಷಕರುಗಳಿದ್ದಾರೆ, ಅಷ್ಟು ಜನ ಶಿಕ್ಷಕರುಗಳು ಎಸ್.ಐ.ಆರ್.ಗೆ ಹೋಗುತ್ತಿದ್ದಾರೆ. ಶಾಲೆಯಲ್ಲಿ ಮಕ್ಕಳಿಗೆ ಪಾಠ ಮಾಡಲು ಯಾರೂ ಇಲ್ಲ. ಎಸ್.ಐ.ಆರ್, ಜಾತಿಗಣತಿಗಳಿಗೆ, B.L.O. ಇರಬಹುದು, ಇವುಗಳಿಗೆ ಶಿಕ್ಷಕರು ಹೋಗುತ್ತಿರುವುದರಿಂದ ಶಿಕ್ಷಕರಿಗೆ ಹೊರೆಯಾಗುತ್ತಿದೆ. ದಯಮಾಡಿ ಅದನ್ನು ಸರ್ಕಾರ ತಪ್ಪಿಸಬೇಕು.. ನಮ್ಮ ಶಿಕ್ಷಕರಿಗೆ ಯಾವುದೇ ರೀತಿಯ ಆನ್‌ಲೈನ್, ಎಸ್.ಐ.ಆರ್. ಇವೆಲ್ಲವು ಇಲ್ಲದೆ ಮಕ್ಕಳಿಗೆ ಪಾಠ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಸಚಿವರಿಗೆ ನಾನು ವಿನಂತಿ ಮಾಡುತ್ತಿದ್ದೇನೆ. ಇವತ್ತು ಎಸ್.ಐ.ಆರ್. ಮುಗಿಯುತ್ತಿದೆ. ಮತ್ತೆ ಮುಂದುವರೆಯಬಾರದು. ಎಸ್.ಐ.ಆರ್. 3-4 ತಿಂಗಳುಗಳಿಂದ ನಡೆಯುತ್ತಿದೆ. ದಯಮಾಡಿ ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಮಧು ಬಂಗಾರಪ್ಪ:–** ಮಾನ್ಯ ಸಭಾಪತಿಯವರೇ, ಆದಷ್ಟು ಬೇಗ ಆರ್ಥಿಕ ಇಲಾಖೆಯವರ ಜೊತೆ ಮಾತನಾಡಿ ಒಳ್ಳೆಯ ಫಲಿತಾಂಶ ಕೊಡುವ ವ್ಯವಸ್ಥೆ ಮಾಡುತ್ತೇನೆ.

**Sri S.L. BHOJEGOWDA:–** Mr. Chairman, the House is not in order.

**ಪ್ರಶ್ನೆ ಸಂಖ್ಯೆ: 21**

(ಉತ್ತರ ಲಗತ್ತಿಸಲಾಗಿದೆ)

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತು ಗಂಗಾವತಿ ಮತ್ತು ತಡಕಲ್‌ನಲ್ಲಿ ಕಾಲೇಜು ಇಲ್ಲ. ಅಲ್ಲಿಗೆ ಸಿಂಧನೂರ ತಾಲ್ಲೂಕಿನ ವಿದ್ಯಾರ್ಥಿಗಳು ಹೋಗಬಹುದು ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಇದು ಸಮಂಜಸವಾದ ಉತ್ತರ ಅಲ್ಲ. ಅಲ್ಲಿ ಅನೇಕ ಕೋರ್ಸ್‌ಗಳು ಇಲ್ಲ, B.Tech in Computer Science and Engineering (Artificial Intelligence and Machine Learning), B.Tech in AI, B.Tech in Robotics, B.Tech in Cyber Security and Digital Forensics, B.Tech in Semiconductor, ಇಂತಹ ಅನೇಕ ಕೋರ್ಸ್‌ಗಳು ಇಲ್ಲದಿರುವಂತಹ ಕಾಲೇಜುಗಳಿಗೆ ಇವತ್ತು ಸಿಂಧನೂರ ವಿದ್ಯಾರ್ಥಿಗಳು ಹೋಗಬೇಕೆಂದು ಹೇಳುತ್ತಿದ್ದಾರೆ.

(ಮುಂದು)

(708)17-08-2026/12-00/bkp-bns (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಸನಗೌಡ ಬಾದರ್ಲಿ (ಮುಂದು):-**

ಇವತ್ತು ಸುಮಾರು 41, ಕಲ್ಯಾಣ ಕರ್ನಾಟಕದಲ್ಲಿ ಅತಿ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಹೊಂದಿರತಕ್ಕಂತಹ ತಾಲ್ಲೂಕು ಎಂದರೆ ಅದು ಸಿಂಧನೂರು ತಾಲ್ಲೂಕು ಆಗಿದೆ. ಇವತ್ತು ಗಂಗಾವತಿ ಮತ್ತು ಯಲಬುರ್ಗಾ ತಾಲ್ಲೂಕನ್ನು ಹೋಲಿಕೆ ಮಾಡಿದರೆ ಇವತ್ತು ಅತಿ ಹೆಚ್ಚು ಶಿಕ್ಷಣ ಸಂಸ್ಥೆಗಳಿವೆ. ಇವತ್ತು ಸಿಂಧನೂರಿನಲ್ಲಿ 11 ವಿಜ್ಞಾನ ಕಾಲೇಜುಗಳಿವೆ. ಆದ್ದರಿಂದ, ಖಂಡಿತವಾಗಿಯೂ ಸಹ ಈ ಎಲ್ಲಾ ಕೋರ್ಸ್‌ಗಳನ್ನು ಒಳಗೊಂಡಂತಹ ಹೊಸ ಕಾಲೇಜುಗಳನ್ನು ಇದೇ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಈಗಾಗಲೇ 218ಕ್ಕಿಂತ ಹೆಚ್ಚು ಕಾಲೇಜುಗಳಿವೆ ಮತ್ತು ಒಟ್ಟು 17 ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳಿವೆ. 205 ಖಾಸಗಿ ಕಾಲೇಜುಗಳಿವೆ. ಒಟ್ಟು ಇಂಜಿನೀಯರಿಂಗ್ ಸೀಟ್‌ಗಳು ಇರುವುದು 1,16,866 ಸೀಟುಗಳಿವೆ. ಆದರೆ ಕಳೆದ 2-3 ವರ್ಷಗಳ ಅಂಕಿ-ಅಂಶಗಳನ್ನು ತರಿಸಿದ್ದೇವೆ. ಈ 1,16,866 ಸೀಟುಗಳು ಏನು ಲಭ್ಯವಿದೆ ಇವುಗಳ ಪೈಕಿ ಕೇವಲ 87,881 ಸೀಟುಗಳು ಮಾತ್ರ C.E.T. ಮೂಲಕ ಭರ್ತಿಯಾಗಿದ್ದು, 28,975 ಸೀಟುಗಳು ಭರ್ತಿಯಾಗದೆ ಖಾಲಿ ಇರುತ್ತವೆ. ಅಂದರೆ, ಪ್ರತಿ ವರ್ಷ ಸರಾಸರಿ 25,000 ದಿಂದ 30,000 ರವರೆಗೆ ಸೀಟುಗಳನ್ನು ತುಂಬಲಿಕ್ಕೆ ಆಗುವುದಿಲ್ಲ. ಈ ಸೀಟುಗಳಿಗೆ ಬೇಡಿಕೆ ಇರುವುದಿಲ್ಲ. ಈ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರು ಕೇಳುತ್ತಿರುವುದೇನೆಂದರೆ ಸಿಂಧನೂರು ಹಿಂದುಳಿದ ಪ್ರದೇಶವಿದ್ದು, ಶೈಕ್ಷಣಿಕವಾಗಿ ಹಿಂದುಳಿದಿರುವುದನ್ನು ನಾನು ಸಹ ಒಪ್ಪುತ್ತೇನೆ. ಅದಕ್ಕೆ

ಈಗಾಗಲೇ ಅಲ್ಲಿ ಇಂಜಿನೀಯರಿಂಗ್ ಕಾಲೇಜುಗಳನ್ನು ಸ್ಥಾಪನೆ ಮಾಡುವುದರ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಶೀಲನೆ ಮಾಡುತ್ತದೆ. ಆದರೆ, ಇರುವಂತಹ ಸೀಟುಗಳು ಭರ್ತಿಯಾದರೆ ಮಾತ್ರ ಪ್ರಯೋಜನವಾಗುತ್ತದೆ. ಇಲ್ಲದಿದ್ದರೆ ಪ್ರಯೋಜನವಾಗುವುದಿಲ್ಲ. ಅದಕ್ಕೆ ಬದಲಾಗಿ Government is ready to give Skill Development Centre. ಸರ್ಕಾರ ಈಗಾಗಲೇ Skill Development Centre ಅನ್ನು ಮಂಜೂರು ಮಾಡಿ ಕೊಟ್ಟಿದೆ. ಅದರಲ್ಲಿಯೇ ಹೆಚ್ಚಿನ skill development course ಗಳನ್ನು ಹೆಚ್ಚುವರಿಯಾಗಿ ಮಾಡಿ, ಅದರಿಂದ ಅನುಕೂಲತೆಗಳನ್ನು ಮಾಡಿಕೊಡುವುದಕ್ಕೆ ಸಾಧ್ಯವಿದೆ. ಆದ್ದರಿಂದ ನಾನು ಮಾನ್ಯ ಸದಸ್ಯರಿಗೆ ನಾನು ಹೇಳುವುದಿಷ್ಟೆ. ಇಂಜಿನೀಯರಿಂಗ್ ಕಾಲೇಜುಗಳ ಸೀಟುಗಳು ಭರ್ತಿಯಾಗುತ್ತಿಲ್ಲ. ಅದಕ್ಕೋಸ್ಕರ we will improve the Skill Development Centre in a bigger way. ಅದಕ್ಕೋಸ್ಕರ ಇದರ ಬಗ್ಗೆ ಮುಂದಿನ ದಿನಗಳಲ್ಲಿ ಯೋಚನೆ ಮಾಡೋಣ.

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಯವರೆ, ಈಗಾಗಲೇ ಮಾನ್ಯ ಸಚಿವರು ಹೇಳಿದ್ದಾರೆ. ಹೇಳಿದಂತಹ ಸಂದರ್ಭದಲ್ಲಿ ಈಗಾಗಲೇ 22,000 ಸೀಟುಗಳು ಖಾಲಿ ಇವೆ ಎಂದು ಹೇಳಿದ್ದಾರೆ. ಯಾವುದೇ ಸರ್ಕಾರಗಳು ಬಂದರೂ ಸಹ ಪ್ರತಿವರ್ಷ ಸಹ ಸೀಟುಗಳು ಖಾಲಿಯೇ ಇರುತ್ತವೆ, ಆದರೆ, ಅಂತಹ ಸಂದರ್ಭಗಳಲ್ಲಿಯೂ ಕೂಡ ಇವತ್ತು ತಳಕಲ್ಲಿನಲ್ಲಿ ಕಾಲೇಜು ಆಗಿರುತ್ತದೆ, ಗಂಗಾವತಿಯಲ್ಲಿ ಕಾಲೇಜು ಆಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಕೇವಲ 5 ತಾಲ್ಲೂಕುಗಳಿವೆ. ನಮ್ಮ ಜಿಲ್ಲೆಯಲ್ಲಿ 7 ವಿಧಾನಸಭಾ ಕ್ಷೇತ್ರಗಳು ಬರುತ್ತವೆ. ಅದರಲ್ಲಿ ವಿಶೇಷವಾಗಿ ನಮ್ಮ ಸಿಂಧನೂರಿನಲ್ಲಿ ಅತಿ ಹೆಚ್ಚು ಶಿಕ್ಷಣ ಸಂಸ್ಥೆಗಳಿವೆ. ಈಗಾಗಲೇ ತಳಕಲ್ಲು ಮತ್ತು ಗಂಗಾವತಿಯಲ್ಲಿ ಇರುವಂತಹ ಕಾಲೇಜುಗಳಲ್ಲಿ ಇವತ್ತು ಅನೇಕ ಕೋರ್ಸ್‌ಗಳಿವೆ, ಇವತ್ತು ಏನು B.Tech., ನಲ್ಲಿ C.S.E. ನಲ್ಲಿ Artificial Intelligence ಇಲ್ಲ, Machine Learning ಇರುವುದಿಲ್ಲ. B.Tech. in A.I. ಇರುವುದಿಲ್ಲ, Robotics ಇಲ್ಲ, Cyber Security ಸಹ ಇರುವುದಿಲ್ಲ. ಇವತ್ತು ಅನೇಕ ಕೋರ್ಸ್‌ಗಳು ಇರಲಾರದೇ ಇರುವಂತಹ ಈ ಕಾಲೇಜುಗಳಿಗೆ ಕೋರ್ಸ್‌ಗಳನ್ನು ಕೊಡಬೇಕಾಗಿದೆ. ಇವತ್ತು ದೇಶ ಮುಂದುವರಿದಿದೆ. ಇವತ್ತು ನಮ್ಮ ವಿದ್ಯಾರ್ಥಿಗಳಿಗೆ ಶಕ್ತಿ ತುಂಬುವಂತಹ ಕೆಲಸ ಆಗಬೇಕಾಗಿದೆ. ಅದಕ್ಕಾಗಿ ಇವತ್ತು ಖಂಡಿತವಾಗಿ ಈ ಕಾಲೇಜುಗಳಿಗೆ ಹೆಚ್ಚಿನ ಕೋರ್ಸ್‌ಗಳನ್ನು ನೀಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಲಿಕ್ಕೆ ಬಯಸುತ್ತೇನೆ. ಅಲ್ಲಿ ಏನು ಸರ್ಕಾರದ ಜಾಗಗಳು ಇವೆ, ಅದನ್ನು ಸ್ಥಾಪನೆ ಮಾಡುವಂತಹ ಕೆಲಸ ಸರ್ಕಾರದ ಮಾನ್ಯ ಸಚಿವರಿಂದ ಆಗಬೇಕೆಂದು ತಮ್ಮ ಮೂಲಕ ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ಈ ವಿಚಾರವಾಗಿ ನಾನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ನಮ್ಮಲ್ಲಿ ಏನು ಇಂಜಿನೀಯರಿಂಗ್ ಸೀಟುಗಳಿವೆ, ಪ್ರತಿ ವರ್ಷ 29,000 ರಿಂದ 30,000 ಸೀಟುಗಳಿಗೆ ವಿದ್ಯಾರ್ಥಿಗಳೇ ಹೋಗುತ್ತಿಲ್ಲ. ಇಂಜಿನೀಯರಿಂಗ್ ಕಾಲೇಜುಗಳನ್ನು ಹೊಸದಾಗಿ

ಪ್ರಾರಂಭ ಮಾಡುವುದರಿಂದ ಈ ಒಂದು ಸಮಸ್ಯೆ ಬಗೆಹರಿಯುವುದಿಲ್ಲ. ಮಾನ್ಯ ಸದಸ್ಯರು ಹೇಳುವಂತಹ ವಿಚಾರ ಸರಿ ಇದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕೆ ನಾನು ಏನು ಹೇಳಿದ್ದೇನೆಂದರೆ ಸರ್ಕಾರ ಈಗಾಗಲೇ ಅಲ್ಲಿ Skill Development Centre ಅನ್ನು ಕೊಟ್ಟಿದೆ. ಅದರಲ್ಲಿ ಇನ್ನು ಕೆಲವು ಕೋರ್ಸ್‌ಗಳನ್ನು ಹೆಚ್ಚುವರಿಯಾಗಿ ಮಾಡಿ, ಅದನ್ನು ವಿಸ್ತರಣೆ ಮಾಡಿ Skill Development cum-Engineering College ಆಗಿ ಮಾಡಲಿಕ್ಕೆ ಸಾಧ್ಯತೆ ಇದೆಯೇ ಎನ್ನುವುದನ್ನು ಸರ್ಕಾರದ ವತಿಯಿಂದ ಕೂಲಂಕಷವಾಗಿ ಪರಿಶೀಲನೆ ಮಾಡುತ್ತೇನೆ. ಇದರ ಬಗ್ಗೆ ಮಾನ್ಯ ಸದಸ್ಯರ ಜೊತೆ ಮಾತನಾಡುತ್ತೇನೆ. ಯಾವ ರೀತಿಯಲ್ಲಿ ಮಾಡಬೇಕೆನ್ನುವುದರ ಬಗ್ಗೆ ಚರ್ಚೆ ಮಾಡುತ್ತೇನೆ.

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಹೇಳಿರತಕ್ಕಂತಹ ಉತ್ತರ ಏನಿದೆ, ಅದನ್ನು ನೋಡಿದ್ದೇನೆ. ಆದರೆ, ಅಲ್ಲಿ ಖಂಡಿತವಾಗಿಯೂ ಸಹ ಈ ಒಂದು ಕೋರ್ಸ್‌ಗಳು ಇರುವುದಿಲ್ಲ. ಇಂತಹ ಕೋರ್ಸ್‌ಗಳು ಇಲ್ಲದೇ ಇರುವಂತಹ ಸಂದರ್ಭದಲ್ಲಿ ಹೊಸ ಕೋರ್ಸ್‌ಗಳನ್ನು ತಂದು ಮಾಡುವಂತಹ ಕೆಲಸ ಆಗಬೇಕೆಂದು ಹೇಳಿ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ಈ ವಿಚಾರವಾಗಿ ಮಾನ್ಯ ಸದಸ್ಯರ ಜೊತೆ ನಾನು ವೈಯಕ್ತಿಕವಾಗಿ ಚರ್ಚೆ ಮಾಡುತ್ತೇನೆ. ಚರ್ಚೆ ಮಾಡುವುದರ ಮೂಲಕ ಅಲ್ಲಿ ಏನು ಸಾಧ್ಯತೆಗಳಿವೆ ಎಂದು ನೋಡಿಕೊಂಡು ಹೊಸ ಕೋರ್ಸ್‌ಗಳನ್ನು ಮಂಜೂರು ಮಾಡುತ್ತೇವೆ.

<u>ಪ್ರಶ್ನೆ ಸಂಖ್ಯೆ 52</u>

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶಿವಣ್ಣ ಬಿ.ಎಸ್. ರವರ ಪ್ರಶ್ನೆಗೆ ಮಾನ್ಯ ಸಚಿವರು ಸಮಯವನ್ನು ಕೇಳಿದ್ದಾರೆ. ನಂತರ ತೆಗೆದುಕೊಳ್ಳುತ್ತೇನೆ.

ಪ್ರಶ್ನೆ ಸಂಖ್ಯೆ 160

(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀಮತಿ ಬಲ್ಕೀಸ್ ಬಾನು(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ ಈ ಶೂ ಮತ್ತು ಸಾಕ್ಸ್‌ಗಳನ್ನು ಉಚಿತವಾಗಿ ಕೊಡುವುದು, ಮಕ್ಕಳಿಗೆ ಮಧ್ಯಾಹ್ನದ ಊಟವನ್ನು ಕೊಡುವುದು, ಮಕ್ಕಳಿಗೆ ಉಚಿತವಾಗಿ ಪುಸ್ತಕಗಳನ್ನು ಕೊಡುವುದು ಇದನ್ನೆಲ್ಲಾ ಸರ್ಕಾರ ಏತಕ್ಕೆ ಮಾಡಿದೆ ಎಂದರೆ, ಸರ್ಕಾರಿ ಶಾಲೆಗಳಿಗೆ ಬಡ ಮಕ್ಕಳು ಜಾಸ್ತಿ ಬರಲಿ, ಆ ಮೂಲಕ ಸರ್ಕಾರಿ ಶಾಲೆಯ ದಾಖಲಾತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ನಾವು ಈ ಸೌಲಭ್ಯಗಳನ್ನು ಮಾಡಿದೆವು. ಸರ್ಕಾರದ ಈ ಕಾರ್ಯಕ್ರಮ ಇಡೀ ದೇಶದಲ್ಲಿ ಮೊಟ್ಟಮೊದಲಿಗೆ ನಮ್ಮ ರಾಜ್ಯದಲ್ಲಿ ಆಗಿರುವಂತಹದ್ದಾಗಿದೆ. ಇದರಲ್ಲಿ ಬಹಳ ಮಹತ್ವವಾದ ವಿಷಯವೆಂದರೆ ಶೂ ಮತ್ತು ಸಾಕ್ಸ್‌ಗಳನ್ನು ಕೊಡುವ ವಿಚಾರವಾಗಿದೆ. ಸರ್ಕಾರಿ ಶಾಲೆಯ ಮಕ್ಕಳು ಖಾಸಗಿ ಶಾಲೆಗೆ ಹೋಗುವಂತಹ ಮಕ್ಕಳನ್ನು ನೋಡಿ, ಅವರ ತಾಯಂದಿರು ಮತ್ತು ಮಕ್ಕಳಿಗೂ ಕೂಡ ಹೀಗೆ ಇದ್ದರೆ ಬಹಳ ಒಳ್ಳೆಯದು ಎನ್ನುವ ಯೋಚನೆ ಬರುತ್ತಿತ್ತು. ಆ ಆಲೋಚನೆಗಳನ್ನು ಮನ್ನಣೆಗೆ ತೆಗೆದುಕೊಂಡು ಸರ್ಕಾರ ಈ ಯೋಜನೆಯನ್ನು ತೆಗೆದುಕೊಂಡು ಬಂದಿದೆ. ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಾನು ಒಂದು ವಿಚಾರವನ್ನು ಕೇಳುವುದೇನೆಂದರೆ ಇವರಿಗೆ ಇರತಕ್ಕಂತಹ ಅಂದರೆ, ಶೂ ಮತ್ತು ಸಾಕ್ಸ್‌ಗಳನ್ನು ವಿತರಣೆ ಮಾಡಬೇಕೆಂದು ಹೇಳಿ ಯಾರಿಗೆ ಟೆಂಡರ್ ಸಿಕ್ಕಿದೆ, ಆ ಟೆಂಡರ್‌ನಲ್ಲಿ ಅವರು ಶೇಕಡ 100ಕ್ಕೆ 100 ರಷ್ಟು ರಾಜ್ಯದಲ್ಲಿ ಎಲ್ಲಿಯೂ ಕೂಡ ಮಾಡಿರುವುದಿಲ್ಲ. ಅವರ ಉತ್ತರವನ್ನೇ ನೋಡಿಕೊಂಡು ಹೇಳುತ್ತಿದ್ದೇನೆ. ಅವರ ಉತ್ತರದಲ್ಲಿ 36.56 ಲಕ್ಷ ವಿದ್ಯಾರ್ಥಿಗಳಿಗೆ ಶೂ ಮತ್ತು ಸಾಕ್ಸ್‌ಗಳನ್ನು ವಿತರಣೆ ಮಾಡಲಾಗಿದೆ. ಇನ್ನು ಸಹ 14.69 ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿಗಳಿಗೆ ಶೂ ಮತ್ತು ಸಾಕ್ಸ್‌ಗಳನ್ನು ವಿತರಣೆ ಮಾಡಬೇಕಾಗಿದೆ ಎಂದು ಸಚಿವರ ಉತ್ತರದಲ್ಲಿಯೇ ಹೇಳಿದ್ದಾರೆ. ಮಾನ್ಯ ಸಭಾಪತಿಯವರೆ, ಶಾಲೆಗಳನ್ನು ಜೂನ್ ತಿಂಗಳಿನಲ್ಲಿ ಪ್ರಾರಂಭ ಮಾಡಿರುವುದಾಗಿದೆ. ಜೂನ್, ಜುಲೈ ತಿಂಗಳು ಮುಗಿದು ಹೋಗಿ ಈಗ ಆಗಸ್ಟ್ ತಿಂಗಳು ನಡೆಯುತ್ತಿದೆ. ಅವರಿಗೆ ಕೊನೆಯ ದಿನಾಂಕವನ್ನು ದಿನಾಂಕ 31-07-2026 ರೊಳಗೆ ವಿತರಣೆ ಮಾಡಬೇಕೆಂದು ಹೇಳಲಾಗಿದೆ. ಅವರು ಏತಕ್ಕಾಗಿ ಇಲ್ಲಿಯವರೆಗೆ ಮಾಡಲಿಲ್ಲ, ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ನನಗೆ ಮಾನ್ಯ ಸಚಿವರು ಹೇಳಬೇಕು.

**ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೆ, ಈ ಒಂದು ಶೂ ಮತ್ತು ಸಾಕ್ಸ್‌ಗಳನ್ನು ಬಡ ಮಕ್ಕಳಿಗೆ ಕೊಡತಕ್ಕಂತಹದ್ದು ಏಕೆಂದರೆ, ಸಮಾನತೆಯನ್ನು

ತರುವಂತಹದ್ದು ನಮ್ಮ ಉದ್ದೇಶ ಆಗಿತ್ತು. ಆದ್ದರಿಂದ, ಆ ಉದ್ದೇಶದಿಂದ ಶೂ ಮತ್ತು ಸಾಕ್ಸ್‌ಗಳನ್ನು ಕೊಡುತ್ತಿದ್ದೇವೆ. ಇದನ್ನು ಸುಮಾರು 8-10 ವರ್ಷಗಳಂದ ಕೊಡುತ್ತಾ ಬಂದಿದ್ದೇವೆಂದು ಭಾವಿಸುತ್ತೇನೆ. ಮೊದಲ ಬಾರಿಗೆ ಈ ವಿಚಾರದಲ್ಲಿ ಸ್ಟೇಟ್ ಟೆಂಡರ್ ಮಾಡಿದ್ದೆವು. ಹಿಂದೆ ಎಲ್ಲಾ ಏನಾಗುತ್ತಿತ್ತು ಎಂದರೆ ಜನವರಿ, ಫೆಬ್ರವರಿ ತಿಂಗಳವರೆಗೂ ಇವುಗಳನ್ನು ಕೊಡುತ್ತಾ ಇರಲಿಲ್ಲ. ಜೊತೆಗೆ ಕೊಡುವಂತಹ ಕ್ವಾಲಿಟಿಯಲ್ಲಿಯೂ ಸಹ ಹಿಡಿತ ಇರಲಿಲ್ಲ. ಅಲ್ಲಿ ದಲ್ಲಾಳಿಗಳಂದ ಕೂಡ ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಅವ್ಯವಹಾರಗಳು ಆಗುತ್ತಿತ್ತು. ಕ್ವಾಲಿಟಿಯನ್ನು ಚೆನ್ನಾಗಿ ಕೊಡುತ್ತಿರಲಿಲ್ಲ. ಅದಕ್ಕೆ ನಾನು ಮುಂಚೆ ಮಾನ್ಯ ಸಿದ್ದರಾಮಯ್ಯನವರಿಗೂ ಕೂಡ ಇದರ ಬಗ್ಗೆ ಮಾತನಾಡುವುದರ ಜೊತೆಗೆ ಮಾನ್ಯ ಸದಸ್ಯರೆಲ್ಲರೂ ಏನೇನು ದೂರುಗಳನ್ನು ಕೊಡುತ್ತಿದ್ದರು, ಅದೆಲ್ಲವನ್ನು ಕ್ರೋಢಿಕರಿಸಿ ಮಕ್ಕಳಗೆ ಸಮಾನತೆಯನ್ನು ಕೊಡಲಿಕ್ಕೆ ಅವರು ಸಾಹುಕಾರರು ಇರಬಹುದು, ಇಲ್ಲವೇ ಬಡವರು ಇರಬಹುದು ಎನ್ನುವ ವಿಚಾರದಲ್ಲಿ ಬೇಧ ಭಾವವನ್ನು ಮಾಡದೇ ಒಳ್ಳೆಯ ಕ್ವಾಲಿಟಿಯನ್ನು ಕೊಡುವಂತಹದ್ದನ್ನು ಮೊದಲಬಾರಿಗೆ ನಾವು ಬಂದ ಮೇಲೆ 3 ವರ್ಷಗಳಂದ ಮಾಡಿದ್ದೇವೆ. ಈ ಬಗ್ಗೆ ಏನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆಂದರೆ ಇನ್ನು 14 ಲಕ್ಷ ವಿದ್ಯಾರ್ಥಿಗಳಗೆ ಕೊಡುವುದು ಬಾಕಿ ಇದೆ. ಇದರ ಬಗ್ಗೆ ಇವತ್ತು ಬೆಳಗ್ಗೆಯೂ ಕೂಡ ರಿವ್ಯೂ ಮಾಡಿದ್ದೇನೆ. ನನಗೆ ಗೊತ್ತಿರುವ ಪ್ರಕಾರ ಇನ್ನು 5-6 ಲಕ್ಷ ಮಕ್ಕಳಗೆ... 2 ಲಕ್ಷ ಇನ್ನೂ ಏನು production ಆಗಬೇಕು...

(ಗೊಂದಲ)

(ಮುಂದು)

(709) 17.08.2026 12.10 ಎಸ್‌ವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**(ವಿರೋಧ ಪಕ್ಷದ ಮಾನ್ಯ ಸದಸ್ಯರು ತಮ್ಮ ಸ್ಥಾನಗಳಲ್ಲಿ ನಿಂತು ಘೋಷಣೆಗಳನ್ನು ಕೂಗುತ್ತಿದ್ದರು)**

**ಸಭಾಪತಿಯವರು:-** ಅವರ ಮಾತು ಯಾವುದೂ ಕಡತಕ್ಕೆ ಹೋಗುವುದಿಲ್ಲ.

**ಶ್ರೀ ಮಧು ಬಂಗಾರಪ್ಪ:-** ಕ್ವಾಲಿಟಿ ಬಗ್ಗೆ ಹೇಳುವುದಾದರೆ ಟೆಂಡರ್‌ದಾರರಿಗೆ ನಿರ್ದೇಶನವಿದೆ. 60 ದಿನಗಳ ಮೇಲೆ ಅವರೇನಾದರೂ ತಡ ಮಾಡಿದರೆ, ತೊಂದರೆಯೇನಾದರೂ ಇದ್ದರೆ 0.3% ದಂಡವನ್ನು ವಿಧಿಸಲಾಗಿದೆ. ಟೆಂಡರ್‌ನಲ್ಲಿ ಮೋಸ ಮಾಡಲು ನಾವು ಯಾವುದೇ ಕಾರಣಕ್ಕೂ ಬಿಡುವುದಿಲ್ಲ. ಇಡೀ ರಾಜ್ಯದಲ್ಲಿ ನಾವು ಮೊದಲ ಬಾರಿಗೆ ಮಾಡುವುದರಿಂದ ಸ್ವಲ್ಪ transportation ನಲ್ಲಿ ತೊಂದರೆಯಾಗಿರಬಹುದು.

ಶೂಗಳ ಗುಣಮಟ್ಟ ಎಲ್ಲಾ ಕಡೆ ಚೆನ್ನಾಗಿದೆ. ನಾವು ಎಲ್ಲಾ ಕಡೆಗಳಲ್ಲಿಯೂ ಚೆಕ್ ಮಾಡುತ್ತಿದ್ದೇವೆ. ಕ್ರಮೇಣ ಇನ್ನೊಂದು ವಾರದಲ್ಲಿ ಇನ್ನೂ ಚೆನ್ನಾಗಿ ತಿಳಯುತ್ತದೆ. Sizes ಗಳಲ್ಲಿ variation ಆಗಿದೆ. Size ಗಳಗೆ indent ಕೊಡಬೇಕಾದರೆ ಶಾಲೆಗಳ ಮುಖ್ಯೋಪಾಧ್ಯಾಯರು ಮತ್ತು ಎಸ್.ಡಿ.ಎಂ.ಸಿ.ಯವರು ಕೊಡಬೇಕು. ನನ್ನ ಪ್ರಕಾರ ಸುಮಾರು 1-1.5 ಲಕ್ಷ sizes variation ಆಗಿದೆ. ಈಗ ಇದೆಲ್ಲವನ್ನೂ ಸರಿ ಮಾಡಿದರೆ ಮುಂದಿನ

ಬಾರಿಗೆ ನಮಗೆ ಸುಲಭವಾಗುತ್ತದೆ. ನಾವು ಇದನ್ನು ಮೊದಲನೇ ಬಾರಿಗೆ ಮಾಡುತ್ತಿದ್ದೇವೆ. ಇದರಿಂದ ಮಕ್ಕಳಲ್ಲಿ ಸಮಾನತೆ ತರುವುದಕ್ಕೆ ಸಾಧ್ಯವಾಗುತ್ತದೆ.

ಮಾನ್ಯ ಸದಸ್ಯರಿಗೆ ಹೇಳಿದಂತೆ ಈ 22 ರಿಂದ 28ನೇ ತಾರೀಖಿನೊಳಗೆ ಇಡೀ ರಾಜ್ಯದಲ್ಲಿ ಎಲ್ಲಾ ಮಕ್ಕಳಿಗೂ ಶೂಗಳನ್ನು ಹಾಕುವ ವ್ಯವಸ್ಥೆಯನ್ನು ಮಾಡಿ ಮುಗಿಸುತ್ತೇವೆ. ಏಕೆಂದರೆ ನಾನೂ ಕೂಡ ಬಂದು ನಾಲ್ಕು ದಿನಗಳಾಯಿತು. ನಾನು ಬಂದ ಮೇಲೆ ಇದರ ಬಗ್ಗೆ ಎಲ್ಲಾ ವಿವರಗಳನ್ನು ತೆಗೆದುಕೊಂಡು ಇದನ್ನೆಲ್ಲಾ ಮಾಡಿದ್ದೇವೆ. ಆದರೆ ಮಕ್ಕಳಿಗೆ ಟ್ಯಾಕ್ಸ್ ಹಣವನ್ನು ಏನು ಕೊಡಬೇಕೊ, ಅದು ಯಾವುದೇ ಕಾರಣಕ್ಕೂ ಒಂದು ಪೈಸೆಯೂ ವ್ಯತ್ಯಾಸವಾಗದಂತೆ ದುರುಪಯೋಗವಾಗದ ರೀತಿಯಲ್ಲಿ ಮಾಡಲಾಗುವುದು.

ಇನ್ನೊಂದು ವಿಷಯ ಹೇಳಲಿಚ್ಛಿಸುತ್ತೇನೆ. ಇದಕ್ಕಾಗಿ ನಮ್ಮ ಬಳಿ ರೂ.116 ಕೋಟಿಯಿದ್ದು, ಆದರೆ ರೂ.76 ಕೋಟಿಯೊಳಗೆ ಇಷ್ಟು ವರ್ಷಗಳಿಗಿಂತಲೂ ಒಳ್ಳೆಯ ಶೂ ಮತ್ತು ಸಾಕ್ಸ್‌ಗಳನ್ನು ಕೊಡುವಂಥದ್ದನ್ನು ನಾವು ಮಾಡಿದ್ದೇವೆ. ಸೆಷನ್ ಮುಗಿಯುವುದರೊಳಗಾಗಿ ಇನ್ನೂ ಎಷ್ಟು ಬ್ಯಾಲೆನ್ಸ್ ಇದೆ ಎನ್ನುವುದರ ಬಗ್ಗೆ ನಾನು ಮಾನ್ಯ ಸದಸ್ಯರಿಗೆ ವೈಯಕ್ತಿಕವಾಗಿ ವರದಿಯನ್ನು ಕೊಡುತ್ತೇನೆ. ನನ್ನ ಪ್ರಕಾರ ಎಲ್ಲರಿಗೂ ಶೂಸ್‌ಗಳನ್ನು ನೀಡಲಾಗುವುದು. ಕೆಲವು ಬಾರಿ ಇಂಡೆಂಟ್ ಹಾಕುವುದರಲ್ಲಿ ತಪ್ಪು ಮಾಡಿಬಿಡುತ್ತಾರೆ. ಅದು ಸಮಸ್ಯೆಯಾಗುತ್ತದೆ. ಆದರೂ ಅದನ್ನು ಸರಿಪಡಿಸಿ ಎಲ್ಲರಿಗೂ ನೀಡಲಾಗುವುದು ಎನ್ನುವ ವಿಶ್ವಾಸವನ್ನು ವ್ಯಕ್ತಪಡಿಸುತ್ತೇನೆ.

**ಶ್ರೀಮತಿ ಬಲ್ಕಿಸ್ ಬಾನು:-** ಮಾನ್ಯ ಸಭಾಪತಿಯವರೆ, ಮಾನ್ಯ ಮಂತ್ರಿಯವರು ಬಂದ ಮೇಲೆ ಈ ಕಾರ್ಯವು ಚುರುಕುಗೊಂಡಿದೆ. ಅದನ್ನು ನಾನು ಒಪ್ಪುತ್ತೇನೆ. ಮಂತ್ರಿಗಳು ಇರದಿದ್ದ ಸಮಯದಲ್ಲಿ ಅಧಿಕಾರಿಗಳೇನು ಮಾಡುತ್ತಾರೆ? ಎಸ್.ಡಿ.ಎಂ.ಸಿ.ಗಳ ಮೇಲೆ ಹಾಕುವುದು ಸರಿಯೇ? ಅಲ್ಲಿರುವ ಮುಖ್ಯೋಪಾಧ್ಯಾಯರು ಇಂಡೆಂಟ್ ಕಳುಹಿಸುವಾಗ ಏಕೆ ತಪ್ಪಿತಸ್ಥರಾದರು? ಇಷ್ಟು ಮಕ್ಕಳಿರುವಾಗ ಇಂಥ size socks, shoes ಅನ್ನು ನೀಡುವಂತೆ ಅವರು ಏಕೆ ಮಾಡಿದರು? ಅಲ್ಲಿರುವಂಥ ಬಿ.ಇ.ಓ.ಗಳು, ಡಿ.ಡಿ.ಪಿ.ಐ.ಗಳು ಏನು ಹೇಳಲಿಲ್ಲ? ಈಗಾಗಲೇ ಮೂರು ತಿಂಗಳಾಗಿವೆ. ಅವನು ಸಮಯಕ್ಕೆ ಸರಿಯಾಗಿ ಸರಬರಾಜು ಮಾಡಿರುವುದಿಲ್ಲ. ಅಲ್ಲಿರುವಂಥ ಮುಖ್ಯೋಪಾಧ್ಯಾಯರು ಸರಿಯಾಗಿ indent ಕೊಡಲಿಲ್ಲ. ಇದಕ್ಕೆ ಕಠಿಣ ಕ್ರಮ ಆಗಬೇಕು.

ಮಾನ್ಯ ಸಚಿವರೆ, ಒಂದು ವಾರದಲ್ಲಿ ವಿತರಣೆ ಮಾಡುವುದಾಗಿ ತಾವು ಆಶ್ವಾಸನೆಯನ್ನು ಕೊಡುತ್ತಿದ್ದೀರಿ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಷ್ಟು ಲೋಪದೋಷಗಳಾಗಿರುವವರ ಟೆಂಡರ್ ರದ್ದು ಮಾಡಬೇಕು. ಕೆಲವು ಮಕ್ಕಳು ಸಾಕ್ಸ್, ಶೂಸ್ ಹಾಕಿಕೊಂಡು ಬರುವುದು, ಕೆಲವು ಮಕ್ಕಳು ಹಾಗೆಯೇ ಬರುವುದು, ಇದರಿಂದ ಮಾನಸಿಕವಾಗಿ ಆ ಮಕ್ಕಳು ಕುಗ್ಗುತ್ತಾರೆ. ಇನ್ನು ಮುಂದೆ ಆ ರೀತಿಯಾಗಬಾರದು. ಅವರ ಮೇಲೆ ಕಠಿಣವಾಗಿ ನೋಟಿಸ್ ಜಾರಿ ಮಾಡುವ ಮೂಲಕ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ.

**ಶ್ರೀ ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳಿದಂತೆ ಇಲಾಖೆಯಲ್ಲಿ ಏನೇ ನ್ಯೂನತೆಗಳಾಗಿದ್ದರೂ ಅಥವಾ ಟೆಂಡರ್‌ನಲ್ಲಿ ಏನೇ ನ್ಯೂನತೆಗಳಾಗಿದ್ದರೂ ಅದರ ಬಗ್ಗೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುತ್ತೇವೆ. ಇನ್ನೊಂದು ವಾರದಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಎಲ್ಲರಿಗೂ ಶೂಸ್ ಮತ್ತು ಸಾಕ್ಸ್‌ಗಳನ್ನು ಕೊಡುವ ಕೆಲಸವನ್ನು ಆದಷ್ಟು ಬೇಗ ಮಾಡುತ್ತೇವೆ. ಈ ಅಧಿವೇಶನ ಮುಗಿಯುವಷ್ಟರಲ್ಲಿ ಎಲ್ಲರಿಗೂ ಶೂಸ್ ಕೊಡುವ ವ್ಯವಸ್ಥೆಯನ್ನು ಆದಷ್ಟು ಬೇಗ ಮಾಡುತ್ತೇವೆ. ವೈಯಕ್ತಿಕವಾಗಿ ಅದಕ್ಕೆ ಒಬ್ಬ ನೋಡಲ್ ಆಫೀಸರ್ ಅನ್ನು ಇಟ್ಟು ನೋಡಿಕೊಳ್ಳುವ ಕೆಲಸವನ್ನು ಸಹ ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ 108**

**ಸಭಾಪತಿಯವರು:-** ಮಾನ್ಯ ನಾಗರಾಜು ಅವರೇ, ನಿಮ್ಮ ಪ್ರಶ್ನೆಗೆ ಉತ್ತರ ನೀಡಲು ಕಾಲಾವಕಾಶವನ್ನು ಕೇಳಿದ್ದಾರೆ.

**ಶ್ರೀ ಎಂ. ನಾಗರಾಜು:-** ಇದು ಬಹಳ ಪ್ರಮುಖವಾಗಿರುವ ಪ್ರಶ್ನೆ. ನ್ಯಾಯಾಲಯಗಳಿಗೆ ಸಂಬಂಧಪಟ್ಟಿರುವುದು. ಲಕ್ಷಾಂತರ ಮೊಕದ್ದಮೆಗಳು ಬಾಕಿಯಿವೆ. ಇದಕ್ಕೆ ಉತ್ತರ ಬೇಕು.

**ಸಭಾಪತಿಯವರು:-** ಆದಷ್ಟು ಬೇಗ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ತರಿಸಿಕೊಡಲಾಗುವುದು.

**ಪ್ರಶ್ನೆ ಸಂಖ್ಯೆ 36**

**(ಈ ಹಂತದಲ್ಲಿ ಮಾನ್ಯ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಯಲ್ಲಿ ನಿರತರಾಗಿದ್ದರು)**

**ಪ್ರಶ್ನೆ ಸಂಖ್ಯೆ 92**

**(ಈ ಹಂತದಲ್ಲಿ ಮಾನ್ಯ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಯಲ್ಲಿ ನಿರತರಾಗಿದ್ದರು)**

**ಪ್ರಶ್ನೆ ಸಂಖ್ಯೆ 137**

**ಸಭಾಪತಿಯವರು:-** ಮಾನ್ಯ ಶ್ರೀನಿವಾಸ್ ಅವರೇ, ನಿಮ್ಮ ಪ್ರಶ್ನೆಗೆ ಉತ್ತರವನ್ನು ಕೊಡುವುದಕ್ಕೆ ಕಾಲಾವಕಾಶವನ್ನು ಕೇಳಿದ್ದಾರೆ.

**ಪ್ರಶ್ನೆ ಸಂಖ್ಯೆ ೪೪**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ನಮ್ಮ ಸಮಾಜಕ್ಕೆ ಬಹಳ ಉತ್ತಮವಾದಂಥ ಸಲಹೆ ಸೂಚನೆಗಳನ್ನು ಉಲ್ಲೇಖಿಸಿ ಉತ್ತರ ನೀಡಿದ್ದಾರೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೋಲಿ, ಕಬ್ಬಲಿಗ, ಬೆಸ್ತ, ಅಂಬಿಗ, ಬಾರ್ಕಿ, ಬೆಸ್ತರ್, ಮೊಗವೀರ ಎನ್ನುವ ಸಮುದಾಯದ ಜನರು ಸಾಕಷ್ಟು ಇದ್ದಾರೆ. ಅವರಿಗೆ ಗಂಗಾ ಕಲ್ಯಾಣ ಯೋಜನೆಯಲ್ಲಿ ಅನುಕೂಲವಾಗುತ್ತಿಲ್ಲ. ನೇರ ಸಾಲ ಯೋಜನೆಗಳಲ್ಲಿ ಅನುಕೂಲವಾಗುತ್ತಿಲ್ಲ. ಸಾಗುವಳಿಗಾಗಿ ಉಪಕರಣ ಸಿಗುತ್ತಿಲ್ಲ. ವಸತಿ ನಿಲಯಗಳಲ್ಲಿ ಪ್ರವೇಶವಾಗುತ್ತಿಲ್ಲ. 2017ರಲ್ಲಿ ನಿಗಮ ಸ್ಥಾಪನೆಯಾಗಿದ್ದು, 10 ವರ್ಷಗಳಾಗಿವೆ. ಆದರೆ ಇಲ್ಲಿಯವರೆಗೆ ಸರಿಯಾಗಿ ಅನುದಾನ ಬಿಡುಗಡೆಯೇ ಆಗಿಲ್ಲ. ರೂ 5 ಕೋಟಿ, 6 ಕೋಟಿ ಕೊಡುವುದರಿಂದ ಏನೂ ಪ್ರಯೋಜನವಿಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಅಂದಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಸಿದ್ಧರಾಮಯ್ಯನವರನ್ನು ಭೇಟಿ ಮಾಡಿ ಈ ಜನರು ಬಹಳ ಕಷ್ಟದಲ್ಲಿದ್ದಾರೆ, ಇವರಿಗೆ ಆರ್ಥಿಕವಾಗಿ ತೊಂದರೆಯಿದೆ, ಹೆಚ್ಚಿನ ಪ್ರಮಾಣದಲ್ಲಿ ಇವರಿಗೆ ಅನುದಾನ ಬಿಡುಗಡೆ ಮಾಡಬೇಕೆನ್ನುವ ಸಲುವಾಗಿ ನಿಗಮ ಮಾಡಬೇಕೆಂದು ಹೇಳಿ, ನಿಗಮವು ಸ್ಥಾಪನೆಯಾಗಿದೆ. ಆದರೆ ಇಲ್ಲಿಯವರೆಗೆ ಬರಬೇಕಾದಂಥ ದುಡ್ಡು ಬರುತ್ತಿಲ್ಲ. ಜನ ಬಹಳ ಕಷ್ಟದಲ್ಲಿದ್ದಾರೆ.

ಆದ್ದರಿಂದ ಕೋಲಿ ಸಮಾಜದವರಿಗೆ ವಿಶೇಷ ಪ್ಯಾಕೇಜ್ ಘೋಷಣೆ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ನಿಗಮಕ್ಕೆ ಹೆಚ್ಚಿನ ಅನುದಾನ ಘೋಷಿಸಬೇಕು. ಕಲ್ಯಾಣ ಕರ್ನಾಟಕ ಭಾಗಕ್ಕೆ ಪ್ರತ್ಯೇಕ ಕಲ್ಯಾಣ ಪ್ಯಾಕೇಜ್ ಘೋಷಿಸಬೇಕೆಂದು ಆಗ್ರಹಿಸುತ್ತೇನೆ. ಕೋಲಿ, ಕಬ್ಬಲಿಗ, ಬೆಸ್ತ, ಅಂಬಿಗ, ಬಾರ್ಕಿ, ತಳವಾರ, ಮೊಗವೀರ, ಬೆಸ್ತರ್, ಕಬ್ಬೇರ್ ಎಂಬ ಈ ಸಮುದಾಯಕ್ಕೆ ಬಹುದಿನಗಳ ಬೇಡಿಕೆ ಪರಿಶಿಷ್ಟ ಪಂಗಡಗಳಲ್ಲಿ ಸೇರ್ಪಡೆ ಮಾಡಬೇಕೆಂಬುದಾಗಿದೆ. ಮಾನ್ಯ ಮಂತ್ರಿಗಳು ಬಹಳ ಮುತುವರ್ಜಿ ವಹಿಸಿ ಈ ಸಮಾಜಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಶಿವರಾಜ್ ಎಸ್. ತಂಗಡಗಿ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೆ, ಈಗಾಗಲೇ ಮಾನ್ಯ ಸದಸ್ಯರು ಹೇಳಿದಂತೆ ಕಬ್ಬಲಿಗ ಸಮಾಜ ಬಹಳ ಹಿಂದುಳಿದಿದೆ ಎನ್ನುವುದು ಸರ್ಕಾರದ ಗಮನದಲ್ಲಿಯೂ ಇದೆ. ಇದಾದ ಮೇಲೆ ನಾವು 2017ರಲ್ಲಿ ನಿಗಮವನ್ನು ಸ್ಥಾಪನೆ ಮಾಡಿ ಆ ನಿಗಮಕ್ಕೆ ಸ್ವಯಂ ಉದ್ಯೋಗ, ನೇರ ಸಾಲ ಯೋಜನೆ, ಗಂಗಾ ಕಲ್ಯಾಣ ನೀರಾವರಿ ಯೋಜನೆ, ಅರಿವು ಶೈಕ್ಷಣಿಕ ಸಾಲ (ಹೊಸತು) ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ, ಆಹಾರ ಕಿಯೋಸ್ಕ್ ಯೋಜನೆ ಮತ್ತು ವಿದೇಶದಲ್ಲಿ ವ್ಯಾಸಂಗ ಮಾಡುವ ಮಕ್ಕಳಿಗೆ ಸಾಲ ಯೋಜನೆಯನ್ನು ಮಾಡಿದ್ದೇವೆ. ಮೊದಲು ವಿದೇಶಗಳಲ್ಲಿ ಓದುವ ಮಕ್ಕಳಿಗೆ ಕೇವಲ ರೂ.25 ಲಕ್ಷ ಇತ್ತು. ಈಗ ಅದನ್ನು ರೂ.50 ಲಕ್ಷಗಳಿಗೆ ಹೆಚ್ಚಿಸುವಂಥ ಕೆಲಸವನ್ನು ಮಾಡಿದ್ದೇವೆ. ಮಾನ್ಯ ಸದಸ್ಯರು ಕೇಳಿರುವ ಸ್ವಯಂ ಉದ್ಯೋಗ ನೇರ ಸಾಲ ಮತ್ತು ಗಂಗಾ ಕಲ್ಯಾಣ

ಯೋಜನೆಗಳ ಬಗ್ಗೆ ಕೇಳಿದ್ದು, ಅದಕ್ಕೆ ಮಾನ್ಯ ಸಿದ್ದರಾಮಯ್ಯನವರು ಇದ್ದಾಗ ಎಲ್ಲಾ 11 ನಿಗಮಗಳಿಗೂ ಸೇರಿ ರೂ.1600 ಕೋಟಿ ಹಣವನ್ನು ತೆಗೆದುಕೊಂಡಿದ್ದೆನು. ಆಗ ಎಲ್ಲರಿಗೂ ಪರಿಪೂರ್ಣವಾಗಿ ಕೊಡುವಂಥ ಕೆಲಸವನ್ನು ಮಾಡಿದ್ದೇನೆ.

ಮಾನ್ಯ ಸಭಾಪತಿಯವರೇ, ರೂ.5 ಕೋಟಿ ಬಹಳ ಕಡಿಮೆ ಎನ್ನುವುದು ನನಗೂ ಗೊತ್ತಿದೆ. ಈಗ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವಂಥ ಕೆಲಸವನ್ನು ಮಾಡುತ್ತೇನೆ. ಎಲ್ಲಾ ನಿಗಮಕ್ಕೂ ಹೆಚ್ಚು ಅನುದಾನ ಕೊಟ್ಟರೆ ಈ ಎಲ್ಲಾ ಯೋಜನೆಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ತಿಪ್ಪಣ್ಣಪ್ಪ ಕಮಕನೂರ ಅವರು ಸಮಾಜದ ಬಗ್ಗೆ ಇಟ್ಟಿರುವ ವಿಶೇಷ ಕಾಳಜಿಗೆ ತಕ್ಕಂತೆ ಸರ್ಕಾರದಿಂದ ಯೋಜನೆಗಳನ್ನು ಜಾಸ್ತಿ ಮಾಡಬೇಕಾಗಿದೆ. ಅದನ್ನು ನಾನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುವ ಕೆಲಸವನ್ನು ಮಾಡುತ್ತೇನೆ.

**ಸಭಾಪತಿಯವರು:-** ಪ್ರಶ್ನೋತ್ತರವನ್ನು ಹೊರತುಪಡಿಸಿ ಬೇರೆ ಯಾವುದೂ ದಾಖಲೆಗೆ ಹೋಗಬಾರದು.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಡಾ: ಯತೀಂದ್ರ. ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ದಿನಾಂಕ 17ನೇ ಆಗಸ್ಟ್ 2026ರ ಸಮೂಹ 1ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 147 ಪ್ರಶ್ನೆಗಳ ಪೈಕಿ 41 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

(ಮುಂದು)

(710) 17-08-2026 (12.20) ಕೆಜಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

5. ನಿಯಮ 58ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವನೆಗಳು

**ಅ) ವಿಷಯ: ರಾಜ್ಯದಲ್ಲಿ ಶಿಕ್ಷಕರನ್ನು ಆಡಳಿತಾತ್ಮಕ ಕಾರ್ಯಗಳಿಗೆ ನಿಯೋಜಿಸುತ್ತಿರುವುದರಿಂದ ಉಂಟಾಗುತ್ತಿರುವ ಸಮಸ್ಯೆಗಳ ಬಗ್ಗೆ.**

- - - - - - -

**ಶ್ರೀ ಡಿ.ಟಿ.ಶ್ರೀನಿವಾಸ (ಡಿ.ಟಿಎಸ್) (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮೇಲ್ಕಂಡ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ನನಗೆ ಅವಕಾಶ ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 17-08-2026 ರಂದು ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ "ರಾಜ್ಯದಲ್ಲಿ ಶಿಕ್ಷಕರ ಸಮಸ್ಯೆಗಳಿಗೆ ಪರಿಹಾರ ಒದಗಿಸಿ" ಎಂಬ ಶಿರೋನಾಮೆಯಡಿ ವಿಷಯವು ಪ್ರಕಟವಾಗಿದ್ದು, ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ಇತ್ತೀಚಿನ ದಿನಗಳಲ್ಲಿ ಹಲವು ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದ್ದು, ವಿಶೇಷವಾಗಿ ಶಿಕ್ಷಕರನ್ನು ಬೋಧನಾ ಕಾರ್ಯದಿಂದ ಹೊರತುಪಡಿಸಿ, ವಿವಿಧ ಇಲಾಖೆಗಳ ಸಮೀಕ್ಷೆ, ಜನಗಣತಿ, ಚುನಾವಣೆ, ತರಬೇತಿ, ಆನ್‌ಲೈನ್ ದತ್ತಾಂಶ ನಮೂದು ಹಾಗೂ ಇತರ ಆಡಳಿತಾತ್ಮಕ ಕಾರ್ಯಗಳಿಗೆ ಪದೇ ಪದೇ ನಿಯೋಜಿಸಲಾಗುತ್ತಿರುವುದರಿಂದ, ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳ ಮೇಲೆ ಪರಿಣಾಮ ಬೀರುತ್ತಿದೆ. ಮತ್ತೊಂದೆಡೆ ಶಿಕ್ಷಕರ ವರ್ಗಾವಣೆ, ಬಡ್ತಿ, ಖಾಲಿ ಹುದ್ದೆಗಳ ಭರ್ತಿ, ಅತಿಥಿ ಶಿಕ್ಷಕರ ನೇಮಕಾತಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಕರ ಕೊರತೆಯ ಸಮಸ್ಯೆಗಳು ಇನ್ನೂ ಸಂಪೂರ್ಣವಾಗಿ ಬಗೆಹರಿದಿಲ್ಲ.

ಇತ್ತೀಚೆಗೆ ಶಿಕ್ಷಕರ ಕಾರ್ಯಭಾರ ಮತ್ತು ಇಲಾಖೆಯ ಆಡಳಿತಾತ್ಮಕ ಒತ್ತಡಕ್ಕೆ ಸಂಬಂಧಿಸಿದಂತೆ ರಾಜ್ಯದ್ಯಂತ ಚರ್ಚೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರವು ಶಿಕ್ಷಕರನ್ನು ಬೋಧನಾ ಕಾರ್ಯಕ್ಕೆ ಹೆಚ್ಚಿನ ಆದ್ಯತೆಯೊಂದಿಗೆ ಒಳಸಿಕೊಳ್ಳಲು ಯಾವ ಕ್ರಮ ಕೈಗೊಂಡಿದೆ ಎಂಬುದು ಸ್ಪಷ್ಟವಾಗಬೇಕಾಗಿದೆ.

ಆದ್ದರಿಂದ, ಸರ್ಕಾರವು ರಾಜ್ಯದ ಪ್ರಸ್ತುತ ಶಿಕ್ಷಕರ ಕೊರತೆ, ಖಾಲಿ ಹುದ್ದೆಗಳು, ಶಿಕ್ಷಕರಿಗೆ ನೀಡಲಾಗುತ್ತಿರುವ ಬೋಧನೇತರ ಕರ್ತವ್ಯಗಳು ಹಾಗೂ ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟದ ಮೇಲೆ ಉಂಟಾಗುತ್ತಿರುವ ಪರಿಣಾಮಗಳ ಕುರಿತು ಸಮಗ್ರ ಪರಿಶೀಲನೆ ನಡೆಸಿ, ಶಿಕ್ಷಕರ ಮೇಲಿನ ಬೋಧನೇತರ ಕಾರ್ಯಭಾರವನ್ನು ಕಡಿಮೆ ಮಾಡಿ, ಖಾಲಿ ಹುದ್ದೆಗಳನ್ನು ತ್ವರಿತವಾಗಿ ಭರ್ತಿ ಮಾಡುವ ಮೂಲಕ ಸರ್ಕಾರಿ ಶಾಲೆಗಳ ಶೈಕ್ಷಣಿಕ ಗುಣಮಟ್ಟವನ್ನು ಸುಧಾರಿಸಲು ಸರ್ಕಾರವು ತುರ್ತಾಗಿ ಕ್ರಮಕೈಗೊಳ್ಳಬೇಕು ಎಂಬ ವಿಷಯವನ್ನು ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷಾರತಾ ಇಲಾಖೆ ಸಚಿವರಲ್ಲಿ ಪ್ರಸ್ತಾಪಿಸಲು ಒಯಸುತ್ತೇನೆ.

**ಡಾ॥ ಯತೀಂದ್ರ. ಎಸ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಡಿ.ಟಿ.ಶ್ರೀನಿವಾಸ (ಡಿ.ಟಿ.ಎಸ್) ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ, ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷಾರತಾ ಇಲಾಖೆ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಶ್ರೀ ಟಿ.ಎ.ಶರವಣರವರೇ, ತಾವು ತಮ್ಮ ಶೂನ್ಯವೇಳೆಯ ಪ್ರಸ್ತಾವನೆಯನ್ನು ಮಂಡಿಸಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಟಿ.ಎ.ಶರವಣರವರು ಸರ್ಕಾರದ ವಿರುದ್ಧ ಘೋಷಣೆಯಲ್ಲಿ ನಿರತರಾಗಿದ್ದರು)**

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್‌ರವರೇ, ತಾವು ತಮ್ಮ ಶೂನ್ಯವೇಳೆಯ ಪ್ರಸ್ತಾವನೆಯನ್ನು ಮಂಡಿಸಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್‌ರವರು ಸರ್ಕಾರದ ವಿರುದ್ಧ ಘೋಷಣೆಯಲ್ಲಿ ನಿರತರಾಗಿದ್ದರು)**

**ಆ) ವಿಷಯ:- ರಾಜ್ಯದಲ್ಲಿ 27 ಜಿಲ್ಲೆಗಳ ಅಂತರ್ಜಲದಲ್ಲಿ ಅತ್ಯಂತ ಅಪಾಯಕಾರಿಯಾದ ನೈಟ್ರೇಟ್ ಸಾಂದ್ರತೆ ಹೆಚ್ಚಾಗಿರುವ ಹಾಗೂ ಕಲುಷಿತ ನೀರು ಕುಡಿದು ಸಾರ್ವಜನಿಕರ ಆರೋಗ್ಯ ಕ್ಷೀಣಿಸುತ್ತಿರುವ ಬಗ್ಗೆ.**

- - -

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮೇಲ್ಕಂಡ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ನನಗೆ ಅವಕಾಶ ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಇತ್ತೀಚೆಗೆ ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ನೀಡಿದ ಅಧಿಕೃತ ಮಾಹಿತಿ ಹಾಗೂ ಕೇಂದ್ರೀಯ ಅಂತರ್ಜಲ ಮಂಡಳಿಯ (C.G.W.B) 2025-26 ನೇ ಸಾಲಿನ ವರದಿಯ ಪ್ರಕಾರ, ನಮ್ಮ ಕರ್ನಾಟಕ ರಾಜ್ಯದ 31 ಜಿಲ್ಲೆಗಳ ಪೈಕಿ ಬಿಸಿಯೇರಿದ 27 ಜಿಲ್ಲೆಗಳಲ್ಲಿ ಅಂತರ್ಜಲದಲ್ಲಿ ಮಟ್ಟಕ್ಕಿಂತ ಹೆಚ್ಚಿನ ನೈಟ್ರೇಟ್ ಮತ್ತು ಫ್ಲೋರೈಡ್ ಅಂಶಗಳು ಪತ್ತೆಯಾಗಿರುವುದು ಅತ್ಯಂತ ಕಳವಳಕಾರಿ ಸಂಗತಿ ಎಂದು ವಿಜಯವಾಣಿ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಸಾರ್ವಜನಿಕ ಕುಡಿಯುವ ನೀರಿನಲ್ಲಿ ನೈಟ್ರೇಟ್ ಸಾಂದ್ರತೆಯು ಗರಿಷ್ಠ ಅಂತರಾಷ್ಟ್ರೀಯ ಮಿತಿಗಿಂತ ಕಡಿಮೆಯಿರಬೇಕು. ಆದರೆ, ರಾಜ್ಯದಲ್ಲಿ ಪರೀಕ್ಷಿಸಲಾದ ಮಾದರಿಗಳ ಪೈಕಿ ಶೇಕಡಾ 20ಕ್ಕೂ ಹೆಚ್ಚು ಭಾಗಗಳಲ್ಲಿ ಈ ಮಿತಿ ಮೀರಿರುವುದು ಕಂಡುಬಂದಿದೆ. ನೈಟ್ರೇಟ್ ಕಲುಷಿತ ನೀರನ್ನು ನಿರಂತರವಾಗಿ ಕುಡಿಯುವುದರಿಂದ ನವಜಾತ ಶಿಶುಗಳಲ್ಲಿ ಆಮ್ಲಜನಕದ ಕೊರತೆಯುಂಟಾಗಿ "ಬ್ಲೂ ಬೇಬಿ ಸಿಂಡ್ರೋಮ್" ಕಾಯಿಲೆ ಬರುತ್ತದೆ. ಗರ್ಭಿಣಿಯರಲ್ಲಿ ಗರ್ಭಪಾತ ಹಾಗೂ ಶಿಶು ವೈಕಲ್ಯತೆ ಹೆಚ್ಚಾಗುತ್ತದೆ. ವಯಸ್ಕರಲ್ಲಿ ಜಠರ ಮತ್ತು ಕರುಳಿನ ಕ್ಯಾನ್ಸರ್ ಹಾಗೂ ಥೈರಾಯ್ಡ್ ಸಮಸ್ಯೆಗಳು ಉಲ್ಬಣಗೊಳ್ಳುತ್ತವೆ. ಕೃಷಿಯಲ್ಲಿ ಮಿತಿಮೀರಿ ಮತ್ತು ಅಸಮತೋಲಿತವಾಗಿ ಬಳಸಲಾಗುತ್ತಿರುವ ನೈಟ್ರೋಜನ್ ಯೂರಿಯಾ ಮತ್ತು ರಸಗೊಬ್ಬರಗಳು ಮಳೆಯ ನೀರಿನೊಂದಿಗೆ ಇಂಗಿ ಅಂತರ್ಜಲವನ್ನು ತೀವ್ರವಾಗಿ ಕಲುಷಿತಗೊಳಿಸುತ್ತಿವೆ.

ವಿಶೇಷವಾಗಿ ನಮ್ಮ ಕಲ್ಯಾಣ ಕರ್ನಾಟಕ ಸೇರಿದಂತೆ ದಾವಣಗೆರೆ, ಬೀದರ್, ಕಲಬುರಗಿ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳ ಗ್ರಾಮೀಣ ಭಾಗಗಳಲ್ಲಿ ಶುದ್ಧ ಕುಡಿಯುವ ನೀರಿನ ಕೊರತೆಯಿಂದಾಗಿ ಜನರು ಈ ವಿಷಪೂರಿತ ಅಂತರ್ಜಲವನ್ನೇ ಕುಡಿಯುತ್ತಿದ್ದಾರೆ.

ಆದ್ದರಿಂದ, ಸಾರ್ವಜನಿಕರ ಆರೋಗ್ಯ ಹಿತದೃಷ್ಟಿಯಿಂದ ರಾಜ್ಯದ ಎಲ್ಲಾ 27 ಪೀಡಿತ ಜಿಲ್ಲೆಗಳಲ್ಲಿ ಜಲಮೂಲಗಳ ನೀರಿನ ಮಾದರಿ ತಪಾಸಣೆ ನಡೆಸಬೇಕು. ಅಪಾಯಕಾರಿ ನೈಟ್ರೇಟ್ ಹೊಂದಿರುವ ಕೊಳವೆ ಬಾವಿಗಳನ್ನು ತಕ್ಷಣ "ಕುಡಿಯಲು ಅನರ್ಹ" ಎಂದು ಗುರುತಿಸಿ, ಆ ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಅಥವಾ R.O. ಘಟಕಗಳ ಮೂಲಕ ಶುದ್ಧ ನೀರು ಪೂರೈಸಬೇಕು. ಅತಿಯಾದ

ನೈಟ್ರೋಜನ್/ಯೂರಿಯಾ ಬಳಕೆಯನ್ನು ತಡೆಯಲು ಕೃಷಿ ಜಾಗ್ರತೆ ಅಭಿಯಾನ ನಡೆಸಿ ಸಾವಯವ ಹಾಗೂ ನೈಸರ್ಗಿಕ ಕೃಷಿಗೆ ಹೆಚ್ಚಿನ ಸಬ್ಸಿಡಿಯನ್ನು ನೀಡಬೇಕು ಕಲುಷಿತ ನೀರು ಪೀಡಿತ ಪ್ರದೇಶಗಳ ಸಾರ್ವಜನಿಕರಿಗೆ ವಿಶೇಷ ಆರೋಗ್ಯ ಶಿಬಿರ ಆಯೋಜಿಸಿ, ರೋಗ ಲಕ್ಷಣಗಳನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಿ, ಚಿಕಿತ್ಸೆ ನೀಡಬೇಕೆಂದು ಶೂನ್ಯವೇಳೆಯಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರನ್ನು ಒತ್ತಾಯಿಸುತ್ತೇನೆ.

**ಡಾ॥ ಯತೀಂದ್ರ. ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಚಿದಾನಂದ ಎಂ.ಗೌಡರವರೇ, ತಾವು ತಮ್ಮ ಶೂನ್ಯವೇಳೆಯ ಪ್ರಸ್ತಾವನೆಯನ್ನು ಮಂಡಿಸಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಚಿದಾನಂದ ಎಂ.ಗೌಡರವರು ಸರ್ಕಾರದ ವಿರುದ್ಧ ಘೋಷಣೆಯಲ್ಲಿ ನಿರತರಾಗಿದ್ದರು)**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿರವರೇ, ತಾವು ತಮ್ಮ ಶೂನ್ಯವೇಳೆಯ ಪ್ರಸ್ತಾವನೆಯನ್ನು ಮಂಡಿಸಿ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿರವರು ಸದನದಲ್ಲಿ ಉಪಸ್ಥಿತರಲಿಲ್ಲ)

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರೇ, ತಾವು ತಮ್ಮ ಶೂನ್ಯವೇಳೆಯ ಪ್ರಸ್ತಾವನೆಯನ್ನು ಮಂಡಿಸಿ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರು ಸದನದಲ್ಲಿ ಉಪಸ್ಥಿತರಲಿಲ್ಲ)

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಡಾ॥ ಬಿ.ಜಿ.ಪಾಟೀಲರವರೇ, ತಾವು ತಮ್ಮ ಶೂನ್ಯವೇಳೆಯ ಪ್ರಸ್ತಾವನೆಯನ್ನು ಮಂಡಿಸಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಡಾ॥ ಬಿ.ಜಿ.ಪಾಟೀಲ ರವರು ಸರ್ಕಾರದ ವಿರುದ್ಧ ಘೋಷಣೆಯಲ್ಲಿ ನಿರತರಾಗಿದ್ದರು)**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಪಿ.ಹೆಚ್.ಪೂಜಾರ್‌ರವರೇ, ತಾವು ತಮ್ಮ ಶೂನ್ಯವೇಳೆಯ ಪ್ರಸ್ತಾವನೆಯನ್ನು ಮಂಡಿಸಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಪಿ.ಹೆಚ್.ಪೂಜಾರ್‌ರವರು ಸರ್ಕಾರದ ವಿರುದ್ಧ ಘೋಷಣೆಯಲ್ಲಿ ನಿರತರಾಗಿದ್ದರು)**

**ಇ) ಬ್ಯಾಂಕ್‌ಗಳಿಂದ ಕಳೆದ 12 ವರ್ಷಗಳಲ್ಲಿ ₹10 ಲಕ್ಷ ಕೋಟಿ ಕಾರ್ಪೋರೇಟ್ ಸಾಲ 'ರೈಟ್ ಆಫ್' ಮಾಡಿರುವ ಕುರಿತು.**

\- - - - - -

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮಹತ್ವದ ವಿಷಯವನ್ನು ಶೂನ್ಯವೇಳೆಯಲ್ಲಿ ಮಂಡಿಸಲು ನನಗೆ ಅವಕಾಶ ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ದಿನಾಂಕ 13-08-2026 ರಂದು ರಾಜ್ಯದ ಪ್ರತಿಷ್ಠಿತ ದಿನಪತ್ರಿಕೆಯಾದ ವಾರ್ತಾ ಭಾರತಿ ದಿನ ಪತ್ರಿಕೆಯಲ್ಲಿ ಬ್ಯಾಂಕುಗಳಿಂದ ಕಳೆದ 12 ವರ್ಷಗಳಲ್ಲಿ 10 ಲಕ್ಷ ಕೋಟಿ ರೂಪಾಯಿಗಳ ಕಾರ್ಪೋರೇಟ್ ಸಾಲಗಳ ರೈಟ್ ಆಫ್ ಎಂಬ ಶೀಷಿಕೆಯಲ್ಲಿ ವರದಿ ಪ್ರಕಟವಾಗಿದೆ.

ಕಳೆದ 12 ವರ್ಷಗಳಲ್ಲಿ ಬ್ಯಾಂಕುಗಳು ದೊಡ್ಡ ಕಾರ್ಪೋರೇಟ್ ಸಂಸ್ಥೆಗಳು ಮತ್ತು ಸೇವೆಗಳಿಗೆ ನೀಡಿದ್ದ ಸುಮಾರು 10 ಲಕ್ಷ ಕೋಟಿ ರೂಪಾಯಿಗಳ ಸಾಲವನ್ನು ರೈಟ್ ಆಫ್ ಮಾಡಿವೆ ಎಂದು ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ತಿಳಿಸಿದೆ. ಲಿಖಿತ ಉತ್ತರದಲ್ಲಿ ಆರ್.ಬಿ.ಐ ನಿಂದ ಲಭ್ಯ ಮಾಹಿತಿಯನ್ನು ಹಂಚಿಕೊಂಡ ಕೇಂದ್ರ ಹಣಕಾಸು ರಾಜ್ಯ ಸಚಿವ ಶ್ರೀ ಪಂಕಜ ಚೌದರಿ ವಿತ್ತ ವರ್ಷ 2025 ರಲ್ಲಿ 63.19 ಲಕ್ಷ ಕೋಟಿ ರೂಪಾಯಿಗಳಿದ್ದ ರೈಟ್ ಆಫ್ ಮಾಡಲಾದ ಸಾಲಗಳ ಮೊತ್ತ ವಿತ್ತ ವರ್ಷ 69.21 ಲಕ್ಷ ಕೋಟಿ ರೂಪಾಯಿಗಳಿಗೆ ಏರಿಕೆಯಾಗಿದೆ ಎಂದು ತಿಳಿಸಿದ್ದಾರೆ.

ರೈಟ್ ಆಫ್ ಮಾಡಲಾದ ಸಾಲಗಳ ಮೊತ್ತ 2018-19 ರಲ್ಲಿ 1.48 ಲಕ್ಷ ಕೋಟಿ ರೂಗಳ ಗರಿಷ್ಠವನ್ನು ತಲುಪಿತ್ತು ಎನ್ನುವುದನ್ನು ಆರ್.ಬಿ.ಐ., ಡಾಟಾ ತೋರಿಸಿದೆ. ಆರ್,ಬಿ,ಐ., ವಾಣಿಜ್ಯ ಬ್ಯಾಂಕುಗಳಿಗೆ ಹೊರಡಿಸಿರುವ ನಿರ್ದೇಶನದಂತೆ ರೈಟ್ ಆಫ್ ಪ್ರಕ್ರಿಯೆಯು ಬ್ಯಾಂಕುಗಳು ತಮ್ಮ ಬ್ಯಾಲೆನ್ಸ್ ಶೀಟ್‌ಗಳನ್ನು ಸರಿಹೊಂದಿಸಲು ಕೈಗೊಳ್ಳುವ ಲೆಕ್ಕಪತ್ರ ವಿಧಾನವಾಗಿದೆ ಎಂದು ಹೇಳಿದ್ದಾರೆ. ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳು ಸೆಪ್ಟಂಬರ್ 30, 2025 ರವರೆಗೆ ಕಳೆದ ಐದೂವರೆ ವಿತ್ತ ವರ್ಷಗಳಲ್ಲಿ ಒಟ್ಟು 6.15 ಲಕ್ಷ ಕೋಟಿ ರೂಪಾಯಿಗಳ ಸಾಲವನ್ನು ರೈಟ್ ಆಫ್ ಮಾಡಿದ ಎಂದು ಸಂಸತ್ತಿನಲ್ಲಿ ರಾಜ್ಯ ಸಚಿವ ಶ್ರೀ ಪಂಕಜ ಚೌದರಿರವರು ತಿಳಿಸಿದ್ದಾರೆ.

ಕರ್ನಾಟಕದಲ್ಲಿ ಇತ್ತೀಚಿನ ದಿವಸಗಳಲ್ಲಿ ತೀವ್ರ ಮುಂಗಾರು ಕೊರತೆಯು ಲಕ್ಷಾಂತರ ಹೆಕ್ಟೇರ್‌ಗಳಲ್ಲಿ ಬೆಳೆ ಪರಿಸ್ಥಿತಿಯ ಮೇಲೆ ಪರಿಣಾಮ ಬೀರಿದೆ. ರಾಜ್ಯದಲ್ಲಿ ಹಿಂದಿನ ಪ್ರಮುಖ ಬರಗಾಲಗಳು 48.19 ಲಕ್ಷ ಹೆಕ್ಟೇರ್‌ಗಳಿಗೂ ಹೆಚ್ಚು ಬೆಳೆ ಹಾನಿಯನ್ನುಂಟು ಮಾಡಿದ್ದು, 60 ರಿಂದ 68 ಲಕ್ಷ ರೈತ ಕುಟುಂಬಗಳ ಮೇಲೆ ಪರಿಣಾಮ ಬೀರಿವೆ. ಪ್ರಸ್ತುತ ಪರಿಣಾಮ ಮತ್ತು ವ್ಯಾಪ್ತಿ ಮಳೆ ಕೊರತೆ: 31 ಜಿಲ್ಲೆಗಳಲ್ಲಿ 21 ರಿಂದ 26 ಜಿಲ್ಲೆಗಳು ಮಾನ್ಸೂನ್ ಹಂತದಲ್ಲಿ ಗಮನಾರ್ಹ ಮಳೆ ಕೊರತೆಯನ್ನು ದಾಖಲಿಸಿದೆ. ಉತ್ತರ ಮತ್ತು ಒಳನಾಡಿನ ಜಿಲ್ಲೆಗಳಲ್ಲಿ ಹೆಸರುಕಾಳು, ಉದ್ದು, ತೊಗರಿ ಮತ್ತು ಸೋಯಾಬೀನ್ಸ್ ನಂತಹ ಮಳೆಯಾಶ್ರಿತ ಬೆಳೆಗಳು ಬಾರಿ ಹಾನಿಯನ್ನು ಎದುರಿಸಿವೆ.

ಕೇಂದ್ರ ಸರ್ಕಾರವು ಕಾರ್ಪೋರೇಟ್ ಸಾಲಗಳನ್ನು ರೈಟ್ ಆಫ್ ಮಾಡುತ್ತಿದ್ದು, ದೇಶದ ಬಡ ರೈತರ ಸಾಲವನ್ನು ಮನ್ನಾ ಮಾಡಲು ಕೇಂದ್ರ ಸರ್ಕಾರವು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ರಾಜ್ಯದಲ್ಲಿ ಹಲವಾರು ರೈತರು ಕೃಷಿ ಸಾಲ ಪಡೆದು ಮರುಪಾವತಿ ಮಾಡಲಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ಸಹ ನಾವು ದಿನಪತ್ರಿಕೆ ಹಾಗೂ ಮಾಧ್ಯಮಗಳಲ್ಲಿ ವರದಿಯಾಗುತ್ತಿರುವುದನ್ನು ನೋಡಿದ್ದೇವೆ. ಆದ್ದರಿಂದ, ಮಾನ್ಯ ಕೃಷಿ ಸಚಿವರು ರಾಜ್ಯ ಸರ್ಕಾರದ ಮೂಲಕ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ರೈತರ ಸಾಲ ಮನ್ನಾ ಮಾಡಲು ಕ್ರಮವಹಿಸಬೇಕೆಂದು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಡಾ॥ ಯತೀಂದ್ರ. ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಮತಿ ಬಲ್ಕೀಸ್ ಬಾನುರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಮುಂದು)

**(711) 17.08.2026/12.30/ಎಂವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)**

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

## 6. ಸಭೆಯ ಮುಂದಿಡಲಾದ ಕಾಗದಪತ್ರಗಳು

**ಸಭೆಯ ಮುಂದಿಡಲಾದ ಕಾಗದ ಪತ್ರಗಳ ಪಟ್ಟಿ**

**(ಮೊದಲನೇ ಪಟ್ಟಿ)**

***

**(ಪಟ್ಟಿಯನ್ನು ಲಗತ್ತಿಸಿದೆ)**

**(ಎರಡನೇ ಪಟ್ಟಿ)**

****

**(ಪಟ್ಟಿಯನ್ನು ಲಗತ್ತಿಸಿದೆ)**

## 7. ಕಾರ್ಯದರ್ಶಿಯವರ ವರದಿ

**ಕಾರ್ಯದರ್ಶಿಯವರು (ಕ.ವಿ.ಪ.):-** ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ಒಪ್ಪಿಸಿದ ನಂತರ ಘನತೆವೆತ್ತ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**(ಪಟ್ಟಿಯನ್ನು ಲಗತ್ತಿಸಿದೆ)**

## ೮. ವರದಿಯನ್ನೊಪ್ಪಿಸುವುದು

**ಡಾ: ಚಂದ್ರಶೇಖರ್ ಬಸವರಾಜ ಪಾಟೀಲ್ (ಸದಸ್ಯರು, ಕರ್ನಾಟಕ ವಿಧಾನಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳು 242(ಬಿ) 5 ರೀತ್ಯಾ, 2025-26ನೇ ಸಾಲಿನ ಕರ್ನಾಟಕ ವಿಧಾನಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ ಸದಸ್ಯನಾದ ನಾನು ಸಮಿತಿಯು ಅನುಮೋದಿಸಿರುವ ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಶಾಲಾ ಶಿಕ್ಷಣ ಇಲಾಖೆಯ ಮತ್ತು ಕಂದಾಯ ಇಲಾಖೆಗಳಿಗೆ ಸಂಬಂಧಿಸಿದಂತೆ ಸಮಿತಿಯ 44ನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ವರದಿಯನ್ನೊಪ್ಪಿಸಲಾಯಿತು.

**ಸಭಾಪತಿಯವರು:-** ಮಾನ್ಯ ಶಾಸಕರುಗಳಾದ ಶ್ರೀ ಎಫ್.ಹೆಚ್.ಜಕ್ಕಪ್ಪನವರ್, ಡಾ: ಡಿ. ತಿಮ್ಮಯ್ಯ, ಶ್ರೀ ತಿಪ್ಪಣ್ಣಪ್ಪ ಕಮಕನೂರ, ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್), ಶ್ರೀಮತಿ ಬಲ್ಕೀಸ್ ಬಾನು, ಶ್ರೀ ಜಗದೇವ್ ಗುತ್ತೇದಾರ್ ರವರು ಸಹಿ ಮಾಡಿರುವ ನಿರ್ಣಯವನ್ನು ಮಂಡಿಸುವುದು.

## 9. ಖಂಡನಾ ನಿರ್ಣಯ

**ವಿಷಯ:- ದಿನಾಂಕ: 08.08.2026 ರಂದು ಉತ್ತರಾಖಂಡ ರಾಜ್ಯದ ಹಲ್ದವಾನಿ ರಾಮಲೀಲಾ ಮೈದಾನದಲ್ಲಿ ಕಾಂಗ್ರೆಸ್ ಪಕ್ಷ ಏರ್ಪಡಿಸಿದ್ದ ಸಾರ್ವಜನಿಕ ಸಭೆಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಮತ್ತು ರಾಜ್ಯ ಸಭೆಯ ವಿರೋಧ ಪಕ್ಷದ ನಾಯಕರಾದ ಡಾ॥ ಮಲ್ಲಿಕಾರ್ಜುನ ಖರ್ಗೆರವರು ಭಾಗವಹಿಸಿ ಮಾತನಾಡಿ ನಿರ್ಗಮಿಸಿದ ಮೇಲೆ ಮನುವಾದಿಗಳು ಡಾ॥ ಮಲ್ಲಿಕಾರ್ಜುನ ಖರ್ಗೆಯವರು ನಿಂತು ಭಾಷಣ ಮಾಡಿದ ಸ್ಥಳವನ್ನು ಹೋಮ ಹವನ ಮುಖಾಂತರ ಶುದ್ಧಿಗೊಳಿಸಿ ಸಾರ್ವಜನಿಕವಾಗಿ ಅಸ್ಪೃಶ್ಯತೆಯನ್ನು ಆಚರಿಸಿ ಭಾರತ ಸಂವಿಧಾನಕ್ಕೆ ಅಪಮಾನ ಮಾಡಿರುವ ಕುರಿತು.**

\- - - - - -

**ಶ್ರೀ ಎಫ್.ಹೆಚ್. ಜಕ್ಕಪ್ಪನವರ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ತಮ್ಮ ಅನುಮತಿಯೊಂದಿಗೆ ಈ ಕೆಳಕಂಡ ನಿರ್ಣಯವನ್ನು ಸದನದ ಮುಂದೆ ಮಂಡಿಸುತ್ತೇನೆ.

"ದಿನಾಂಕ: 08.08.2026 ರಂದು ಉತ್ತರಾಖಂಡ ರಾಜ್ಯದ ಹಲ್ದವಾನಿ ರಾಮಲೀಲಾ ಮೈದಾನದಲ್ಲಿ ಕಾಂಗ್ರೆಸ್ ಪಕ್ಷ ಏರ್ಪಡಿಸಿದ್ದ ಸಾರ್ವಜನಿಕ ಸಭೆಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಮತ್ತು ರಾಜ್ಯ ಸಭೆಯ ವಿರೋಧ ಪಕ್ಷದ ನಾಯಕರಾದ ಡಾ॥ ಮಲ್ಲಿಕಾರ್ಜುನ ಖರ್ಗೆರವರು ಭಾಗವಹಿಸಿ ಮಾತನಾಡಿ ನಿರ್ಗಮಿಸಿದ ಮೇಲೆ ಮನುವಾದಿಗಳು ಡಾ॥ ಮಲ್ಲಿಕಾರ್ಜುನ ಖರ್ಗೆಯವರು ನಿಂತು ಭಾಷಣ ಮಾಡಿದ ಸ್ಥಳವನ್ನು ಹೋಮ ಹವನ ಮುಖಾಂತರ ಶುದ್ಧಿಗೊಳಿಸಿ ಸಾರ್ವಜನಿಕವಾಗಿ ಅಸ್ಪೃಶ್ಯತೆಯನ್ನು ಆಚರಿಸಿ ಭಾರತ ಸಂವಿಧಾನಕ್ಕೆ ಅಪಮಾನ ಮಾಡಿರುವ ಕುರಿತು."

ನ

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ದಿನಾಂಕ: 08.08.2026 ರಂದು ಉತ್ತರಾಖಂಡ ರಾಜ್ಯದ ಹಲ್ದವಾನಿ ರಾಮಲೀಲಾ ಮೈದಾನದಲ್ಲಿ ಕಾಂಗ್ರೆಸ್ ಪಕ್ಷ ಏರ್ಪಡಿಸಿದ್ದ ಸಾರ್ವಜನಿಕ ಸಭೆಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಮತ್ತು ರಾಜ್ಯ ಸಭೆಯ ವಿರೋಧ ಪಕ್ಷದ ನಾಯಕರಾದ ಡಾ॥ ಮಲ್ಲಿಕಾರ್ಜುನ ಖರ್ಗೆರವರು ಭಾಗವಹಿಸಿ ಮಾತನಾಡಿ ನಿರ್ಗಮಿಸಿದ ಮೇಲೆ ಮನುವಾದಿಗಳು ಡಾ॥ ಮಲ್ಲಿಕಾರ್ಜುನ ಖರ್ಗೆಯವರು ನಿಂತು ಭಾಷಣ ಮಾಡಿದ ಸ್ಥಳವನ್ನು ಹೋಮ ಹವನ ಮುಖಾಂತರ ಶುದ್ಧಿಗೊಳಿಸಿ ಸಾರ್ವಜನಿಕವಾಗಿ ಅಸ್ಪೃಶ್ಯತೆಯನ್ನು ಆಚರಿಸಿ ಭಾರತ ಸಂವಿಧಾನಕ್ಕೆ ಅಪಮಾನ ಮಾಡಿರುವ ಕುರಿತು."

**ನಿರ್ಣಯವನ್ನು ಮಂಡಿಸಲಾಯಿತು**

**ಶ್ರೀ ಎಫ್.ಹೆಚ್. ಜಕ್ಕಪ್ಪನವರ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಿರ್ಣಯದ ಮಂಡನೆಗೆ ಅನುಮತಿಸಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅದೇ ರೀತಿ ಮಾನ್ಯ ವಿರೋಧ ಪಕ್ಷದ

ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಮತ್ತು ಬಿ.ಜೆ.ಪಿ. ಪಕ್ಷದ ಸದಸ್ಯರು ಕುಳಿತುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.n

ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ನಿರ್ಣಯವನ್ನು ಮಂಡಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. "ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ರಾಷ್ಟ್ರನಾಯಕ ಡಾ: ಮಲ್ಲಿಕಾರ್ಜುನ ಖರ್ಗೆ ರವರು ಈ ದೇಶ ಕಂಡ ಅಪರೂಪದ ರಾಷ್ಟ್ರ ನಾಯಕರು. ದಿನಾಂಕ 08.08.2026ರಂದು ಉತ್ತರಾಖಂಡ ರಾಜ್ಯದ ಹಲ್ದವಾನಿ ರಾಮಲೀಲಾ ಮೈದಾನದಲ್ಲಿ ಕಾಂಗ್ರೆಸ್ ಪಕ್ಷ ಏರ್ಪಡಿಸಿದ್ದ ಸಾರ್ವಜನಿಕ ಸಭೆಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರೂ ಮತ್ತು ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾದ ಡಾ: ಮಲ್ಲಿಕಾರ್ಜುನ ಖರ್ಗೆರವರು ಭಾಗವಹಿಸಿ ಮಾತನಾಡಿ ನಿರ್ಗಮಿಸಿದ ಮೇಲೆ ಮನುವಾದಿಗಳು ಡಾ: ಮಲ್ಲಿಕಾರ್ಜುನ ಖರ್ಗೆಯವರು ಭಾಷಣ ಮಾಡಿದ ಸ್ಥಳವನ್ನು ಹೋಮ ಹವನ ಮುಖಾಂತರ ಶುದ್ಧಿಗೊಳಿಸಿ ಸಾರ್ವಜನಿಕವಾಗಿ ಅಸ್ಪೃಶ್ಯತೆಯನ್ನು ಆಚರಿಸಿ ಭಾರತ ಸಂವಿಧಾನಕ್ಕೆ ಅಪಮಾನ ಮಾಡಲಾಗಿದೆ. ರಾಜ್ಯಸಭಾ ಅಧ್ಯಕ್ಷರು ಈ ಘಟನೆಯನ್ನು ಖಂಡಿಸಿ ತನಿಖೆಗೆ ಆದೇಶ ಮಾಡಿದ್ದಾರೆ. ಆದುದರಿಂದ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಈ ಕುರಿತು ನಿರ್ಣಯ ಮಂಡಿಸಲು ನಾನು ಬಯಸುತ್ತಿದ್ದೇನೆ.

ಈ ಸಂದರ್ಭದಲ್ಲಿ ನಾನು ಎರಡು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದು ಏನೆಂದರೆ, ದಿನಾಂಕ 14.08.2026ರ 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯಲ್ಲಿ ಡಾ: ಮಲ್ಲಿಕಾರ್ಜುನ ಖರ್ಗೆಯವರ ಭಾಷಣ ಏನೆಂದು ಇದೆ ಎಂದರೆ, "ನಾನು ಭಾಷಣ ಮಾಡಿದ ವೇದಿಕೆ ಶುದ್ಧೀಕರಣ: ಖರ್ಗೆ ಆಕ್ರೋಶ" "ಬಿ.ಜೆ.ಪಿ.ಯಿಂದಲೇ ಕೃತ್ಯ ಎಂದು ರಾಜ್ಯಸಭೆ ವಿಪಕ್ಷ ನಾಯಕರ ಆರೋಪ" ಇದು ಅವಮಾನ ಎನ್ನುವಂಥದ್ದು. ಬಿ.ಜೆ.ಪಿ.ಯವರು, ಮನುವಾದಿಗಳು ಒಬ್ಬ ದಲಿತ ನಾಯಕನಿಗೆ ಮಾಡಿದ ಅವಮಾನ ಬಹಳ ಮುಖ್ಯವಾದುದು ಇದನ್ನು ಖಂಡಿಸಬೇಕು. ಉತ್ತರಾಖಂಡದ ಹಲ್ದವಾನಿ ಪಟ್ಟಣದಲ್ಲಿ ಆಗಸ್ಟ್ 8ರಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ಮಲ್ಲಿಕಾರ್ಜುನ ಖರ್ಗೆ ವಿಜಯ ಶಂಖನಾದ ರ್‍ಯಾಲಿಯನ್ನು ಉದ್ದೇಶಿಸಿ ಭಾಷಣ ಮಾಡಿದ ರಾಮ ಲೀಲಾ ಮೈದಾನದಲ್ಲಿ ಎರಡು ದಿನಗಳ ನಂತರ ಬಿಜೆಪಿ ಬೆಂಬಲಿತ ಶ್ರೀರಾಮ ಸೇನೆ ಸದಸ್ಯರು ಶುದ್ಧೀಕರಣ ವಿಧಿವಿಧಾನ ಪೂರೈಸಿರುವುದು ರಾಜಕೀಯ ವಲಯದಲ್ಲಿ ಅದರಲ್ಲೂ ವಿಶೇಷವಾಗಿ ಕಾಂಗ್ರೆಸ್ ನಾಯಕರ ಆಕ್ರೋಶಕ್ಕೆ ಕಾರಣವಾಗಿದೆ.

ದೇಶದಲ್ಲಿ ದಲಿತರಿಗೆ ಸ್ಥಾನವಿಲ್ಲ ಎಂದು ಶ್ರೀ ಮಲ್ಲಿಕಾರ್ಜುನ ಖರ್ಗೆ ಕಿಡಿ ಕಾರಿದ್ದಾರೆ. ಮೈದಾನದಲ್ಲಿ ನಾನು ಮಾಡಿದ ಭಾಷಣದಲ್ಲಿ ಯಾವುದೇ ಜಾತಿ ಅಥವಾ ಧರ್ಮವನ್ನು ಉಲ್ಲೇಖಿಸಿರಲಿಲ್ಲ. ಕೇವಲ ಸಾರ್ವಜನಿಕ

ಸಮಸ್ಯೆಗಳನ್ನು ಮಾತ್ರ ಪ್ರಸ್ತಾಪಿಸಿದ್ದೆ. ನನ್ನ ಭಾಷಣದ ನಂತರ ಬಿ.ಜೆ.ಪಿ.ಯವರು 'ಸ್ಥಳ ಶುದ್ಧೀಕರಣ'ಕ್ಕೆ ಹವನ ಮಾಡಿದರೆಂದು ರಾಜ್ಯಸಭೆಯಲ್ಲಿ ಪ್ರತಿಪಕ್ಷ ನಾಯಕರಾಗಿರುವ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಸಂಸತ್ತಿನಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ನಾನು ಇದನ್ನು ರಾಜಕೀಯ ವಿಷಯವಾಗಿ ಪರಿವರ್ತಿಸಲು ಹೇಳುತ್ತಿಲ್ಲ. ನಾನು ದಲಿತ ಎಂದು ಯಾರಿಗೂ ಹೇಳಿಲ್ಲ. ನನ್ನನ್ನು ರಕ್ಷಿಸಿ ಎಂದು ಯಾರನ್ನೂ ಬೇಡಿಕೊಂಡಿಲ್ಲ. ವೇದಿಕೆಯನ್ನು ಶುದ್ಧೀಕರಿಸುವ ಮೂಲಕ ನನ್ನನ್ನು ಅವಮಾನಿಸಲಾಗಿದೆ. ಈ ಕಾರ್ಯದಲ್ಲಿ ತೊಡಗಿದವರ ವಿರುದ್ಧ ಅಸ್ಪೃಶ್ಯತಾ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು. ಅವರನ್ನು ಬಂಧಿಸಿ ಜೈಲಿಗೆ ಕಳುಹಿಸಬೇಕು ಎಂದು ಒತ್ತಾಯಿಸಿದರು.

ಇದು ಶ್ರೀರಾಮ ಸೇನೆಯ ಕೃತ್ಯ: ಕಾಂಗ್ರೆಸ್ ಆರೋಪ. ಇದು ಬಿ.ಜೆ.ಪಿ. ಸಂಪರ್ಕ ಇರುವ ಶ್ರೀರಾಮ ಸೇನೆಯ ಕೃತ್ಯ. ಶ್ರೀ ಮಲ್ಲಿಕಾರ್ಜುನ ಖರ್ಗೆ ದಲಿತ ಸಮುದಾಯಕ್ಕೆ ಸೇರಿದವರಾಗಿರುವ ಕಾರಣ ಹವನ ನಡೆಸಲಾಯಿತು ಎಂಬುದು ಕಾಂಗ್ರೆಸ್‌ನ ಉತ್ತರಾಖಂಡ ಘಟಕದ ಅಧ್ಯಕ್ಷ ಗಣೇಶ್ ಗಡಿಯಾಳ್ ಆರೋಪ. ಇದೇ ವೇಳೆ ಹವನ ನಡೆಸಿದ ಬಲಪಂಥೀಯ ಸಂಘಟನೆ ವಿರುದ್ಧ ಕ್ರಮ ಕೈಗೊಳ್ಳದ ನೈನಿತಾಲ್ ಪೊಲೀಸ್ ಸೂಪರಿಂಟೆಂಡೆಂಟ್ ಧೋರಣೆಯನ್ನು ಅವರು ಖಂಡಿಸಿದ್ದಾರೆ.

ದಿನಾಂಕ 14.08.2026 'ವಿಜಯ ಕರ್ನಾಟಕ' ದಿನಪತ್ರಿಕೆಯಲ್ಲಿ ರಾಜ್ಯಸಭೆಯಲ್ಲಿ 'ಖರ್ಗೆ' ಶುದ್ಧೀಕರಣ. ರಾಜ್ಯಸಭೆಯಲ್ಲಿ ಉತ್ತರಾಖಂಡದ ಹಲ್ದ್ವಾನಿಯ ರಾಮ ಲೀಲಾ ಮೈದಾನದಲ್ಲಿ ಕಾಂಗ್ರೆಸ್ ಸಮಾವೇಶದ ಬಳಿಕ ನಡೆದ 'ಶುದ್ಧೀಕರಣ' ವಿಚಾರ ಕೋಲಾಹಲಕ್ಕೆ ಕಾರಣವಾಯಿತು. ವಿಷಯ ಪ್ರಸ್ತಾಪಿಸಿದ ಪ್ರತಿಪಕ್ಷ ನಾಯಕ ಶ್ರೀ ಮಲ್ಲಿಕಾರ್ಜುನ ಖರ್ಗೆ, "ನಾನು ಪರಿಶಿಷ್ಟ ಜಾತಿಗೆ ಸೇರಿದವನು, ನನ್ನನ್ನು ರಕ್ಷಿಸುವಂತೆ ಬೇಡಿಕೊಳ್ಳುವುದಿಲ್ಲ, ಹೋರಾಡುವ ಶಕ್ತಿ ನನ್ನಲ್ಲಿದೆ, ಜೀವಂತವಾಗಿರುವ ತನಕ ಹೋರಾಡುತ್ತೇನೆ. ಆದರೆ, ನನ್ನನ್ನು ಅಸ್ಪೃಶ್ಯನಂತೆ ಕಾಣುತ್ತೀರಿ, ನಾನು ಭಾಷಣ ಮಾಡಿದ ಸ್ಥಳದಲ್ಲಿ 'ಶುದ್ಧೀಕರಣ' ಮಾಡುತ್ತೀರಿ. ನನ್ನನ್ನು ಅವಮಾನಿಸುತ್ತೀರಿ. ಇದನ್ನು ನಾನು ಸಹಿಸುವುದಿಲ್ಲ" ಎಂದು ಆಕ್ರೋಶ ವ್ಯಕ್ತಪಡಿಸಿದರು. ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾತಿಗೆ ಉತ್ತರ ನೀಡಿದ ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ, "ಖರ್ಗೆಜೀ ಹೇಳಿದ್ದು ನಿಜಕ್ಕೂ ದುಃಖಕರ ಇದು ಕಾಂಗ್ರೆಸ್ ಪಕ್ಷಕ್ಕೆ ಮಾತ್ರವಲ್ಲ, ನಮ್ಮೆಲ್ಲರಿಗೂ ದುಃಖದ ವಿಚಾರ. ಇಂತಹ ಚಟುವಟಿಕೆಯನ್ನು ಬಿ.ಜೆ.ಪಿ. ಬೆಂಬಲಿಸುವುದಿಲ್ಲ. ಈ ಬಗ್ಗೆ ತನಿಖೆ ನಡೆಸುತ್ತೇನೆ ತಪ್ಪಿತಸ್ಥರನ್ನು ಶಿಕ್ಷಿಸುತ್ತೇವೆ," ಎಂದು ಭರವಸೆ ನೀಡಿದರು.

"ಹಲ್ದ್ವಾನಿ ಘಟನೆಗೆ ಸಿ.ಎಂ., ಡಿ.ಸಿ.ಎಂ., ದಿಗ್ಭ್ರಮೆ" ಹಲ್ದ್ವಾನಿಯ ರಾಮಲೀಲಾ ಮೈದಾನದಲ್ಲಿ ಆಗಸ್ಟ್ 8ರಂದು ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರು ಭಾಗವಹಿಸಿದ್ದ ಸಾರ್ವಜನಿಕ ಸಮಾರಂಭದ ಜಾಗವನ್ನು ಯಾಗದ

ಮೂಲಕ ಶುದ್ಧೀಕರಣ ಮಾಡಿರುವ ಘಟನೆ ಬಗ್ಗೆ ಡಿ.ಸಿ.ಎಂ. ಡಾ: ಜಿ.ಪರಮೇಶ್ವರ್ ದಿಗ್ಭ್ರಮೆ ವ್ಯಕ್ತಪಡಿಸಿದ್ದಾರೆ. "ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ದಲಿತ ಸಮುದಾಯಕ್ಕೆ ಸೇರಿದವರು ಎಂಬ ಕಾರಣಕ್ಕೆ ಶುದ್ಧೀಕರಣ ಮಾಡಿರುವ ವಿಚಾರ ತಿಳಿದು ಮನಸ್ಸಿಗೆ ಘಾಸಿಯಾಗಿದೆ. ಭಾರತೀಯರು ದಕ್ಷಿಣ ಧ್ರುವವನ್ನು ಸ್ಪರ್ಶಿಸಿ ವಿಶ್ವ ದಾಖಲೆ ಬರೆದರೂ ಸಮಾಜ ಇನ್ನೂ ತನ್ನ ಭಾಗವಾಗಿರುವ ದಲಿತನನ್ನು ಮುಟ್ಟಲು ತಯಾರಿಲ್ಲ ಎಂಬ ಸ್ಥಿತಿ ದುರದೃಷ್ಟಕರ, ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ವಿರುದ್ಧ ಜಾತಿ ಹೆಸರಿನಲ್ಲಿ ನಡೆದಿರುವ ಆ ಅವಮಾನಕರ ಅಮಾನವೀಯ ಕೃತ್ಯವನ್ನು ತೀವ್ರವಾಗಿ ಖಂಡಿಸುತ್ತೇನೆ. ದೇಶದಲ್ಲಿ ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ಕರಾಳ ಆಚರಣೆ ಈಗಲೂ ಜೀವಂತ ಎನ್ನುವುದಕ್ಕೆ ಈ ಘಟನೆ ಸಾಕ್ಷಿ" ಎಂದು ಹೇಳಿದ್ದಾರೆ.

"ಸಂವಿಧಾನಕ್ಕೆ ಎಸಗಿದ ಅಪಮಾನ" ಶ್ರೀ ಮಲ್ಲಿಕಾರ್ಜುನ ಖರ್ಗೆ ಭಾಷಣ ಮಾಡಿದ ಸ್ಥಳ ಶುದ್ಧೀಕರಿಸಿದ ಕೃತ್ಯವನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಖಂಡಿಸಿದ್ದಾರೆ. ಸಿ.ಎಂ., ಡಿ.ಕೆ.ಶಿ, "ಇದೊಂದು ನಾಚಿಕೆಗೇಡಿತನ ಕೃತ್ಯ ಮತ್ತು ಸಂವಿಧಾನಕ್ಕೆ ಎಸಗಿದ ಅಪಮಾನ, ಇದು ಒಬ್ಬ ವ್ಯಕ್ತಿಗಾದ ಅವಮಾನವಲ್ಲ, ಬದಲಿಗೆ ಸಂವಿಧಾನದ ಮೌಲ್ಯಗಳ ಮೇಲಿನ ನೇರ ದಾಳಿ, ಖರ್ಗೆಯವರು ದೇಶದ ಅತ್ಯಂತ ಗೌರವಾನ್ವಿತ ಜನನಾಯಕರು ಮತ್ತು ಜೀವಮಾನವಿಡೀ ಜನಸೇವೆ ಮಾಡಿದವರು. ದಲಿತ ನಾಯಕರೊಬ್ಬರು ಭಾಷಣ ಮಾಡಿದರು ಎಂಬ ಕಾರಣಕ್ಕೆ ಸಾರ್ವಜನಿಕ ಸ್ಥಳವೊಂದಕ್ಕೆ ಶುದ್ಧೀಕರಣ ಬೇಕು ಎಂದು ಬಿಂಬಿಸಿರುವುದು ಜಾತಿ ತಾರತಮ್ಯಕ್ಕೆ ಸ್ಪಷ್ಟ ಉದಾಹರಣೆಯಾಗಿದೆ, ಇಂತಹ ಕೃತ್ಯಗಳನ್ನು ಸಾಮಾನ್ಯಗೊಳಿಸುವ ಅಥವಾ ಸಮರ್ಥಿಸುವ ಪ್ರಯತ್ನವನ್ನು ಸ್ಪಷ್ಟವಾಗಿ ತಿರಸ್ಕರಿಸಬೇಕು" ಎಂದು ಹೇಳಿದ್ದಾರೆ.

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷದ ಎರಡೂ ಕಡೆಯ ಮಾನ್ಯ ಸದಸ್ಯರು ಒಟ್ಟಿಗೆ ಎದ್ದುನಿಂತು ಪರಸ್ಪರ ಮಾತನಾಡತೊಡಗಿದರು)**

**ಡಾ: ಯತೀಂದ್ರ. ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಅವರು ದಲಿತ ಎನ್ನುತ್ತಾರೆ ಮತ್ತು ಅಸ್ಪೃಶ್ಯತೆಯನ್ನು ಆಚರಣೆ ಮಾಡುತ್ತಿದ್ದಾರೆ. **(ಗೊಂದಲ)** ಶ್ರೀ ಮಲ್ಲಿಕಾರ್ಜುನ ಖರ್ಗೆಯಂತಹವರಿಗೆ.... **(ಗೊಂದಲ)** ಬಿ.ಜೆ.ಪಿ.ಯವರು ಅಸ್ಪೃಶ್ಯತೆಯನ್ನು ಆಚರಣೆ ಮಾಡುತ್ತಾರೆ. ಅವರು ದಲಿತರನ್ನು ಏನೆಂದುಕೊಂಡಿದ್ದಾರೆ. **(ಗೊಂದಲ)** ಅವರಿಗೆ ದಲಿತರ ಬಗ್ಗೆ ಮಾತನಾಡುವ ಹಕ್ಕಿದೆಯೇ?

(ಗೊಂದಲ)

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, ಅಸ್ಪೃಶ್ಯತೆ ಬಗ್ಗೆ ಮಾತನಾಡುತ್ತಾರೆ ಅವರಿಗೆ ನಾಚಿಕೆಯಾಗುವುದಿಲ್ಲವೇ? ಅವರು ದಲಿತರ ಬಗ್ಗೆ ಮಾತನಾಡುತ್ತಾರೆ.

**ಡಾ: ಯತೀಂದ್ರ. ಎಸ್:-** ಮಾನ್ಯ ಸಭಾಪತಿಯವರೇ, ಅವರಿಗೆ ದಲಿತರ ಬಗ್ಗೆ ಮಾತನಾಡುವುದಕ್ಕೆ ಹಕ್ಕಿಲ್ಲ. ಬಿ.ಜೆ.ಪಿ.ಯವರು ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಬಗ್ಗೆ.... ಅವರು ಶುದ್ಧೀಕರಣ ಮಾಡಿಸುತ್ತಾರೆ.

**(ಗೊಂದಲ)**

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಮತ್ತು ಉದ್ಯೋಗ ಸಚಿವರು):-** ಮಾನ್ಯ ಸಭಾಪತಿಯವರೇ, ತಾವು ಮನುವಾದ ಯಾವ ರೀತಿ ಇದೆ ಎಂದು ನೋಡಿ.

**(ಗೊಂದಲ)**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯನಸ್ವಾಮಿಯವರೇ, ಅವರು ಪರಿಶಿಷ್ಟ ಜಾತಿಯ ಬಗ್ಗೆ ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ಸಂತೋಷ್ ಎಸ್. ಲಾಡ್:-** ಮಾನ್ಯ ಸಭಾಪತಿಯವರೇ, ಡಾ: ಮಲ್ಲಿಕಾರ್ಜುನ ಖರ್ಗೆ ಸಾಹೇಬರಿಗೆ ಅವಮಾನ ಮಾಡಿದ್ದಾರೆ. ಅವರು ಕ್ಷಮೆಯಾಚನೆ ಮಾಡಲಿ. ದಯಮಾಡಿ ಅವರು ಕ್ಷಮೆಯಾಚಿಸಬೇಕು.

**(ಗೊಂದಲ)**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ಅವರಿಗೆ ನಾಚಿಕೆ ಆಗಬೇಕು.

**(ಗೊಂದಲ)**

**ಶ್ರೀ ಸಂತೋಷ್ ಎಸ್. ಲಾಡ್:-** ಮಾನ್ಯ ಸಭಾಪತಿಯವರೇ, ಅವರು ಡಾ: ಮಲ್ಲಿಕಾರ್ಜುನ ಖರ್ಗೆ ಸಾಹೇಬರಿಗೆ ಅವಮಾನ ಮಾಡಿದ್ದಾರೆ.

**(ಗೊಂದಲ)**

**ಡಾ: ಯತೀಂದ್ರ. ಎಸ್:-** ಮಾನ್ಯ ಸಭಾಪತಿಯವರೇ, ಧಿಕ್ಕಾರ, ಧಿಕ್ಕಾರ ಬಿ.ಜೆ.ಪಿ.ಗೆ ಧಿಕ್ಕಾರ. ಅವರು ದಲಿತರ ಬಗ್ಗೆ ಮಾತನಾಡಿರುವುದಕ್ಕೆ ಅವರಿಗೆ ನಾಚಿಕೆಯಾಗಬೇಕು.

**(ಗೊಂದಲ)**

(ಮುಂದು)

(712) 17.08.2026 ವೈಎಲ್-ಎಂಡಿ 12.40 (ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠದಿಂದ ಎದ್ದು ನಿಂತರು)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಕುಳಿತುಕೊಳ್ಳಿ. ತಾವು ಕುಳಿತುಕೊಳ್ಳುವುದಿಲ್ಲವೇ?

**(ಗೊಂದಲ)**

**ಶ್ರೀ ಎಫ್.ಹೆಚ್.ಜಕ್ಕಪ್ಪನವರ್:-** ಮಾನ್ಯ ಸಭಾಪತಿಯವರೇ, ಸದರಿ ನಿರ್ಣಯವನ್ನು ಸರ್ವಾನುಮತದಿಂದ ಒಪ್ಪಬೇಕೆಂದು ಸದನವನ್ನು ಪ್ರಾರ್ಥಿಸುತ್ತೇನೆ.

**ಸಭಾಪತಿಯವರು:-** "ಮಾನ್ಯ ಶಾಸಕರುಗಳಾದ ಶ್ರೀ ಎಫ್.ಹೆಚ್.ಜಕ್ಕಪ್ಪನವರ್, ಡಾ॥ ಡಿ.ತಿಮ್ಮಯ್ಯ, ಶ್ರೀ ತಿಪ್ಪಣ್ಣಪ್ಪ ಕಮಕನೂರ, ಶ್ರೀ ಡಿ.ಟಿ.ಶ್ರೀನಿವಾಸ್(ಡಿ.ಟಿ.ಎಸ್), ಶ್ರೀಮತಿ ಬಲ್ಕೀಸ್ ಬಾನು, ಶ್ರೀ ಜಗದೇವ್ ಗುತ್ತೇದಾರ್ ಹಾಗೂ ಇತರರುಗಳು ಮಂಡಿಸಿರುವ ಮೇಲ್ಕಂಡ ನಿರ್ಣಯವನ್ನು ಸಭೆಯ ಮತಕ್ಕೆ ಹಾಕುತ್ತಿದ್ದೇನೆ.

**ಪ್ರಸ್ತಾವ ಏನೆಂದರೆ;**

"ಮಾನ್ಯ ಶಾಸಕರುಗಳಾದ ಶ್ರೀ ಎಫ್.ಹೆಚ್.ಜಕ್ಕಪ್ಪನವರ್, ಡಾ॥ ಡಿ.ತಿಮ್ಮಯ್ಯ, ಶ್ರೀ ತಿಪ್ಪಣ್ಣಪ್ಪ ಕಮಕನೂರ, ಶ್ರೀ ಡಿ.ಟಿ.ಶ್ರೀನಿವಾಸ್(ಡಿ.ಟಿ.ಎಸ್), ಶ್ರೀಮತಿ ಬಲ್ಕೀಸ್ ಬಾನು, ಶ್ರೀ ಜಗದೇವ್ ಗುತ್ತೇದಾರ್ ಹಾಗೂ ಇತರರುಗಳು ಮಂಡಿಸಿರುವ ನಿರ್ಣಯವನ್ನು ಅಂಗೀಕರಿಸುವುದು."

> "ದಿನಾಂಕ: 08.08.2026 ರಂದು ಉತ್ತರಾಖಾಂಡ ರಾಜ್ಯದ ಹಲ್ದವಾನಿ ರಾಮಲೀಲಾ ಮೈದಾನದಲ್ಲಿ ಕಾಂಗ್ರೆಸ್ ಪಕ್ಷ ಏರ್ಪಡಿಸಿದ್ದ ಸಾರ್ವಜನಿಕ ಸಭೆಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಮತ್ತು ರಾಜ್ಯ ಸಭೆಯ ವಿರೋಧ ಪಕ್ಷದ ನಾಯಕರಾದ ಡಾ॥ ಮಲ್ಲಿಕಾರ್ಜುನ ಖರ್ಗೇರವರು ಭಾಗವಹಿಸಿ ಮಾತನಾಡಿ ನಿರ್ಗಮಿಸಿದ ಮೇಲೆ ಮನುವಾದಿಗಳು ಡಾ॥ ಮಲ್ಲಿಕಾರ್ಜುನ ಖರ್ಗೆಯವರು ನಿಂತು ಭಾಷಣ ಮಾಡಿದ ಸ್ಥಳವನ್ನು ಹೋಮ ಹವನ ಮುಖಾಂತರ ಶುದ್ಧಿಗೊಳಿಸಿ ಸಾರ್ವಜನಿಕವಾಗಿ ಅಸ್ಪೃಶ್ಯತೆಯನ್ನು ಆಚರಿಸಿ ಭಾರತ ಸಂವಿಧಾನಕ್ಕೆ ಅಪಮಾನ ಮಾಡಿರುವ ಕುರಿತು."

**<u>ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು</u>**

**ಸಭಾಪತಿಯವರು:-** ಸದನವನ್ನು 2 ಗಂಟೆವರೆಗೂ ಮುಂದೂಡಲಾಗುವುದು.

**(ಸದನವು ಮಧ್ಯಾಹ್ನ 12 ಗಂಟೆ 41 ನಿಮಿಷದಿಂದ 2 ಗಂಟೆವರೆಗೂ ಮುಂದೂಡಲ್ಪಟ್ಟಿತು)**

(713) 17-08-2026 2-30 KH/RN

**(ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 2 ಗಂಟೆ 38 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)**

**10. ಸದನವು ಆರ್ಡರ್‌ನಲ್ಲಿ ಇಲ್ಲದಿರುವಾಗ ಕಲಾಪ ನಡೆಸುವುದು ನಿಯಮಬಾಹಿರ ಎಂದು ವಿರೋಧ ಪಕ್ಷದವರಿಂದ ಆಕ್ಷೇಪ.**"

**ಡಾ|| ಯತೀಂದ್ರ ಎಸ್:-** ಮಾನ್ಯ ಸಭಾಪತಿಯವರೇ, ಬೆಳಗ್ಗೆ ಅವರೇ ಹನೂರು ಪ್ರಕರಣದ ಬಗ್ಗೆ ಪ್ರಸ್ತಾಪ ಮಾಡಿದ ವಿಷಯ. ಅವರೇ ಕೇಳಿದ ಪ್ರಶ್ನೆಗೆ ನಮ್ಮ ಅರಣ್ಯ ಸಚಿವರು ಅದರ ಬಗ್ಗೆ ಹೇಳಿಕೆ ಕೊಡುತ್ತಾರೆ. ನಂತರ ಅವರು ಪ್ರತಿಭಟನೆ ಮಾಡಬಹುದು.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಈಗ ಬೆಳಗ್ಗೆ . . .

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ನ್ಯಾಯಾಲಯದಲ್ಲಿ ನಿರ್ದೋಷಿ ಎಂದು ಸಾಬೀತುಪಡಿಸುವುದಕ್ಕಿಂತ ಮುಂಚೆ ಸಂಪುಟಕ್ಕೆ ತೆಗೆದುಕೊಂಡು . . .

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿಯವರೇ, ಒಂದು ನಿಮಿಷ. ಮಾನ್ಯ ವಿರೋಧ ಪಕ್ಷದ ನಾಯಕರೇ ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರೇ, ಬೆಳಗ್ಗೆ ನನ್ನ ಚೆಂಬರ್‌ನಲ್ಲಿ ಚರ್ಚೆ ಮಾಡಲಾಗಿತ್ತು.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ಅದು ಮೊದಲನೇ ವಿಷಯ.

**ಸಭಾಪತಿಯವರು:-** ಮಾನ್ಯ ಡಿ.ಎಸ್.ಅರುಣ್‌ರವರೇ, ಒಂದು ನಿಮಿಷ. ತಾಳ್ಮೆ ಇರಬೇಕು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ಹೇಳುವುದನ್ನು ಮುಂದುವರೆಸಿ.

**ಸಭಾಪತಿಯವರು:-** ಬೆಳಗ್ಗೆ ನನ್ನ ಚೆಂಬರ್‌ನಲ್ಲಿ ಚರ್ಚೆ ಮಾಡಿದ ಮೇಲೆ ಈ ವಿಷಯದ ಬಗ್ಗೆ ವಿಧಾನಸಭೆಯಲ್ಲಿ ಮಾನ್ಯ ಸಚಿವರು ಉತ್ತರ ಕೊಡುತ್ತಿದ್ದಾರೆ. ಮಧ್ಯಾಹ್ನ ಇಲ್ಲಿಗೆ ಬಂದು ಉತ್ತರ ಕೊಡುತ್ತಾರೆ ಎನ್ನುವ ಮಾತನ್ನು ಮಾನ್ಯ ಸಭಾನಾಯಕರು ಹೇಳಿದರು. ಈಗ ಮಾನ್ಯ ಸಚಿವರು ಬಂದಿದ್ದು, ಹೇಳಿಕೆಯನ್ನು ಕೊಡುತ್ತಾರೆ. ನಂತರ ತಾವು ಏನು ಮಾತನಾಡಬೇಕೋ, ಅದಕ್ಕೆ ನಾನು ಅವಕಾಶ ಮಾಡಿಕೊಡುತ್ತೇನೆ. ಈಗ ಮಾನ್ಯ ಸಚಿವರು ಹೇಳಿಕೆ ಕೊಡಲಿ.

(ಮುಂದು)

(714) 17.8.2026 2.40 ಪಿಕೆ:ಆರ್‌ಎನ್ (ಸಭಾಪತಿಗಳ ಉಪಸ್ಥಿತಿ)

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಎಸ್.ಎಲ್. ಭೋಜೇಗೌಡರು, ಮಾನ್ಯ ಎನ್. ರವಿಕುಮಾರ್‌ರವರು ಮತ್ತು ಮಾನ್ಯ ಸಭಾನಾಯಕರು ನನ್ನ ಛೇಂಬರ್‌ನಲ್ಲಿ ಕುಳಿತುಕೊಂಡು ಚರ್ಚೆ ಮಾಡಿ, ಮೊದಲು ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ, ನಂತರ ನೀವು ಪ್ರಸ್ತಾಪಿಸಿದ ವಿಷಯದ ಬಗ್ಗೆ ಉತ್ತರ ಕೊಡಿಸುತ್ತೇವೆ ಎಂದಾಗ ಅದನ್ನು ಒಪ್ಪಿಕೊಂಡು ಬಂದಿರಿ. ಆದರೆ ಛೇಂಬರ್‌ನಿಂದ ಹೊರಗೆ ಬಂದಮೇಲೆ, ಸದನದಲ್ಲಿ ನಿಮ್ಮ ನಿಲುವನ್ನು ಬದಲಾವಣೆ ಮಾಡಿಕೊಂಡಿದ್ದೀರಿ. ಇದು ದುಃಖದ ವಿಷಯ. ಹೀಗೆ ಮಾಡುವುದಾದರೆ ನಾವು ಮಾಡಿದ ಸಭೆಗೆ ಏನು ಅರ್ಥ ಇರುತ್ತದೆ? ದಯವಿಟ್ಟು ಇನ್ನು ಮುಂದೆ ಹಾಗೆ ಆಗಬಾರದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ತಾವು ಹೇಳಿದ್ದು ಸತ್ಯ, ನಾವು ಇಲ್ಲ ಎಂದು ಹೇಳುವುದಿಲ್ಲ. ತಾವು ಹೇಳಿದ್ದನ್ನು ಸಭಾನಾಯಕರು ಒಪ್ಪಿದರು. ಮಾನ್ಯ ಸಚಿವರು ಕೆಳಮನೆಯಲ್ಲಿ ಉತ್ತರ ಕೊಡುತ್ತಿದ್ದಾರೆ, ಮಧ್ಯಾಹ್ನ ಈ ಮನೆಗೆ ಬಂದು ಉತ್ತರ ಕೊಡುತ್ತಾರೆ ಎಂದು ಹೇಳಿದ್ದನ್ನು ನಾವು ಒಪ್ಪಿಕೊಂಡು ಬಂದೆವು. ಇದಿಷ್ಟೇ ತೀರ್ಮಾನವಾಗಿತ್ತು. ಆದರೆ ತಾವು, ಪ್ರಶ್ನೋತ್ತರವನ್ನು ಮುಂದುವರೆಸೋಣ ಎಂದು ಹೇಳಿದಿರಿ. ನಾವು ಅದರ ಬಗ್ಗೆ ಏನನ್ನೂ ಹೇಳಿಲ್ಲ. ನಮ್ಮ ಮುಂದೆ ಏನು ವಿಷಯ ಇತ್ತೋ ಅದನ್ನು ಮತ್ತೆ ತೆಗೆದುಕೊಂಡಿದ್ದೇವೆ. ಇದನ್ನು ತಾವು ಗೌರವಿಸದೇ . . .

**ಸಭಾಪತಿಯವರು:-** ಯಾವುದೇ ಕಾರಣವಿರಲಿ ಮೊದಲು ಪ್ರಶ್ನೋತ್ತರವನ್ನು ತೆಗೆದುಕೊಳ್ಳಬೇಕಾಗುತ್ತದೆ.

(ಗೊಂದಲ)

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಸದನ ಆರ್ಡರ್‌ನಲ್ಲಿ ಇಲ್ಲದೇ ಇದ್ದರೂ ತಾವು ಎಲ್ಲವನ್ನೂ ಮುಂದುವರೆಸಿದಿರಿ. ಆದರೆ, ಮೊದಲು ರಾಜಿನಾಮೆ ಕೊಡದೇ ಇದ್ದರೆ ನಮ್ಮ ಹೋರಾಟ ನಿರಂತರವಾಗಿ ನಡೆಯುತ್ತದೆ. ಈಗ ಮಾನ್ಯ ಅರಣ್ಯ ಸಚಿವರು ಉತ್ತರ ಕೊಡಲಿ, ನಾವು ಸಹಕರಿಸುತ್ತೇವೆ.

**ಸಭಾಪತಿಯವರು:-** ನಾನು ಇಲ್ಲಿ ಒಂದು ಅಂಶವನ್ನು ಸ್ಪಷ್ಟಪಡಿಸುತ್ತೇನೆ. ಪ್ರಶ್ನೋತ್ತರಗಳನ್ನು ಮೊದಲು ತೆಗೆದುಕೊಳ್ಳಬೇಕು, ಇದು ಕಡ್ಡಾಯ. ಇದನ್ನು ಯಾವುದೇ ಕಾರಣಕ್ಕೂ ಬದಲಾವಣೆ ಮಾಡುವುದಿಲ್ಲ. ಇದನ್ನು ತಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕು. ನಮ್ಮ ಸದಸ್ಯರು ಕೇಳುವ ಪ್ರಶ್ನೆಗಳಿಗೆ ಸಂಬಂಧಪಟ್ಟಂತೆ ಬ್ಯಾಲೆಟ್ ಪ್ರಕ್ರಿಯೆ ಆಗಿ ನಂತರ ಅವು ಚುಕ್ಕೆ ಗುರುತಿನ ಪ್ರಶ್ನೆಯಾಗಿ ಸದನದ ಮುಂದೆ ಬರುತ್ತದೆ. ವಿರೋಧ ಪಕ್ಷದ ಸದಸ್ಯರು ಕೇಳಿದ್ದ ಸುಮಾರು 7-8 ಪ್ರಶ್ನೆಗಳಿಗೆ ಉತ್ತರ ಸಿಗದಂತಾಯಿತು, ಶೂನ್ಯವೇಳೆ ಕೂಡ ಹೋಯಿತು.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಗಳೆ, ನಾನು ಪ್ರಶ್ನೆ ಕೇಳುವುದಕ್ಕೆ ತಯಾರಿದ್ದೆ. ನೀವು ಪ್ರಶ್ನೆ ಕೇಳಲು ನನ್ನನ್ನು ಕರೆಯಲಿಲ್ಲ.

**ಸಭಾಪತಿಯವರು:-** ಮೂರ್ಮೂರು ಬಾರಿ ಕರೆದಿದ್ದೇನೆ.

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಗಳೆ, ಸದನದಲ್ಲಿ ಸಿ.ಟಿ.ರವಿ ಎಂದಿರುವವರು ಒಬ್ಬರೇ ಅಲ್ಲವೇ? ಅವರ ಹೆಸರನ್ನು ಮೂರ್ಮೂರು ಬಾರಿ ಕರೆದರು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಗಳೆ, ನನ್ನ ಪ್ರಶ್ನೆ ಬಂದಿತ್ತು, ನೀವು ನನ್ನ ಹೆಸರನ್ನು ಕರೆದಿರಿ. ಸಂಬಂಧಪಟ್ಟ ಮಂತ್ರಿಗಳು ಇದ್ದರೂ, ಅಧಿಕಾರಿಗಳೂ ಇದ್ದರು. ಆದರೆ ಅದಕ್ಕೆ ಉತ್ತರ ಬಂದಿರಲಿಲ್ಲ.

**ಸಭಾಪತಿಯವರು:-** ಬಹುಶಃ ನೀವು ಪ್ರಶ್ನೆ ಕೇಳಲೇ ಇಲ್ಲ, ಹಾಗಾಗಿ ಅದು automatic ಆಗಿ ಹೋಗಿಬಿಟ್ಟಿದೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರ ಛೇಂಬರ್‌ನಲ್ಲಿ ಆದ ತೀರ್ಮಾನದಂತೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಭೋಜೇಗೌಡರು ನಡೆದುಕೊಂಡಿಲ್ಲ. ಒಳಗಡೆ ಮಾತು ಕೊಟ್ಟಿದ್ದಂತೆ ಅವರು ನಡೆದುಕೊಂಡಿಲ್ಲ, ಇಲ್ಲಿ ಬಂದು ಗಲಾಟೆ ಮಾಡುತ್ತಾರೆ.

**ಶ್ರೀ ಪಿ.ಹೆಚ್.ಪೂಜಾರ್:** ಮಾನ್ಯ ಸಭಾಪತಿಯವರೆ, ತಾವು ನನ್ನನ್ನು ಕೂಗಿದಿರಿ. ಆದರೆ ನನ್ನ ಪ್ರಶ್ನೆಗೆ ಉತ್ತರ ನೀಡಲು ಸಂಬಂಧಿಸಿದ ಮಂತ್ರಿಯವರು ಇರಲಿಲ್ಲ.

**ಸಭಾಪತಿಯವರು:-** ಮಾನ್ಯ ಅರಣ್ಯ ಸಚಿವರು ಈಗ ತಮ್ಮ ಹೇಳಿಕೆಯನ್ನು ಕೊಡುತ್ತಾರೆ. ಹೇಳಿಕೆ ಕೊಟ್ಟಮೇಲೆ ನಂತರ ಆ ಕುರಿತು ಮಾತನಾಡಿ.

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಗಳೆ, ಹೌಸ್ ಆರ್ಡರ್‌ನಲ್ಲಿ ಇಲ್ಲದೇ ಇದ್ದಾಗ ಪ್ರಶ್ನೋತ್ತರವನ್ನು ನಡೆಸಿದಿರಿ.

**ಸಭಾಪತಿಯವರು:-** ನೀವು ನನ್ನ ಛೇಂಬರ್‌ನಲ್ಲಿ ಒಪ್ಪಿಕೊಂಡು ಬಂದಮೇಲೆಯೇ ನಾನು ಪ್ರಶ್ನೋತ್ತರಗಳನ್ನು ಪ್ರಾರಂಭಿಸಿದ್ದೆ.

**ಶ್ರೀ ಎನ್.ರವಿಕುಮಾರ್:-** ಸದನ ಆರ್ಡರ್‌ನಲ್ಲಿ ಇಲ್ಲದೇ ಇದ್ದರೂ ಸದನವನ್ನು ನಡೆಸುತ್ತಿದ್ದೀರಿ.

**ಸಭಾಪತಿಯವರು:-** ಕಾರ್ಯಕಲಾಪಗಳ ಪಟ್ಟಿಯಲ್ಲಿ ಏನಿದೆಯೋ ಅದನ್ನು ಸದನದಲ್ಲಿ ಚರ್ಚೆಗೆ ತೆಗೆದುಕೊಂಡು ಪೂರ್ಣಗೊಳಿಸುವುದು ನನ್ನ ಜವಾಬ್ದಾರಿಯಾಗಿದೆ. ಇದಕ್ಕೆ ತಮ್ಮೆಲ್ಲರ ಸಹಕಾರ ಬೇಕು. ಒಳಗೆ ಒಂದು ಹೇಳಿ, ಆಚೆ ಮತ್ತೊಂದು ಹೇಳುವುದನ್ನು ಕೇಳುವುದಕ್ಕೆ ನಾನು ತಯಾರಿಲ್ಲ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಗಳೆ, ಸರ್ಕಾರ ಸಮಾಜಕ್ಕೆ ಅನ್ಯಾಯ ಮಾಡಿ ಈ ರೀತಿಯ ಮೊಂಡುತನವನ್ನು ತೋರಿಸಬಾರದು.

**(ಗೊಂದಲ)**

**ಸಭಾಪತಿಯವರು:-** ನಾನು ಯಾವ ಸದಸ್ಯರ ಹೆಸರನ್ನು ಹೇಳುತ್ತೇನೆಯೋ ಆ ಸದಸ್ಯರು ಮಾತನಾಡುವುದು ಮಾತ್ರ ದಾಖಲೆಗೆ ಹೋಗಬೇಕು. ಮಾಧ್ಯಮದವರೂ ಕೂಡ ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು.

**ಶ್ರೀ ರಾಮಲಿಂಗಾ ರೆಡ್ಡಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು);-** ಮಾನ್ಯ ಸಭಾಪತಿಗಳೆ, ದಿನಾಂಕ 15.8.2026ರಂದು ಕಾವೇರಿ ವನ್ಯಜೀವಿ ವಿಭಾಗದ ಹನೂರು ವನ್ಯಜೀವಿ ವಲಯದಲ್ಲಿ ನಡೆದ ಘಟನೆಗಳ ಬಗ್ಗೆ ಸಂಕ್ಷಿಪ್ತ ವರದಿಯನ್ನು ಕೊಡುತ್ತೇನೆ. ದಿನಾಂಕ: 14.8.2026ರ 8.00 ಗಂಟೆ ಸಮಯದಲ್ಲಿ, ಕಾವೇರಿ ವನ್ಯಜೀವಿ ವಿಭಾಗ ವ್ಯಾಪ್ತಿಯ . . .

**ಶ್ರೀ ಶಶಿಲ್ ಜಿ.ನಮೋಶಿ:-** ಮಾನ್ಯ ಸಭಾಪತಿಗಳೆ, ಸದರಿ ಹೇಳಿಕೆಯ ಪ್ರತಿ ನಮಗೆ ಬಂದಿಲ್ಲ.

**ಸಭಾಪತಿಯವರು:-** ಆದರೆ ನೀವು ಯಾವುದೇ ನೋಟಿಸ್ ನಮಗೆ ಕೊಟ್ಟಿಲ್ಲ, ಆದ್ದರಿಂದ ಮಾನ್ಯ ಸಚಿವರು ಹಾಗೆಯೇ ಸ್ಟೇಟ್‌ಮೆಂಟ್ ಮಾಡುತ್ತಿದ್ದಾರೆ. ವಿಧಾನಸಭೆಯಲ್ಲೂ ಇದೇರೀತಿ ಸ್ಟೇಟ್‌ಮೆಂಟ್ ಮಾಡಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಹಾಗಾದರೆ ಮಾನ್ಯ ಸಚಿವರು ಉತ್ತರ ಕೊಡುವುದು ಬೇಡವೇ?

**ಸಭಾಪತಿಯವರು:-** ನಾನು ಬೆಳಗ್ಗೆಯೇ, ನನಗೆ ಒಂದು ನೋಟಿಸ್ ಕಳುಹಿಸಿಕೊಡಿ ಎಂದು ಹೇಳಿದ್ದೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಈ ಕುರಿತು ಒಂದು ಪತ್ರ ಕೊಡಿ ಎಂದು ಹೇಳಿದ್ದೆ.

**(ಗೊಂದಲ)**

**ಶ್ರೀ ಯು.ಟಿ.ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಚಿವರು ಸ್ಟೇಟ್‌ಮೆಂಟ್ ಮಾಡುತ್ತಿದ್ದಾರೆ; ಉತ್ತರ ಅಲ್ಲ. ಹಾಗಾದರೆ ಸರ್ಕಾರ ಸ್ಟೇಟ್‌ಮೆಂಟ್ ಮಾಡಬಾರದೇ? ಅವರು ಹೇಳಿಕೆ ಕೊಟ್ಟಮೇಲೆ ನಂತರ ಚರ್ಚೆ ಮಾಡಲಿ. ಸರ್ಕಾರ ಅಧಿಕೃತವಾಗಿ ಸ್ಟೇಟ್‌ಮೆಂಟ್ ಮಾಡುತ್ತಿದೆ. ಆ ಸ್ಟೇಟ್‌ಮೆಂಟ್ ಕೊಟ್ಟ ನಂತರ ಚರ್ಚೆ ಮಾಡಲಿ. **(ಗೊಂದಲ)**

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಗಳೆ, ನಾನು ಸ್ಟೇಟ್‌ಮೆಂಟ್ ಮಾಡುತ್ತಿದ್ದೇನೆ. ನಂತರ ಬೇಕಾದರೆ ಅವರು ಕ್ಲ್ಯಾರಿಫಿಕೇಷನ್ ಕೇಳಲಿ.

**ಡಾ: ಯತೀಂದ್ರ ಎಸ್. :-** ಮಾನ್ಯ ಸಚಿವರು ತಪ್ಪೇನಾದರೂ ಹೇಳಿದ್ದರೆ ನಂತರ ಅವರು ಆ ಕುರಿತು ಪ್ರಶ್ನೆ ಕೇಳಲಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಗಳೆ, Hon'ble Minister is such a senior personality. He has achieved so many charges in the Cabinet of so many Chief Ministers.

**ಸಭಾಪತಿಯವರು:-** ವಿಧಾನಸಭೆಯಲ್ಲೂ ಮಾನ್ಯ ಸಚಿವರು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಮಾನ್ಯ ಭೋಜೇಗೌಡರೇ, ದಯವಿಟ್ಟು ಅವರು ಸ್ಟೇಟ್‌ಮೆಂಟ್ ಕೊಡುವುದಕ್ಕೆ ಅವಕಾಶ ಮಾಡಿಕೊಡಿ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಗಳು, ಈ ಕುರಿತ ಒಂದು ನೋಟಿಸ್ ಕೊಡಿ ಎಂದು ಕೇಳಿದರು. ಆದರೆ ನೀವು ಏನು ಮಾಡಿದಿರಿ ಎಂದರೆ . . .

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಒಂದು ನಿಮಿಷ. ಮಾನ್ಯ ಸಚಿವರುಗಳಿಗೆ ಸ್ಥೈರಣೆ ಇರಬೇಕು. ಮಾನ್ಯ ರಾಮಲಿಂಗೇಗೌಡರೆ, you are such a senior personality and you are asking the Chair and being the Forest Minister you are well versed with all these things and you are capable to answer. Why other Hon'ble Ministers are coming to your rescue? Please, Hon'ble Ministers must have some patience. ಪೀಠದಿಂದ ಸಭಾಪತಿಯವರು ಕೇಳುತ್ತಿದ್ದಾರೆ. ಮಾನ್ಯ ಅರಣ್ಯ ಸಚಿವರು ಹೇಳುತ್ತಿದ್ದಾರೆ. ಮಧ್ಯೆ ಬೇರೆ ಮಾನ್ಯ ಸಚಿವರು ಏಕೆ ಬರುತ್ತಿದ್ದಾರೆಂದು ತಿಳಿಯುತ್ತಿಲ್ಲ. ನಾನು ನಿಮ್ಮಲ್ಲಿ ಕೈಮುಗಿದು ಕೇಳುತ್ತಿದ್ದೇನೆ; such a senior personality is making statement. Please, should not interfere.

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಗಳೆ, ಮೊದಲು ನಾನು ಸ್ಟೇಟ್‌ಮೆಂಟ್ ಮಾಡುತ್ತೇನೆ. ನಂತರ ಅವರು ಏನಾದರೂ ಪ್ರಶ್ನೆಗಳಿದ್ದರೆ, ಅನುಮಾನಗಳಿದ್ದರೆ ಕೇಳಲಿ. ನಾನು ಸ್ಟೇಟ್‌ಮೆಂಟ್‌ನ ಪ್ರತಿಗಳನ್ನು ಕೊಟ್ಟಿದ್ದೇನೆ. ಆದರೂ ನಾನೊಂದು ಬಾರಿ ವಿವರ ಕೊಟ್ಟುಬಿಡುತ್ತೇನೆ.

**ಶ್ರೀ ಶಶಿಲ್ ಜಿ.ನಮೋಶಿ:-** ಮಾನ್ಯ ಸಭಾಪತಿಗಳೆ, ನಮಗೆ ಸ್ಟೇಟ್‌ಮೆಂಟ್‌ನ ಪ್ರತಿಗಳನ್ನು ಕೊಟ್ಟಿಲ್ಲ. ಆಡಳಿತ ಪಕ್ಷದ ಸದಸ್ಯರಿಗೆ ಕೊಟ್ಟಿದ್ದಾರೆ, ನಮಗೆ ಕೊಟ್ಟಿಲ್ಲ.

**ಶ್ರೀ ಎನ್.ರವಿಕುಮಾರ್:-** ನಾವು ಕೇಳಿದ್ದಕ್ಕೆ ಈಗ ಕೊಡುತ್ತಿದ್ದಾರೆ. ಇದು ಸರಿಯಾದುದಲ್ಲ.

**(ಗೊಂದಲ)**

**ಸಭಾಪತಿಯವರು:-** ಹಿಂದೆ ಕುಳಿತುಕೊಂಡಿರುವ ಸದಸ್ಯರಿಗೂ ಉತ್ತರದ ಪ್ರತಿ ಸಿಕ್ಕಿಲ್ಲ.

**(ಗೊಂದಲ)**

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಗಳೆ, ಇದನ್ನು ಸದನಕ್ಕೆ ಕೊಟ್ಟಿರಲಿಲ್ಲ. Only it is circulated to the Hon'ble Ministers. ಈಗ ಅದರ ಪ್ರತಿಗಳನ್ನು ಮಾನ್ಯ ಸದಸ್ಯರುಗಳಿಗೂ ಕೊಡುತ್ತಿದ್ದಾರೆ. ಸ್ವಲ್ಪ ಹೊತ್ತು ಕಾಯಬಾರದೇ?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರು ಆಗಲೇ, ಉತ್ತರ ಪ್ರತಿಯನ್ನು ಕೊಡುವುದಿಲ್ಲ; ಮಾನ್ಯ ಸಚಿವರು ಸ್ಟೇಟ್‌ಮೆಂಟ್ ಮಾಡುತ್ತಾರೆ ಎಂದು ಹೇಳಿದರು. ಈಗ ಏಕೆ ಉತ್ತರದ ಪ್ರತಿಯನ್ನು ಕೊಡುತ್ತಿದ್ದಾರೆ?

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಗಳೆ, ಈಗ ಅವರಿಗೆ ಉತ್ತರದ ಪ್ರತಿಗಳೇ ಸಿಕ್ಕಿವೆ. ಅದಕ್ಕೆ ಧನ್ಯವಾದಗಳನ್ನು ಹೇಳಬೇಕು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಗಳೆ, ಇವರು ಏನೇ ಹೇಳಿದರೂ ನಾವು ಕೇಳಬೇಕೇ?

**(ಗೊಂದಲ)**

**ಶ್ರೀ ಸಂತೋಷ್ ಲಾಡ್ (ಕಾರ್ಮಿಕ ಸಚಿವರು):–** ಮಾನ್ಯ ಸಭಾಪತಿಗಳೆ, ಅವರು ಹೇಳಿದ್ದನ್ನೇ ನಾವು ಕೇಳಿಕೊಂಡು ಕುಳಿತುಕೊಳ್ಳಬೇಕೇ?

**(ಗೊಂದಲ)**

**ಡಾ: ಯತೀಂದ್ರ ಎಸ್. :–** (ಗೊಂದಲ) ಹೇಳಿಕೆ ಕೊಡುವುದಕ್ಕೆ ಮುಂಚೆ ಯಾವುದೇ ಚರ್ಚೆ ಆಗಬಾರದೆಂದು ನಿಯಮ 324ರಲ್ಲಿ ಇದೆ. ಮೊದಲು ಅವರು ಹೇಳಿಕೆ ಕೊಟ್ಟಮೇಲೆ ಬೇರೆ ಕ್ಲ್ಯಾರಿಫಿಕೇಷನ್ ಇದ್ದರೆ ಕೇಳಲಿ.

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ, ಅಫಿಷಿಯಲ್ ಆದ ಒಂದು ಪ್ರತಿ ಮಾನ್ಯ ಸಚಿವರ ಹತ್ತಿರ ಇತ್ತು. ಈಗ ಹೆಚ್ಚುವರಿ ಕಾಪಿಗಳು ಬಂದಿರುವುದರಿಂದ ಎಲ್ಲರಿಗೂ ಕೊಡಿ ಎಂದು ಹೇಳಿದರು. ಹಾಗಾಗಿ ಮೊದಲು ನಾವು ನಮ್ಮ ಸದಸ್ಯರಿಗೂ ಕೊಟ್ಟಿರಲಿಲ್ಲ. ನಾವು ಯಾವ ಸದಸ್ಯರಿಗೂ ಕಾಪಿ ಕೊಟ್ಟಿಲ್ಲ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಗಳೆ, ನಿಮ್ಮ ಸದಸ್ಯರು ಎಂದರೆ ಯಾರು?

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ನಮ್ಮ ಸದಸ್ಯರೇ ಆಗಿದ್ದಾರೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಈ ರೀತಿ ಭೇದಭಾವ ಮಾಡಬಾರದು.

**(ಗೊಂದಲ)**

(ಮುಂದು)

(715) 17-8-2026 2.50 ಡಿಎಸ್-ವಿಕೆ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:–** ನಮ್ಮ ಸದಸ್ಯರು ಎಂದರೆ ಎಲ್ಲರೂ ಅಲ್ಲವೇ? ಎಲ್ಲರೂ ನಮ್ಮ ಸದಸ್ಯರು ಎಂದು ನಾನೇ ಹೇಳುತ್ತಿದ್ದೇನೆ. ಮಾನ್ಯ ಸಚಿವರು ಹೇಳಿಕೆಯ ಪ್ರತಿಯನ್ನು ಕೊಟ್ಟಿರುವಂಥದ್ದು. ನೀವೆಲ್ಲರೂ ನಮ್ಮ ಸದಸ್ಯರು. ಮಾನ್ಯ ಸಚಿವರೇ, ತಾವು ಉತ್ತರ ಕೊಡಿ.

**(ಗೊಂದಲ)**

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ರವಿಕುಮಾರ್‌ರವರೇ, ನೀವೆಲ್ಲಾ ಏನು ಈ ರೀತಿ ಮಾತನಾಡುತ್ತಿದ್ದೀರಿ?

**(ಗೊಂದಲ)**

**ಡಾ॥ ಯತೀಂದ್ರ ಎಸ್.(ಸಭಾನಾಯಕರು):–** ಸಭಾಪತಿಯವರೇ ಸ್ಪಷ್ಟತೆ ನೀಡಿದ ಮೇಲೆ ಮತ್ತೆ ಏಕೆ ಈ ರೀತಿ ಮಾತನಾಡುತ್ತಿದ್ದೀರಿ? ಸಭಾಪತಿಯವರು ಸ್ಪಷ್ಟನೆ ಕೊಟ್ಟಿದ್ದಾರೆ. ನೀವು ಸಭಾಪತಿಯವರ ಸ್ಪಷ್ಟನೆಯನ್ನು ದಯವಿಟ್ಟು ಒಪ್ಪಿಕೊಳ್ಳಬೇಕು.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಛಲವಾದಿ ನಾರಾಯಣಸ್ವಾಮಿಯವರೇ, ಮಾನ್ಯ ಸಭಾಪತಿಯವರು ಹೇಳಿರುವುದೇನೆಂದರೆ, ನಮ್ಮ ಸದಸ್ಯರಿಗೂ ಕಾಪಿ ಕೊಟ್ಟಿಲ್ಲ ಎಂದು ಹೇಳಿದರು, ಇದರಿಂದ ಸಮಸ್ಯೆ ಏನು? ನೀವು ಎಲ್ಲದ್ದಕ್ಕೂ ಇಷ್ಟೆಲ್ಲಾ ಮಾಡುತ್ತಾ ಹೋದರೆ ಏನು ಮಾಡುವುದಕ್ಕಾಗುವುದಿಲ್ಲ. My request to the Opposition, ಎಲ್ಲದ್ದಕ್ಕೂ ಮಾನ್ಯ ಸಭಾಪತಿಯವರಿಗೆ ಆ ರೀತಿ ಮಾತನಾಡುವುದು ತಪ್ಪು.

**ಶ್ರೀ ಎಸ್.ಎಲ್.ಭೋಜೇಗೌಡ:–** ನೀವು ತಿಪ್ಪೇಸಾರಿಸುವುದನ್ನು ಬಿಟ್ಟುಬಿಡಿ.

**ಶ್ರೀ ಬಸವರಾಜ ರಾಯರೆಡ್ಡಿ:–** ನಮ್ಮ ಸದಸ್ಯರು ಎಂದರೆ, ಎಲ್ಲರೂ ಬಂದರು.

**ಸಭಾಪತಿಯವರು:–** ನಾನು ಯಾವ ತಪ್ಪೂ ಮಾಡಿಲ್ಲ. ಎಲ್ಲಾ ಸದಸ್ಯರು ನನ್ನ ಸದಸ್ಯರು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾಲಿಗೆ ತಪ್ಪಿ ಈ ರೀತಿ ಆಗುವುದು ಸಹಜ. ಈ ರೀತಿ ಏಕೆ ಆಗುತ್ತದೆ?

**ಸಭಾಪತಿಯವರು:–** ನಾನು ಯಾವ ತಪ್ಪೂ ಮಾಡಿಲ್ಲ. ಎಲ್ಲಾ ಸದಸ್ಯರು ನನ್ನ ಸದಸ್ಯರು ಎಂದು ನಾನು ಹೇಳಿರುವಂಥದ್ದು. ಈ ಎಲ್ಲಾ ಸದಸ್ಯರು ಎಂದು ಹೇಳುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಆಪಾದನೆಯಂತೂ ಮಾಡುವುದಿಲ್ಲ. ತಾವು ಆಡಳಿತ ಪಕ್ಷದಲ್ಲಿ ಕುಳಿತ್ತಿದ್ದಾಗ ಆ ರೀತಿ ಮಾತನಾಡುತ್ತಿದ್ದಿರಿ. ಈಗಲೂ ಅದೇ ರೀತಿ ಬಂದಿದೆ. ಇನ್ನು ಮೇಲೆ ಬರುವುದು ಬೇಡ.

**ಸಭಾಪತಿಯವರು:–** ಅದು ನಿಮ್ಮ ವಿಶ್ಲೇಷಣೆ ಆಗಿದೆ.

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮುಂಚೆ ಅಭ್ಯಾಸವಾಗಿರುತ್ತದೆ. ಇನ್ನು ಮುಂದೆ ಆ ರೀತಿ ಮಾಡುವುದಕ್ಕೆ ಹೋಗಬೇಡಿ.

**ಸಭಾಪತಿಯವರು:–** ನಾನು ತಪ್ಪು ಮಾಡಿಲ್ಲ, ತಪ್ಪು ಮಾಡುವುದೂ ಇಲ್ಲ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಅದನ್ನು ಸರಿ ಮಾಡಿಕೊಳ್ಳಿ.

**ಸಭಾಪತಿಯವರು:–** ಆಯಿತು.

**ಶ್ರೀ ರಾಮಲಿಂಗಾರೆಡ್ಡಿ:–** ಮಾನ್ಯ ಸಭಾಪತಿಯವರೇ, ನಾನು ಹೇಳಿಕೆಯನ್ನು ಕೊಡುತ್ತೇನೆ. ಹೇಳಿಕೆಯ ಪ್ರತಿ ಹೆಚ್ಚಿಗೆ ಇರಲಿ, ಎಲ್ಲಾ ಸದಸ್ಯರಿಗೆ ಕೊಡೋಣ ಎಂದು ಹೇಳಿದ್ದೆ.

**11. ಸಚಿವರ ಹೇಳಿಕೆ**

**ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಕಾವೇರಿ ವನ್ಯಜೀವಿ ಅಭಯಾರಣ್ಯದ ಹನೂರು ವನ್ಯಜೀವಿ ವಲಯದಲ್ಲಿ ನಡೆದಿರುವ ಶೂಟೌಟ್ ಪ್ರಕರಣದ ಬಗ್ಗೆ.**

**ಶ್ರೀ ರಾಮಲಿಂಗಾರೆಡ್ಡಿ (ಅರಣ್ಯ ಸಚಿವರು):-** ಮಾನ್ಯ ಸಭಾಪತಿಯವರೇ, ದಿನಾಂಕ 14-08-2026ರ ರಾತ್ರಿ 8 ಗಂಟೆ ಸಮಯದಲ್ಲಿ ಬೇಟೆಗಾರರು ಅಕ್ರಮವಾಗಿ ಅರಣ್ಯವನ್ನು ಪ್ರವೇಶಿಸಿದ್ದಾರೆಂದು ಇಲಾಖಾ ಸಿಬ್ಬಂದಿಗಳಿಗೆ ಮಾಹಿತಿ ಬರುತ್ತದೆ. ಆಗ ಸುಮಾರು 12 ಜನ ಅರಣ್ಯ ಇಲಾಖೆಯ ಸಿಬ್ಬಂದಿಗಳು ಇಲಾಖಾ ವಾಹನಗಳಾದ ಕೆಎ-04 ಜಿ-2052 ಮತ್ತು ಕೆಎ-10 ಜಿ-0684 ಈ ಎರಡು ವಾಹನಗಳಲ್ಲಿ ಹೋಗುತ್ತಾರೆ.

ಆಮೇಲೆ ಗೋಮಡಿನಹಳ್ಳ ಅರಣ್ಯ ಪ್ರದೇಶ, ಹಳೆಯೂರುನತ್ತ ಅರಣ್ಯ ಪ್ರದೇಶ, ಗಣಿಗಲ ಮರದ ವಾಚ್ ಟವರ್, ಮೂಸಿಮರದ ಆಗ್ಗು ಅರಣ್ಯ ಪ್ರದೇಶ ಹಾಗೂ ಸುತ್ತಲಿನ ಅರಣ್ಯ ಪ್ರದೇಶಗಳಲ್ಲಿ ಪರಿಶೀಲಿಸಲಾಗಿ ಯಾವುದೇ ಟಾರ್ಚ್ ಬೆಳಕು ಕಂಡುಬಂದಿರುವುದಿಲ್ಲ.

ಬೆಳಗ್ಗೆ 5 ಗಂಟೆ ಸಮಯದಲ್ಲಿ ಸೀರನ ಮಡ ಅರಣ್ಯ ಪ್ರದೇಶದಲ್ಲಿ ಟಾರ್ಚ್ ಬೆಳಕು ಕಂಡುಬಂದಿರುವುದರಿಂದ ಸದರಿ ಪ್ರದೇಶವು ಸ್ಪಷ್ಟವಾಗಿ ಕಾಣುವಂತಹ ಕರಡಿಕಲ್ಲು ಒಡ್ಡು ಎತ್ತರದ ಅರಣ್ಯ ಪ್ರದೇಶದಲ್ಲಿ ವೀಕ್ಷಿಸುವ ಸಲುವಾಗಿ ಬೆಳಗಿನ ಜಾವ ಅಂದಾಜು 5 ಗಂಟೆಗೆ ಸಿಬ್ಬಂದಿಗಳು ತೆರಳಿರುತ್ತಾರೆ. ಆಗ ಟಾರ್ಚ್ ಹಿಡಿದುಕೊಂಡು ಬರುತ್ತಿರುತ್ತಾರೆ.

ಸದರಿ ಕರಡಿಕಲ್ಲು ಒಡ್ಡು ಅರಣ್ಯ ಪ್ರದೇಶದಲ್ಲಿ ಕಲ್ಲುಬಂಡೆಗಳು ಮತ್ತು ಪೊದೆಯ ಮರೆಯಲ್ಲಿ ಅವಿತಿದ್ದ ಬೇಟೆಗಾರರು ಅರಣ್ಯ ಸಿಬ್ಬಂದಿಗಳನ್ನು ನೋಡಿ ಅಕ್ರಮ ನಾಡ ಬಂದೂಕಿನಿಂದ ಗುಂಡಿನ ದಾಳಿ ನಡೆಸಲು ಮುಂದಾಗಿದ್ದು, ಗುಂಡಿನ ಕಿಡಿ ಬೆಳಕು ಸಿಬ್ಬಂದಿಗಳಿಗೆ ಗೋಚರವಾಗಿರುತ್ತದೆ.

ನಂತರ ಇಲಾಖಾ ಸಿಬ್ಬಂದಿಗಳು ಸದರಿ ಬೇಟೆಗಾರರಿಗೆ ಶರಣಾಗುವಂತೆ ಮನವೊಲಿಸಲು ಪ್ರಯತ್ನಿಸಿದರೂ ಅವರು ಶರಣಾಗುವುದಿಲ್ಲ. ಸದರಿಯವರನ್ನು ನಿಯಂತ್ರಿಸುವ ಉದ್ದೇಶದಿಂದ ಮತ್ತು ಆತ್ಮರಕ್ಷಣೆ ಹಾಗೂ ವನ್ಯಜವೀ ಸಂರಕ್ಷಣೆ, ಅರಣ್ಯ ಸಂರಕ್ಷಣೆ ಹಿತದೃಷ್ಟಿಯಿಂದ ಶ್ರೀ ಶಿವರಾಜ ಸಾಸಲವಾಡದ, ಗಸ್ತು ಅರಣ್ಯ ಪಾಲಕ ಇವರಿಗೆ ಇಲಾಖೆಯಿಂದ ವಿತರಿಸಲಾದ ಬಂದೂಕು ಸಂಖ್ಯೆ: R721035 ರಿಂದ ಕಿಡಿಯ ಬೆಳಕು ಗೋಚರವಾದ ದಿಕ್ಕಿನಲ್ಲಿ ಸದರಿಯವರು ಪ್ರತಿದಾಳಿ ನಡೆಸಿರುತ್ತಾರೆ.

ಇವರ ಹತ್ತಿರ ಇದ್ದದ್ದು Slide Action Gun, ಅದರಲ್ಲಿ pellets ಇರುತ್ತದೆ. ಆ pellets gun ನಲ್ಲಿ ಹೊಡೆದಾಗ ಏನಾಗುತ್ತದೆ ಎಂದರೆ ಒಂದೇ ತೂತು ಬೀಳುವುದಿಲ್ಲ. ಬೇರೆ ಗನ್‌ನಲ್ಲಿ ಒಂದೇ ತೂತು ಬೀಳುತ್ತದೆ. ಒಂದೇ ಸುತ್ತಿನಲ್ಲಿ ಬೇಕಾದರೆ ಇಬ್ಬರು, ಮೂರು ಜನರಿಗೆ ತಾಗಬಹುದು. ಇವರು ಮೂರು ಸುತ್ತು ಕಾಡತೂಪನ್ನು ಹಾರಿಸಿದಾಗ ಗುಂಡು ನೇರವಾಗಿ ವ್ಯಕ್ತಿಯ ನಿರ್ದಿಷ್ಟವಾದ ಭಾಗಕ್ಕೆ ತಗಲುವುದಿಲ್ಲ. ಆದರೆ ಪೆಲ್ಲೆಟ್ಸ್‌ಗಳೆಲ್ಲಾ

ಚದುರುವುದರಿಂದ ಆರೋಪಿಗಳ ವಿವಿಧ ಅಂಗಾಂಗಗಳಿಗೆ ಗುಂಡು ತಗುಲಿರುತ್ತದೆ. ಸದರಿ ಬೇಟೆಗಾರರು ಅಸ್ಪಷ್ಟವಾಗಿ ಗೋಚರಿಸಿರುವುದರಿಂದ ಸಿಬ್ಬಂದಿಗಳು ಆತ್ಮ ರಕ್ಷಣೆಗಾಗಿ ಪ್ರತಿ ದಾಳಿ ನಡೆಸಿದಾಗ ಬೇಟೆಗಾರರಿಗೆ ಸೊಂಟದಿಂದ ಮೇಲ್ಭಾಗದಲ್ಲಿ ಗುಂಡೇಟು ತಗುಲಿದ್ದು, ಸಿಬ್ಬಂದಿಗಳು ಯಾವುದೇ ದುರುದ್ದೇಶದಿಂದ ಸದರಿ ಕ್ರಮವನ್ನು ಕೈಗೊಂಡಿರುವುದಿಲ್ಲ. ಕಾಲಿನಿಂದ ಕೆಳಗೆ ಹೊಡೆಯಬೇಕಾಗಿತ್ತು ಎಂದು ಕೆಲವರು ಕಾಮೆಂಟ್ ಮಾಡುತ್ತಾರೆ. ಇದು ಬೆಳಗ್ಗೆ 5 ಗಂಟೆ 10 ನಿಮಿಷಕ್ಕೆ ಆಗಿರುವಂಥದ್ದು. ಆ ಸಮಯದಲ್ಲಿ ಕತ್ತಲು ಇರುತ್ತದೆ. ಅದು ದಟ್ಟವಾದ ಕಾಡು ಆಗಿರುವುದರಿಂದ ಜಾಸ್ತಿ ಕತ್ತಲು ಇತ್ತು. ಆದ್ದರಿಂದ ಮನುಷ್ಯರು ಕಾಣುತ್ತಿರಲಿಲ್ಲ. ಟಾರ್ಚ್ ಬೆಳಕಿನಿಂದ ಇವರು ಶೂಟ್ ಮಾಡಿದ್ದಾರೆ.

ನಂತರ ಬೇಟೆಗಾರರ ನೋವಿನ ಶಬ್ಧ ಕೇಳಿಸಿರುವುದರಿಂದ, ಸಿಬ್ಬಂದಿಗಳು ಟಾರ್ಚ್ ಬೆಳಕಿನಿಂದ ಪರಿಶೀಲಿಸಿ ನೋಡಲಾಗಿ, ಓರ್ವ ಬೇಟೆಗಾರ ಸದರಿ ಸ್ಥಳದಿಂದ ಓಡುತ್ತಿರುವುದು ಕಂಡುಬಂದಿದ್ದು, 3 ಜನ ಬೇಟೆಗಾರರು ನೆಲದ ಮೇಲೆ ನರಳಾಡುತ್ತಾ ಒದ್ದಾಡುತ್ತಿರುವುದು ಕಂಡುಬಂದಿರುತ್ತದೆ. ಒಬ್ಬ ಮಹಿಮದಾಸ ಎನ್ನುವವನು ಓಡಿ ಹೋಗುತ್ತಾನೆ. ಇನ್ನು ಇಬ್ಬರು ತೀರಿ ಹೋಗುತ್ತಾರೆ. ಒಬ್ಬರಿಗೆ ಕಾಲಿನಲ್ಲಿ ಗಾಯ ಆಗಿರುತ್ತದೆ. ಮಾನವೀಯತೆಯ ದೃಷ್ಟಿಯಿಂದ ಇವರನ್ನು ಹನೂರಿಗೆ ತೆಗೆದುಕೊಂಡು ಹೋಗುತ್ತಾರೆ. ಅಲ್ಲಿ ವೈದ್ಯರು ಇರುವುದಿಲ್ಲ. ಆಮೇಲೆ ಕೊಳ್ಳೇಗಾಲಕ್ಕೆ ತೆಗೆದುಕೊಂಡು ಹೋಗುತ್ತಾರೆ. ಅಲ್ಲಿ ವೈದ್ಯರುಗಳು 3 ಜನರು ತೀರಿ ಹೋಗಿದ್ದಾರೆ ಎಂದು ಹೇಳುತ್ತಾರೆ. ಆಮೇಲೆ ಪೊಲೀಸ್ ಅಧಿಕಾರಿಗಳು ತೀರ್ಮಾನ ತೆಗೆದುಕೊಂಡು ಪೋಸ್ಟ್‌ಮಾರ್ಟಮ್‌ಗೆ ಕೆ.ಆರ್. ಆಸ್ಪತ್ರೆ, ಮೈಸೂರಿಗೆ ತೆಗೆದುಕೊಂಡು ಹೋಗುತ್ತಾರೆ.

ಈ ಕೃತ್ಯದಲ್ಲಿ ಭಾಗಿಯಾಗಿರುವ ಆರೋಪಿಗಳಾದ ಅಂತೋಣಿಸ್ವಾಮಿ ಬಿನ್ ಪೆರಿಯನಾಯಗಂ, 50 ವರ್ಷ, ಕ್ರಿಶ್ಚಿಯನ್ ಜನಾಂಗ, ವ್ಯವಸಾಯ, ಮರಿಯಮಂಗಲ ಗ್ರಾಮ, ಜಾನ್‌ರೋಸ್ ಪೀಟರ್ ಬಿನ್ ಯಾಕೂಬ್, 42 ವರ್ಷ, ಕ್ರಿಶ್ಚಿಯನ್ ಜನಾಂಗ, ವ್ಯವಸಾಯ, ಜಗನ್ನಾಥದೊಡ್ಡಿ ಗ್ರಾಮ, ಕುಮಾರ್ ಬಿನ್ ಲೇಟ್ ಸವಾರಿಯಪ್ಪನ್, 33 ವರ್ಷ, ಕ್ರಿಶ್ಚಿಯನ್ ಜನಾಂಗ, ಹಿಟಾಚಿ ಆಪರೇಟರ್, ಲಾರಸ್ ದೊಡ್ಡಿ ಗ್ರಾಮ, ಮತ್ತು ಮಹಿಮದಾಸ ಇವರು ನಾಲ್ಕು ಜನ ಹೋಗಿರುತ್ತಾರೆ. ಮಹಿಮದಾಸ ನಿನ್ನೆಯವರೆಗೂ ಮೈಸೂರು ಕೆ.ಆರ್.ಆಸ್ಪತ್ರೆಯಲ್ಲೇ ಇದ್ದರು. ನಿನ್ನೆ ಡಿಸ್ಚಾರ್ಜ್ ಆಗಿ ಹೋಗಿದ್ದಾರೆ. ಅವರ ಮೇಲೆ ಕೇಸ್ ರಿಜಿಸ್ಟ್ರ ಆಗಿತ್ತು. ಅದರ ಮೇಲೆ ಅರೆಸ್ಟ್ ಮಾಡಬಹುದು ಎಂದು ಅವರು ಆಚೆ ಹೋಗಿರಬಹುದು. ಅವರ ಲೊಕೇಶನ್ ಎಲ್ಲಿದೆ ಎಂದು ತಿಳಿದುಕೊಳ್ಳುವುದಕ್ಕೆ ಈಗಾಗಲೇ ಹೇಳಿದ್ದೇನೆ.

ಶ್ರೀ ಶೇಖರಯ್ಯ ಹಾಗೂ ಶ್ರೀ ರೋಹಿತ್ ರವರ ನೇತೃತ್ವದಲ್ಲಿ ಎರಡು ತಂಡಗಳಲ್ಲಿ ಸುಮಾರು 10 ಸಿಬ್ಬಂದಿಗಳು ಹೋಗಿದ್ದಾರೆ. ನಮ್ಮ ಇಬ್ಬರು ಸಿಬ್ಬಂದಿಗಳಿಗೆ ಸಣ್ಣಪುಟ್ಟ ಗಾಯಗಳಾಗಿತ್ತು. ಅವರು ಚಿಕಿತ್ಸೆ ತೆಗೆದುಕೊಂಡಿದ್ದಾರೆ.

ಈ ಮೇಲ್ಕಂಡ ಕೃತ್ಯವು ವನ್ಯಜೀವಿ (ಸಂರಕ್ಷಣಾ) ಕಾಯ್ದೆ 1972ರ ಸೆಕ್ಷನ್ 2 (16) (ಎ), 9, 27 ಮತ್ತು 31 ರ ಉಲ್ಲಂಘನೆಯಾಗಿರುವ ಹಿನ್ನೆಲೆಯಲ್ಲಿ, ವನ್ಯಜೀವಿ ಅಪರಾಧ ವರದಿ ಸಂಖ್ಯೆ: 01/2026-27 ದಿನಾಂಕ

15.08.2026 ರಂತೆ ಪ್ರಕರಣವನ್ನು ದಾಖಲಿಸಲಾಗಿರುತ್ತದೆ. ಸತ್ತು ಹೋಗಿರುವವರ ಕಡೆಯವರ ಮೇಲೂ ಒಂದು ಕೇಸ್ ರಿಜಿಸ್ಟ್ರ ಮಾಡಿದ್ದಾರೆ.

ದಿನಾಂಕ: 15.08.2026 ರಂದು ಸದರಿ ಬೇಟೆಗಾರರ ಜೀವ ರಕ್ಷಣೆಯ ಉದ್ದೇಶದಿಂದ ಘಟನಾ ಸ್ಥಳದಲ್ಲಿದ್ದ 02 ಸಂಖ್ಯೆ ನಾಡ ಬಂದೂಕಿನ ಜೊತೆಗೆ 04 ಬ್ಯಾಗ್‌ಗಳನ್ನು ಇಲಾಖಾ ವಶಕ್ಕೆ ಪಡೆದು ಆರೋಪಿತರನ್ನು ತುರ್ತಾಗಿ ಆಸ್ಪತ್ರೆಗೆ ಕರೆದೊಯ್ಯಲಾಗಿರುತ್ತದೆ. ದಿನಾಂಕ 15.08.2026 ರಂದು ಘಟನಾ ಸ್ಥಳದಲ್ಲಿ ಇಲಾಖಾಪರ ಅಮಾನತ್ತುಪಡಿಸಿಕೊಂಡ ಸ್ವತ್ತುಗಳ ವಿವರ: ನಾಡ ಬಂದೂಕು 02 ಸಂಖ್ಯೆ, ನೀಲಿ ಬಣ್ಣದ ಬಟ್ಟೆ ಬ್ಯಾಗ್ ಹಾಗೂ ಅದರೊಳಗೆ ಇದ್ದ ಸ್ಟೀಲ್ ಚಮಚ-1, ಪಾತ್ರೆ ಸಣ್ಣದು-1, ಪಾತ್ರೆ ದೊಡ್ಡದು-1, ಸ್ಟೀಲ್ ತಟ್ಟೆ-1, ಟೀ ಲೋಟ-1, ಕಪ್ಪು ಪ್ಲಾಸ್ಟಿಕ್ ಒಳಗೆ ಇದ್ದ ಅಕ್ಕಿ, ಈರುಳ್ಳಿ, ಟೊಮೊಟೊ, ಉಪ್ಪು, ಪಾರ್ಲೆ-ಜಿ ಬಿಸ್ಕೆಟ್ ಚಿಕ್ಕದು-3 ಮತ್ತು ಮಾರಿಗೋಲ್ಡ್ ಬಿಸ್ಕೆಟ್-1, 5 ಅಚ್ಚು ಬೆಲ್ಲ, ದನಿಯಾ ಪೌಡರ್-1, ಕ್ಯಾಮಾಫ್ಲೇಜ್ ಬ್ಯಾಗ್ ಹಾಗೂ ಅದರೊಳಗೆ ಇದ್ದ Vivo Android Mobile, NOKIA Keypad Mobile, ಚಾಕುಗಳು-3, ಮಚ್ಚು-1, 8 ಇಂಚು ಅಳತೆಯ ಪ್ಯಾರಾಗನ್ ಚಪ್ಪಲಿ ನೀಲಿ ಬಣ್ಣದ್ದು-2, ಕಂದು ಬಣ್ಣದ ಬಟ್ಟೆ ಬ್ಯಾಗ್ ಹಾಗೂ ಅದರೊಳಗೆ ಇದ್ದ ಪಟಾಕಿ ಮದ್ದು, Jio Keypad Mobile, ತಲೆ ಬ್ಯಾಟರಿ-1, ಮದ್ದಿನ ಬಾಕ್ಸ್-2, ಮದ್ದಿನ ಪೌಡರ್-4, ನಾಡಬಂದೂಕಿಗೆ ಬಳಸುವ ಗುಂಡುಗಳು-38, ಕಂದು ಬಣ್ಣದ ಬಟ್ಟೆ ಬ್ಯಾಗ್ ಹಾಗೂ ಅದರೊಳಗೆ ಇದ್ದ ಚಾಕು-1, ತಲೆ ಬ್ಯಾಟರಿ ಮತ್ತು ಚಾರ್ಜರ್-1, ಅವರ ಜೊತೆಯಲ್ಲಿ ಒಟ್ಟು 34.25 ಕೆ.ಜಿ. ಜಿಂಕೆ ಮಾಂಸ ಇತ್ತು.

(ಮುಂದು)

(716) 17-08-2026/3-00/bkp-vk (ಸಭಾಪತಿಯವರ ಉಪಸ್ಥಿತಿ)

**ಶ್ರೀ ರಾಮಲಿಂಗಾರೆಡ್ಡಿ (ಮುಂದು):**

15. **34.25 ಕೆ.ಜಿ. ಮಾಂಸ:** ಮುಂದುವರೆದು, ದಿನಾಂಕ: 15.08.2026 ರಂದು ಇಲಾಖಾ ಸಿಬ್ಬಂದಿಗಳು ಘಟನಾ ಸ್ಥಳದಲ್ಲಿ ಕೂಂಬಿಂಗ್ ಕಾರ್ಯಾಚರಣೆ ನಡೆಸಿದ ಸಂದರ್ಭದಲ್ಲಿ ಇಲಾಖಾ ಸಿಬ್ಬಂದಿಗಳಿಗೆ 02 ಚೀಲಗಳಲ್ಲಿ ಯಾವುದೋ ವನ್ಯಪ್ರಾಣಿಯ ಮಾಂಸ ತುಂಬಿರುವುದು ಕಂಡು ಬಂದಿದ್ದು, ತನಿಖಾಧಿಕಾರಿಗಳು ಘಟನಾ ಸ್ಥಳಕ್ಕೆ ಆಗಮಿಸುವ ಹಿನ್ನೆಲೆಯಲ್ಲಿ ಸದರಿ ಮಾಂಸವನ್ನು ಇಲಾಖೆಯ ಸಿಬ್ಬಂದಿಗಳು ಘಟನಾ ಸ್ಥಳದಲ್ಲಿಯೇ ಸಂರಕ್ಷಿಸಿರುತ್ತಾರೆ. ದಿನಾಂಕ: 16.08.2026 ರಂದು ಘಟನಾ ಸ್ಥಳದಲ್ಲಿ ಇಲಾಖಾಪರ ಅಮಾನತ್ತುಪಡಿಸಿಕೊಂಡ ಸ್ವತ್ತುಗಳ ವಿವರ:- 04 ಜೊತೆ ಪ್ಯಾರಾಗಾನ್ ಹವಾಯ್ ಚಪ್ಪಲಿಗಳು, 02 ಲೀಟರ್ ನೀಲಿ ಕ್ಯಾಪ್ ಹೊಂದಿರುವ ಮೆರಿಂಡಾ ಪ್ಲಾಸ್ಟಿಕ್ ಬಾಟಲ್‌ನಲ್ಲಿ ಅಂದಾಜು ¾ ಲೀಟರ್ ನೀರು ಮತ್ತು 02 ಚೀಲಗಳಲ್ಲಿ ತುಂಬಿದ ಅಂದಾಜು 20 ರಿಂದ 30 ಕೆ.ಜಿ. ವನ್ಯಪ್ರಾಣಿ ಮಾಂಸ,

16. **ಅರಣ್ಯ ಗಡಿಯಿಂದ ಸುಮಾರು 4 ಕಿ.ಮೀ.:** ಅಲ್ಲದೇ ಮೇಲ್ಕಂಡ ಪ್ರಕರಣದಲ್ಲಿ ಆರೋಪಿಗಳಾದ ಅಂತೋಣಿಸ್ವಾಮಿ ಬಿನ್ ಪೆರಿಯನಾಯಗಂ, 50 ವರ್ಷ, ಕ್ರಿಶ್ಚಿಯನ್ ಜನಾಂಗ, ವ್ಯವಸಾಯ, ಮರಿಯಮಂಗಲ

ಗ್ರಾಮ, ಜಾನ್ ರೋಸ್ ಪೀಟರ್ ಬಿನ್ ಯಾಕೂಬ್, 42 ವರ್ಷ, ಕ್ರಿಶ್ಚಿಯನ್ ಜನಾಂಗ, ವ್ಯವಸಾಯ, ಜಗನ್ನಾಥದೊಡ್ಡಿ ಗ್ರಾಮ, ಕುಮಾರ್ ಬಿನ್ ಲೇಟ್ ಸವಾರಿಯಪ್ಪನ್, 33 ವರ್ಷ, ಕ್ರಿಶ್ಚಿಯನ್ ಜನಾಂಗ, ಹಿಟಾಚಿ ಅಪರೇಟರ್, ಲಾರಸ್ ದೊಡ್ಡಿ ಗ್ರಾಮ ಮತ್ತು ಮಹಿಮದಾಸ್ ಬಿನ್ ಬೆಂಜಮಿನ್ 45 ವರ್ಷ, ವ್ಯವಸಾಯ, ಕ್ರಿಶ್ಚಿಯನ್ ಜನಾಂಗ, ಮರಿಯಮಂಗಲ ಗ್ರಾಮ, ಇವರ ವಾಸಸ್ಥಳಕ್ಕೆ ಘಟನಾ ಸ್ಥಳವು ಸುಮಾರು 5 ರಿಂದ 8 ಕಿ.ಮೀ. ವೈಮಾನಿಕ ದೂರದಲ್ಲಿದ್ದು, ಘಟನಾ ಸ್ಥಳವು ಅರಣ್ಯ ಗಡಿಯಿಂದ ಸುಮಾರು 4 ಕಿ.ಮೀ. ವೈಮಾನಿಕ ದೂರದಲ್ಲಿರುತ್ತದೆ.

17. **ದನಗಳನ್ನು ಹುಡುಕಿಕೊಂಡು ಹೋಗಿರುವ ಬಗ್ಗೆ:** ಇದನ್ನು ಪರಿಶೀಲಿಸಿದಾಗ, ಸದರಿ ಆರೋಪಿತರ ಸಂಬಂಧಿಕರು ಮಾಧ್ಯಮಗಳಲ್ಲಿ ತಿಳಿಸಿದಂತೆ ಕಳೆದು ಹೋದ ದನಗಳನ್ನು ಹುಡುಕಿಕೊಂಡು ಹೋಗಿರುವಂತೆ ಕಂಡು ಬಂದಿರುವುದಿಲ್ಲ. ಅಲ್ಲದೇ, ಸದರಿಯವರ ದನಗಳು ಕಳೆದು ಹೋಗಿರುವ ಕುರಿತು ಇಲಾಖೆಯಲ್ಲಿ ಯಾವುದೇ ಲಿಖಿತವಾಗಿ ಅಥವಾ ಮೌಖಿಕವಾಗಿ ದೂರನ್ನು ನೀಡಿರುವುದಿಲ್ಲ ಹಾಗೂ ಅರಣ್ಯ ಪ್ರದೇಶದೊಳಗೆ ಯಾವುದೇ ದನಗಳು ಸತ್ತಿರುವುದು ಕಂಡು ಬಂದಿರುವುದಿಲ್ಲ. ಮುಂದುವರೆದು, ಸದರಿ ಆರೋಪಿಗಳ ದನಗಳು ಕಾಣೆಯಾಗಿದ್ದಲ್ಲಿ, ಸಂಬಂಧಿಸಿದ ವಲಯ ಅರಣ್ಯಾಧಿಕಾರಿಗಳಿಗೆ ಪ್ರಾಥಮಿಕ ಮಾಹಿತಿಯನ್ನು ನೀಡಿ, ಅನುಮತಿಯನ್ನು ಪಡೆದು ಅರಣ್ಯ ಪ್ರದೇಶದಲ್ಲಿ ಹುಡುಕಾಟ ನಡೆಸಬೇಕಾಗಿರುತ್ತದೆ. ಆದರೆ, ಸದರಿ ಆರೋಪಿತರು ಯಾವುದೇ ಅನುಮತಿಯಿಲ್ಲದೇ ಮೀಸಲು ಅರಣ್ಯ ಪ್ರದೇಶದಲ್ಲಿ ಶಸ್ತ್ರಾಸ್ತ್ರಧಾರಿಗಳಾಗಿ ಪ್ರವೇಶಿಸಿರುವುದನ್ನು ಗಮನಿಸಿದಾಗ ಬೇಟೆಯನ್ನು ಹೊರತುಪಡಿಸಿ ಯಾವುದೇ ಸದುದ್ದೇಶದಿಂದ ಕಾಡಿನೊಳಗೆ ಪ್ರವೇಶಿಸಿರುವುದು ಕಂಡು ಬಂದಿರುವುದಿಲ್ಲ.

18. **ಆರೋಪಿಗಳು ಬೇರೆ ಯಾವುದೇ ಇಲಾಖಾ ಪ್ರಕರಣಗಳಲ್ಲಿ ಪಾಲ್ಗೊಂಡಿರುವುದಿಲ್ಲ:** ಮುಂದುವರೆದು, ಸದರಿ ಪ್ರಕರಣದಲ್ಲಿ ಭಾಗಿಯಾಗಿರುವ ಬೇಟೆಗಾರರು ಬೇರೆ ಯಾವುದೇ ಇಲಾಖಾ ಪ್ರಕರಣಗಳಲ್ಲಿ ಪಾಲ್ಗೊಂಡಿರುತ್ತಾರೆಯೇ ಎಂಬುದರ ಬಗ್ಗೆ ಪರಿಶೀಲಿಸಲಾಗಿ, ಅಂತೋಣಿಸ್ವಾಮಿ ಬಿನ್ ಪೆರಿಯನಾಯಗಂ ಇವರು ಅರಣ್ಯ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರುವ ಬಗ್ಗೆ ಯಾವುದೇ ಮಾಹಿತಿ ಕಂಡು ಬಂದಿರುವುದಿಲ್ಲ. ಆದರೆ, ಇವರ ಕುಟುಂಬದ ಮತ್ತೋರ್ವ ಸದಸ್ಯರಾದ ಪೀಟರ್ ತೂಮಸ್ ಬಿನ್ ಪೆರಿಯನಾಯಗಂ ಇವರ ಮೇಲೆ ಹನೂರು ವನ್ಯಜೀವಿ ವಲಯದ ಶಾಗ್ಯಂ ಶಾಖೆಯ ಬೇಟೆಗಾರನಗುಡ್ಡ ಅರಣ್ಯ ಗಸ್ತಿನ ಬಳಿ ಅನುಮಾನಾಸ್ಪದವಾಗಿ ಓಡಾಡುತ್ತಿರುವ ಹಿನ್ನೆಲೆಯಲ್ಲಿ ಸದರಿಯವರ ಬಳಿಯಿದ್ದ ನಾಡಬಂದೂಕು ಮತ್ತು ಮದ್ದು ಗುಂಡುಗಳನ್ನು ತುಂಬಿರುವ ಬ್ಯಾಗ್ ಅನ್ನು ವಶಪಡಿಸಿಕೊಂಡಿದ್ದು, ಯಾವುದೇ ಅನುಮತಿ ಇಲ್ಲದೇ ಅಕ್ರಮವಾಗಿ ಬಂದೂಕು ಮತ್ತು ಮದ್ದು ಗುಂಡುಗಳನ್ನು ಇಟ್ಟಿಕೊಂಡಿರುವುದು ಕಾನೂನು ವಿರುದ್ಧದ ಚಟುವಟಿಕೆಯಾಗಿರುವುದರಿಂದ ಹನೂರು ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಮೊಕದ್ದಮೆ ಸಂಖ್ಯೆ: 135/26 ರಂತೆ ಪ್ರಕರಣವನ್ನು ದಾಖಲಿಸಿರುವುದು ತಿಳಿದು ಬಂದಿರುತ್ತದೆ.

19. **ಅಲ್ಲದೇ, ಮೇಲ್ಕಂಡ ಪ್ರಕರಣದ ಮತ್ತೊಬ್ಬ ಆರೋಪಿಯಾದ ಮಹಿಮದಾಸ್ ಬಿನ್ ಬೆಂಜಮಿನ್, 45 ವರ್ಷ, ವ್ಯವಸಾಯ, ಕ್ರಿಶ್ಚಿಯನ್ ಜನಾಂಗ, ಮರಿಯಮಂಗಲ ಗ್ರಾಮ** ಇವರ ವಿರುದ್ಧ ಹನೂರು ವನ್ಯಜೀವಿ

ವಲಯದಲ್ಲಿ ವನ್ಯಜೀವಿ ಸಂರಕ್ಷಣೆ ಕಾಯ್ದೆ ಪ್ರಕಾರ ಅರಣ್ಯ ಮೊಕದ್ದಮೆ ಸಂಖ್ಯೆ: 01/2020-21 ದಿನಾಂಕ: 05.06.2020 ರಂತೆ ದಾಖಲಿಸಿರುವುದು ದೃಢಪಟ್ಟಿರುತ್ತದೆ. ಅಮೇಲೆ ನಾನು ಅಂದು ಕೋಲಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ನಮ್ಮ ಅಧಿಕಾರಿಗಳು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಹೋಗಿ ಈ ಬಗ್ಗೆ ವಿವರಿಸಿದಾಗ ಮ್ಯಾಜಿಸ್ಟ್ರೇಟ್ ತನಿಖೆಗೆ ಆದೇಶವನ್ನು ಕೊಟ್ಟಿದ್ದರು. ಈಗ ಮ್ಯಾಜಿಸ್ಟ್ರೇಟ್ ತನಿಖೆ ಆಗುತ್ತಿದೆ. ಮತ್ತೆ ಇದೆಲ್ಲವೂ ಕೂಡ ಮಹಜರ್ ಆಗಿದೆ. ಮಹಜರ್ ಆಗಿ ಅಲ್ಲಿ ಇದ್ದಂತಹ ಮಾಂಸ ಮತ್ತು ಅವರ ಹತ್ತಿರ ಇದ್ದಂತಹ ಎಲ್ಲಾ ಪದಾರ್ಥಗಳನ್ನು ಕೂಡ ವಶಕ್ಕೆ ತೆಗೆದುಕೊಂಡಿದ್ದಾರೆ. ಜೊತೆಗೆ ಮಾಂಸವನ್ನು ವಿಧಿ ವಿಜ್ಞಾನ ಪರೀಕ್ಷೆಗೂ ಕೂಡ ಕಳುಹಿಸಿದ್ದಾರೆ. ಮತ್ತೆ ಬಂದೂಕನ್ನು ಸಹ ವಿಧಿ ವಿಜ್ಞಾನ ಪರೀಕ್ಷೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

20. **ದಂಡಾಧಿಕಾರಿಯ ತನಿಖೆ:** ಮೇಲ್ಕಂಡ ಪ್ರಕರಣದ ಸಂಬಂಧ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ, ಇವರು ಶ್ರೀ ದಿನೇಶ್ ಕುಮಾರ್ ಮೀನಾ, ಭಾ.ಆ.ಸೇ.. ಉಪವಿಭಾಗಾಧಿಕಾರಿಗಳು, ಕೊಳ್ಳೇಗಾಲ ಉಪವಿಭಾಗ, ಕೊಳ್ಳೇಗಾಲ, ಇವರನ್ನು ತನಿಖಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದ್ದು, ಅದರಂತೆ, ಸದರಿ ಉಪವಿಭಾಗಾಧಿಕಾರಿಗಳು ದಿನಾಂಕ: 15.08.2026 ರಂದು ಘಟನಾ ಸ್ಥಳಕ್ಕೆ ತನಿಖೆಯ ಸಲುವಾಗಿ ತೆರಳಿದ್ದು, ಸದರಿ ದಿನದಂದು ತನಿಖೆಯು ಪೂರ್ಣವಾಗಿರುವುದಿಲ್ಲ. ಆದುದರಿಂದ, ದಿನಾಂಕ: 16.08.2026 ರಂದು ತನಿಖೆಯು ಮುಂದುವರೆದಿರುತ್ತದೆ. ಅದರ ಭಾಗವಾಗಿ ಉಪ ವಿಭಾಗಾಧಿಕಾರಿಗಳ ಸಮಕ್ಷಮ ಇಲಾಖಾ ಅಧಿಕಾರಿ/ಸಿಬ್ಬಂದಿಗಳು ಹಾಜರಾಗಿ ತನಿಖಾಧಿಕಾರಿಗಳು ಕೋರಿರುವ ಮಾಹಿತಿಯನ್ನು ಒದಗಿಸಿರುತ್ತಾರೆ. ನಂತರ ಘಟನಾ ಸ್ಥಳದಲ್ಲಿ ವಶಪಡಿಸಿಕೊಳ್ಳಲಾದ ವನ್ಯಪ್ರಾಣಿ ಮಾಂಸದ ಪರೀಕ್ಷೆಯನ್ನು ದಿನಾಂಕ: 16.08.2026 ರಂದು ನಡೆಸಲಾಗಿದ್ದು, ಒಂದು ಬ್ಯಾಗ್‌ನಲ್ಲಿ 22.35 ಕೆ.ಜಿ. ಹಾಗೂ ಮತ್ತೊಂದು ಬ್ಯಾಗ್‌ನಲ್ಲಿ 11.90 ಕೆ.ಜಿ.ಯಂತೆ ಒಟ್ಟಾರೆ 34.25 ಕೆ.ಜಿ. ವನ್ಯಪ್ರಾಣಿ ಮಾಂಸವು ದೊರೆತಿರುತ್ತದೆ. ಸದರಿ ವನ್ಯಪ್ರಾಣಿ ಮಾಂಸದಲ್ಲಿ ಗುಂಡಿನ ಚಹರೆ ಕಂಡು ಬಂದಿರುವುದಾಗಿ ಪಶು ವೈದ್ಯಾಧಿಕಾರಿಗಳು ತಿಳಿಸಿರುವ ಮೇರೆಗೆ ಹೆಚ್ಚುವರಿ ತನಿಖೆಗಾಗಿ ಸದರಿ ಮುದ್ದಾಂ ಮಾಲಿನ ಮಾದರಿಯನ್ನು ಹಾಗೂ ವಶಪಡಿಸಿಕೊಳ್ಳಲಾದ ನಾಡ ಬಂದೂಕನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸುವ ಕುರಿತು ಅಗತ್ಯ ಕ್ರಮ ಕೈಗೊಳ್ಳಲಾಗಿರುತ್ತದೆ.

21. **ಸದರಿ ಘಟನೆ ನಡೆದ ತರುವಾಯ ಆದೇ ದಿನ ರಾತ್ರಿಯ ವೇಳೆಯಲ್ಲಿ ಕೆಲವು ದುಷ್ಕರ್ಮಿಗಳು 07 ಬೇಟೆ ತಡೆ ಶಿಬಿರಗಳು, 09 ವಸತಿ ಗೃಹಗಳಿಗೆ ಹಾನಿ ಮಾಡಿದ್ದು,** ಸದರಿ ಕಟ್ಟಡಗಳಲ್ಲಿದ್ದ ಪೀಠೋಪಕರಣಗಳು ಹಾಗೂ ಸಾಮಾನು ಸರಂಜಾಮುಗಳನ್ನು ಮತ್ತು 01 ಸಂಖ್ಯೆ ನಾಲ್ಕು ಚಕ್ರದ ಇಲಾಖಾ ವಾಹನ ಹಾಗೂ ಸಿಬ್ಬಂದಿಗಳ 04 ಸಂಖ್ಯೆಯ ದ್ವಿಚಕ್ರ ವಾಹನಗಳನ್ನು ಜಖಂಗೊಳಿಸಿರುತ್ತಾರೆ. ಇದರಿಂದ ಸರ್ಕಾರಕ್ಕೆ ಹಾಗೂ ಇಲಾಖಾ ಸಿಬ್ಬಂದಿಗಳಿಗೆ ಅಪಾರ ನಷ್ಟ ಉಂಟಾಗಿರುವ ಹಿನ್ನೆಲೆಯಲ್ಲಿ ಇಲಾಖಾ ಅಧಿಕಾರಿ/ಸಿಬ್ಬಂದಿಗಳು ಈ ಕುರಿತು ಸಂಬಂಧಿತ ಪೋಲೀಸ್ ಠಾಣೆಯಲ್ಲಿ ಕೆಲವು ಪ್ರಕರಣಗಳಿಗೆ ದೂರನ್ನು ನೀಡಲಾಗಿರುತ್ತದೆ.

22. ಈ ಸಂದರ್ಭದಲ್ಲಿ ಕರಡಿಕಲ್ಲು ಒಡ್ಡು ಅರಣ್ಯ ಪ್ರದೇಶದಲ್ಲಿ ಅವಿತ್ತಿದ್ದ ಬೇಟೆಗಾರರು ಮೀಸಲು ಅರಣ್ಯ ಪ್ರದೇಶದಲ್ಲಿ ಅನುಮತಿಯಿಲ್ಲದೇ ಪ್ರವೇಶಿಸಿದ್ದಲ್ಲದೇ, ವನ್ಯಪ್ರಾಣಿಯನ್ನು ಬೇಟೆಯಾಡಿರುವುದು ಕಂಡು ಬಂದಿದ್ದು, ಕರ್ತವ್ಯ ನಿರತ ಇಲಾಖಾ ಸಿಬ್ಬಂದಿಗಳ ಮೇಲೆ ದಾಳಿ ನಡೆಸಲು ಯತ್ನಿಸಿರುತ್ತಾರೆ. ಸದರಿ ಬೇಟೆಗಾರರಿಗೆ ಸಿಬ್ಬಂದಿಗಳು ಶರಣಾಗುವಂತೆ ತಿಳಿಸಿದ ಮೇಲೆಯೂ ನಾಡ ಬಂದೂಕಿನಿಂದ ದಾಳಿ ಮಾಡಿದ ಸಂದರ್ಭದಲ್ಲಿ, ಜೊತೆಗಿದ್ದ ಇಲಾಖಾ ಸಿಬ್ಬಂದಿಗಳ ಪ್ರಾಣ ರಕ್ಷಣೆ ಹಾಗೂ ವೈಯಕ್ತಿಕ ಪ್ರಾಣ ರಕ್ಷಣೆಯ ಉದ್ದೇಶದಿಂದ ಇಲಾಖಾ ಸಿಬ್ಬಂದಿಯು ಪ್ರತಿದಾಳಿ ನಡೆಸಿರುವುದು ವನ್ಯಜೀವಿ ಸಂರಕ್ಷಣಾ ಕಾಯ್ದೆ, 1972 ರ ಸೆಕ್ಷನ್ 60 ಮತ್ತು ಕರ್ನಾಟಕ ಅರಣ್ಯ ಕಾಯ್ದೆ, 1963 ರ ಸೆಕ್ಷನ್ 114 ರಂತೆ ಸರ್ಕಾರದ ಸ್ವತ್ತಿನ ಸಂರಕ್ಷಣೆಗಾಗಿ ಹಾಗೂ ಆರಣ್ಯ, ವನ್ಯಪ್ರಾಣಿಯ ಸಂರಕ್ಷಣೆಯ ಹಿತದೃಷ್ಟಿಯಿಂದ ಮತ್ತು ಇಲಾಖಾ ಸಿಬ್ಬಂದಿಗಳ ಆತ್ಮ ರಕ್ಷಣೆಯ ನಿಟ್ಟಿನಲ್ಲಿ ಸದ್ಭಾವನೆಯಿಂದ ಕೈಗೊಂಡಿರುವ ಕ್ರಮವಾಗಿರುತ್ತದೆ ಎಂದು ಹೇಳಿದ್ದಾರೆ.

23. ಭಾರತೀಯ ನ್ಯಾಯ ಸಂಹಿತೆ, 2023 ರ ನಿಯಮ 34 ಮತ್ತು 35 ರ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಮತ್ತು ಇತರರ ಜೀವವನ್ನು ರಕ್ಷಿಸಿಕೊಳ್ಳಲು ಅವಕಾಶವನ್ನು ನೀಡಲಾಗಿದ್ದು, ಮೇಲ್ಕಂಡ ಪ್ರಕರಣದಲ್ಲಿ ಇಲಾಖಾ ಸಿಬ್ಬಂದಿಗಳು, ಬೇಟೆಗಾರರ ದಾಳಿಯಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಪ್ರತಿದಾಳಿ ನಡೆಸಿರುತ್ತಾರೆಯೇ ಹೊರತು ಉದ್ದೇಶಪೂರ್ವಕವಾಗಿ ತಾವಾಗಿಯೇ ಅವರ ಮೇಲೆ ದಾಳಿ ನಡೆಸಿರುವುದಿಲ್ಲ.

24. ಈ ಘಟನೆಯ ಬಗ್ಗೆ ದಂಡಾಧಿಕಾರಿರವರ ವರದಿ ಸ್ವೀಕೃತಗೊಂಡ ನಂತರ ಕಾನೂನು ರೀತ್ಯ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಒಂದು ವೇಳೆ ಅರಣ್ಯ ಇಲಾಖೆಯ ಸಿಬ್ಬಂದಿಗಳ ತಪ್ಪು ಆ ತನಿಖೆ ವರದಿಯಲ್ಲಿ ಸಾಬೀತು ಆದರೆ, ಆ ಸಿಬ್ಬಂದಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಲು ಇಚ್ಛಿಸುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಕೊಟ್ಟಿರತಕ್ಕಂತಹ ವರದಿಯನ್ನು ನಾನು ಓದಿದ್ದೇನೆ. ಈ ಒಂದು ವರದಿಯಲ್ಲಿ ಅವರ ಮೇಲೆ ಗುಂಡು ಹಾರಿಸಿದಾಗ ಅವರು ಎತ್ತರದ ಸ್ಥಳದಲ್ಲಿದ್ದರು. ಆದ್ದರಿಂದ ಗುಂಡು ಹಾರಿಸಿದಾಗ ದೇಹದ ಬೇರೆ ಬೇರೆ ಭಾಗಗಳಿಗೆ ಗುಂಡು ಬಿದ್ದಿದೆ ಎಂದು ಹೇಳಿದ್ದಾರೆ. ಆ ಗುಂಡು ಹಾರಿಸಿದಾಗ ಅದರ ಅಂತರ ಏನಿತ್ತು? ಅವರೆಲ್ಲರಿಗೂ ಸಹ ಎದೆಯ ಭಾಗಕ್ಕೆ ಗುಂಡು ಬಿದ್ದಿದೆ. ಅದರ ಬಗ್ಗೆ ಫೋಟೋ ಬೇಕಾಗಿದ್ದರೆ ನಿಮಗೆ ತೋರಿಸುತ್ತೇನೆ. ಆ ಫೋಟೋ ಇಲ್ಲಿಯೇ ನನ್ನ ಹತ್ತಿರ ಇದೆ. ಮೊಬೈಲ್‌ನಲ್ಲಿ ಇದೆ. ಎದೆಯ ಭಾಗಕ್ಕೆ ಗುಂಡು ಬಿದ್ದಿದೆ. ಕತ್ತಿನ ಭಾಗಕ್ಕೆ ಗುಂಡು ಬಿದ್ದಿದೆ. ಒಂದು ಸಮಯ ಅವರು ನಮ್ಮ ವಿರುದ್ಧವಾಗಿ ಗುಂಡು ಹಾರಿಸಿದರು ಎಂದು ಹೇಳಿ ಅಧಿಕಾರಿಗಳು ಹೇಳಿದ್ದರೆ ಯಾವ ಅಧಿಕಾರಿಗೆ ಪೆಟ್ಟಾಗಿದೆ? ಇದು ಮೊದಲನೆಯ ವಿಷಯ. ಒಂದು ವೇಳೆ ಯಾವುದಾದರೂ ಅಧಿಕಾರಿಗೆ ಪೆಟ್ಟು ಆಗಿದ್ದರೆ ಪ್ರಾಣ ರಕ್ಷಣೆಗಾಗಿ ನಾವು ಸಹ ಗುಂಡು ಹಾರಿಸಿದ್ದೇವೆಂದು ಹೇಳಬಹುದು. ನಾವು ಅದನ್ನು ತೊಡೆದು ಹಾಕಲಿಕ್ಕೆ ಸಾಧ್ಯವಿಲ್ಲ. ಇಲ್ಲಿ ಏನಾಗಿದೆ ಎಂದರೆ ಬೆಳಗ್ಗೆ 5-00 ಗಂಟೆಗೆ 4 ಜನರ ಹತ್ತಿರ ಇದ್ದದ್ದು 2

ಕೋವಿಗಳು ಎಂದು ಹೇಳಿದ್ದಾರೆ, ಅವರಲ್ಲಿ 3 ಜನರು ಸತ್ತು ಹೋಗಿದ್ದಾರೆ. ಇನ್ನೊಬ್ಬರು ಓಡಿ ಹೋಗಿದ್ದಾರೆಂದು ಹೇಳಿದ್ದಾರೆ, ವಿಶೇಷವೆಂದರೆ 3 ಬ್ಯಾಗ್‌ಗಳಲ್ಲಿ ಮಾಂಸ ಸಿಕ್ಕಿದೆ ಎಂದು ಹೇಳಲಾಗಿದೆ. ಅಂದರೆ 34.25 ಕೆ.ಜಿ. ಮಾಂಸ. ಇದು 2 ಬ್ಯಾಗ್‌ಗಳಲ್ಲಿ ಸಿಕ್ಕಿದೆ. ಸಾಮಾನ್ಯವಾಗಿ ಅಪಾದನೆ ಮಾಡುವಾಗ ಅವರೇ ಮಾಡಿರಬಹುದು ಎಂದು ಹೇಳಲಾಗಿದೆ. ಪೊಲೀಸ್‌ನವರು ಇರಬಹುದು ಅಥವಾ ಈ ರೀತಿಯಲ್ಲಿ ಅರಣ್ಯಾಧಿಕಾರಿಗಳು ಇರಬಹುದು. ಒಬ್ಬರ ಮೇಲೆ ಅಪಾದನೆ ಮಾಡುವಾಗ ಹಲವು ರೀತಿಯಲ್ಲಿ ಮಾಡುವುದನ್ನು ನಾವು ನೋಡಿದ್ದೇವೆ. ಕೆಲವು ಬಾರಿ ಗಾಂಜಾವನ್ನು ತಂದು ಮನೆಯಲ್ಲಿಟ್ಟು ಅರೆಸ್ಟ್ ಮಾಡಿರುವುದನ್ನು ನೋಡಿದ್ದೇವೆ. ಬೇರೆ ಬೇರೆ ಮಾದಕ ವಸ್ತುಗಳನ್ನು ಇಟ್ಟು ಅರೆಸ್ಟ್ ಮಾಡಿರುವುದನ್ನು ನೋಡಿದ್ದೇವೆ. ಇಲ್ಲಿಯೂ ಸಹ ಅದೇ ರೀತಿಯಲ್ಲಿ ಅನುಮಾನ ಪಡಬಹುದಾಗಿದೆ. ಆದರೆ, ಅಧಿಕಾರಿಗಳು ಹೇಳಿರುವುದನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಎರಡು ಬ್ಯಾಗ್ ಮಾಂಸ ಸಿಕ್ಕಿದೆ. ಅದಕ್ಕೆ 3 ಜನರನ್ನು ಕೊಲ್ಲಬೇಕೇ? ಅವರನ್ನು ಅರೆಸ್ಟ್ ಮಾಡಬೇಕಾಗಿತ್ತು ಅಥವಾ ಆತ್ಮ ರಕ್ಷಣೆಗೆ ಗುಂಡನ್ನು ಅವರ ಆತ್ಮ ರಕ್ಷಣೆಗೆ ಅವರ ಆತ್ಮಕ್ಕೆ ಹೊಡೆಯಬೇಕೇ? ಕಾಲಿಗೆ ಹೊಡೆಯಬಹುದಿತ್ತು ಅಲ್ಲವೇ? ಈ ಬಗ್ಗೆ ರೂಲ್ ಏನು ಹೇಳುತ್ತದೆ? ಪೊಲೀಸ್ ಅಧಿಕಾರಿಗಳು ಇರಲಿ, ಅರಣ್ಯ ಅಧಿಕಾರಿಗಳು ಇರಲಿ, ಅವರ ಕಾಲಿಗೆ ಗುಂಡು ಹೊಡೆಯಬಹುದಿತ್ತು ಅಲ್ಲವೇ? ಅದನ್ನು ಮಾಡಿರುವುದಿಲ್ಲ. ಎಲ್ಲದಕ್ಕಿಂತ ಮಿಗಿಲಾಗಿ 14ನೇ ತಾರೀಖು ನಮಗೆ ಮೆಸೇಜ್ ಸಿಕ್ಕಿದ್ದು ಎಂದು ಇದೆ. ಅಲ್ಲಿನ ಸ್ಥಳೀಯ ಜನರು ಅವರು ಹಸುಗಳನ್ನು ಸಾಕುತ್ತಿದ್ದರು ಎಂದು ಹೇಳಿರುವಂತಹದ್ದು,ಹಸುಗಳು ತಪ್ಪಿಸಿಕೊಂಡು ಹೊರಗಡೆ ಹೋಗಿದೆ. ನಾನು ಒಂದು ವಿಷಯವನ್ನು ಹೇಳುತ್ತೇನೆ. ಅರಣ್ಯದ ಅಂಚಿನಲ್ಲಿ ಇರತಕ್ಕಂತಹ ಯಾರೇ ಅದರೂ, ಅದರಲ್ಲೂ ಸಹ ಅದು ದಟ್ಟ ಅರಣ್ಯ ಆಗಿರುತ್ತದೆ. ಇಂದು ಬೆಳಗ್ಗೆ ಮಾತನಾಡಿದಂತಹ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್. ಭೋಜೇಗೌಡರವರು ಒಂದು ವಿಚಾರವನ್ನು ಹೇಳಿದರು. ಚಿಕ್ಕಮಗಳೂರಿನಲ್ಲಿಯೂ ಸಹ ನಾವು ಏನಾದರೂ ಅರಣ್ಯ ಪ್ರದೇಶದ ಕಡೆಗೆ ಹೋದರೆ ನಮ್ಮ ರಕ್ಷಣೆಗಾಗಿ ಕೋವಿ ಹಿಡಿದುಕೊಂಡೇ ಹೋಗುತ್ತೇವೆಂದು ಹೇಳಿದರು. ತೋಟಕ್ಕೆ ಹೋದರೂ ಕೂಡ ನಾವು ಕೋವಿಯನ್ನು ಹಿಡಿದು ಹೋಗುತ್ತೇವೆ. ನಮ್ಮನ್ನು ಕರಡಿ ಸೇರಿದಂತೆ ಯಾವುದೇ ವನ್ಯ ಜೀವಿಗಳು ಅಟ್ಯಾಕ್ ಮಾಡಬಹುದು ಎನ್ನುವ ಉದ್ದೇಶದಿಂದ ಎಂದು ಹೇಳಿದರು. ದನಗಳನ್ನು ಹುಡುಕಲಿಕ್ಕೆ ಹೋದಾಗ ಸಾಮಾನ್ಯವಾಗಿ ಯಾವ ಒಂದು ಪ್ರದೇಶದಲ್ಲಿ ಹಸುಗಳನ್ನು ಅಥವಾ ದನಕರುಗಳನ್ನು ಮೇಯಿಸಲಿಕ್ಕೆ ಬಿಡುತ್ತೇವೆಯೋ, ಅವುಗಳು ಏನಾದರೂ ದಟ್ಟಾರಣ್ಯಕ್ಕೆ ಹೋದಾಗ ಅದು ಅಲ್ಲಿನ ಪ್ರದೇಶವಾದ್ದರಿಂದ, ಪೊಲೀಸ್‌ಗೆ ದೂರು ಕೊಟ್ಟು ನಮಗೆ ದನಕರುಗಳನ್ನು ಹುಡುಕಿ ಕೊಡಿ ಎಂದು ಹೇಳಿ ಯಾರಾದರೂ ದೂರನ್ನು ಕೊಡುತ್ತಾರೆಯೇ? ಅಥವಾ ಅರಣ್ಯಾಧಿಕಾರಿಗಳಿಗೆ ಒಂದು ದೂರನ್ನು ಕೊಟ್ಟು ಅರಣ್ಯದಲ್ಲಿ ನಮ್ಮ ದನ ಕರುಗಳು ತಪ್ಪಿಸಿಕೊಂಡು ಹೋಗಿದೆ, ನಮಗೆ ಹುಡುಕಿ ಕೊಡಿ ಎಂದು ದೂರು ಕೊಡುತ್ತಾರೆಯೇ? ನಮ್ಮದು ದನಕರು ಕಳೆದು

ಹೋದಾಗ ಹುಡುಕತಕ್ಕಂತಹದ್ದು ಸಹಜ. ಒಳಗಡೆ ಹೋಗಿರಬಹುದು. ಸಮಯದ ಬಗ್ಗೆ ಅಥವಾ ಅವರ ಪಟ್ಟಿಯಲ್ಲಿ ಏನು ಕೊಟ್ಟಿದ್ದಾರೆ, ಇದೆಲ್ಲವೂ ಇಷ್ಟೇ ಸತ್ಯವೆಂದು ಹೇಳಲಿಕ್ಕೆ ಆಗುವುದಿಲ್ಲ. ಏಕೆಂದರೆ, ಅನಾಹುತವಾದ ಮೇಲೆ ಅನಾಹುತವನ್ನು ಡಿಫೆಂಡ್ ಮಾಡಲಿಕ್ಕೆ ಏನೆಲ್ಲಾ ಅಂಕಿ-ಅಂಶಗಳನ್ನು ಸೇರಿಸಬಹುದೋ ಅದೆಲ್ಲವನ್ನು ಮಾಡಲಾಗಿದೆ. ಎರಡು ಚೀಲ ಮಾಂಸ ಸಿಕ್ಕಿದ್ದಕ್ಕೆ 3 ದೇಹಗಳನ್ನು ಬಲಿ ತೆಗೆದುಕೊಳ್ಳುವಂತಹದ್ದು ಯಾವ ಒಂದು ಕಾನೂನಿನಲ್ಲಿ ಇದೆ?

(ಮುಂದು)

(717) 17.08.2026 03.10 ಎಸ್‌ವಿ-ಬಿಎನ್‌ಎಸ್ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ಮುಂದು):**

ಎರಡು ಚೀಲ ಮಾಂಸ ಸಿಕ್ಕಿದ್ದಕ್ಕೆ ಮೂರು ಜೀವಗಳನ್ನು ಬಲಿ ತೆಗೆದುಕೊಳ್ಳುವುದು ಯಾವ ಕಾನೂನಿನಲ್ಲಿದೆ? ಇದನ್ನು ಹೇಗೆ defend ಮಾಡುವುದು? ಅದರಲ್ಲಿಯೂ tussle is common in the border places. ಏಕೆಂದರೆ ಅದು ಅರಣ್ಯ. ಅದರ ಪಕ್ಕದಲ್ಲಿರುವವರು ಸೌದೆ ತರಲಿಕ್ಕೆ ಹೋಗಬಹುದು, ಗಿಡ-ಗಂಟಿಗಳನ್ನು ಕಡಿದು ತರಲಿಕ್ಕೆ ಹೋಗಿರಬಹುದು, ಇಂಥವೆಲ್ಲವೂ ಆ ಭಾಗದಲ್ಲಿ ನಡೆಯುತ್ತವೆ. ಇದನ್ನು ನಾವು ತಳ್ಳಿ ಹಾಕುವುದಿಲ್ಲ. Let us assume, ಒಂದು ಸಮಯ ಅದಕ್ಕಾಗಿಯೇ ಇವರು ಹೋಗಿದ್ದಾರೆ, ಪ್ರಾಣಿಗಳನ್ನೇ ಕೊಂದುಬಿಟ್ಟಿದ್ದಾರೆ ಎಂದರೆ ಅದನ್ನೂ ಒಪ್ಪಿಕೊಳ್ಳೋಣ. ನೀವು ಅವರನ್ನು ಕರೆತಂದು ಶಿಕ್ಷೆ ಕೊಡುವಂಥ ಕೆಲಸವನ್ನು ಮಾಡಬೇಕೆ ಹೊರತು ಒಂದೇ ಸಾರಿ ಸ್ವರ್ಗಕ್ಕೇ ಕಳುಹಿಸುವುದೇ ಶಿಕ್ಷೆಯೇ? ಮಾನ್ಯ ಸಚಿವರ ಇಂಥ ಮಾತುಗಳನ್ನು ನಾವು ಒಪ್ಪಲಿಕ್ಕೆ ಸಾಧ್ಯವಿಲ್ಲ. ಅದರಲ್ಲಿಯೂ ಇವರು ಒಂದೇ ಕುಟುಂಬದವರು. ಸತ್ತಿರುವ ಮೂರು ಜನರೂ ಒಂದೇ ಕುಟುಂಬದವರು. ನೀವೇ ಹೇಳಿರುವಂತೆ ಅವರನ್ನು ಮೊದಲಿನಿಂದಲೂ ಪರಿಶೀಲನೆ ಮಾಡಿದ್ದೇವೆ, ಇಂಥ ಪ್ರಕರಣಗಳಲ್ಲಿ ಅವರು ಭಾಗಿಯಾಗಿರುವುದಿಲ್ಲ ಎಂದು ತಾವೇ ಹೇಳಿದ್ದೀರಿ. ಅವರ ಮೇಲೆ ಯಾವುದೇ ಪ್ರಕರಣಗಳಿಲ್ಲ. ಇಲ್ಲ ಎಂದ ತಕ್ಷಣವೇ ಅವರು ಯಾರಿರಬಹುದು? ಯಾರೋ ಒಬ್ಬರ ಮೇಲಿರಬಹುದು. ಆದರೆ ಅಧಿಕಾರಿಗಳ ಮೇಲೆ..? ಒಬ್ಬ ಅಧಿಕಾರಿಗೆ ಒಂದು ಪೆಟ್ಟಾಗಿಲ್ಲ. ಇದರಲ್ಲಿ ತಾವೇ ಹೇಳಿದಂತೆ ಎಲ್ಲಿಯೋ ಒಂದು ಟಾರ್ಚ್‌ನ ಬೆಳಕು ಕಂಡಿತ್ತು. ಟಾರ್ಚ್‌ನ ಬೆಳಕು ಕಂಡಾಗ ಅಧಿಕಾರಿಗಳು ಆ ಭಾಗಕ್ಕೆ ಹೋದರು. ಅಲ್ಲಿ ಹೋದ ತಕ್ಷಣ ಅಲ್ಲಿ ಗುಂಡು ಹಾರಿಸುವುದು ಕೇಳಿಸಿತು. ನಮ್ಮ ಮೇಲೆ ಹಾರಿಸಬಹುದು ಎನ್ನುವ ಆತ್ಮ ರಕ್ಷಣೆಗೆ ಶೂಟ್ ಮಾಡಿದರು ಎಂದು ಹೇಳಿದರು. ನಿಮ್ಮ ಮೇಲೆ ಹಾರಿಸಿದರು ಎನ್ನುವುದಕ್ಕೆ ಏನು ಪುರಾವೆಯಿದೆ? ಹಾರಿಸಲೇ ಇಲ್ಲ. ಅಷ್ಟು ಹೊತ್ತಿಗೆ ನೀವು ಅವರನ್ನು ಕಳಿಸೇಬಿಟ್ಟಿರಲ್ಲ. ಇದನ್ನು ತಾವು defend ಮಾಡುವಂಥದ್ದು ಸರಿಯಲ್ಲ.

ಈಗ ಆ ಮನೆ ಶೋಕದಲ್ಲಿ ಮುಳುಗಿದೆ. ದುಡಿಮೆ ಮಾಡುವಂಥ ಆ ವ್ಯಕ್ತಿಗಳ ವಯಸ್ಸು 40, 45 ಮತ್ತು 50 ವರ್ಷಗಳು. ಇಂಥ ಒಂದು ಸನ್ನಿವೇಶದಲ್ಲಿ ಆ ಕುಟುಂಬಕ್ಕೆ ನ್ಯಾಯ ಕೊಡಬೇಕಾದವರು ಯಾರು? ತಾವೇ

ಅಲ್ಲವೇ? ಇದಕ್ಕೇನು ಮಾಡುತ್ತೀರಿ ತಾವು ಎಂದರೆ ಅಲ್ಲಿನ ತಾಲ್ಲೂಕು ಮ್ಯಾಜಿಸ್ಟ್ರೇಟ್ ರಿಂದ ನ್ಯಾಯ ಕೊಡಿಸುತ್ತೀರಿ. ನ್ಯಾಯ ಸಿಗುತ್ತಾ? ಇದಕ್ಕೆ ತಮ್ಮಲ್ಲಿ ನನ್ನ ಆಗ್ರಹವೇನೆಂದರೆ ಇದು judicial enquiry ಆಗಬೇಕು. ಏಕೆಂದರೆ, ಅರಣ್ಯಾಧಿಕಾರಿಗಳಿಗಿರುವಷ್ಟು ಅಧಿಕಾರ ನಮ್ಮ ಪೊಲೀಸರಿಗೂ ಇಲ್ಲ. ಈ ಅರಣ್ಯಾಧಿಕಾರಿಗಳು ಅವರ ಈ ಅಧಿಕಾರವನ್ನು ಸಂಪೂರ್ಣವಾಗಿ ದುರುಪಯೋಗ ಪಡಿಸುತ್ತಾರೆ. ಪೊಲೀಸರು ಊರ ಒಳಗಿದ್ದಾರೆ. ಇಲ್ಲಿ ಆಗುವುದನ್ನು ನಾವು ಕಣ್ಣಾರೆ ನೋಡುತ್ತೇವೆ. ಅರಣ್ಯಾಧಿಕಾರಿಗಳು ಅರಣ್ಯದ ಅಂಚಿನಲ್ಲಿದ್ದಾರೆ. ಅವರು ಮಾಡತಕ್ಕ ಅಟ್ಟಹಾಸವನ್ನು ಎಲ್ಲರೂ ನೋಡಲಿಕ್ಕೆ ಸಾಧ್ಯವಿಲ್ಲ. ಆ ಭಾಗದಲ್ಲಿರುವವರಿಗೆ ಮಾತ್ರ ಇದು ಅರ್ಥವಾಗುತ್ತದೆ, ಆ ನೋವನ್ನು ಉಂಡವರಿಗೆ ಗೋಚರವಾಗುತ್ತದೆ. ಸಣ್ಣ ಸಣ್ಣ ವಿಚಾರಕ್ಕೆ ನಾವೇನಾದರೂ ಒಂದು ಮಾತನ್ನಾಡಿಬಿಟ್ಟರೆ ಹಗೆತನಗಳು ಅಲ್ಲಿಯೇ ಹುಟ್ಟುತ್ತವೆ, ಅದರಿಂದಲೇ ದುಷ್ಕೃತ್ಯಗಳು ನಡೆಯುತ್ತವೆ. ಇದರಲ್ಲಿ ನಾನು ನೇರವಾಗಿ ತಮಗೆ ಹೇಳಬಯಸುತ್ತೇನೆ. ಸರ್ಕಾರ ಇವರ ಮೇಲೆ action ತೆಗೆದುಕೊಳ್ಳಲಿಲ್ಲವೆಂದರೆ ಇವರ ರಕ್ಷಣೆ ಮಾಡಿದರೆ, ಸರ್ಕಾರವೇ ಇದಕ್ಕೆ ಹೊಣೆ. ಇದು ಸರ್ಕಾರದ ಕೊಲೆ ಎಂದು ಹೇಳಬಯಸುತ್ತೇನೆ. ಏಕೆಂದರೆ, ಅಧಿಕಾರಿಗಳ ಮೇಲೆ ಅವರು ಅಟ್ಯಾಕ್ ಮಾಡಿದ್ದಾರೆನ್ನುವುದಕ್ಕೆ ಏನೂ ಪುರಾವೆಯಿಲ್ಲ. ಇವರಿಗೆ ಯಾರಿಗಾದರೂ ಪೆಟ್ಟಾಗಿ ತೊಂದರೆಯಾಗಿದ್ದರೆ ನಮಗೂ ಅನ್ನಿಸುತ್ತಿತ್ತು. ಅಧಿಕಾರಿಗಳು ಕೂಡ ನಮಗೆ ಅಷ್ಟೇ ಮುಖ್ಯ. ಅಧಿಕಾರಿಗಳ ಮೇಲೆ ನೀವು ಗುಂಡು ಹಾರಿಸಿದರೆ ಸರ್ಕಾರದ ಮೇಲೆಯೇ ಗುಂಡು ಹಾರಿಸಿದಂತೆ. ಅದನ್ನೂ ನಾವು ಒಪ್ಪಲಿಕ್ಕೆ ಸಾಧ್ಯವಿಲ್ಲ. ಆದರೆ ಇಲ್ಲಿ ಆಗಿರುವಂಥದ್ದು ಪೂರ್ವನಿಯೋಜಿತವಾದುದು. ಅಲ್ಪಸಂಖ್ಯಾತರು ಅವರು. ಗುಡ್ಡಗಾಡು ಪ್ರದೇಶಗಳ ಅಂಚಿನಲ್ಲಿರುವವರು. ಅವರು ಪಟ್ಟಣದ ಸಂಪರ್ಕಕ್ಕಿಂತಲೂ ಆಹಾರ ಇತ್ಯಾದಿಗಳೆಲ್ಲದಕ್ಕೂ ಅರಣ್ಯವನ್ನೇ ಆಶ್ರಯಿಸಿದ್ದವರು. ಇಂಥವರ ಮೇಲೆ ಈ ರೀತಿಯ ಅಟ್ಟಹಾಸ, ಇದು ಅಮಾನವೀಯ. ಇದನ್ನು ನಾನು ಸಂಪೂರ್ಣವಾಗಿ ಖಂಡಿಸುತ್ತೇನೆ. ಇದರಲ್ಲಿ ಯಾರೂ ಕೂಡ ಈ ಅಧಿಕಾರಿಗಳ ಬಗ್ಗೆ ಕರುಣೆ ತೋರಿಸುವಂಥದ್ದಿಲ್ಲ. ಇಂಥ ಅಮಾನವೀಯ ಕೃತ್ಯವನ್ನು ಸ್ವಯಂಪ್ರೇರಿತವಾಗಿ ಮಾಡಿರುವಂಥದ್ದು. ಆದ್ದರಿಂದ ಇದನ್ನು judicial enquiry ಗೆ ಕೊಡಬೇಕೆನ್ನುವುದು ನನ್ನ ಆಗ್ರಹ. ಸರ್ಕಾರ ಇದು ನಮ್ಮದೇ ಅಪರಾಧದಿಂದ ಆಗಿರುವಂಥದ್ದು ಎಂದು ಸತ್ತಿರುವ ಆ ಮೂರು ಜನರಿಗೂ ತಲಾ ರೂ.1 ಕೋಟಿ ಪರಿಹಾರ ಕೊಡಬೇಕೆಂದು ಮತ್ತು ಆ ಮನೆಯಲ್ಲಿರುವ ಮೂವರಿಗೆ ಕೆಲಸವನ್ನು ನೀಡಬೇಕೆಂದು ಆಗ್ರಹಿಸುತ್ತೇನೆ. ಇದನ್ನು ನಾವು ಒಪ್ಪಲಿಕ್ಕೆ ಆಗುವುದಿಲ್ಲ. ದಯಮಾಡಿ ಇದರಲ್ಲಿ ಯಾರು ತೀರಿ ಹೋಗಿದ್ದಾರೆಯೋ ಅವರ ಮೇಲೆ ತಪ್ಪು ಹೊರಿಸುವುದು ಬೇಡ. ಸರ್ಕಾರ ಈ ಅಧಿಕಾರಿಗಳನ್ನು ತಕ್ಷಣವೇ ಬಂಧಿಸಬೇಕು ಮತ್ತು ಅವರ ಮೇಲೆ ಕ್ರಮ ಜರುಗಿಸಬೇಕು. ನಿರ್ದಾಕ್ಷಿಣ್ಯವಾದ ಕ್ರಮವನ್ನು ಮಾನ್ಯ ಸಚಿವರು ಮತ್ತು ಮಾನ್ಯ ಸರ್ಕಾರ ಕೈಗೊಳ್ಳಬೇಕೆಂದು ಹೇಳಿ ನಾನು ಆಗ್ರಹ ಪಡಿಸುತ್ತೇನೆ.

**ಶ್ರೀ ಕೆ. ಶಿವಕುಮಾರ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಅರಣ್ಯ ಮಂತ್ರಿಗಳಾದ ಮಾನ್ಯ ರಾಮಲಿಂಗಾರೆಡ್ಡಿಯವರು ನೀಡಿರುವ ಪ್ರತಿಕ್ರಿಯೆಯ ಕೆಲವು ವಿಚಾರಗಳ ಬಗ್ಗೆ ನಾನು ಮಾತನಾಡಲಿಚ್ಛಿಸುತ್ತೇನೆ.

ಮಾನ್ಯ ಸಭಾಪತಿಯವರೆ, ಹನೂರು ಇರಬಹುದು, ಕೊಳ್ಳೇಗಾಲ ಇರಬಹುದು, ಚಾಮರಾಜನಗರ ಇರಬಹುದು, ಈ ಭಾಗದಲ್ಲಿ ಸುಮಾರು 30% of the population ಆ border villages ನಲ್ಲಿದ್ದಾರೆ. ಇಡೀ ಜಿಲ್ಲೆಯೇ ಗ್ರಾಮೀಣ ಪ್ರದೇಶದಿಂದ ಕೂಡಿರುವುದರಿಂದ ಹಳ್ಳಿಗಳಲ್ಲಿ ಬಹಳಷ್ಟು ಜನ ವಾಸ ಮಾಡುತ್ತಿದ್ದಾರೆ. ಅವರು ವ್ಯವಸಾಯಕ್ಕಿರಬಹುದು, ದನಕರುಗಳನ್ನು ಮೇಯಿಸುವುದಕ್ಕಿರಬಹುದು ಇದಕ್ಕೆಲ್ಲಾ ಅವಲಂಬಿಸಬೇಕಾಗಿರುವುದು ಕಾಡನ್ನೇ. ಕಳೆದ ಬಾರಿ ಮಾನ್ಯ ಈಶ್ವರ ಖಂಡ್ರೆಯವರು ಅರಣ್ಯ ಮಂತ್ರಿಗಳಾಗಿದ್ದಾಗ ಅರಣ್ಯದೊಳಗೆ ಯಾರೂ ದನ ಮೇಯಿಸಬಾರದು ಎಂದು ಸರ್ಕಾರ ಒಂದು ಆದೇಶ ಮಾಡಿತ್ತು. ನಂತರ ಅದನ್ನು withdraw ಮಾಡಿದರು. ಇವತ್ತು ರಾಜ್ಯದಲ್ಲಿ ಬರ ಇರುವುದರಿಂದ ದನಕರುಗಳನ್ನು ಮೇಯಿಸುವುದಕ್ಕೆ ಯಾವುದೇ ರೀತಿಯ ನಿರ್ಬಂಧವಿಲ್ಲ, ನೀವು ಮೇಯಿಸಬಹುದು ಎಂದು ಹೇಳಿದೆ. ನಾನು ಅಲ್ಲಿನ ಜನಕ್ಕೆ ಏನಾದರೂ ನಿರ್ಬಂಧ ಹಾಕಲಾಗಿದೆಯೇ ಎಂದು ಕೇಳಿದ್ದಕ್ಕೆ ಅವರು ಇಲ್ಲವೆಂದು ಹೇಳಿದರು. ಅದನ್ನು ಸರ್ಕಾರವೂ clarify ಮಾಡಬೇಕು. ಈ ಘಟನೆ ನಡೆದು ಅದರಲ್ಲಿ ಮೂರು ಜನ ಸತ್ತಿರುವುದು ಬಹಳ ದುರ್ದೈವ. ಏಕೆಂದರೆ ಮೈಸೂರಿಗೆ ಶವಗಳನ್ನು ತಂದಾಗ ಅವರ ಕುಟುಂಬದವರ ಆಕ್ರಂದನ, ಮನೆಯವರನ್ನು ಕಳೆದುಕೊಂಡಿರುವ ದುಃಖದಲ್ಲಿದ್ದರು. ಒಂದು ಮಾತ್ರ ನಿಜ. ಅದರಲ್ಲಿ investigation ನಲ್ಲಿ ನಾವೇನಿಲ್ಲ. Investigation report ಏನು ಬರುತ್ತದೆಯೋ ಅದರ ಮೇಲೆ ಸರ್ಕಾರ ಕ್ರಮ ಕೈಗೊಳ್ಳಬೇಕಾಗುತ್ತದೆ. ಅಕಸ್ಮಾತ್ ಅಧಿಕಾರಿಗಳು ತಪ್ಪಿತಸ್ಥರಾಗಿದ್ದರೆ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕಾಗುತ್ತದೆ. ಆದರೆ ಕುಮಾರ್ ಎನ್ನುವವನು ಯಾರಿದ್ದಾನೆ, ಅದನ್ನು ನಾನು clarify ಮಾಡುತ್ತೇನೆ. ಅವನ ಜೀವನದಲ್ಲಿ ಅವನು ಕಾಡಿನೊಳಗೆ ಹೋಗಿರಲಿಲ್ಲ. ಹೋಗುತ್ತಿದ್ದವರು ಕರೆದಿದ್ದಕ್ಕೆ ಹೋಗಿದ್ದಾನೆ. ನಾನು ಈ ಒಂದು ವಿಷಯವನ್ನು ಊರಿನವರ ಬಳಿ ಕೇಳಿದ್ದಕ್ಕೆ ಅವರು ಕೂಡ ಹೇಳಿದರು. ಅವನು ಹೋಗುತ್ತಿರಲಿಲ್ಲ. ಬೇರೆ ಎಲ್ಲಿಯೋ ಕೆಲಸಕ್ಕೆ ಹೋಗುತ್ತಿದ್ದನು. ಅವತ್ತು ಹೋಗಿದ್ದಾನೆ ಎಂದು ಹೇಳಿದರು. ಇವತ್ತು ಇಷ್ಟೆಲ್ಲಾ ಆಗುವುದಕ್ಕೆ ನಮ್ಮ ಕಡೆಯಿಂದಲೂ ಕೆಲವು lapses ಇದೆ. ಒಂದು, ಸರ್ಕಾರ ಕಳೆದ 20 ವರ್ಷಗಳಲ್ಲಿರಬಹುದು, ವೀರಪ್ಪನ್ operations ಆಗಿ ನಿಂತ ಮೇಲೆ...ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಆಗ ಆದಂಥ human rights violation, ಆಗ ಆದಂಥ atrocities ಇರಬಹುದು, Sadashiva Commission's Report ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ.

(ಮುಂದು)

(718) 17-8-2026 (3.20) ಕೆಜಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಶಿವಕುಮಾರ್ ಕೆ. (ಮುಂದು):**

ಕಳೆದ 20 ವರ್ಷಗಳಲ್ಲಿ ಅರಣ್ಯ ಇಲಾಖೆಯವರು, ನಾಡ ಬಂದೂಕು ಈ ರೀತಿಯಾದ illegal weapons ಬಗ್ಗೆ ಒಂದೇ ಒಂದು ಬಾರಿಯೂ ಸಹ ಗ್ರಾಮಾಂತರ ಪ್ರದೇಶಗಳಲ್ಲಿ, ಹಳ್ಳಿಗಳಲ್ಲಿ raid ಮಾಡಿರುವುದಿಲ್ಲ. ಇದ್ದರೆ ಅದನ್ನು

ತೆಗೆದುಕೊಳ್ಳುವಂತಹ ಒಂದು ಕೆಲಸವನ್ನು ಮಾಡಿಲ್ಲ. ಇದನ್ನೆಲ್ಲಾ ಕಾಲಕಾಲಕ್ಕೆ ಮಾಡಿದ್ದರೆ, ಇವತ್ತು ಇಂತಹ ಘಟನೆಗಳು ಆಗುತ್ತಿರಲಿಲ್ಲ. ಎರಡನೆಯದಾಗಿ, anti-poaching camps ಏನಿತ್ತು, ಅದನ್ನು ಇನ್ನಷ್ಟು strengthen ಮಾಡಬೇಕಾಗಿತ್ತು. ಇವತ್ತು manpower ಇಲ್ಲ. ಸರ್ಕಾರ ಇವತ್ತು daily wages ರವರನ್ನು ಹಾಗೂ ಅಲ್ಲಿನ local tribal ರವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದರ ಮೂಲಕ ಅವರ ಮೇಲೆ ಅವಲಂಬಿತವಾಗಿದೆ. Anti-poaching camps ನಡೆಸಬೇಕೆಂದರೆ, ಅದಕ್ಕೆ ಆದಂತಹ professionals ಇರಬೇಕು. ಅದಕ್ಕೆ ನೇಮಕಾತಿ ಮಾಡಬೇಕಾಗಿತ್ತು. Tribal ರವರನ್ನು ಅರಣ್ಯ ಇಲಾಖೆಯಲ್ಲಿ ನೇಮಕಾತಿ ಮಾಡಬೇಕೆಂದು C&R Rules ಅನ್ನು ತಿದ್ದುಪಡಿ ಮಾಡಿದ್ದಾರೆ. ಆದರೆ, ನೇಮಕಾತಿ ಮಾಡಿಲ್ಲ.

ಮಾನ್ಯ ಸಭಾಪತಿಯವರೇ, ಮೂರನೆಯದಾಗಿ, fringe of the forest ನಲ್ಲಿ ಕ್ಯಾಮರಾಗಳನ್ನು ಫಿಕ್ಸ್ ಮಾಡಬೇಕಾಗಿತ್ತು. ಆದರೆ, ಅಲ್ಲಿ ಕ್ಯಾಮರಾಗಳನ್ನು ಜಾಸ್ತಿ ಹಾಕಿಲ್ಲ. ಇವತ್ತು ಏನಾದರೂ fringe of the forest ನಲ್ಲಿ ಕ್ಯಾಮರಾಗಳನ್ನು ಒಂದು ಕಿಲೋಮೀಟರ್ ಅಥವಾ ಎರಡು ಕಿಲೋಮೀಟರ್‌ನಲ್ಲಿ ಅಳವಡಿಸಿದ್ದರೆ ಇವರು ಹೋಗುವುದನ್ನು ಮತ್ತು ಬರುವುದನ್ನು track ಮಾಡುವುದಕ್ಕೆ ಅವಕಾಶ ಇತ್ತು. ಬಹಳಷ್ಟು ಕಡೆ ಅಳವಡಿಸಿದ್ದಾರೆ, ನಾನು ಇಲ್ಲವೆಂದು ಹೇಳುತ್ತಿಲ್ಲ. ಏಕೆಂದರೆ, surveillance ಬೇಕು. ನಾಲ್ಕನೆಯದಾಗಿ, Police Department ಗೂ ಮತ್ತು Forest Department ಗೆ ಅಲ್ಲಿ coordination ಕಾಣುತ್ತಿಲ್ಲ. Border villages ನಲ್ಲಿ ಈ ಅಮಾಯಕರನ್ನು ಬಳಸಿಕೊಂಡು, inter-State border ನಲ್ಲಿ ಕೆಲವು activities ನಡೆಯುತ್ತಿರುತ್ತವೆ. ಅದನ್ನು ಯಾರೂ ನಿಯಂತ್ರಣ ಮಾಡುತ್ತಿಲ್ಲ. In fact, ನಾನು ಹೇಳಬೇಕೆಂದರೆ, ಮಾನ್ಯ ಮುಖ್ಯಮಂತ್ರಿಯವರಿಗೆ ಆ ಪ್ರಶ್ನೆಯನ್ನು ಕೊಟ್ಟಿದ್ದೇನೆ. ಇಲ್ಲಿ ಎಲ್ಲಿಯೂ ಸಹ Commercial Tax Department's check post ಗಳು ಇಲ್ಲ. ಅಂದರೆ, ಇಂತಹ ಅಮಾಯಕ ಜನರನ್ನು ಹಾಗೂ ಅಂತಹ ರಸ್ತೆಗಳನ್ನು ಬಳಸಿಕೊಂಡು ಏನು illegal transportation ಮಾಡಬೇಕೆಂದು ಇದ್ದಾರೆ, ಅದೆಲ್ಲಾ ಆಗುತ್ತಿರುತ್ತದೆ.

ಮಾನ್ಯ ಸಭಾಪತಿಯವರೇ, ಹಬ್ಬ-ಹರಿದಿನಗಳು ಬಂದರೆ, ಅಮಾವಾಸ್ಯೆ ಬಂದರೆ ಆ ಭಾಗದಲ್ಲಿ ಈಗ ಬಹಳಷ್ಟು ಕಡಿಮೆಯಾಗಿದೆ. ನಾನು ಇಲ್ಲವೆಂದು ಹೇಳುತ್ತಿಲ್ಲ. ಒಂದು ಕಾಲ ಇತ್ತು. ಯಾರಾದರೂ ಫೋನಿನಲ್ಲಿ ಇಂತಹ ಮಾಂಸ ಬೇಕೆಂದು ಹೇಳಿದರೆ ಸಾಕು ಅಂತಹ ಮಾಂಸ ಬರುತ್ತಿತ್ತು. ಈಗ ಅದು ಗಣನೀಯವಾಗಿ ಕಡಿಮೆಯಾಗಿದೆ. ಈ ಎಲ್ಲಾ poachers ಇದ್ದಾರೆ. ನಾನು ಮಾಡುತ್ತಿದ್ದಾರೆಂದು ಹೇಳುತ್ತಿಲ್ಲ. ಈ ರೀತಿ ಸಣ್ಣ-ಪುಟ್ಟದ್ದು ಬಂದಾಗ, ಈ ತರಹ hunting ಮಾಡುವುದು ಒಂದರೆಡು ಪ್ರಕರಣಗಳು ಇರಬಹುದು. ನಾನು

ಇಲ್ಲವೆಂದು ಹೇಳುತ್ತಿಲ್ಲ. There are professional hunters, criminals. ಈ ಸಂದರ್ಭದಲ್ಲಿ ಒಂದು ಘಟನೆಯನ್ನು ಉದಾಹರಣೆಯಾಗಿ ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಕರ್ನಾಟಕದ ಮತ್ತು ತಮಿಳುನಾಡಿನ ಗಡಿಯಲ್ಲಿ ಶ್ರೀ ಮಲೆ ಮಹದೇಶ್ವರನ ಬೆಟ್ಟದ ತುದಿಯಲ್ಲಿ Palar bridge ಇದೆ. ಅದೇ ನಮ್ಮ ರಾಜ್ಯದ last border. ಅಲ್ಲಿ ಎಷ್ಟು poachers ಹೇಗಿದ್ದಾರೆ ಎನ್ನುವುದಕ್ಕೆ ಹೇಳುತ್ತಿದ್ದೇನೆ. ಅಂದರೆ, ಇಲ್ಲಿಗೂ ಅಲ್ಲಿಗೂ geographically ಬಹಳ distance ಇದೆ. ಅದು ಪಕ್ಕದ ಊರು ಅಲ್ಲ. ನಮ್ಮ check post ಅನ್ನು ಹೊಡೆದು ಹಾಕಿ ಅಧಿಕಾರಿಗಳ ಗಾಡಿಗೆ ಬೆಂಕಿ ಹಚ್ಚಿ ಕಾಡಿನೊಳಗೆ ರಾಜಾರೋಷವಾಗಿ ಬಂದು hunting ಮಾಡಿಕೊಂಡು ತೆಗೆದುಕೊಂಡು ಹೋಗುತ್ತಿದ್ದರು. ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಕೆಲವು ಅರ್ಜಿಗಳು ಗಡಿಪಾರು ಮಾಡುವುದಕ್ಕೆ ಇತ್ತು. Local Tahsildars ಏಕೆ ಇನ್ನೂ ಅವರಿಗೆ ಅನುಮತಿ ಕೊಟ್ಟಿಲ್ಲ? 2-3 ಜನರದ್ದು ಬಹಳ ದೊಡ್ಡ criminals ಅನ್ನು ಗಡಿಪಾರು ಮಾಡಬೇಕೆಂದು ಅರಣ್ಯ ಇಲಾಖೆಯವರಿಂದ ಮನವಿ ಬಂದಿತ್ತು. ಅವರನ್ನು Control ಮಾಡುವುದಕ್ಕೆ ಆಗುತ್ತಿರಲಿಲ್ಲ. ಈಗಲೂ ಸಹ control ಮಾಡುವುದಕ್ಕೆ ಆಗಿಲ್ಲ. Palar bridge ಕಡೆ. ಶ್ರೀ ಮಲೆ ಮಹದೇಶ್ವರನ ಬೆಟ್ಟದ ತುದಿಯಲ್ಲಿ ಆನೆ poaching ಮಾಡುತ್ತಾರೆ, ಎಲ್ಲಾ ತರಹದ poaching ಮಾಡುತ್ತಾರೆ. ತಹಶೀಲ್ದಾರ್‌ರವರು ಇನ್ನೂ ಏಕೆ ಅದರ ಮೇಲೆ ಕುಳಿತಿದ್ದಾರೆ? ಅವರಿಗೆ ಇನ್ನೂ ಏಕೆ ಅನುಮತಿ ಕೊಟ್ಟು ಹೊರಗಡೆ ಹಾಕಿಲ್ಲ? ನಾವು ಈ ತರಹದ ಘಟನೆಗಳ ಮೇಲೆ ಕ್ರಮಗಳನ್ನು ತೆಗೆದುಕೊಂಡಿದ್ದರೆ ಇವತ್ತು ಇಂತಹ ಸ್ಥಿತಿ ಬರುತ್ತಿರಲಿಲ್ಲ.

ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ, ಅವರಿಗೆಲ್ಲಾ 45 ರಿಂದ 50 ವರ್ಷಗಳ ವಯಸ್ಸು ಇರಬಹುದು. ಅದನ್ನು ಈಗ ಸರ್ಕಾರ ವಿಚಾರಣೆ ಮಾಡುತ್ತಿದೆ, ಅದು ನಡೆಯಲಿ. ಅವರು ತಪ್ಪಿತಸ್ಥರಾಗಿದ್ದರೆ ಅವರಿಗೆ ಸರ್ಕಾರ ಅಷ್ಟು ಪರಿಹಾರ ಕೊಡಲಿ, ನಾವು ಇಷ್ಟು ಪರಿಹಾರ ಕೊಡಲಿ ಎಂದು demand ಮಾಡುವುದಕ್ಕೆ ಆಗುವುದಿಲ್ಲ. If they are found to be innocent, Government should chip in. At the same time, ಅರಣ್ಯ ಇಲಾಖೆಯವರು ಏಕೆಂದರೆ, ಇಂತಹ ಕಡೆ, B.R. Hills ಪ್ರಾರಂಭವಾದರೆ, eastern ghats ಇರಬಹುದು, western ghats ಇರಬಹುದು, ಇವತ್ತು ನಾಗರಹೊಳೆಯಲ್ಲಿ 1,500 ಆನೆಗಳು ಇವೆ. ಇವತ್ತು ಕಬಿನಿಗೆ ಸ್ವಲ್ಪ ನೀರು ಬಂದಿದೆ. ಇಲ್ಲದಿದ್ದರೆ, ಇವತ್ತು ಒಂದೇ ಬಾರಿಗೆ 600 ರಿಂದ 700 ಆನೆಗಳನ್ನು ನೋಡಬಹುದಾಗಿತ್ತು. Territory ಏನಿತ್ತು, ಅದು tiger ದ್ದು ಇರಬಹುದು, ಇಲ್ಲವೆಂದರೆ, elephant ದ್ದು ಇರಬಹುದು, ಇದೆಲ್ಲಾ ಜಾಸ್ತಿಯಾಗಿದೆ. ಇವತ್ತು ಏನಾದರೂ ಬಂಡೀಪುರಕ್ಕೆ ಅಥವಾ

ನಾಗರಹೂಳೆಗೆ ಸಫಾರಿಗೆ ಹೋದರೆ, ಅರಣ್ಯ ಪ್ರದೇಶದ ಪಕ್ಕದಲ್ಲಿಯೇ ರೈತರು ಉಳುಮೆ ಮಾಡುತ್ತಿದ್ದಾರೆ. ಹತ್ತಾರು ಎಕರೆಗಳಲ್ಲಿ ವ್ಯವಸಾಯ ಮಾಡಿಕೊಂಡು fencing ಅನ್ನು ಪಕ್ಕದಲ್ಲಿಯೇ ಹಾಕಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ. ಅಂದರೆ, ಸಹಜವಾಗಿ ಒಂದೆರೆಡು ಹೆಜ್ಜೆಗಳನ್ನು ಇಟ್ಟರೆ habitation ಗೆ ಹೊರಟು ಹೋಗುತ್ತವೆ. ಇವತ್ತು ಆನೆ ಮತ್ತು ಹುಲಿಗಳ ಸಂಖ್ಯೆ ಜಾಸ್ತಿಯಾಗಿರುವುದರ ಜೊತೆಗೆ habitation...ಏಕೆಂದರೆ, ಅವುಗಳ territory ದಾಟಿಕೊಂಡು ಓಡಾಡುವುದಕ್ಕೆ ಪಕ್ಕದ ತೋಟಗಳಿಗೆ ಹೋಗುತ್ತಿವೆ. ಬಂಡೀಪುರದಲ್ಲಿ ಮಂಗಳ ಗ್ರಾಮ ಇರಬಹುದು, ಪಕ್ಕದ ಊರುಗಳು ಇರಬಹುದು, ಈ ಕಡೆ ವ್ಯವಸಾಯ ಮಾಡುವುದಕ್ಕೆ ಆಗುತ್ತಿಲ್ಲ. ಅಷ್ಟೊಂದು ಮಟ್ಟಕ್ಕೆ ಬರುತ್ತಿವೆ. ಅಲ್ಲಿ ಸರ್ಕಾರ trench ಗಳನ್ನು maintain ಮಾಡುತ್ತಿಲ್ಲ. ಅಲ್ಲಿ trench ಗಳನ್ನು ತೆಗೆಸಬೇಕಾಗುತ್ತದೆ. ಈ ಜನವರಿ-ಫೆಬ್ರವರಿ ತಿಂಗಳುಗಳಾದ ಮೇಲೆ ಬಹಳ ದೊಡ್ಡ challenge ಏನಾದರೂ ಇದ್ದರೆ, ಅದು ಮಾನ್ಯ ಸಚಿವರಾದ ಶ್ರೀ ರಾಮಲಿಂಗ ರೆಡ್ಡಿಯವರಿಗೆ ಮಾತ್ರ. ಏಕೆಂದರೆ, ಕಾಡಿನಲ್ಲಿ ನೀರು ಕಡಿಮೆಯಾಗುತ್ತದೆ. ಪ್ರಾಣಿಗಳಿಗೆ ತಿನ್ನುವುದಕ್ಕೆ ಮೇವು ಇರುವುದಿಲ್ಲ. ಆಗ ಪ್ರಾಣಿಗಳು ಕಾಡಿನಿಂದ ಹೊರಗಡೆ ಬರುತ್ತವೆ. ಆಗ ಇದು ಬಹಳ ದೊಡ್ಡ ಸಮಸ್ಯೆಯಾಗುತ್ತದೆ. ಅದಕ್ಕೆ ದಯಮಾಡಿ solar pump ಗಳನ್ನು ಹೆಚ್ಚಿಗೆ ಅಳವಡಿಸಿ ಪ್ರಾಣಿಗಳಿಗೆ ನೀರು ಮತ್ತು ಮೇವು ಸಿಗುವಂತೆ ಮಾಡಿದರೆ ಮಾತ್ರ ಇದನ್ನು control ಮಾಡುವುದಕ್ಕೆ ಆಗುತ್ತದೆ. ಇಲ್ಲವೆಂದರೆ, man-animal conflict ಮಿತಿಮೀರುತ್ತದೆ. ಹಾಗಾಗಿ, ಇವತ್ತು ಆಗಿರುವಂತಹ ಘಟನೆಯ ಬಗ್ಗೆ ಸರ್ಕಾರ ತನಿಖೆಗೆ ಆದೇಶ ಮಾಡಿದೆ. ಆ ವರದಿ ಬಂದ ಮೇಲೆ, if the Government is not convinced with the report, ಸರ್ಕಾರ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ಒಂದು ವೇಳೆ ಅಕಸ್ಮಾತ್ ಅವರು ಅಮಾಯಕರು ಇದ್ದರೆ, ಅವರಿಗೆ ಪರಿಹಾರ ಕೊಡಬೇಕಾಗುತ್ತದೆ. ಒಂದು ವೇಳೆ ಅವರು ಏನಾದರೂ culprits ಆಗಿದ್ದರೆ, ಸರ್ಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತದೆ. In case, Forest Department ನವರು ಏನಾದರೂ ಅದನ್ನು ಅವರ high handedness ತೋರಿಸಿ ಅಕಸ್ಮಾತ್ violations ಆಗಿದ್ದರೆ, ಅದು ತನಿಖೆಯಲ್ಲಿ ಗೊತ್ತಾಗುತ್ತದೆ. We are not I.O.s (Investigation Officers). ಹಾಗಾಗಿ, I do not want to get into any conclusion. My request is to ensure that the illegal weapons are withdrawn. ಏಕೆಂದರೆ, ಇವತ್ತು ಅವರು ಚಾಕು, ಮಚ್ಚು, ಗನ್, ಖಾರದ ಪುಡಿ ಮತ್ತು torch ತೆಗೆದುಕೊಂಡು ಹೋಗುತ್ತಾರೆಂದರೆ, ಇದು prima facie evidence is this ಎಂದು ಗೊತ್ತಾಗುತ್ತದೆ. ಆದರೆ, ಸರ್ಕಾರ ಅದನ್ನು ಏಕೆ raid ಮಾಡಿಲ್ಲ? ಅಲ್ಲಿ ಇವತ್ತು ನೂರಾರು ಜನರು ಗನ್‌ಗಳನ್ನು

ಇಟ್ಟುಕೊಂಡಿದ್ದಾರೆ. ಅವರು ಪರವಾನಗಿಯನ್ನು ಹೊಂದಿದ್ದರೆ ಅವರನ್ನು ಬಿಡಿ. ಪರವಾನಗಿ ಇಲ್ಲದವರು ಈ ರೀತಿಯ weapon ಗಳನ್ನು ಇಟ್ಟುಕೊಂಡಿದ್ದರೆ, ಈ ರೀತಿಯ ಘಟನೆಗಳಿಗೆ ಎಷ್ಟಕ್ಕೆ ಎಂದು ಉತ್ತರ ಹೇಳುವುದಕ್ಕೆ ಆಗುತ್ತದೆ? ಹಾಗಾಗಿ, ಸರ್ಕಾರ ಕಾಡಿನೊಳಗೆ ದನ ಕರುಗಳನ್ನು ಮೇಯಿಸುವುದಕ್ಕೆ ಕೊಟ್ಟಿರುವಂತಹ ಅವಕಾಶವನ್ನು ಮುಂದುವರೆಸಬೇಕು. ಇದನ್ನು ಯಾವುದೇ ಕಾರಣಕ್ಕೂ ಸರ್ಕಾರ ban ಮಾಡಬಾರದು. ಏಕೆಂದರೆ, ಅಲ್ಲಿನ ಸಾವಿರಾರು ಜನರು ಆಕಳುಗಳನ್ನು ನಂಬಿ ಬದುಕುತ್ತಿರುವುದರಿಂದ ಇದರ ಬಗ್ಗೆ ಸರ್ಕಾರ ಕ್ರಮವಹಿಸಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ಈಗ ಬಂದಿರುವಂತಹ post mortem report ಬಗ್ಗೆ disclose ಮಾಡುವುದಕ್ಕೆ ಆಗದಿದ್ದರೂ ಸಹ, ಈಗ further investigations ಆಗುತ್ತಿವೆ ಎಂದು ಕೆಲವು ಮಾಹಿತಿಗಳನ್ನು ಹೇಳುವುದಕ್ಕೆ ಆಗಲಿಲ್ಲ. ನಾನು ಅಧಿಕಾರಿಗಳನ್ನು ಕೇಳಿದಾಗ ಅವರು ತನಿಖೆ ಆಗುತ್ತಿದೆ ಎಂದು ಹೇಳಿದರು. ಹಾಗಾಗಿ, ಯಾವುದೇ ತರಹದ protection, ಯಾರನ್ನೂ ಸಹ ನಾವು shield ಮಾಡದೆ ಒಂದು ನ್ಯಾಯಯುತವಾದ ತೀರ್ಮಾನಕ್ಕೆ ಸರ್ಕಾರ ಬರಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳು. ಮಾನ್ಯ ಅರಣ್ಯ ಸಚಿವರು ವರದಿಯನ್ನು ಕೈಯಲ್ಲಿಟ್ಟುಕೊಂಡು ಅವರಿಗೆ ಬಂದಂತಹ ಮಾಹಿತಿಯನ್ನು ಆಧರಿಸಿ ಇವತ್ತು ಸದನದ ಮುಂದೆ ವಿಷಯವನ್ನು ಮಂಡಿಸಿದ್ದಾರೆ. ಇದು ಸರ್ಕಾರಕ್ಕೂ ಗೊತ್ತಿದೆ. ನಾನು ಗೊತ್ತಿಲ್ಲವೆಂದು ಹೇಳುವುದಿಲ್ಲ. ಈ ವಿಚಾರದಲ್ಲಿ, in the interest of Society, in the interest of the State, ನಿರ್ದಾಕ್ಷಿಣ್ಯ ಕ್ರಮ ಮಾಡಲೇಬೇಕಾದದ್ದು ಮೇಲ್ನೋಟಕ್ಕೆ ಎದ್ದು ಕಾಣುತ್ತದೆ. ಈ story built up, ಬರೆದಿರುವಂತಹ ಒಕ್ಕಣೆಗಳನ್ನು ನೋಡಿದರೆ, ನಾವು ಯಾರು ಇಲ್ಲಿಗೆ ಕಿವಿಗೆ ಹೂವನ್ನು ಮುಡಿದುಕೊಂಡು ಬಂದಿಲ್ಲ. ಈ ರೀತಿ justification ಕೊಡುವಂತಹದ್ದು, ಅದನ್ನು justify ಮಾಡುವಂತಹದ್ದು, ನನ್ನ ವೈಯಕ್ತಿಕ ವಿಚಾರದಲ್ಲಿ ಮಾನ್ಯ ಸಚಿವರಂತಹ ಅನುಭವಿ ರಾಜಕಾರಣಿಗಳಿಗೆ, ಆಗಾದವಾದಂತಹ ರಾಜಕಾರಣಿಗಳಿಗೆ, ಸಮಾಜದ ಮುಖ್ಯವಾಹಿನಿಯಲ್ಲಿ ಕೆಲಸ ಮಾಡುವಂತಹವರು ಇಂತಹ ವರದಿಯನ್ನು ಅಧಿಕಾರಿಗಳು ಬರೆದುಕೊಟ್ಟಾಗ forthwith ಅದನ್ನು ಓದಬಾರದಿತ್ತು ಎಂದು ನನಗೆ ಅನಿಸುತ್ತದೆ. ಏಕೆಂದರೆ, ಮಾನ್ಯ ಸಚಿವರು ಸಮಾಜದ ಮುಖ್ಯವಾಹಿನಿಯಲ್ಲಿ ಕೆಲಸ ಮಾಡುವಂತಹ ಸಂದರ್ಭದಲ್ಲಿ ರಾಜಕೀಯ ಕ್ಷೇತ್ರ ಇರಬಹುದು ಅಥವಾ ಇತರೆ ಎಲ್ಲಾ ಕ್ಷೇತ್ರದಲ್ಲಿ ಆಗಾದವಾದಂತಹ ಅನುಭವ ಇದೆ. ಈ ವರದಿಯಲ್ಲಿ ಏನು ಹೇಳಿರುತ್ತಾರೆ ಎಂಬುದನ್ನು ನೋಡಿ.

(ಮುಂದು)

**(719) 17.08.2026/3.30/ಎಂವಿ-ಕೆಎಸ್** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) (ಮುಂದು):**

ಈಗ 8.00 ಗಂಟೆಗೆ ವಿಷಯ ಗೊತ್ತಾಯಿತು ಎಂದು ಹೇಳುತ್ತಾರೆ. 8.00 ಗಂಟೆಗೆ ವಿಷಯ ಗೊತ್ತಾದ ಮೇಲೆ ಅಲ್ಲಿಗೆ ಒಬ್ಬರಲ್ಲ, ಇಬ್ಬರಲ್ಲ, ಸುಮಾರು 10 ಜನ ಸಿಬ್ಬಂದಿಗಳು ಹೋಗಿದ್ದಾರೆ. ನಾವು ಎತ್ತರವಾದ ಪ್ರದೇಶದಿಂದ ನೋಡಿದೆವು. ಯಾವುದೇ ಬ್ಯಾಟರಿ ಬೆಳಕು ಕಾಣಲಿಲ್ಲವೆಂದು ಹೇಳುತ್ತಾರೆ. ಬೆಳಗ್ಗೆ 5.00 ಗಂಟೆಗೆ ಬ್ಯಾಟರಿ ಬೆಳಕು ಗೋಚರಿಸಿತು. ಆಗ immediately, we rushed to the spot. ಆಗ spot ಗೆ ಹೋದಾಗ ಏನು ಮಾಡಿದರು? ಇದನ್ನು ಅಧಿಕಾರಿಗಳೇ ಬರೆದಿರುವುದು. We requested, ಈಗ requested ಎಂದರೆ ಕೂದಲಿನ ಅಂತರದಲ್ಲಿ ನಾವು ಮತ್ತು ಇವರು ಹತ್ತಿರದಲ್ಲಿ ಇದ್ದೇವೆಂದು ಅರ್ಥವಲ್ಲವೇ? ಇವರು 10 ಜನ ಸಿಬ್ಬಂದಿ ಇದ್ದಾರೆ. ಇವರು ಅವರಿಗೆ surrender ಆಗಿ ಎಂದು request ಮಾಡುತ್ತಿದ್ದೇವೆಂದು ಹೇಳಿದರೆ, ಅವರು ಮಾತನಾಡುವುದು ಇವರಿಗೆ ಕೇಳುತ್ತದೆ, ಇವರು ಮಾತನಾಡುವುದು ಅವರಿಗೆ ಕೇಳುತ್ತದೆ. ಅಂತಹ ಒಂದು ಸಂದರ್ಭವಿದ್ದಾಗ, can you make use of this type of weapon? ಅವರಿಗೆ ಬುಲೆಟ್ ಹೊಡೆಯುವಂತಹ ಸಂದರ್ಭ ಉದ್ಭವಿಸುತ್ತಿತ್ತೆ ಎನ್ನುವುದನ್ನು ದಯವಿಟ್ಟು ಮಾನ್ಯ ಸಚಿವರು ಆಲೋಚನೆ ಮಾಡಬೇಕಾಗುತ್ತದೆ. ಇವರು request ಮಾಡಿದ್ದಾರೆ, ಆದರೆ ಅವರು ಕೇಳಿಲ್ಲ. ಈಗ ಸಿಬ್ಬಂದಿಯ ಬಳಿ wireless, ಮತ್ತೊಂದು ಇತ್ತು. ಇನ್ನೊಂದಷ್ಟು ಬೆನ್ನು ಹತ್ತಿ ಅವರನ್ನು ಹಾಗೆಯೇ ಜೀವಸಹಿತ ಹಿಡಿಯಬಹುದಿತ್ತು. ಅಂದರೆ, moreover this is very adjacent to all villages. As hon'ble member Sri Shivakumar K. spoke just now. Adjacent villagers ಬಂದಿದ್ದಾರೆಂದು. ಅವರಿಗೆ ಯಾರು culprits' ಎಂದು ಗೊತ್ತಿದೆ. ಇಷ್ಟು ದಿನವಾಗಿದ್ದರೂ ಸಹ ಆ ಮಾಂಸ ಯಾವ ಪ್ರಾಣಿಗೆ ಸೇರಿದ್ದು ಎಂದು ಹೇಳುವುದಕ್ಕೆ ಅರಣ್ಯ ಇಲಾಖೆಯವರು ಅಷ್ಟು inability ಇದ್ದಾರೆಯೇ? ಅವರಿಗೆ ಅಷ್ಟು knowledge ಇಲ್ಲವೇ? ನಾನು ಮಲೆನಾಡಿನಲ್ಲಿ ಜೀವನ ಮಾಡಿದ್ದೇನೆ. ನನಗೆ ಕಾಡುಕುರಿ ಮಾಂಸ ಯಾವುದು? ಜಿಂಕೆ ಮಾಂಸ ಯಾವುದು? ಮತ್ತು ಹಂದಿ ಮಾಂಸ ಯಾವುದೆಂದು ಬೇಕಾದರೆ ಹೇಳುತ್ತೇನೆ. ಅದನ್ನು ನನಗೆ ತೋರಿಸಿದರೆ ಹೇಳುತ್ತೇನೆ. ಸ್ವಾಮಿ, ಇಂತಹ culprits' ಹಿಡಿದಾಗ ನಾನು lawyer ಆಗಿ ಕೆಲಸ ಮಾಡಿದ್ದೇನೆ. ಆಗ ನಾನು ಅದನ್ನು identify ಮಾಡಿದ್ದೇನೆ. ಆದರೆ, ಇಷ್ಟು experience ಇರುವಂತಹ ಅಧಿಕಾರಿಗಳಿಗೆ ಅದು ಯಾವ ಪ್ರಾಣಿ ಮಾಂಸವೆಂದು ಇವತ್ತಿನವರೆಗೆ ಹೇಳುವುದಕ್ಕೆ ಆಗಿಲ್ಲ. ಆಯಿತು, ಮಾಂಸ

ಕಡಿದಿದ್ದಾರೆ ಮತ್ತು ಇಷ್ಟು ಸಿಬ್ಬಂದಿ ಇದ್ದಾರೆ, ಇಷ್ಟೊಂದು ಜನ men ಇದ್ದರಲ್ಲ, forthwith ಆ ಜಾಗದ surrounding ನಲ್ಲಿ ಆ incident ಆಯಿತು ಅಲ್ಲಿನ ಪೊದೆಗಳಲ್ಲಿ ಸುತ್ತಮುತ್ತ ಹುಡುಕಿದರೆ, ಇಂತಹ ಪ್ರಾಣಿ ಎಂದು ಹೇಳುವುದಕ್ಕೆ ಆ ಪ್ರಾಣಿಯ ಚರ್ಮ ಸಿಗುತ್ತಿರಲಿಲ್ಲವೇ? ಅದರ ಕುತ್ತಿಗೆ ಸಿಗುತ್ತಿರಲಿಲ್ಲವೇ? ಅದರ ಕಾಲು ಸಿಗುತ್ತಿರಲಿಲ್ಲವೇ? ಆದುದರಿಂದ, ಇದರಲ್ಲಿ clear ಆಗಿ ಹೇಳುತ್ತದೆ, ಯಾವುದೋ ಮಾಂಸವನ್ನು ತುಂಬಿ, ಎರಡು ಚೀಲದಲ್ಲಿ ಹೊತ್ತುಕೊಂಡು ಬಂದು ಈ ರೀತಿ ಹೇಳುವುದಕ್ಕೆ ಅಧಿಕಾರಿಗಳಿಗೆ ನಾಚಿಕೆಯಾಗುವುದಿಲ್ಲವೇ? ಅವರು ಸರ್ಕಾರಕ್ಕೆ ಕಪ್ಪು ಮಸಿ ಬಳಿಯುತ್ತಿದ್ದಾರೆ. ಇದರಿಂದ ಸರ್ಕಾರಕ್ಕೆ ಕಪ್ಪು ಮಸಿ ಬರಬಾರದು. Human life is very important. ಹಳ್ಳಿಯ ಜನರು ಅಮಾಯಕರು. ಅವರು ಒಂದು ಶಿಕಾರಿಗೆ ಹೋಗಿದ್ದಾರೆ ಬಿಡಿ. ಕೆಲವೊಂದು ಸಾರಿ ಏನಾಗುತ್ತದೆಂದರೆ, ಬೆಳೆ ನಾಶವಾಗುತ್ತದೆಂದು ಹಂದಿಗಳನ್ನು ಹೊಡೆದಿರುವುದು ಉಂಟು. ಆ ರೀತಿ ಬೇಕಾದಷ್ಟು ಆಗಿದೆ. ಈಗ ಹಂದಿ ಹೊಡೆದರೆ ಅದನ್ನು ಅಲ್ಲಿಯೇ ಹೂಳುವುದು ಎಂದು ಇದೆ. ಅದನ್ನು ಅಲ್ಲಿಯೇ ಸುಡಬೇಕೆಂದು ಇದೆ. ಇದನ್ನು ತೆಗೆದುಕೊಂಡು ಹೋದರೆ ಉಪಯೋಗವಿಲ್ಲವೆಂದು ಸರ್ಕಾರದ ಕಾನೂನು ಇದೆ. ನಾನು ಇಷ್ಟನ್ನು ಏಕೆ ಹೇಳುತ್ತೇನೆಂದರೆ, ಆ ಅಮಾಯಕರ ಇಡೀ ಕುಟುಂಬ ಅನಾಥವಾಗಿರುವಂತಹ ಸಂದರ್ಭದಲ್ಲಿ ಇವತ್ತು ಆ ಕುಟುಂಬದ ರಕ್ಷಣೆಗೆ ಯಾರು ಬರಬೇಕು ಸ್ವಾಮಿ? ಇಂತಹ ಮುಠ್ಠಾಳ ಅಧಿಕಾರಿಗಳು ಸರ್ಕಾರದಲ್ಲಿ ಇದ್ದರೇನು ಬಿಟ್ಟರೇನು! ಮಾನವ ಜನ್ಮವನ್ನು ಬಲಿ ತೆಗೆದುಕೊಳ್ಳುವಂತಹ ಅಧಿಕಾರಿಗಳು ಬೇಕೇ? ಅಲ್ಲಿ ಒಬ್ಬರಲ್ಲ, ಇಬ್ಬರಲ್ಲ, 10 ಜನ ಅಧಿಕಾರಿಗಳು ಇದ್ದಾರೆ. ಎತ್ತರದ ಪ್ರದೇಶದಲ್ಲಿ ಇದ್ದರಂತೆ. ಇದನ್ನು ಕೊಡುವುದಕ್ಕೆ ಇದೇನು court evidence? ಅವರು ಈ ರೀತಿ ಹೇಳುವುದಕ್ಕೆ ಅವರಿಗೆ ಮಾನ ಮರ್ಯಾದೆ ಇಲ್ಲವೇ? ಎತ್ತರ ಪ್ರದೇಶದಲ್ಲಿ ಅವರಿಗೆ ಎಲ್ಲೆಲ್ಲಿ ಬೇಕೋ ಅಲ್ಲಿ ಗುಂಡು ಹಾರಿಸಿದರು, ಅದಕ್ಕೋಸ್ಕರ ಇದು ಆಗಿದೆ. ಆಯಿತು, is there any small injury to your officers? Then? Show me a single injury sustained by your officers. ಅಲ್ಲಿ ಅಷ್ಟೊಂದು ಗುಂಡಿನ ದಾಳಿ ಆಗಬೇಕಾದರೆ ಮತ್ತು 10 ಜನ ಅಧಿಕಾರಿಗಳು ಗುಂಪಿನಲ್ಲಿ ಇರಬೇಕಾದರೆ ಎದುರಾಳಿಗಳಿಗೆ ಗುಂಡು ಬೀಳುವುದಿಲ್ಲವೇ? ಅಲ್ಲಿ ಯಾರು ಕಳ್ಳಕೋವಿಗಳನ್ನು ಇಟ್ಟುಕೊಂಡಿದ್ದಾರೆ, ಅವರದ್ದು ಚರಕೋವಿಗಳು. ಆದರೆ, ಇವರದ್ದು original ಗುಂಡಿನ ಕೋವಿ. ಅಧಿಕಾರಿಗಳು ಆ ಚರಕೋವಿಗಳನ್ನು ಉಪಯೋಗ ಮಾಡುವುದಿಲ್ಲ. ಇವರ ಬಳಿ bullet ಇರುವುದೇ ಇರುತ್ತದೆ. ಈ ಚರಕೋವಿ ಹಕ್ಕಿ, ಪಕ್ಷಿ ಮತ್ತು ಸಣ್ಣಪುಟ್ಟ ಪ್ರಾಣಿಗಳನ್ನು ಹೊಡೆಯುವುದಕ್ಕೆ ಇರುವುದು. ಆ ಚರಕೋವಿ distribution ಆದರೆ ಇನ್ನು ಹೆಚ್ಚಿನ 30 ರಿಂದ 40 ಅಡಿ distribution ಆಗುತ್ತದೆ. ಅದು 30 ರಿಂದ 40 ಅಡಿ distribution ಆಗಬೇಕಾದರೆ 10 ಜನ

ಅಧಿಕಾರಿಗಳಲ್ಲಿ ಒಬ್ಬರಿಗಾದರೂ ಗುಂಡು ಬೀಳಬೇಕಲ್ಲವೇ? In anticipation ಹೊಡೆದರು. ಆದರೆ, ಅದನ್ನು ತಮ್ಮ ಪ್ರಾಣ ರಕ್ಷಣೆಗೆ ಹೊಡೆದೆವು ಎಂದು ಬರೆದುಬಿಟ್ಟಿದ್ದಾರೆ. Already, you (Government) have given verdict. ಇದರಲ್ಲಿ ಏನು ಹೇಳದ್ದಾರೆಂದರೆ, ಅಧಿಕಾರಿಗಳದ್ದು ಏನೂ ತಪ್ಪಿಲ್ಲ. ಹಾಗಾದರೆ, ಮತ್ಯಾಕೆ ನಂಬಿಸುವುದಕ್ಕೆ enquiry ಮಾಡುವುದು. ಅವರು ಇಲ್ಲ ಏನು enquiry ಮಾಡುತ್ತಾರೆ ಸ್ವಾಮಿ. ತಮ್ಮನ್ನು ರಕ್ಷಿಸಿಕೊಳ್ಳಲು ಪ್ರತಿದಾಳಿ ನಡೆಸಿರುತ್ತಾರೆಯೇ ಹೊರತು ಉದ್ದೇಶಪೂರ್ವಕವಾಗಿ ತಾವಾಗಿಯೇ ಅವರ ಮೇಲೆ ದಾಳಿ ನಡೆಸಿರುವುದಿಲ್ಲವೆಂದು ಈ ರೀತಿ ವರದಿ ಕೊಟ್ಟ ಮೇಲೆ, ಜನರಿಗೆ ಇನ್ನೆಲ್ಲಿ ನ್ಯಾಯ ಸಿಗುತ್ತದೆ. ಅರಣ್ಯದ ಅಕ್ಕ-ಪಕ್ಕದ ಜನರು ಯಾವ ಧೈರ್ಯದ ಮೇಲೆ ಅರಣ್ಯದೊಳಗೆ ಹೋಗುತ್ತಾರೆ. ಅವರು ಹೊಂಗೆಕಾಯಿ ಬೀಜ, ಬೇವಿನ ಬೀಜ ಆಯುವುದಕ್ಕೆ ಹೋಗುತ್ತಾರೆ. ಅರಣ್ಯದ ಉತ್ಪನ್ನಗಳನ್ನು ತೆಗೆದುಕೊಂಡು ಅದರಿಂದ ಜೀವನ ಮಾಡುವಂತಹ ಲಕ್ಷಾಂತರ ಮಂದಿ ಬಡವರು ಇದ್ದಾರೆ. ನಾಳೆ ಬೆಳಗ್ಗೆ ಆ ಬಡವರ ರಕ್ಷಣೆ ಹೇಗೆ? Forthwith, ಅವರಿಗೆ B.N.S. (Bharatiya Nyaya Sanhita) Section 103 ಅಡಿ ಕೇಸ್ ಹಾಕಿ ಎಫ್.ಐ.ಆರ್. ಹಾಕಿದ್ದಾರೆ. ಅವರು ಏನು ಮಾಡಿದ್ದಾರೆಂದು ಹೇಳುವುದಕ್ಕೆ ಇಷ್ಟು ದಿವಸ ಬೇಕೇ? Forthwith, whoever they may be, ಆ ಅಧಿಕಾರಿಗಳನ್ನು ಅರೆಸ್ಟ್ ಮಾಡಿ ಜೈಲಿಗೆ ಕಳುಹಿಸಬೇಕು, ಇಷ್ಟೊಂದು ಜನ ಅಧಿಕಾರಿಗಳು ಅವರಿಗೆ ಗುಂಡು ಹಾರಿಸುವುದಕ್ಕೆ ಹೊರಟಿದ್ದಾರೆ. ಹಾಗಾದರೆ, ಇವತ್ತು ಮಾನವ ಜನ್ಮಕ್ಕೆ ಬೆಲೆ ಇಲ್ಲವೇ? ಹಳ್ಳಿಗಾಡಿನ ರೈತರ ಬದುಕಿಗೆ ಬೆಲೆ ಇಲ್ಲವೇ? ಅವರು ದನ ಕುರಿಗಳನ್ನು ಕಟ್ಟಿಕೊಂಡು ಕಾಡಿನಲ್ಲಿ ಓಡಾಡದೆ ಅವರು ಮತ್ತೆಲ್ಲಿ ಓಡಾಡಬೇಕು. ಸಾವಿರಾರು ಹಳ್ಳಿಗಳು wildlife ಗೆ adjacent villages ಗಳಾಗಿವೆ. ಭದ್ರಾ ಅಭಯಾರಣ್ಯಕ್ಕೆ ಬಂದು ನೋಡಿ. ಅವರು forest ಗೆ adjacent ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಕಾಡಿನ ಒಳಗೆ ಮನೆ ಇದೆ. ಅಂತಹವರು ಏನು ಮಾಡಬೇಕು? ಈಗ ಯಾರ ಬಳಿ ತೋಟ ಇರುತ್ತದೆ ಅಂತಹವರು license ಕೋವಿಯನ್ನು ತಮ್ಮ ಹೆಗಲ ಮೇಲೆ ಇಟ್ಟುಕೊಂಡೇ ಹೋಗುತ್ತಾರೆ. ಅಂದರೆ, ಚಿಕ್ಕಮಗಳೂರು, ಮೂಡಿಗೆರೆ ಮತ್ತು ಶಿವಮೊಗ್ಗಗಳಲ್ಲಿ ಕೋವಿಗಳನ್ನು ಹೆಗಲ ಮೇಲೆ ಇಟ್ಟುಕೊಂಡು ಹೋಗುತ್ತಾರೆ. ಅಧಿಕಾರಿಗಳು ಇದನ್ನು granted ಎಂದು ತೆಗೆದುಕೊಂಡರೆ ನಾಳೆ ಬೆಳಗ್ಗೆ ಯಾವ ರೈತರೂ ಕೂಡ ಧೈರ್ಯದಲ್ಲಿ ಅವರ ತೋಟಕ್ಕೆ ಹೋಗುವುದಕ್ಕೆ ಕಷ್ಟವಿದೆ. ದಯಮಾಡಿ ನಾನು ಈ ವಿಚಾರವನ್ನು ನೊಂದುಕೊಂಡು ಹೇಳುತ್ತಿದ್ದೇನೆ. ನಿರ್ದಾಕ್ಷಿಣ್ಯವಾಗಿ ಅವರು ಮಾಡಿರುವಂಥದ್ದು ಘೋರ ಅಪರಾಧ. ಅದು intentional murder. ಅವರು ವಿರುದ್ಧ murder case ಹಾಕಿ, ಅವರನ್ನು arrest ಮಾಡದೇ ಇದ್ದರೆ, ಈ ನಾಡಿನ ಜನರಿಗೆ ನ್ಯಾಯ ಕೊಟ್ಟಂತೆ ಆಗುವುದಿಲ್ಲ. ದಯಮಾಡಿ ಇವರು ಏನಾದರೂ ಇದನ್ನು granted

ಎಂದು ತೆಗೆದುಕೊಂಡರೆ, ಈ ನಾಡಿನಲ್ಲಿ ನಮ್ಮ ಯಾವ ರೈತರು ಜೀವನ ಮಾಡುವುದಕ್ಕೆ ಸಾಧ್ಯವಿಲ್ಲ. ಅರಣ್ಯ ಮತ್ತು ಅಲ್ಲಿರುವಂತಹ ರೈತರಿಗೂ ಅವಿನಾಭಾವ ಸಂಬಂಧವಿದೆ. ಅವರು ಆ ಸಂಬಂಧಕ್ಕೆ ಹೊಂದಿಕೊಂಡಿರುತ್ತಾರೆ. ಇವತ್ತು ಆ ಮೂರು ಜನ ಅಮಾಯಕರನ್ನು ಬಲಿ ತೆಗೆದುಕೊಂಡಂತಹ ಸಂದರ್ಭದಲ್ಲಿ, ಈ ಜನರ ರಕ್ಷಣೆಗೆ ಬಾರದೇ ಇದ್ದರೆ, ಈ ಸರ್ಕಾರದಲ್ಲಿ ಅಂತಹ ಘನ-ಘೋರ ಅಪರಾಧ ಮಾಡಿರತಕ್ಕಂತಹ ಮುತ್ಠಾಳ ಅಧಿಕಾರಿಗಳನ್ನು ರಕ್ಷಣೆ ಮಾಡಿದರೆ, ನಾಡಿನ ಜನತೆಗೆ ದ್ರೋಹ ಮಾಡಿದಂತೆ ಆಗುತ್ತದೆ. ಬೇರೆ ವಿಚಾರವನ್ನು ಬಿಟ್ಟು, ಈ ಅಮಾಯಕರ ರಕ್ಷಣೆಗೆ ಬರಲೇಬೇಕು. ಅವರು ತುಂಬಾ ಬರೆದಿದ್ದಾರೆ, ಅದನ್ನೆಲ್ಲಾ ಹೇಳುವುದಕ್ಕೆ ಹೊರಟರೆ, it is the matter of evidence. ಆ evidence ನಲ್ಲಿ, already you have come to a conclusion. ನನಗೆ ಇದು ಬಹಳ ಬೇಜಾರಿದೆ. ಇದರಿಂದ ತುಂಬಾ ಬೇಜಾರಿದೆ. ಅವರು ಈಗಾಗಲೇ conclusion ಗೆ ಬಂದು ಬಿಟ್ಟಿದ್ದಾರೆ. ನಾವು ಇನ್ನು ಏನು ನ್ಯಾಯ ಕೇಳುವುದಕ್ಕೆ ಆಗುತ್ತದೆ? ಈ ಸರ್ಕಾರದಿಂದ ಹೇಗೆ ನ್ಯಾಯ ಸರಿಪಡಿಸುತ್ತಾರೆಂದು ಹೇಳಲಿ. Already, the Government has given the verdict. ಆತ್ಮರಕ್ಷಣೆಗೋಸ್ಕರ ಗುಂಡು ಹೊಡೆದಿದ್ದಾರೆಂದರೆ, ಯಾವ ರೀತಿಯ ಆತ್ಮರಕ್ಷಣೆ? ಇದು ಯಾವ ರೀತಿಯ ಆತ್ಮರಕ್ಷಣೆ ಎಂದು ಹೇಳಲಿ. ಅವರು ಏನು ಅಪರಾಧ ಮಾಡಿದ್ದರು? After all, ಆ ಮಾಂಸಕ್ಕೆ ಸಂಬಂಧಪಟ್ಟಂತೆ ಯಾವ ಪ್ರಾಣಿಯದ್ದು ಎಂದು ಹೇಳಿಲ್ಲ. ಈ ಪುರಾವೆಗಳನ್ನು ಇಟ್ಟುಕೊಂಡು ಅವರು ಶಿಕಾರಿ ಮಾಡಿದರು ಎಂದು ಹೇಳುವುದಕ್ಕೆ ಯಾವುದೇ ಪುರಾವೆ ಕೂಡ ಇಲ್ಲ. ಈಗ ಪಾತ್ರೆ ಪಗಡೆ ತೆಗೆದುಕೊಂಡು ಶಿಕಾರಿ ಮಾಡುವಂತಹವರು ಯಾವ ರೀತಿ ಹೋಗುತ್ತಾರೆಂದು ಅಧಿಕಾರಿಗಳಿಗೆ ಗೊತ್ತಿದೆ. ಅವರು ರಾತ್ರಿ ಶಿಕಾರಿ ಹೋದರೆ, ಅವರ ಜೊತೆ ಇಬ್ಬರು ಅಡುಗೆ ಮಾಡುವುದಕ್ಕೆ ಹೋಗುತ್ತಾರೆ. ಮತ್ತೊಂದು ನಾಲ್ಕು ಜನರು ಶಿಕಾರಿಗೆ ಹೋಗುತ್ತಾರೆ. ಅವರು ಅಡುಗೆ ಮಾಡುವ ಜಾಗ ಬೇರೆ ಮತ್ತೆ ಶಿಕಾರಿ ಮಾಡುವ ಜಾಗವೇ ಬೇರೆ. ಅವರು ಅಲ್ಲಿ ಅಡುಗೆ ಮಾಡಿ, ಊಟ ಮಾಡಿ, ಏನಾದರೂ ಶಿಕಾರಿಯಾದರೆ ಅದನ್ನು ತೆಗೆದುಕೊಂಡು ಬರುತ್ತಾರೆ. ಆ ರೀತಿ ಬೇಕಾದಷ್ಟು ಆಗಿದೆ. ಅದಕ್ಕೆ ಏನು ಶಿಕ್ಷೆ ಕೊಡಬೇಕೋ, ಆ ರೀತಿಯ ಶಿಕ್ಷೆಯನ್ನು ಕೊಡಲಿ. ಆ ಊರಿಗೆ ಏನೇನು ಬಂದೋಬಸ್ತ್ ಮಾಡಬೇಕು ಮತ್ತು ಅಲ್ಲಿರುವಂತಹ unlicensed ನಾಡ ಕೋವಿಗಳನ್ನು seize ಮಾಡಲಿ. ಮತ್ತೆ strict ಮಾಡಲಿ. ನಾವು ಅದರ ಬಗ್ಗೆ ಬೇಡವೆಂದು ಹೇಳುವುದಿಲ್ಲ. ಆದರೆ, ಈ ಅಮಾಯಕರ ಜೀವ ತೆಗೆದಿದ್ದಾರೆ. ಆದರೆ, ಜೀವವನ್ನು ವಾಪಸ್ಸು ಕೊಡುವುದಕ್ಕೆ ಸಾಧ್ಯವೇ ಇಲ್ಲ. ಅವರು ಒಂದು ಕೋಟಿ ರೂಪಾಯಿಗಳ ಪರಿಹಾರ ಕೊಟ್ಟರೂ ಆ ಮನೆಗಳಿಗೆ ನ್ಯಾಯ ಕೊಡುವುದಕ್ಕೆ ಸಾಧ್ಯವೇ ಇಲ್ಲ. ಇವತ್ತು ಇದು take it for granted. ಎಂದು ಅಧಿಕಾರಿಗಳಿಗೆ ಆಗಬಾರದು. ದಯಮಾಡಿ ಇದಕ್ಕೆ ಮುನ್ನುಡಿ

ಬರೆಯಲೇಬೇಕು. ಇದಕ್ಕೆ ಮುನ್ನುಡಿ ಬರೆಯದೇ ಇದ್ದರೆ ಸರ್ಕಾರ inefficient ಎಂದು ಹೇಳಬೇಕಾಗುತ್ತದೆ. ದಯಮಾಡಿ ಕ್ಷಮಿಸಿ. ಯಾವುದೇ ಕಾರಣಕ್ಕೂ ಸಹ ಇಂತಹ ಅಧಿಕಾರಿಗಳನ್ನು ಕ್ಷಮಿಸಬೇಡಿ. Forthwith, ಅವರಿಗೆ B.N.S. Section 103 ಅಡಿ ಕೇಸ್ ಹಾಕಿ ಹಾಗೂ ಏನು action ಆಗಿದೆ, ಅದರ ಪ್ರಕಾರ ಎಲ್ಲಾ ಅಧಿಕಾರಿಗಳ ಮೇಲೆ murder case ಅನ್ನೇ ಹಾಕಬೇಕು. ಅದು ಯಾವುದೇ ಅಧಿಕಾರಿಗಳು ಇರಲಿ. ಅವರನ್ನು ಕೂಡಲೇ ಜೈಲಿಗೆ ಕಳುಹಿಸುವಂತಹ ಕೆಲಸ ಮಾಡಿದರೆ ಮಾತ್ರ ಇಡೀ ನಾಡಿನ ಜನರಿಗೆ ನ್ಯಾಯ ಕೊಟ್ಟಂತೆ ಆಗುತ್ತದೆ. ಕಾಡಿನ ಇಕ್ಕೆಲಗಳಲ್ಲಿ ಯಾರ್‍ಯಾರು ರೈತರು ತಿರುಗಾಡುತ್ತಾರೆ ಮತ್ತು ಜೀವನ ಮಾಡುತ್ತಿದ್ದಾರೆ ಮತ್ತು ಕಾಡಿನ ನಡುವೆ ಅವಿನಾಭಾವ ಸಂಬಂಧ ಇಟ್ಟುಕೊಂಡಿದ್ದಾರೆ, ಆ ಸಂಬಂಧಕ್ಕೊಂದು ಬೆಲೆ ಕೊಟ್ಟಂತೆ ಆಗುತ್ತದೆ. ಅವರು ಧೈರ್ಯದಲ್ಲಿ ಮುಂದೆ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಯಾರೂ ಕೂಡ ಇಂತಹ intentional murder ಅನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಇದು intentional murder. ಇದನ್ನು forthwith ಕೆಲಸ ಮಾಡಬೇಕಾಗುತ್ತದೆ.

**(ಮುಂದು)**

(720) 17.08.2026 ವೈಎಲ್-ಎಂಡಿ 3.40 (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಒಂದೆರಡೂ-ಮೂರು ಅಂಶಗಳನ್ನು ವಿಶೇಷವಾಗಿ ಗಮನಿಸಬೇಕಾಗಿದೆ. ರಾತ್ರಿ 8.00 ಗಂಟೆಗೆ ಇಲಾಖಾ ಸಿಬ್ಬಂದಿಗಳಿಗೆ ವಿಚಾರ ಗೊತ್ತಾದ ನಂತರ ರಾತ್ರಿ ಇಡೀ ಅವರು ಸುತ್ತಾಡುತ್ತಿದ್ದು, ಒಂದು pellet ಗೆ ವ್ಯಕ್ತಿ ಸಾಯುವುದಿಲ್ಲ. ಹಾಗೆಯೇ slide-action gun ಉಪಯೋಗ ಮಾಡಲಿಕ್ಕೆ ಆ ಅರಣ್ಯ ಸಿಬ್ಬಂದಿಗಳಿಗೆ authority ಇದೆಯೇ? ಗುಂಪು ಮರ್ಡರ್ ಮಾಡಲಿಕ್ಕೆ ಅವಕಾಶ ಇದೆಯೇ? Secondly, self-defense ಎನ್ನುವ ವ್ಯವಸ್ಥೆಯಲ್ಲಿ ಪೂರಕವಾಗಿರಬೇಕು. `For every action, there is an equal and opposite reaction' ಎಂದು ಹೇಳುತ್ತಾರೆ. Criminal Law ನಲ್ಲಿ ಸಹ ಇದೆ ಇರುವುದು. ಅದರಂತೆ ಅಧಿಕಾರಿಗಳ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದ್ದಾರೆ, ಎಂಬುದರ ಮಾಹಿತಿ ಬೇಕಲ್ಲವೇ? ಯಾವುದೋ ಒಂದು false ಎಂದು ವರದಿಯನ್ನು ಕೊಟ್ಟು, ಅಧಿಕಾರಿಗಳಿಂದ ಯಾವುದೇ ಒಂದು pellet ಹಾರಿಲ್ಲ, ಅವರ ತಪ್ಪಿನಿಂದಾಗಿ ಯಾವುದೇ ಗುಂಡೂ ಹಾರಿಲ್ಲ, ಕತ್ತಿ-ಕಟಾರ್‌ನಿಂದ ದಾಳಿ ಮಾಡಲಿಕ್ಕೆ ಬಂದಿಲ್ಲ, ಮಾನ್ಯ ಭೋಜೇಗೌಡರವರು ಹೇಳಿದ ಹಾಗೆ ಸಮೀಪದಿಂದ ಕಲ್ಲು ತೂರಿಲ್ಲ, ಯಾವುದೂ ನಡೆದಿಲ್ಲ. ಆ ರೀತಿ ಇದ್ದಾಗ self-defense ತೆಗೆದುಕೊಳ್ಳಲಿಕ್ಕೆ ಯಾವ ಆಧಾರದ ಇದೆ? Self -defense ಇಲ್ಲದೇ pre-planned murder ಮಾಡಲಿಕ್ಕೆ ಹೋಗಿದ್ದಾರೆ. ರಾತ್ರಿ 8.00 ಗಂಟೆಯಲ್ಲಿ ಇಲಾಖಾ ಸಿಬ್ಬಂದಿಗಳಿಗೆ ಮಾಹಿತಿ ಬಂದಿರಬಹುದು. ಆದರೆ, ಉದ್ದೇಶಪೂರ್ವಕವಾಗಿ ನಾಗರೀಕರನ್ನು ಮರ್ಡರ್ ಮಾಡಬೇಕೆಂದು ಹೋಗಿದ್ದು, ಇಲ್ಲಿ ಬೇರೆ ಯಾವುದೇ ಕಾರಣ ಕಾಣಿಸುತ್ತಿಲ್ಲ. ಸುಮಾರು 10 ಮಂದಿ

ಅಧಿಕಾರಿಗಳು ಕಾಡಿಗೆ ಹೋಗಿದ್ದು, ಅವರುಗಳು ಯಾರೆಂಬುದು ಸರ್ಕಾರಕ್ಕೆ ಗೊತ್ತಿದೆ. ಆದರೂ ಸಹಿತ ವರದಿ ಬಂದಾಗ ಆ ವರದಿಯನ್ನಿಟ್ಟುಕೊಂಡು, ಎಲ್ಲಿಗೆ ಹೋಗಿದ್ದಾರೆ, ಯಾವ ಸ್ಥಳಕ್ಕೆ ಹೋಗಿದ್ದಾರೆ, ಎಷ್ಟು ಜನ ಹೋಗಿದ್ದಾರೆ ಎಂಬುದೆಲ್ಲವೂ ಇರಲಿ, it is a pre-planned murder. ಬೇರೆ ಏನು ವಿವರಣೆ ಕೊಡಲಿಕ್ಕೆ ಸಾಧ್ಯವೇ ಇಲ್ಲ. Under Section 103 of B.N.S. (Bharatiya Nyaya Sanhita) ಕೇಸ್ ದಾಖಲಿಸಬೇಕು. ಅಧಿಕಾರಿಗಳ ಮೇಲೆ 103 ದಾಖಲಿಸಿ, ನೋಂದಣಿ ಮಾಡದೇ ಕೈತೊಳೆದುಕೊಂಡಿದ್ದಾರೆ. ಅರಣ್ಯ ಸಂರಕ್ಷಣಾ ಕಾಯ್ದೆ 1972 ರಲ್ಲಿ ಏನೇನು ಬೇರೆ ಬೇರೆ ಕಲಂ ದಾಖಲಿಸಿದ್ದೇವೆ ಎಂಬುದನ್ನು ತಿಳಿದುಕೊಳ್ಳಬೇಕು. ಇದು ಸಾಧಾರಣ ವಿಚಾರವಾಗಿಲ್ಲ, ಇದರಲ್ಲಿ ಅಧಿಕಾರಿಗಳನ್ನು ಕೈಬಿಡುವಂಥ ಅವಕಾಶವೇ ಇಲ್ಲ. ಅರಣ್ಯದಡಿ ಇರುವಂಥ ಕಾಯಿದೆಯ ಸೆಕ್ಷನ್ 103, 104 ದಾಖಲಿಸಬೇಕು. ಈಗಾಗಲೇ self-defense ಬಗ್ಗೆ ವಿವರಣೆಯನ್ನು ನೀಡಿದ್ದು, self-defense ಎಂದರೇನು? Self-defense ಆಗಿ ಏನು ಅಕ್ರಮವಾಗಿದೆ, ಹಾಗೆಯೇ ಅಧಿಕಾರಿಗಳು ಏನು ಮಾಡಿದ್ದಾರೆ ಎಂಬುದರ ವಿವರಣೆ ಇರುವುದಿಲ್ಲ. ಇದೇ 15ನೇ ತಾರೀಖಿನಂದು ಘಟನೆ ನಡೆದು ಇವತ್ತಿಗೆ ಮೂರು ದಿವಸಗಳಾಗಿದ್ದು, ಸರ್ಕಾರ ಉತ್ತರ ನೀಡಿದೆ. ಆದರೆ, ಆ ನಾಗರಿಕರ ಚೀಲದಲ್ಲಿ ಯಾವ ಮಾಂಸ ಇತ್ತು, ಎಷ್ಟು pellets ಬಿದ್ದಿದೆ ಎಂಬುದರ ವರದಿ ಇರುವುದಿಲ್ಲ. 100 ಸುತ್ತು ಗುಂಡು ಹಾರಿಸಲಾಗಿದೆ ಎನ್ನುವಂಥ ವರದಿ ನೀಡಿದ್ದು, ಎಷ್ಟು pellets ಹಾರಿಸಬಹುದು. ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕೇಸ್ ದಾಖಲಿಸಿ, ಕೆಲಸದಿಂದ ಅಮಾನತ್ತುಗೊಳಿಸಿ, ಅರೆಸ್ಟ್ ಮಾಡಿಸುವುದರಲ್ಲಿ ಮುಂದುವರೆಯಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ವಿರೋಧ ಪಕ್ಷದವರು ಹಲವಾರು ವಿಚಾರಗಳನ್ನು ಉಲ್ಲೇಖಿಸಿದ್ದಾರೆ ಹಾಗೂ ಮಾನ್ಯ ಸಚಿವರು ಕೊಟ್ಟಿರುವಂಥ ವರದಿಯನ್ನು ನೋಡಿದ್ದೇವೆ. ಮೂಲತಃವಾಗಿ ಮೂರು ಜನ ನಾಗರೀಕರು ಮೃತಪಟ್ಟಿರುವುದಕ್ಕೆ ಈ ಸದನದಲ್ಲಿರುವ ನಾವೆಲ್ಲರೂ ಸಂತಾಪ ಸೂಚಿಸಬೇಕೆಂದು ಮನವಿ ಮಾಡುತ್ತೇವೆ. ಅರಣ್ಯವನ್ನು ರಕ್ಷಿಸುವುದು, ಸರ್ಕಾರ ಮತ್ತು ಸಿಬ್ಬಂದಿಯ ಮೂಲ ಕೆಲಸ ಎಂಬುದನ್ನು ನಾವು ಮರೆಯಬಾರದೆಂದು ಹೇಳುತ್ತೇನೆ. ಒಂದು ಕಡೆ ವನ್ಯ ಜೀವಿಯನ್ನು ಕಾಪಾಡಬೇಕು, ಅರಣ್ಯವನ್ನು ಕಾಪಾಡಬೇಕು ಹಾಗೂ ಅರಣ್ಯದ ಸುತ್ತಮುತ್ತ ಇರುವ ನಾಗರಿಕರನ್ನು ಕಾಪಾಡುವಂಥ ಜವಾಬ್ದಾರಿಯಾಗಿದೆ ಮತ್ತು ಕರ್ತವ್ಯವಾಗಿದೆ ಎಂದು ನಾವೆಲ್ಲರೂ ಭಾವಿಸಿಕೊಂಡು ಮಾತನಾಡುತ್ತಿದ್ದೇವೆ. ಇಲ್ಲಿರುವಂಥ ವಿಚಾರಗಳನ್ನು ನೋಡಿದರೆ ನಡೆದಿರುವಂಥ ಘಟನೆಯನ್ನು ನಾವೆಲ್ಲರೂ ಖಂಡಿಸುತ್ತೇವೆ. ಆದರೆ, ಅರಣ್ಯ ಸಿಬ್ಬಂದಿಗೆ ಮಾಹಿತಿ ಬಂದಾಗ ಸುಮ್ಮನೆ ಕೂರಲಿಕ್ಕೆ ಸಾಧ್ಯವಾಗುವುದಿಲ್ಲ. ಅನಧಿಕೃತವಾಗಿ, ಅಕ್ರಮವಾಗಿ ಭೇಟಿಯಾಡುವುದನ್ನು ತಡೆಗಟ್ಟುವುದು ಅಧಿಕಾರಿಗಳ ಜವಾಬ್ದಾರಿಯಾಗಿದೆ. ಆ ಕೆಲಸವನ್ನು ಮಾಡಲಿಕ್ಕೆ ಹೋದಾಗ ಆ ನಾಗರಿಕರ ಮೇಲೆ ಮಾಡಿರುವಂಥ ಗುಂಡಿನ ದಾಳಿ ಆಗಿರಬಹುದು. ಅದಕ್ಕೆ ಪ್ರತಿರೋಧವಾಗಿ ನಾಗರಿಕರು ಮಾಡಿರುವಂಥ ವಿಚಾರವನ್ನು ನಾನು ಸಮರ್ಥಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಇಂತಹ ವಿಚಾರಗಳಲ್ಲಿ ಜಡ್ಜ್‌ಮೆಂಟ್ ಮಾಡುವುದನ್ನು ಬಿಡಬೇಕಾಗುತ್ತದೆ. We are not the investigating officers in this

case. Let the investigation take place. ಅಲ್ಲಿರುವಂಥ magisterial inquiry ಮಾಡಲು ಆದೇಶ ನೀಡಲಾಗಿದ್ದು, ಸ್ವಲ್ಪ ತಾಳ್ಮೆಯಿಂದ ನೋಡಬೇಕಾಗುತ್ತದೆ. ಯಾರೇ ತಪ್ಪು ಮಾಡಿದರೂ ಅವರ ಮೇಲೆ ಕ್ರಮವಾಗಬೇಕೆಂಬುದರಲ್ಲಿ ಎರಡು ಮಾತಿಲ್ಲ ಎನ್ನುವಂಥ ವಿಚಾರವನ್ನು ಹೇಳಬಯಸುತ್ತೇನೆ. ನ್ಯಾಯಾಧೀಶರು ತನಿಖೆ ಮಾಡಿ 7 ದಿನಗಳೊಳಗೆ ವರದಿ ಕೊಡಿ ಎನ್ನುವಂಥ ವಿಚಾರವನ್ನು ಹೇಳಬೇಕಾದರೆ, ನಾವು conclusion ಮಾಡಲಿಕ್ಕಾಗುವುದಿಲ್ಲ. ಸತ್ತಿರುವಂಥವರು ಅಮಾಯಕರು ಮತ್ತು ಅರಣ್ಯ ಸಿಬ್ಬಂದಿಗಳು ಮರ್ಡರ್ ಮಾಡಿದ್ದಾರೆ ಎನ್ನುವಂಥ ತೀರ್ಮಾನ ಮಾಡುವಲ್ಲಿ ನಾವು ಯಾರು ನ್ಯಾಯಾಧೀಶರಾಗಬಾರದೆಂದು ಮನವಿ ಮಾಡುತ್ತಿದ್ದೇನೆ. ವನ್ಯ ಜೀವಿಗಳನ್ನು ರಕ್ಷಣೆ ಮಾಡಬೇಕಾಗಿರುವುದು; ಅರಣ್ಯ ಪ್ರದೇಶಗಳನ್ನು ರಕ್ಷಣೆ ಮಾಡಬೇಕಾಗಿರುವುದು; ನಾಗರಿಕರನ್ನು ರಕ್ಷಣೆ ಮಾಡಬೇಕಾಗಿರುವುದು; ರಾಜ್ಯ ಸರ್ಕಾರ ಮತ್ತು ಕಾರ್ಯಾಂಗದ ಕೆಲಸಗಳಾಗಿದ್ದು, ಆ ಕೆಲಸವನ್ನು ಅರಣ್ಯ ಸಿಬ್ಬಂದಿಗಳು ಮಾಡಿದ್ದಾರೆ. ಅಂದರೆ, ಸಾಯಿಸುವುದು ಸರಿ ಇದೆ ಎನ್ನುವಂಥ ವಿಚಾರವನ್ನು....

**ಶ್ರೀ ಕೆ.ವಿವೇಕಾನಂದ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹಾಗೆಂದು ಮರ್ಡರ್ ಮಾಡಬಹುದೇ?

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿಲ್ಲ. I have not yielded to him. ನಾನು ಮಾತನಾಡಿರುವುದು ತಪ್ಪಾದರೆ, ಮನುಷ್ಯನ ಜೀವಕ್ಕೆ ಯಾರು ಕೂಡ ಬೆಲೆ ಕಟ್ಟಲಿಕ್ಕೆ ಸಾಧ್ಯವಾಗುವುದಿಲ್ಲ. ಕೇವಲ 4 ಕಾಸನ್ನು ಪರಿಹಾರ ರೂಪದಲ್ಲಿ ಕೊಟ್ಟ ತಕ್ಷಣ ಆ ಮನೆಯವರು ಕಳೆದುಕೊಂಡ ನೋವನ್ನು ಕೊಡಲಿಕ್ಕೆ ಸಾಧ್ಯವಿಲ್ಲ. ಯಾರಾದರೂ ಗಂಡನನ್ನು ಕಳೆದುಕೊಂಡಿದರೆ, ಗಂಡನನ್ನು ಕೊಡಲಿಕ್ಕೆ ಸಾಧ್ಯವಿಲ್ಲ. ಯಾವುದಾದರೂ ಮಗು ತನ್ನ ತಂದೆಯನ್ನು ಕಳೆದುಕೊಂಡಿದರೆ, ಆ ಮಗುವಿಗೆ ತಂದೆಯನ್ನು ಕೊಡಲಿಕ್ಕೆ ಸಾಧ್ಯವಿಲ್ಲ. ಆದರೆ, ನಾವು ತನಿಖೆ ನಡೆಸುವಂಥ ಸಂದರ್ಭದಲ್ಲಿ ಸರ್ಕಾರ ಎಷ್ಟು ಸೂಕ್ಷ್ಮವಾಗಿ, ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು. ನ್ಯಾಯಾಂಗ ತನಿಖೆಯಾಗಬೇಕೆಂದರೆ, Magistrate also holds the responsibility of the judiciary, ಎನ್ನುವಂಥ ಮಾತನ್ನು ಮರೆಯಬಾರದು. Judiciary ನಲ್ಲಿ ಇರುವಂತಹ ಡಿ.ಸಿ. ಯಾಗಿರುವವರು ನ್ಯಾಯಾಧೀಶರ ಜಾಗದಲ್ಲಿ ಕುಳಿತುಕೊಂಡು ಕೆಲಸ ಮಾಡಬೇಕಾದರೆ, prima-facie ಏನು ಸತ್ಯ ನಡೆದಿದೆ ಎಂಬುದನ್ನು ತಿಳಿದುಕೊಳ್ಳುವಂಥ ಔದಾರ್ಯ ಸದನಕ್ಕೆ ಇರಬೇಕೆಂದು ಮನವಿ ಮಾಡುತ್ತೇನೆ. ನಾನು ಸರ್ಕಾರದ ಪರವಾಗಿರುವ ಸದಸ್ಯನಾಗಿದ್ದರೂ ಮಾನವೀಯತೆಗೆ, ಮನುಕುಲಕ್ಕೆ ಗೌರವ ಕೊಡುವಂಥ ಮತ್ತು ಆ ಜೀವಗಳಿಗೆ ನ್ಯಾಯ ಸಿಗಬೇಕೆನ್ನುವುದರಲ್ಲಿ ಎರಡು ಮಾತಿಲ್ಲ ಎಂದು ಹೇಳುತ್ತೇನೆ. ಅದೇ ಸಂದರ್ಭದಲ್ಲಿ ವನ್ಯ ಪ್ರಾಣಿಗಳನ್ನು ಬೇಕಾಬಿಟ್ಟಿಯಾಗಿ, ಅಕ್ರಮವಾಗಿ ಭೇಟೆಯಾಡುವುದನ್ನು ಒಪ್ಪಲಿಕ್ಕೆ ಸಾಧ್ಯವಿಲ್ಲ, ನಾನು ಪಶುಪಾಲಕ ಸಮುದಾಯದಿಂದ ಬಂದಿರುವುದು ಎನ್ನುವಂಥ ಮಾತನ್ನು ಹೇಳುತ್ತೇನೆ. ಹಸುಗಳು ಕಾಡಿನೊಳಗೆ ಹೋದಾಗ ಅದನ್ನು ಹಿಡಿದುಕೊಂಡು ಬರಲು ನಾಗರಿಕರು ಹೋಗಬೇಕಾದರೆ ನಮ್ಮ ಅರಣ್ಯ ಸಿಬ್ಬಂದಿಗಳಿಗೆ ದೂರು ನೀಡುವುದರ ಮೂಲಕ ಅವರನ್ನು ಜೊತೆಯಲ್ಲಿಯೇ ಕರೆದುಕೊಂಡು ಹೋಗುವಂಥ ಕೆಲಸ ಮಾಡಬೇಕಾಗುತ್ತದೆ. ಮಾನ್ಯ

ಸದಸ್ಯರೊಬ್ಬರು ಬದುಕನ್ನು ಕಟ್ಟಿಕೊಳ್ಳಲಿಕ್ಕೆ ಕಾಡಿನೊಳಗೆ ಹೋಗಬೇಕಾಗುತ್ತದೆ, ಬರಬೇಕಾಗುತ್ತದೆ ಎನ್ನುವಂಥ ಮಾತನ್ನು ಹೇಳಿದರು. ಬದುಕಲು ಕೆಲವು ಕಾನೂನುಗಳಿದ್ದು, ಅರಣ್ಯ ಪ್ರದೇಶದಲ್ಲಿರುವಂಥ ಸಂಪನ್ಮೂಲಗಳ ಅನುಗುಣವಾಗಿ ಜೀವನ ನಡೆಸಲಿಕ್ಕೆ ಕಾನೂನಿನ ಚೌಕಟ್ಟಿನಲ್ಲಿ ಬದುಕಲು ಅವಕಾಶ ಇದೆ. ಆದರೆ, ಅದನ್ನು ಮೀರಿ ಏನಾದರೂ ಮಾಡಿದರೆ, ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡರೆ, ಅಕ್ರಮ ಭೇಟಿಯಾಡಿದಾಗ, ಅಕ್ರಮವಾಗಿ ಏನಾದರೂ ಕಳ್ಳ ಸಾಗಾಣೆ ನಡೆದಾಗ, ಅಧಿಕಾರಿಗಳು ಸುಮ್ಮನೆ ಕೈಕಟ್ಟಿಕೊಂಡು ಕುಳಿತರೆ, ಅದು ಸರ್ಕಾರದ ಬೇಜವಾಬ್ದಾರಿತನವಾಗುತ್ತದೆ ಎನ್ನುವಂಥ ಮಾತನ್ನು ಇದೇ ವಿರೋಧ ಪಕ್ಷದವರು ಆಡಳಿತ ಪಕ್ಷದಲ್ಲಿದ್ದಾಗ ಹೇಳುತ್ತಿದ್ದರು. ಹಾಗಾಗಿ, ಕರ್ತವ್ಯ ಮಾಡಿರುವವರು ಸರಿಯಾಗಿ ಮಾಡಿದ್ದಾರೆಯೇ, ಇಲ್ಲವೇ, ಕಾನೂನುಬದ್ಧವಾಗಿ ಮಾಡಿದ್ದಾರೆಯೇ ಎಂಬುದನ್ನು ನೋಡಬೇಕು. ಅವರ ಆತ್ಮರಕ್ಷಣೆಗಾಗಿ ಮಾಡಿದ್ದಾರೆ ಎನ್ನುವಂಥ ವಿಚಾರದ ಬಗ್ಗೆ ಹೇಳಿದಾಗ, ತನಿಖೆಯಿಂದ ಹೊರಗೆ ಬರಬೇಕಾಗುತ್ತದೆ. Magisterial inquiry ವರದಿಯನ್ನು ತೆಗೆದುಕೊಂಡು, ತದನಂತರ prima-facie ಪ್ರಕಾರ ಅಧಿಕಾರಿಗಳಿಂದ ತಪ್ಪಾಗಿದ್ದರೆ, ಅವರ ಮೇಲೆ ಕ್ರಮಕೈಗೊಳ್ಳಲೇಬೇಕಾಗುತ್ತದೆ. ಅದು ಮರ್ಡರ್ ಕೇಸ್ ಆಗಿದ್ದರೆ, ಅವರ ಮೇಲೆ ಕಠಿಣ ಕ್ರಮಕೈಗೊಳ್ಳುವಲ್ಲಿ ಎರಡು ಮಾತಿಲ್ಲ ಎಂದು ಹೇಳುತ್ತೇನೆ. ಆದರೆ, ಅಕ್ರಮವಾಗಿ ಭೇಟಿಯಾಡುವುದು, ಕಾನೂನುಬಾಹಿರ ಚಟುವಟಿಕೆಗೆ ಬೆಂಬಲ ಕೊಡಬಾರದು ಎನ್ನುವಂಥ ವಿಚಾರಗಳನ್ನು ಅರಣ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಸದ್ಯಕ್ಕೆ ಯಾರು ಕೂಡ ಜಡ್ಜ್‌ಮೆಂಟ್, ಸ್ಟೇಟ್‌ಮೆಂಟ್‌ಗಳನ್ನು ಮಾಡುವುದು ಸರಿಯಿಲ್ಲ ಎನ್ನುವಂಥ ಮಾತನ್ನು ಹೇಳಿ, ನನಗೆ ಮಾತನಾಡಲು ಅವಕಾಶ ಕಲ್ಪಿಸಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ.

**ಶ್ರೀ ಎಸ್.ಕೇಶವ ಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ, ಬೆಳಂ ಬೆಳಗ್ಗೆ 5 ಗಂಟೆ ಘಟನೆ ಸಿಬ್ಬಂದಿಗಳು ತೆರಳಿರುತ್ತಾರೆ ಎಂದು ಹೇಳುತ್ತಾರೆ. ಬೆಳಗ್ಗೆ 5 ಗಂಟೆಯಲ್ಲಿ ಬೆಳಕು ಎಲ್ಲಿರುತ್ತದೆ? 6 ಗಂಟೆ ಅಥವಾ 6 ಗಂಟೆ 30 ನಿಮಿಷದ ನಂತರವೇ ಬೆಳಕು ಆಗುವುದು. ಎರಡನೆಯದಾಗಿ, ಶರಣಾಗುವಂತೆ ಮನವೊಲಿಸಲಾಗಿದೆ ಎಂದು ವರದಿಯಲ್ಲಿ ತಿಳಿಸಿದ್ದು, ಯಾವ ರೀತಿ ಮನವೊಲಿಸಿದ್ದಾರೆ? ಶರಣಾಗಲು ಯಾವ ರೀತಿ ಮನವೊಲಿಸಿದ್ದಾರೆ, ಶರಣಾಗಲು ಏನೇನು ಪ್ರಯತ್ನಗಳು ನಡೆದಿವೆ? ಮೂರನೆಯದಾಗಿ, ಕಿಡಿಯ ಬೆಳಕು ಗೋಚರವಾದ ದಿಕ್ಕಿನಲ್ಲಿ ಗುಂಡು ಹಾರಿಸಲಾಗಿದೆ ಎಂದು ವರದಿಯಲ್ಲಿ ತಿಳಿಸಿದ್ದು, ಕಿಡಿಯ ಬೆಳಕು ಗೋಚರವಾದ ದಿಕ್ಕಿನಲ್ಲಿ ಗುಂಡು ಹಾರಿಸುತ್ತಾರೆಯೇ? ಶರಣಾಗತಿಯಾಗಿ ಎಂದು ಕೇಳಿದ್ದೀರಿ. ಅಂದ ಮೇಲೆ ಕಿಡಿಯ ಬೆಳಕು ಗೋಚರವಾದ ತಕ್ಷಣ ಆ ದಿಕ್ಕಿನಲ್ಲಿ ಗುಂಡು ಹಾರಿಸಿದ್ದೀರಿ. ಹಾಗೆಯೇ slide-action gun ಎಂದು ಹೇಳುತ್ತಿದ್ದು, slide-action gun ಇದ್ದಾಗ ಅರಣ್ಯ ಸಿಬ್ಬಂದಿಗಳು ಎಚ್ಚರಿಕೆಯಿಂದ ಇರಬೇಕಾಗಿತ್ತು. ಅದಲ್ಲದೇ ಸೊಂಟದ ಕೆಳಗಿನ ಭಾಗಕ್ಕೆ ಗುಂಡು ಬೀಳದೇ ಸೊಂಟದ ಮೇಲ್ಭಾಗದಲ್ಲಿಯೇ 3 ಜನರಿಗೂ ಗುಂಡು ಬಿದ್ದಿದೆ ಎಂದರೆ, ಹೇಗೆ? ಅಂದರೆ, point-blank ಅವರನ್ನು ಕೊಲ್ಲಲಾಗಿದ್ದು, ಮುಚ್ಚುಮರೆ ಮಾಡಿಕೊಳ್ಳುವ ಸಲುವಾಗಿ ಈ ರೀತಿ ಉತ್ತರ ನೀಡಿದ್ದಾರೆ. ಹಾಗೆಯೇ ಅಸ್ಪಷ್ಟವಾಗಿ ಗೋಚರಿಸುತ್ತಿರುವ ಸಿಬ್ಬಂದಿಗಳ

ಆತ್ಮರಕ್ಷಣೆಗೆ,... ಅಂದರೆ, ಆ ಸಿಬ್ಬಂದಿಗಳಿಗೆ ಸ್ಪಷ್ಟತೆಯೇ ಇಲ್ಲದೇ ಅಸ್ಪಷ್ಟವಾಗಿ ಗೋಚರಿಸುತ್ತಿರುವುದು ಕಾಣಿಸುತ್ತಿದ್ದು, ಅಲ್ಲಿ ಯಾರಿದ್ದಾರೆ ಎಂಬುದು ಗೊತ್ತಾಗುತ್ತಿಲ್ಲ ಎಂದ ಮೇಲೆ ಏತಕ್ಕೆ ಗುಂಡು ಹಾರಿಸಿದ್ದಾರೆ. ಹಾಗೆಯೇ ಟಾರ್ಚ್ ಬೆಳಕಿನಲ್ಲಿ ಇದೆಲ್ಲವನ್ನೂ ನೋಡಿದ್ದೀರಿ ಎಂದು ಹೇಳುತ್ತಿದ್ದು, ಸೂರ್ಯನ ಕಿರಣ ಬಿದ್ದಿಲ್ಲ, ಬೆಳಕು ಬಂದಿಲ್ಲ, ಟಾರ್ಚ್ ಬೆಳಕಿನಲ್ಲಿ ಇಷ್ಟೆಲ್ಲಾ ಮಾಡಲಿಕ್ಕೆ ಸಾಧ್ಯವಾಗಿತ್ತೇ? ಜೊತೆಗೆ 7ನೇ ಅಂಶದಲ್ಲಿ ಮಾನವೀಯತೆ ದೃಷ್ಟಿಯಿಂದ ಸಾಗಿಸಿದ್ದೇವೆ ಎಂದು ಹೇಳುತ್ತಿದ್ದು, ಮಾನವೀಯತೆ ದೃಷ್ಟಿಯಿಂದ ಸಾಗಿಸಲು ಆ ನಾಗರಿಕರು ಬದುಕಿರಲಿಲ್ಲ. ಹೆಣವನ್ನು ಮಾನವೀಯತೆ ದೃಷ್ಟಿಯಿಂದ ಸಾಗಿಸಿದ್ದಾರೆ. Hanur hospital ಗೆ ಹೆಣವನ್ನು ಸಾಗಿಸಿದ್ದಾರೆ, ಅಲ್ಲಿಂದ ಕೆ.ಆರ್.ಹಾಸ್ಪಿಟಲ್‌ಗೆ ಪೋಸ್ಟ್ ಮಾರ್ಟ್ ಮಾಡಲಿಕ್ಕೆ ತೆಗೆದುಕೊಂಡು ಹೋಗಿದ್ದಾರೆ. ಅದಲ್ಲದೇ ಗಸ್ತು ಅರಣ್ಯ ಪಾಲಕರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ಹೇಳುತ್ತಿದ್ದು, ಸಣ್ಣ-ಪುಟ್ಟ ಗಾಯಗಳು ಎಂದರೆ ಏನು? ಸ್ಪಷ್ಟೀಕರಿಸಲಾಗಿದೆಯೇ? ಇಷ್ಟು ವಿವರವಾಗಿ ವಿವರವನ್ನು ಕೊಡುವಾಗ ಸಣ್ಣಪುಟ್ಟ ಗಾಯವಾಗಿದೆ ಎಂದರೆ ಏನರ್ಥ? ಅದಕ್ಕೆ ವಿವರಣೆಬೇಕು. ಜೊತೆಗೆ ಏನೇನು ಮಹಜರ್ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ, ಆ ಮಹಜರ್ ಭಾವಚಿತ್ರವನ್ನು ನೋಡಿದರೆ, ಹೊಚ್ಚ ಹೊಸ ಪಾದರಕ್ಷೆಗಳಾಗಿದ್ದು, ಆ ಪಾದರಕ್ಷೆಗಳ ಮೇಲೆ sticker ಇದೆ. ಜೊತೆಗೆ ಹೊಚ್ಚ ಹೊಸ ಬ್ಯಾಗ್ ತೆಗೆದುಕೊಂಡು, ಹೊಚ್ಚ ಹೊಸ ಪಾದರಕ್ಷೆಯನ್ನು ಹಾಕಿಕೊಂಡು ನಾಗರಿಕರು ಕಾಡಿನೊಳಗೆ ಹೋಗುತ್ತಾರೆಯೇ? ಪೊಲೀಸ್‌ನವರು ಮಹಜರ್ ಮಾಡಲಿಕ್ಕೆ ಎಲ್ಲಾ ಸಾಮಾನುಗಳನ್ನು ಇಟ್ಟು, ಫೋಟೋ ತೆಗೆದಿರುವುದು ಸ್ಪಷ್ಟವಾಗಿ ಭಾವಚಿತ್ರದಲ್ಲಿ ಕಾಣಿಸುತ್ತಿದ್ದು, ತಮಗೂ ಸಹ ಈ ಭಾವಚಿತ್ರವನ್ನು ಕಳುಹಿಸಿಕೊಡುತ್ತೇನೆ, ತಾವು ಸಹ ಅದನ್ನು ನೋಡಬೇಕು.

(ಮುಂದು)

**(721) 17.08.2026/3.50/ಎಸ್‌ಕೆ-ಎಂಡಿ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೇಶವ ಪ್ರಸಾದ್ ಎಸ್. (ಮುಂದು):**

ಹಾಗೆಯೇ, ಇಲ್ಲಿ ಕೊಟ್ಟಿರುವುದೇನೆಂದರೆ, ಯಾರಾದರೂ ತೀರಿಕೊಂಡರೆ ಸಾಮಾನ್ಯವಾಗಿ ಏನು ಎಂದು ಹೇಳುತ್ತಾರೆ. ಇಲ್ಲಿ ಇರುವುದೇನೆಂದರೆ, ಎಲ್ಲರ ಹೆಸರಿನ ಹಿಂದೆ ಕ್ರಿಶ್ಚಿಯನ್, ಕ್ರಿಶ್ಚಿಯನ್ ಎಂದು ಬರೆದಿರುವುದು ಏನು ಗೊತ್ತಾ, ಇವರೆಲ್ಲರೂ ಎಸ್.ಸಿ., ಅಥವಾ ಎಸ್.ಟಿ., ಸಮುದಾಯಕ್ಕೆ ಸೇರಿದವರು. ಸರ್ಕಾರದ ಮೇಲೆ ದೊಡ್ಡ ಆರೋಪ ಬರುತ್ತದೆ. ಎಸ್.ಸಿ., ಎಸ್.ಟಿ., ಸಮುದಾಯ ಎದ್ದು ನಿಂತುಕೊಳ್ಳುತ್ತದೆ, ಮತ್ತೆ ಇದು ತುಂಬಾ far reaching repercussions ಇರುತ್ತದೆ ಎಂದು ಹೇಳಿ, ಎಲ್ಲರೂ ಕೂಡ ಕ್ರಿಶ್ಚಿಯನ್ನರು. ಇವರೆಲ್ಲರೂ ಮತಾಂತರಗೊಂಡಿರುವಂತಹ ಕ್ರಿಶ್ಚಿಯನ್ನರು ಎನ್ನುವ ರೀತಿಯಲ್ಲಿ ತೋರುತ್ತಿದ್ದಾರೆ.

**ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಒಂದು clarification ಇದೆ. They are not S.C-S.T people. ಅವರು ಎಸ್.ಸಿ., ಎಸ್.ಟಿ., ಅಲ್ಲ. ಸದನಕ್ಕೆ ತಪ್ಪು ಮಾಹಿತಿ ಕೊಡಬಾರದು.

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭಾ ಕ್ಷೇತ್ರ):-** ನಾನು ಹೇಳುವುದೇನೆಂದರೆ, I have every right to say. ಇವರೆಲ್ಲರೂ ಎಸ್.ಸಿ., ಎಸ್.ಟಿ., ಸಮುದಾಯಕ್ಕೆ ಸೇರಿದಂತಹವರು. Thorough enquiry ಆಗಬೇಕು. ಒಂದು Judicial Enquiry ಆಗಬೇಕು. ಆಗ ಸತ್ಯ ಆಚೆಗೆ ಬರುತ್ತದೆ ಎಂದು ನಾನು ಹೇಳುತ್ತೇನೆ. ಸರ್ಕಾರ ನೇರವಾಗಿ ನಿಂತು ಮಾಡಿಸಿರುವಂತಹ murder ಇದು.

**ಸಭಾಪತಿಯವರು:-** ಮಾನ್ಯ ಕಿಶೋರ್ ಕುಮಾರ್‌ರವರೇ, ತಾವು ಮಾತನಾಡಿ.

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಇಡೀ ದೇಶದ ಜನತೆ ಕರ್ನಾಟಕ ರಾಜ್ಯವನ್ನು ತುಂಬಾ ಕಪ್ಪು ಚುಕ್ಕೆಯಿಂದ ನೋಡುವಂತಹ ದಿವಸ ಎಂದು ಹೇಳಿದರ ತಪ್ಪಾಗುವುದಿಲ್ಲ. ಪ್ರತಿಯೊಬ್ಬರಿಗೂ ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಮಾನ್ಯ ಸಚಿವರು ಹೇಳಿದರು. ಈಗ ಹೋದ ಜೀವವನ್ನು ವಾಪಸ್ಸು ತರುವುದಕ್ಕಾಗುವುದಿಲ್ಲ.

**ಶ್ರೀ ರಾಮಲಿಂಗಾರೆಡ್ಡಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):-** ನಾನು ಹೇಳಲಿಲ್ಲ.

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬೆಳಗ್ಗೆ ಚರ್ಚೆಯಾಗಬೇಕಾದರೆ; ಪ್ರಾಣವನ್ನು ವಾಪಸ್ಸು ತರುವುದಕ್ಕಾಗುವುದಿಲ್ಲ. ಭೇಟಿಯಾಡುವುದಕ್ಕೆ ಹೋದಾಗ ಅವರನ್ನು ಗುಂಡಿನ ದಾಳಿ ಮಾಡಿದ್ದಾರೆಂದು ಇನ್ನೊಬ್ಬರು ಸದಸ್ಯರು ಹೇಳಿದರು. ನೂರಕ್ಕೆ ನೂರರಷ್ಟು ಭೇಟಿ ಆಡುವುದಕ್ಕೆ ಹೋಗಿದ್ದಿದ್ದರೆ, ಅವರನ್ನು ಸೊಂಟದ ಕೆಳಗಡೆ ಗುಂಡು ಹಾರಿಸಬೇಕಾಗಿತ್ತು. ಅವರನ್ನು arrest ಮಾಡಿ, ಕರೆದುಕೊಂಡು ಬಂದು ಅವರಿಗೆ ಶಿಕ್ಷೆ ಕೊಡಬೇಕು ಎಂಬುದನ್ನು ಮಾಡಬೇಕಾಗಿತ್ತು. ಮೂರು ಜನ ಸತ್ತವರ ಕುಟುಂಬದ ಪರಿಸ್ಥಿತಿ ಏನು? ಅವರ ಕುಟುಂಬ ಯಾವ ರೀತಿ ಜೀವನ ನಡೆಸಬೇಕು? ಹತ್ತು ಲಕ್ಷ ರೂಪಾಯಿಗಳನ್ನು ನೀಡಿದರೆ, ಅವರ ಜೀವ ವಾಪಸ್ಸು ಬರುವುದಿಲ್ಲ. ಸರ್ಕಾರ ತಕ್ಷಣ ಅವರ ಕುಟುಂಬಕ್ಕೆ ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮನವಿ ಮಾಡುತ್ತೇನೆ. ಮಾಂಸವನ್ನು ತಂದಿಟ್ಟಿದ್ದಾರೆ ಎಂಬುದು ಗೋಚರವಾಗುತ್ತದೆ ಎಂಬ ಬಗ್ಗೆ ಈಗಾಗಲೇ ಮಾನ್ಯ ಭೋಜೇಗೌಡರು ಹೇಳಿದರು. ಅವರು ಏನಾದರೂ ಹೊಡೆದಿದ್ದರೆ, ನಮ್ಮ ಅರಣ್ಯ ಇಲಾಖೆಯ ಸಿಬ್ಬಂದಿ ಅಷ್ಟೊಂದು ಕಂಗಾಲಾಗಿ ಹೋಯಿತಾ. ನಮ್ಮ ಗೃಹ ಇಲಾಖೆ ಅಷ್ಟೊಂದು ಕಂಗಾಲಾಗಿ ಹೋಯಿತಾ. ಘಟನೆಯಾದ ನಂತರ ಅವರು ಯಾವ ರೀತಿ ಎಂದರೆ ಒಂಭತ್ತು ವಸತಿ ಗೃಹವನ್ನು ಹಾನಿ ಮಾಡಿ ಬೆಂಕಿ ಹಚ್ಚಿದ್ದಾರೆ. ನಮ್ಮ ಸರ್ಕಾರ ಅಷ್ಟೊಂದು ಅಭದ್ರ ಸರ್ಕಾರವಾಯಿತಾ. ಅವರನ್ನು ತಡೆಯುವುದಕ್ಕಾಗಲಿಲ್ಲವೇ? ಅಂದರೆ ಈ ರೀತಿಯಾಗಿ ಸರ್ಕಾರಿ ಸ್ವತ್ತನ್ನು ಧ್ವಂಸ ಮಾಡಿದಾಗ, ಅವರನ್ನು ನಿಲ್ಲಿಸುವುದಕ್ಕಾಗಲಿಲ್ಲವೆಂದರೆ, ನಮ್ಮ ಗೃಹ ಇಲಾಖೆ ಮತ್ತು ಅರಣ್ಯ ಇಲಾಖೆ ಸಿಬ್ಬಂದಿಯವರು ಎಲ್ಲಿಗೆ ಹೋಗಿದ್ದರು ಎಂದು ಮನಸ್ಸಿಗೆ ಬರುತ್ತಿದೆ. ಆ ಕಾರಣಕ್ಕೆ ಸರ್ಕಾರ ಎಚ್ಚೆತ್ತುಕೊಳ್ಳಬೇಕು. ನಾವೆಲ್ಲರೂ ಒಟ್ಟಿಗೆ ಸೇರಿಕೊಂಡು ಆಲೋಚನೆ ಮಾಡಬೇಕಾಗಿದೆ. ಆ ಕುಟುಂಬಗಳ ಅಕ್ರಂದನ ಮುಗಿಲು ಮುಟ್ಟಿದೆ.

ಇದರ ಬಗ್ಗೆ ನಮ್ಮ ಮನಸ್ಸಿನಿಂದ ನಮ್ಮ ಕುಟುಂಬದವರು ಎಂದು ಸರಿಯಾಗಿ ಯೋಚನೆ ಮಾಡಿದರೆ, ನಮಗೆ ನೇರವಾಗಿ ಗೊತ್ತಾಗುತ್ತಿತ್ತು. ಅರಣ್ಯ ಇಲಾಖೆಯ ಸಿಬ್ಬಂದಿ ವರ್ಗ ಮತ್ತು ಆ ಜನರ ಮಧ್ಯೆ ಇರುವಂತಹ ವೈಷಮ್ಯದಲ್ಲಿ ಅವರನ್ನು ಹತ್ಯೆ ಮಾಡಿದ್ದಾರೆ. ಯಾರು ಹತ್ಯೆಯನ್ನು ಮಾಡಿದ್ದಾರೋ, ಅವರು ಕ್ರೂರಿಗಳು ಎಂದು ನಮ್ಮ ಮನಸ್ಸಿಗೆ ಬರುತ್ತದೆ. ಆ ಕಾರಣಕ್ಕಾಗಿ ಈ ರೀತಿಯ ಘಟನೆಗಳು ಮರುಕಳಿಸಬಾರದು. ನಾನು ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದವನು. ಪ್ರತಿಯೊಬ್ಬ ರೈತರು ಅವರ ಆತ್ಮರಕ್ಷಣೆಗಾಗಿ ಕೋವಿ ಕೊಂಡುಕೊಂಡು ಮತ್ತು ಇಡೀ ಬೆಳೆಯನ್ನು ರಕ್ಷಣೆ ಮಾಡಬೇಕು. ನಮ್ಮ ಭಾಗದಲ್ಲಿ ಆನೆ ಮತ್ತು ಹಂದಿ ದಾಳ ನಿರಂತರವಾಗಿ ನಡೆಯುತ್ತಿರುತ್ತದೆ. ಅರಣ್ಯ ಇಲಾಖೆ ಎಚ್ಚೆತ್ತುಕೊಳ್ಳಲಿಲ್ಲ. ಅಲ್ಲಿ E.T.F. (Elephant Task Force) ಮಾಡಿ ಅಲ್ಲಿ ಇರುವಂತಹ Chief Conservator of Forest ನವರು ಬಂದು ಮಾನ್ಯ ಸಚಿವರ ಹತ್ತಿರ ಮಾತನಾಡಬೇಕಾದರೆ, ನೀನೇ ಗಟ್ಟಿಯಾಗಿದ್ದೀಯಾ, ನೋಡಿಕೊಳ್ಳಪ್ಪ ಎನ್ನುತ್ತಾರಂತೆ. ಎಲ್ಲಾ ಬೆಳೆಗಳು ಸರ್ವನಾಶವಾಗಿ ಹೋಗಿದೆ. ನಾನು ಹೇಳುವುದೇನೆಂದರೆ, ಈ ಕಾರಣಕ್ಕಾಗಿ, ರೈತರ ಹತ್ತಿರ ಇನ್ನೂ ಹದಿನೈದು ಸಾವಿರ ಕೋವಿಗಳಿವೆ. ನಮ್ಮಲ್ಲಿ ರೈತರ ಹತ್ತಿರ ಹದಿನೈದು ಸಾವಿರ ಕೋವಿ ಇದೆ. ಆ ಹದಿನೈದು ಸಾವಿರ ಕೋವಿಯನ್ನು ಇನ್ನೂ ಮಾಡಿಕೊಡಲೇ ಇಲ್ಲ. ರೈತರು ಕಂಗಾಲಾಗಿದ್ದಾರೆ. ಒಂದು ಕಡೆ ಬೆಳೆಗಳಿಗೆ ಹಳದಿ ರೋಗ, ಎಲೆ ಚುಕ್ಕೆ ರೋಗ, ವರುಣನ ಧಾರಾಕಾರ ಮಳೆಯಿಂದಾಗಿ ಈಗಾಗಲೇ ಬೆಳೆ ಹಾನಿಯಾಗಿ ಹೋಗಿದೆ. ಅದರ ಜೊತೆಗೆ ಆನೆ ದಾಳಿಯಿಂದ ಸಂಪೂರ್ಣವಾಗಿ ಕೃಷಿ ಬೆಳೆ ನಾಶವಾಗಿದೆ. ಇದರ ಬಗ್ಗೆ ಸರ್ಕಾರ ಎಚ್ಚೆತ್ತುಕೊಂಡು ರೈತರ ಪರವಾಗಿ ನಿಲ್ಲಬೇಕು. ಅದರ ಜೊತೆಗೆ ಬಡ ಜನರು ದನವನ್ನು ಹಿಡಿದುಕೊಂಡು ಹೋಗಿದ್ದಾರೆ. ಅದರಲ್ಲಿ ಕೊಟ್ಟಿರುವ ಪ್ರಕಾರ 14ನೇ ತಾರೀಖಿನಂದು ಇವರು ಹೋಗಿದ್ದಾರೆ. ಅರಣ್ಯ ಇಲಾಖೆ ಚೆಕ್ ಪೋಸ್ಟ್‌ಗೂ ಮತ್ತು ಅವರು ಹೋಗಿರುವಂತಹ ಜಾಗಕ್ಕೂ ನಾಲ್ಕು ಕಿಲೋ ಮೀಟರ್ ಇರುವಂತಹದ್ದು. ಅಷ್ಟೊಂದು ಸಮಯ ಬೇಕಾಗುತ್ತದೆಯಾ. ಆಧುನಿಕ ತಂತ್ರಜ್ಞಾನವನ್ನು, Night Vision Drone Camera ಉಪಯೋಗಿಸಿಕೊಂಡು ಅವರನ್ನು ಹುಡುಕುವಂತಹ ಕೆಲಸ ಮಾಡಬೇಕು. ಗನ್‌ನಲ್ಲಿ ಹೊಡೆದಾಗ ಅದು spread ಆಗಿ ಹೋಗಿದೆ. ನಮ್ಮಲ್ಲಿ ಅತ್ಯಾಧುನಿಕವಾದಂತಹ ಗನ್ ಇಲ್ಲವೇ? ಲೈಸೆನ್ಸ್ ಇಲ್ಲವೇ? ಅವರಿಗೆ ತರಬೇತಿ ಕೊಟ್ಟಿಲ್ಲವೇ? ಅದನ್ನು ಮಾಡಿಕೊಡುವಂತಹ ಕೆಲಸವನ್ನು ಮಾನ್ಯ ಅರಣ್ಯ ಸಚಿವರು ಮಾಡಬೇಕೆಂದು ನಾನು ತಮ್ಮ ಮೂಲಕ ಅವರಿಗೆ ವಿನಂತಿ ಮಾಡುತ್ತೇನೆ. ದಯವಿಟ್ಟು, ಅವರ ಕುಟುಂಬಕ್ಕೆ ನ್ಯಾಯ ಕೊಡಿ. ಇದು ಕೇವಲ ಆಡಳಿತ ವರ್ಗ ಮತ್ತು ನಮ್ಮ ಮಧ್ಯೆದಲ್ಲಿ ನಡೆಯುವಂತಹ ತಿಕ್ಕಾಟವಲ್ಲ, ಕರ್ನಾಟಕ ರಾಜ್ಯದ ಜನರ ತಿಕ್ಕಾಟವಾಗಿದೆ. ಇವತ್ತು ತಮಿಳುನಾಡಿನ ಸನ್ಮಾನ್ಯ ಮುಖ್ಯಮಂತ್ರಿಗಳು ಹತ್ಯೆಯಾಗಿದೆ ಎಂದು ಹೇಳಿದ್ದಾರೆ. ನಾವು ಹೇಗೆ ಉತ್ತರ ಕೊಡುವಂತಹದ್ದು. ನಾವೆಲ್ಲರೂ ಒಗ್ಗಟ್ಟಾಗಿ ಉತ್ತರ ಕೊಡಬೇಕೆಂದರೆ, ಸರ್ಕಾರ ಎಚ್ಚೆತ್ತುಕೊಂಡು ಕೆಲಸ ಮಾಡಬೇಕು. ಅರಣ್ಯಾಧಿಕಾರಿಗಳು ಯಾರು ತಪ್ಪು ಮಾಡಿದ್ದಾರೆ ಅವರನ್ನು ಹುಡುಕಬೇಕು. ಇದರ ಬಗ್ಗೆ ಮಾನ್ಯ ಅರಣ್ಯ ಸಚಿವರು ಮನಸ್ಸು ಮಾಡಿದರೆ ಸಾಕು. ಅವರಿಗೆ ತುಂಬಾ ಅನುಭವವಿದೆ. ಅರಣ್ಯ ಸಚಿವರು ಅವರ ಹತ್ತಿರ ಹೋಗಿ, ನೇರವಾಗಿ ಪ್ರಶ್ನೆ ಮಾಡಿದರೆ ಗೊತ್ತಾಗುತ್ತದೆ. ಅವರು ತಪ್ಪು ಮಾಡಿದ್ದರೆ, ಅವರನ್ನು ನೇರವಾಗಿ

ಜೈಲಿಗೆ ಕಳುಹಿಸುವಂತಹ ಕೆಲಸ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಅರಣ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ. ಧನ್ಯವಾದಗಳು.

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:-** ಮಾನ್ಯ ರವಿಯವರು ಮಾತನಾಡುವುದಕ್ಕೆ ಎದ್ದು ನಿಂತರು. ಮಾನ್ಯ ಕೆ.ಎಸ್. ನವೀನ್‌ರವರೇ, ತಾವು ಮಾತನಾಡುತ್ತೀರಂತೆ. ಮಾನ್ಯ ರವಿಯವರೇ, ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಅವರು ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತಾರೆ.

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಅರಣ್ಯ ಸಚಿವರು ಈಗ ಒಂದು ಹೇಳಿಕೆಯನ್ನು ಕೊಟ್ಟರು. ನನಗೆ ಅನಿಸುವುದೇನೆಂದರೆ, ಇದನ್ನು ಮಾನ್ಯ ಸಚಿವರು ಸರಿಯಾಗಿ ಓದಿದ್ದರೆ, ಈ entire ವರದಿಯೇ ಒಂದು fabricated or fishy ವರದಿಯಾಗಿತ್ತು. ಇದರ ಬಗ್ಗೆ ಕಾನೂನು ತಜ್ಞರು ಓದಿ ಹೇಳುವುದು ಬೇಕಾಗಿಲ್ಲ. ಈ ವರದಿಯನ್ನು ಮಾನ್ಯ ಸಚಿವರು ಎರಡು ಬಾರಿ ಓದಿ ಬಿಡಿ. ಘಟನೆಯನ್ನು ಮುಚ್ಚಿ ಹಾಕುವುದಕ್ಕೆ ಬೇಕಾಗಿರುವಂತಹ ರೀತಿಯಲ್ಲಿ ಎರಡು ಮತ್ತು ಮೂರನೇ ಪ್ಯಾರಾದಲ್ಲಿ ಹೇಳಿರುವಂತೆ, ಅರಣ್ಯ ಇಲಾಖೆಯವರು ಯಾವ ಕಾರಣಕ್ಕೋಸ್ಕರ ಈ ತರಹ ಘಟನೆ ನಡೆದಿರಬಹುದು.

ಮೊದಲನೆಯಾಗಿ ಹೇಳಿರುವುದೇನೆಂದರೆ, ಬೆಳಗಿನ ಜಾವದಲ್ಲಿ ಐದು ಗಂಟೆಗೆ ಎತ್ತರದ ಪ್ರದೇಶಕ್ಕೆ ನಮ್ಮ ಸಿಬ್ಬಂದಿಗಳು ಹೋದರು ಎಂದು ಹೇಳುತ್ತಾರೆ. ಅಲ್ಲಿಂದ ಕೆಳಗಡೆ ಯಾರೋ ಬೆಂಕಿ; ನಾಡ ಬಂದೂಕು ಗುಂಡಿನ ಕಿಡಿ ಬೆಳಗ್ಗೆ ಸಿಬ್ಬಂದಿಗಳಿಗೆ ಗೋಚರವಾಗುತ್ತಿದೆ.

ಹಾಗೆಯೇ, ಏಳು ಮತ್ತು ಎಂಟನೇ ಪ್ಯಾರಾದಲ್ಲಿ ಇರುವುದೇನೆಂದರೆ, ಯಾರು ಬೇಟೆಗಾರರು ಇದ್ದರೋ, ನಮ್ಮಗಿಂತ ಎತ್ತರ ಪ್ರದೇಶದಲ್ಲಿ ನಿಂತುಕೊಂಡಿದ್ದರು ಎಂದು ಹೇಳುತ್ತಾರೆ. ಇವರು ಎತ್ತರ ಪ್ರದೇಶಕ್ಕೆ ಹೋಗಿದ್ದರು ಎಂದು ಮೊದಲನೇ statement ನಲ್ಲಿ ಹೇಳುತ್ತಾರೆ. ಅವರು ಮತ್ತೊಂದು statement ನಲ್ಲಿ ಹೇಳುವುದೇನೆಂದರೆ, ಬೇಟೆಗಾರರು ನಮ್ಮಗಿಂತ ಎತ್ತರ ಪ್ರದೇಶದಲ್ಲಿ ಇದ್ದರು ಎಂದು ಹೇಳುತ್ತಾರೆ. ಪ್ರಾರಂಭದಲ್ಲಿ ಹೇಳುವುದೇನೆಂದರೆ, 12 ಜನರು ಎರಡು ತಂಡಗಳಾಗಿ ಕಾಡಿನೊಳಗೆ ಹೋಗಿದ್ದರು ಎಂದು ಹೇಳುತ್ತಾರೆ. ಆಮೇಲೆ ಹತ್ತು ಜನರ ತಂಡ ಇತ್ತು ಎಂದು ಹತ್ತು ಜನರ ಹೆಸರನ್ನು ಕೊಡುತ್ತಾರೆ ಎಂದು ಹೇಳುತ್ತಾರೆ... 12 ಜನರು ಎಂದು ಹೇಳಿದಾಗ, 12 ಜನರು ಯಾರು ಎಂದು ಅವರು ಹೇಳಬೇಕಲ್ಲವೇ? ಈ ಘಟನೆಯಲ್ಲಿ ಭಾಗಿಯಾದಂತಹ ಹದಿನೆಂಟು ಸಿಬ್ಬಂದಿಗಳಲ್ಲಿ, ನೀವು ಪ್ರಾರಂಭದಲ್ಲಿ 12 ಜನರು ಎಂದು ಹೇಳಿ, 10 ಜನರು ಇದ್ದರು ಎಂದರೆ ಇನ್ನಿಬ್ಬರು ಯಾರು? ಆ ಸಂದರ್ಭದಲ್ಲಿ ಇದು ಆಗಿರುವುದಕ್ಕೆ ಅವರಿಬ್ಬರು witness ಅಲ್ಲವೇ. ಇನ್ನೊಂದು ಏನು ಹೇಳುತ್ತಾರೆಂದರೆ, ಗುಂಡಿನ ಬೆಳಕು ಸಿಬ್ಬಂದಿಗಳಿಗೆ ಗೋಚರಿಸಿತ್ತು.

**ಶ್ರೀ ರಾಮೋಜಿ ಗೌಡ (ಪದವೀಧರರ ಕ್ಷೇತ್ರ):-** ವಾಹನ ಚಾಲಕರು ಸೇರಿ ಹತ್ತು ಜನರು, ಅಂದರೆ ಹನ್ನೆರಡು ಜನ ಇದ್ದರು.

**ಶ್ರೀ ಕೆ.ಎಸ್. ನವೀನ್:-** ಇಲ್ಲ ಆ ತರಹ ಬರೆದಿಲ್ಲವಲ್ಲ.

**ಶ್ರೀ ರಾಮೋಜಿ ಗೌಡ:-** ಪುನಃ ಮತ್ತೆ ಏನು ಹೇಳಿದ್ದಾರೆಂದರೆ, ವಾಹನ ಚಾಲಕರು ಸೇರಿ ಹತ್ತು ಜನರು ಇದ್ದರು.

**ಶ್ರೀ ಕೆ.ಎಸ್. ನವೀನ್:-** ಇದರಲ್ಲಿ ಎಲ್ಲಿ ಹಾಗೇ ಬರೆದಿದ್ದಾರೆ ಅಣ್ಣ?

**ಶ್ರೀ ರಾಮೋಜಿ ಗೌಡ:-** ಅದನ್ನು ತಾವು ಓದಿ. ವಾಹನ ಚಾಲಕರು ಸೇರಿ ಹತ್ತು ಜನರು ಎಂದು ಹೇಳಿದ್ದಾರೆ. ಮೊದಲನೆಯದು ಹನ್ನೆರಡು ಜನರು. ಅಲ್ಲಿಗೆ ಎರಡು ಒಂದೇ. ಇಲ್ಲಿ ವ್ಯತ್ಯಾಸ ಏನಾಗಿಲ್ಲ. ಏಕೆಂದರೆ, ನಾವು ಹೇಳುವಾಗ ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು.

**ಶ್ರೀ ಕೆ.ಎಸ್. ನವೀನ್:-** ಆಯಿತು ಇದು ಎಲ್ಲಿದೆ ಎಂಬುದನ್ನು ತೋರಿಸಿ.

**ಶ್ರೀ ರಾಮೋಜಿ ಗೌಡ:-** ಇಲ್ಲಿ ಹನ್ನೆರಡು ಜನರು ಎಂದು ಹೇಳಿದ್ದಾರೆ.

**ಶ್ರೀ ಕೆ.ಎಸ್. ನವೀನ್:-** ಇಲಾಖೆ ವಾಹನಗಳಲ್ಲಿ ಹನ್ನೆರಡು ಜನರು ಹೋಗಿದ್ದರು ಎಂಬುದು ಇದೆ.

**ಶ್ರೀ ರಾಮೋಜಿ ಗೌಡ:-** ಹೌದಾ, ಹೋಗಿದ್ದರಾ.

**ಶ್ರೀ ಕೆ.ಎಸ್. ನವೀನ್:-** ಅವರು ಯಾರು? ವಾಹನದಲ್ಲಿ ಹೋಗಿರುವವರ ಹೆಸರು ಇಲ್ಲವೇ?

**ಶ್ರೀ ರಾಮೋಜಿ ಗೌಡ:-** ಒಂದು ನಿಮಿಷ. ಹನ್ನೆರಡು ಜನರು ಎಂದು ಹೇಳಿದ್ದಾರೆ. ಮೂರನೇ ಪೇಜ್‌ನಲ್ಲಿರುವಂತೆ, ವಾಹನ ಚಾಲಕರು ಸೇರಿದಂತೆ ಒಟ್ಟು ಹತ್ತು ಸಿಬ್ಬಂದಿಗಳು ಎಂಬುದು ಇದೆ.

**ಶ್ರೀ ಕೆ.ಎಸ್. ನವೀನ್:-** ಹೌದು. ಅವರಿಗೆ ಹೆಸರು ಇರುವುದಿಲ್ಲವೇ? ನೀವು ಇರುವುದರಲ್ಲಿ...

**ಶ್ರೀ ರಾಮೋಜಿ ಗೌಡ:-** ಒಂದು ದಿನಕ್ಕೆ; 15ನೇ ತಾರೀಖಿನಂದು ಘಟನೆ ನಡೆದಿದ್ದು.

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ.

**ಶ್ರೀ ರಾಮೋಜಿ ಗೌಡ:-** ಒಂದು ನಿಮಿಷ.

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೇ, ಅವರು ಮಾತನಾಡಬೇಕೆಂದರೆ, ಎದ್ದು ನಿಂತುಕೊಂಡು ಮಾತನಾಡಲಿ.

**ಶ್ರೀ ರಾಮೋಜಿ ಗೌಡ:-** ಒಂದು ನಿಮಿಷ. ನಾನು ಹೇಳುವುದೇನೆಂದರೆ,

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೇ, ಇಲ್ಲಿ...

**ಸಭಾಪತಿಯವರು:-** ನೀವು ಅವರಿಗೆ yield ಆಗುತ್ತೀರಾ? ನೀವು ಅವರಿಗೆ ಏತಕ್ಕೆ yield ಆಗುತ್ತೀರಾ?

**ಶ್ರೀ ರಾಮೋಜಿ ಗೌಡ:-** 15ನೇ ತಾರೀಖಿನಂದು ತನಿಖಾಧಿಕಾರಿಗಳಿಗೆ ವರದಿಯನ್ನು ಕೊಟ್ಟಿದ್ದೇವೆ. ನಾವು ಬೆಳಗ್ಗೆ ವರದಿಯನ್ನು ತೆಗೆದುಕೊಂಡಿದ್ದೇವೆ. ಒಂದೇ ದಿನದಲ್ಲಿ ವರದಿ ಬಂದಿದೆ.

**ಸಭಾಪತಿಯವರು:-** ಮಾನ್ಯ ರಾಮೋಜಿಗೌಡರೇ, ಮಾನ್ಯ ನವೀನ್‌ರವರೇ, yield ಆದರೆ ತಾವು ಮಾತನಾಡಿ. ತಾವು yield ಆಗುತ್ತೀರಾ?

**ಶ್ರೀ ಕೆ.ಎಸ್. ನವೀನ್:-** ನಾನು yield ಆಗುವುದಿಲ್ಲ.

**ಸಭಾಪತಿಯವರು:-** ಆಯಿತು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇದಕ್ಕೆ ಉತ್ತರ ಕೊಡುವವರು ಸದಸ್ಯರಾ ಅಥವಾ ಸಚಿವರು ಎಂಬುದನ್ನು ಹೇಳಿ.

**ಸಭಾಪತಿಯವರು:-** ಮಾನ್ಯ ನವೀನ್‌ರವರೇ, ತಾವು ಮಾತನಾಡಿ.

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೇ, ನಾನು ಕೇಳುವುದೇನೆಂದರೆ, ವಾಹನ ಸಿಬ್ಬಂದಿ ಘಟನಾ ಸ್ಥಳದಲ್ಲಿ ಇದ್ದರೆ, they are party to the scene. ಹತ್ತು ಜನರು ಇದ್ದಾರೆ. ಹತ್ತು ಜನರ ಜೊತೆಗೆ ಇಬ್ಬರು ವಾಹನ ಚಾಲಕ ಸಿಬ್ಬಂದಿ ಇದ್ದಾರೆಂದರೆ, ಅವರ ಹೆಸರು ಇದರಲ್ಲಿ ಇರಬೇಕೆಂಬುದು ಮೊದಲನೆಯದು. ಇನ್ನೊಂದು ಏನೆಂದರೆ, ನಾವು ಏನು ಮಾಡಅಲ್ಲ ಎಂದು ಹೇಳುತ್ತಾರೆ. ನಾವು ಐದು ಗಂಟೆಗೆ ಹೋದ ಜಾಗದಲ್ಲಿದ್ದಂತಹ ಸಂದರ್ಭದಲ್ಲಿ ಏಕಾಏಕಿ ನಮ್ಮ ಮೇಲೆ ಅವರು ಗುಂಡಿನ ದಾಳಿ ಪ್ರಾರಂಭ ಮಾಡಿದರು ಎಂದು ಹೇಳುತ್ತಾರೆಂಬುದು ಇದರಲ್ಲಿ ಇರುವಂತಹ statement. ಗುಂಡಿನ ದಾಳಿ ಮಾಡಿದ ನಂತರ ಆ ಸ್ಥಳದಲ್ಲಿ ಇವರು ವಸ್ತುಗಳನ್ನು seize ಮಾಡಿದ್ದಾರೆ. ಗುಂಡಿನ ದಾಳಿ ಮಾಡಿರುವಂತಹದ್ದಕ್ಕೆ ಏನಾದರೊಂದು ಅವರ ನಾಡ ಬಂದೂಕಿನಿಂದ ಸಿಡಿದಿರುವಂತಹ ಒಂದು ಬುಲೆಟ್‌ನ ಭಾಗ ಏನಾದರೊಂದು ಅಲ್ಲಿ ಇರಬೇಕಲ್ಲ. ಯಾರು ಶೂಟ್ ಮಾಡಿದ್ದಾನೋ, ಅವನಿಗೆ ಸಣ್ಣಪುಟ್ಟ ಗಾಯವಾಗಿದೆ. ಅವನು ಚಿಕಿತ್ಸೆ ಪಡೆಯುತ್ತಿದ್ದಾನೆ ಎಂದು ಹೇಳಿದ್ದಾರೆ. ಮಹಜರ್ ಮಾಡಿದಂತಹ ಜಾಗದಲ್ಲಿ ಯಾವುದೇ ನಾಡ ಬಂದೂಕಿನ ಒಂದೇ ಒಂದು ಬುಲೆಟ್ ಸಿಕ್ಕಿದೆ ಎಂದು ಇವರು ತೋರಿಸಿಲ್ಲ. ಈಗ ಅವರು fire ಮಾಡಿಲ್ಲ ಎಂದರೆ ಅವನಿಗೆ ಗಾಯ ಎಲ್ಲಿಂದ ಆಗುತ್ತದೆ ಅಥವಾ ಸ್ಥಳ ಮಹಜರ್ ಮಾಡಿದಾಗ ನನಗೆ ಇಂತಿಂಥ ಚಪ್ಪಲಿ, ಚಮಚ ಸಿಕ್ಕಿತ್ತು ಎಂದು ಹೇಳಿದ್ದಾರೆ. ಅವನು fire ಮಾಡಿದಾಗ ಗುಂಡಾದರೂ ಸಿಗಬೇಕಲ್ಲ. If he has tried to kill our Government Staff, ಅಲ್ಲಿ ಅವನು ಏನು ಬಳಕೆ ಮಾಡಿದ್ದಾನೆಂಬುದು ಅಲ್ಲಿ ಸಿಗಬೇಕಲ್ಲ?

(ಮುಂದು)

(722) 17.08.2026 4.00 TCH-MD (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎಸ್. ನವೀನ್ (ಮುಂದು):**

ಆಮೇಲೆ ಇವರು ಏನು ಹೇಳುತ್ತಾರೆಂದರೆ, ರಾತ್ರಿ 8 ಗಂಟೆಗೆ ಅವರಿಗೆ ಮಾಹಿತಿ ಬಂತು. ಇಡೀ ರಾತ್ರಿ ಶೋಧ ಮಾಡಿದ್ದಾರೆ. ಇಡೀ ರಾತ್ರಿ ಅವರಿಗೆ ಗೊತ್ತಾಗಲಿಲ್ಲ. ಆಮೇಲೆ ಯಾವುದೋ ಒಂದು ಜಾಗಕ್ಕೆ ಹೋದಾಗ, ಅದೇ ಭಾಗದಲ್ಲಿ ಅವರು ಬಂಡೆಗಳ ಮಧ್ಯೆ ಕುಳಿತುಕೊಂಡಿದ್ದರು ಎಂಬುದನ್ನು ಇವರು ಪತ್ತೆ ಮಾಡಅಲ್ಲ. ಅವರೇ ಇವರನ್ನು ಶೂಟ್ ಮಾಡಿದಾಗ, ಅವರು ಅಲ್ಲೇ ಇದ್ದಾರೆ ಎಂದು ಗೊತ್ತಾಯಿತು. ಅಂದರೆ ಈ ವರದಿ background

ಏನಿದೆಯೆಂದರೆ, there is some suspicious event that has happened in this time. ಉದಾಹರಣೆಗೆ ಹೇಳುವುದಾದರೆ, ಅಲ್ಲಿ ಏನೋ ಒಂದು ಅವ್ಯವಹಾರ ನಡೆಯುವಂಥದ್ದಕ್ಕೆ ಇವರು ಸಾಕ್ಷಿಯಾಗಿ ಬಿಟ್ಟಿದ್ದಾರೆ. ಅದು ಇವರ ಮುಂದೆ ನಡೆದಿದೆ ಅಥವಾ ಯಾವುದೋ ಒಂದು crimeನಲ್ಲಿ partner ಆಗಿ ನಮ್ಮವರೇ ಯಾರೋ ಒಬ್ಬರು ಅದನ್ನು ಮಾಡುತ್ತಿರುವುದನ್ನು ನೋಡಿ, ಇವರನ್ನು ಹೇಗಾದರೂ ಮಾಡಿ eliminate ಮಾಡಬೇಕು ಎನ್ನತಕ್ಕಂಥ ಉದ್ದೇಶ ಇಟ್ಟುಕೊಂಡು ಇವರು shoot ಮಾಡಿದ್ದಾರೆ. ಇಲ್ಲವೇ ಇವರು ಆ ರೀತಿ ತಪ್ಪು ಮಾಡಿಲ್ಲವೇ? ಆತ್ಮ ರಕ್ಷಣೆ ಮಾಡಿಕೊಂಡಿದ್ದಾರೆಯೇ? ಆತ್ಮ ರಕ್ಷಣೆ ಮಾಡಿಕೊಂಡಿರುವುದಕ್ಕಾದರೆ ಅಲ್ಲಿ ಅವರ ಹತ್ತಿರ fire ಮಾಡಿರತಕ್ಕಂಥ Gun ನ bullets ಇರಬೇಕಾಗಿತ್ತು. ನಮ್ಮ ಮೇಲೆ ಇಷ್ಟು round fire ಆಗಿತ್ತು ಎಂದು ತೋರಿಸಬೇಕಾಗಿತ್ತು. ಅವರು ನಮ್ಮ ಮೇಲೆ ಇಷ್ಟು ಬಾರಿ fire ಮಾಡಿದ ನಂತರವೇ ನಾವು ನಮ್ಮ fire ಅನ್ನು open ಮಾಡಿದ್ದೆವೆ ಎಂದು ಹೇಳಬೇಕಾಗಿತ್ತು. ಇದ್ಯಾವುದೂ ಕೂಡ ಇಲ್ಲ. ನಾವು ಮೇಲೆ ಇದ್ದೆವು, ಅವರು ಕೆಳಗಡೆ ಇದ್ದರು ಎಂದು ಒಂದು statementನಲ್ಲಿ ಹೇಳಿದ್ದಾರೆ. ಇನ್ನೊಂದು statementನಲ್ಲಿ ಅವರು ಮೇಲೆ ಇದ್ದರು, ನಾವು ಕೆಳಗಡೆ ಇದ್ದೇವೆಂದು ಹೇಳಿದ್ದಾರೆ. ಇದು completely fictitious ಆಗಿದೆ. ನನಗೆ ಅನಿಸುವುದೇನೆಂದರೇ ಅವರು . . .

**ಸಭಾಪತಿಯವರು:-** ಶ್ರೀ ಕೆ.ಸ್.ನವೀನ್ ರವರೇ ಆಯಿತು.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಅವರ ಅಧಿಕಾರಿಗಳು ಕೊಟ್ಟಿರುವ report ಅನ್ನು ಮಾನ್ಯ ಸಚಿವರು ಓದಬೇಕು. ಈಗ Border Areaದಲ್ಲಿ ಸಾಕಷ್ಟು ಕಾನೂನು ಬಾಹಿರ activities ನಡೆಯುವಂಥದ್ದು ಎಲ್ಲರ ಗಮನದಲ್ಲೂ ಇದೆ. ಅಲ್ಲಿ ಬಹಳ rich minerals, ಇದೆ, ಅಲ್ಲಿ ಬಹಳ rich forest products ಇದೆ, Animal trade ಗೆ ಬೇಕಾಗುವಂಥ ರೀತಿಯಲ್ಲಿ ಬಹಳ ಹಿಂದಿನಿಂದಲೂ ಆ ರೀತಿಯದ್ದೆಲ್ಲಾ ನಡೆದುಕೊಂಡು ಬಂದಿರತಕ್ಕಂಥ ಭಾಗ ಎಂದು ಜಗಜ್ಜಾಹಿರು ಆಗಿದೆ. ಈ ೩ ಜನರೇ ಏಕೆ ಅಲ್ಲಿ ನಾಡ ಬಂದೂಕುಗಳನ್ನು ಹಿಡಿದುಕೊಂಡು ಭೇಟೆಗೆ ಹೋಗಿದ್ದರು ಎಂದು ಇವರು ಕೊಟ್ಟಿರತಕ್ಕಂಥ ವರದಿ ಮೇಲೆ ತೀರ್ಮಾನ ಮಾಡಬೇಕು. ಅಂದರೆ ನಮ್ಮ ಸರ್ಕಾರದ ಸಂಪತ್ತನ್ನು ಲೂಟಿ ಮಾಡತಕ್ಕಂಥ ಯಾವುದೋ ಒಂದು ವ್ಯವಸ್ಥಿತ ಜಾಲ ಅಲ್ಲಿ ಇದೆ. ಆ ಜಾಲದಲ್ಲಿ ನಮ್ಮವರು ಭಾಗಿ ಆಗಿರಬಹುದು, ಆ ರೀತಿ ಭಾಗಿಯಾಗಿರುವುದು ಗೊತ್ತಾಗಿ, ಇವರನ್ನು eliminate ಮಾಡಿರುವುದನ್ನು ಇನ್ನೊಂದು angle ನಲ್ಲಿ ನಾವೇಕೆ ನೋಡುತ್ತಿಲ್ಲ? ನಾನು ೩ ಜನ ಸತ್ತಿರತಕ್ಕಂಥವರ ಪರವಾಗಿಯೂ ಮಾತನಾಡುತ್ತಿಲ್ಲ, ಸಾಯಿಸಿರುವವರ ಪರವಾಗಿಯೂ ಹೇಳುತ್ತಿಲ್ಲ. ನಾನು ಈ ಅಷ್ಟೂ ವರದಿಗಳನ್ನು ಸಂಪೂರ್ಣವಾಗಿ fabricate ಮಾಡಿದ್ದಾರೆ ಎಂದು ಹೇಳುತ್ತಿರುವುದು ಏಕೆಂದರೆ ಇದನ್ನು ಓದಿದರೆ ಗೊತ್ತಾಗುತ್ತೆ. ನಾನೇನು ಲಾಯರ್ ಅಲ್ಲ. ಸಾಮಾನ್ಯ common sense ಇರತಕ್ಕಂಥವರಿಗೆ ಗೊತ್ತಾದರೆ ಹೇಳಬೇಕಾಗುತ್ತದೆ. ಇವರು ಮಹಜರ್ ಮಾಡಿದಾಗ, ಇವರೇಕೆ ಇಂತಹ ವಸ್ತುಗಳನ್ನು sieze ಮಾಡಲಿಲ್ಲ. ಅವರು attack ಮಾಡಿದ್ದರೆ ಅದೇಕೆ ನಿಮಗೆ ಸಿಕ್ಕಿಲ್ಲ. ಇವರು ಅವರ ಮೇಲೆ attack ಮಾಡದಿದ್ದರೆ

ಇವರಿಗೆ ಸಣ್ಣಪುಟ್ಟ ಗಾಯ ಹೇಗೆ ಆಯಿತು? ಅದು ಒಬ್ಬರಿಗೆ ಮಾತ್ರ ಗಾಯವಾಗಿದೆ ಎಂದು ಈ ವರದಿಯಲ್ಲಿ ಹೇಳಿದ್ದಾರೆ. ಯಾರು shoot ಮಾಡಿದ್ದಾರೆ . . .

**ಸಭಾಪತಿಯವರು:-** ಮಾನ್ಯ ಕೆ.ಎಸ್.ನವೀನ್ ರವರೇ, ಒಂದು ನಿಮಿಷ. ನಾನು ಮೊನ್ನೆ ದಿವಸವೇ ಹೇಳಿದ್ದೇನೆ. ನಾನು ಒಂದು ಬಾರಿ ಬೆಲ್ ಮಾಡಿದರೆ ನೀವು ಅರ್ಥಮಾಡಿಕೊಳ್ಳಬೇಕು. It should not be continued.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, last one sentence ಹೇಳಿ ಬಿಡುತ್ತೇನೆ. ಏಕೆಂದರೆ ಪ್ರಾರಂಭದಲ್ಲಿ ಮಾತನಾಡಿದವರು ಸುಮಾರು 20 ನಿಮಿಷಗಳ ಕಾಲ ಮಾತನಾಡಿದ್ದಾರೆ. ಆದರೆ ನಾನು ಕೊನೆಗೆ ಮಾತನಾಡುವಾಗ ಹೀಗಾಗುತ್ತದೆ.

**ಸಭಾಪತಿಯವರು:-** ನಾನು ಮಾನ್ಯ ಸಿ.ಟಿ.ರವಿಯವರಿಗೆ ಮಾತನಾಡಲು ಅವಕಾಶ ಕೊಡಬೇಕು ಅಂದುಕೊಂಡಿದ್ದೆ. ನೀವು ನನಗೆ 2 ನಿಮಿಷದಲ್ಲಿ ಮಾತನಾಡುತ್ತೇನೆಂದು ಹೇಳಿದ್ದೀರಿ. ಆದ್ದರಿಂದ ನಿಮಗೆ ಅವಕಾಶ ಕೊಟ್ಟಿದ್ದೇನೆ. ಆಯಿತು ಬೇಗ ಮಾತನಾಡಿ ಮುಗಿಸಿ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಒಂದೇ ಒಂದು sentence ಅನ್ನು ನಾನು ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ಅಷ್ಟೂ ಜನರ ಮಧ್ಯೆ 12 ಜನ ಅಥವಾ 10 ಜನ forest staff ಮಧ್ಯೆ ಶ್ರೀ ಶಿವರಾಜ್ ಸಾಸಲುವಾಡದ, ಗಸ್ತು ಅರಣ್ಯ ಪಾಲಕ ಇವರಿಗೆ ಸಣ್ಣಪುಟ್ಟ ಗಾಯಗಳಾಗಿದೆ ಎಂದು ಹೇಳಿದ್ದಾರೆ. ಆದರೆ ಇನ್ನಾರಿಗೂ ಗಾಯಗಳಾಗಿಲ್ಲ. Shoot ಮಾಡಿರತಕ್ಕಂಥ ವ್ಯಕ್ತಿ ಕೂಡ ಅವರೇ ಆಗಿದ್ದಾರೆ. ಅವರ ಗನ್‌ನಿಂದಲೇ bullets ಹೋಗಿರುವುದು. ಅಂದರೆ ಇದು something fishy ತಾನೆ. 10 ಜನ ಇದ್ದರು. ಆ 10 ಜನ ಒಂದೇ ಜಾಗಲದಲ್ಲಿದ್ದು ನೋಡುತ್ತಿದ್ದರು. ಅವನಿಗೆ ಮಾತ್ರ ಗಾಯಗಳಾಗುತ್ತದೆ, ಅವನೇ ಅವನ ಗನ್‌ನಿಂದ shoot ಮಾಡುತ್ತಾನೆ. ಮಾನ್ಯ ಸಭಾಪತಿಯವರೇ, ಇದು ನನ್ನ submission. ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದನ್ನು ಪೂರ್ತಿಯಾಗಿ ಪರಿಶೀಲನೆ ಮಾಡಬೇಕು. ನಮ್ಮ ನಾಡಿನ ಕಾಡನ್ನು ಕಾಪಾಡುತ್ತಾರೆಂದು ನನಗೆ ಅರಣ್ಯ ಇಲಾಖೆ ಸಿಬ್ಬಂದಿಗಳ ಬಗ್ಗೆ ಬಹಳ ಗೌರವ ಇದೆ. ಆದರೆ ಇದರಲ್ಲಿ there is something fishy. ಇವರು ಪತ್ತೆ ಮಾಡಬೇಕು. ತಪ್ಪಿತಸ್ಥರು ಯಾರೇ ಆಗಿರಲಿ, ಅವರ ಮೇಲೆ ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳಬೇಕು. ನಮ್ಮ ಸರ್ಕಾರ ಸರಿಯಾದಂತಹ ರೀತಿಯಲ್ಲಿ ಕ್ರಮ ತೆಗೆದುಕೊಂಡಿದೆ ಎಂದು ತಿಳಿಸುವಂಥ ಕೆಲಸ ಮಾಡಬೇಕು.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವರ ಇಡೀ ವರದಿಯನ್ನು ಮತ್ತೆ ನಾನು ಪುನರಾವರ್ತನೆ ಮಾಡುವುದಕ್ಕೆ ಹೋಗುವುದಿಲ್ಲ. ಸರ್ಕಾರ ಈ ವರದಿಯಲ್ಲಿ ಮಾನವೀಯತೆ ಪ್ರದರ್ಶನ ಮಾಡಿಲ್ಲ. ಅಲ್ಲಿ 3 ಜನರ ಹತ್ಯೆಯಾಗಿದೆ. ಸತ್ತಿರುವುದು ನಿಜ. ಕಾರಣಗಳೇನಿವೆ ಎಂದು ತನಿಖೆ ನಂತರ ಗೊತ್ತಾಗುತ್ತದೆ. ಒಂದು ಸಾಮಾನ್ಯ ಸಂವೇದನೆಯು ಅವರ ವರದಿಯಲ್ಲಿ ಕಾಣುತ್ತಿಲ್ಲ. ಒಂದು ಸಂವೇದನೆ

ಇರಬೇಕಲ್ಲವೇ? ಸಾವು ಸಾವೇ ಅಲ್ಲವೇ? ಆ ಸಾವಿಗೊಂದು ಸಂವೇದನೆ ಇರಬೇಕಲ್ಲವೇ? ಅವರ ಸಂವೇದನೆ ಎಲ್ಲಿದೆ? ಅಲ್ಲಿಗೆ ಏಕೆ ಹೋಗಿದ್ದರು, ಏನಾಗಿದ್ದರು ಎನ್ನುವುದು ಎರಡನೇ ಮಾತು. ಇದು ಅನುಮಾನಾಸ್ಪದವಾಗಿ ಕಂಡುಬರುತ್ತದೆ. ಮಾನ್ಯ ಕೆ.ಎಸ್.ನವೀನ್ ರವರು entire incident ಅನುಮಾನಾಸ್ಪದವಾಗಿ ಕಂಡುಬರುತ್ತದೆ ಎಂದು ಹೇಳಿದರು. ಶ್ರೀ ಶಿವರಾಜ್ ಸಾಸಲವಾಡ ಆತನಿಗೆ ಮೊದಲು ಗುಂಡು ಬಿತ್ತೋ ಅಥವಾ ಇವನು ಗುಂಡು ಹಾರಿಸಿದ ನಂತರ ಗುಂಡು ಬಿತ್ತೋ? ಮೊದಲು ಅವನಿಗೆ ಏನಾದರೂ ಅವರ ಕಡೆಯಿಂದ ಗುಂಡು ಬಿತ್ತೇ? ಏಕೆಂದರೆ ಅವರು ದೂರದಲ್ಲಿದ್ದಾರೆ. ಅವರು ಹತ್ತಿರದಲ್ಲಿ ಇದ್ದಿದ್ದರೆ ಕೈಯಲ್ಲೇ ಹಿಡಿದುಕೊಳ್ಳಬಹುದಿತ್ತು. ನಿಮ್ಮ ರಿಪೋರ್ಟ್ ಪ್ರಕಾರ ಅವರು ಎತ್ತರದಲ್ಲಿದ್ದಾರೆ, ದೂರದಲ್ಲಿದ್ದಾರೆ. ಎತ್ತರದಿಂದ ಮೊದಲು ಅವರು ಶ್ರೀ ಶಿವರಾಜ್ ಸಾಸಲವಾಡರವರಿಗೆ ಗುಂಡು ಹಾರಿಸಿದರೋ ಅಥವಾ ಶ್ರೀ ಶಿವರಾಜ್‌ಸಾಸಲವಾಡರವರು ಗುಂಡು ಹಾರಿಸಿದ ನಂತರ ಅವರು ಮರು ಗುಂಡು ಹಾರಿಸಿದ್ದಾರೆಯೇ? ಸ್ವಾಭಾವಿಕವಾಗಿ ಹೇಳುವುದಾದರೆ ನಾನು ಮಲೆನಾಡಿನ ಒಡನಾಟದೊಳಗೆ ಅದರ ಅಂಚಿನ ಗ್ರಾಮಗಳಲ್ಲೇ ಇರತಕ್ಕಂಥವನು. ಸ್ವಾಭಾವಿಕವಾಗಿ ಮೊದಲು ಅವರಿಂದ ಗುಂಡು ಬಿದ್ದಿದ್ದರೆ ಇನ್ಯಾರೋ ಸಿಬ್ಬಂದಿ ಗುಂಡು ಹಾರಿಸುತ್ತಿದ್ದರು. ಇವರು ಆಸ್ಪತ್ರೆಗೆ ಹೋಗಬೇಕಾಗಿತ್ತು. ಸಣ್ಣಪುಟ್ಟ ಗಾಯಗಳಾಗಿವೆಯೆಂದು ಅವರೇ ಹೇಳಿದ್ದಾರೆ. ಆ ಗಾಯದ ಬಗ್ಗೆ ಸ್ಪಷ್ಟತೆ ಇಲ್ಲ. ಸಣ್ಣಪುಟ್ಟ ಗಾಯಗಳಾಗಿವೆಯೆಂದರೆ ತರಚು ಗಾಯವೇ ಅಥವಾ ಬಂದೂಕಿನಿಂದ ಆದ ಗಾಯವೇ ಅಥವಾ ಕತ್ತಿಯಿಂದ ಆದಂತಹ ಗಾಯವೇ? ಯಾವುದರಿಂದ ಆದ ಗಾಯ? ಆ ಸ್ಪಷ್ಟತೆ ಇಲ್ಲ. ಇಲ್ಲೂ ಕೂಡ ಅನುಮಾನ ಇದೆ. ನಾನು ಇಷ್ಟೇ ಹೇಳುತ್ತೇನೆ. ನಾನು ಸುತ್ತಿಬಳಸಿ ಹೇಳುವುದಿಲ್ಲ. ಅವರು Magistrate ತನಿಖೆ ಮಾಡಿಸುವ ಬದಲಿಗೆ ನ್ಯಾಯಾಂಗ ತನಿಖೆ ಮಾಡಿಸಲಿ. ಹಾಲಿ ಹೈಕೋರ್ಟ್ ನ್ಯಾಯಾಧೀಶರ ನೇತೃತ್ವದ ನ್ಯಾಯಾಂಗ ತನಿಖೆ ಮಾಡಿಸಲಿ. Immediately B.N.S (Bharatiya Nyaya Sanhita) Section 103 and 104 ಅಡಿಯಲ್ಲಿ ಮೊಕದ್ದಮೆ ದಾಖಲು ಮಾಡಿಸಲಿ. 2013-14ರಲ್ಲಿ ಕೊಪ್ಪದ ತನಿಕೋಡ್ ಬಳಿ Forest Check Post ಹತ್ತಿರ ಒಂದು encounter ಆಗುತ್ತದೆ. ಅವೊತ್ತಿನ ದಿವಸ ತಕ್ಷಣವೇ ಅವರು ಅವರ ವಿರುದ್ಧ Section 302 of Indian Penal Code ಅಡಿಯಲ್ಲಿ ದಾಖಲಿಸಿದ್ದಾರೆ.

ಮಾನ್ಯ ಸಭಾಪತಿಯವರೇ, ಅವರ ಮೇಲೆ B.N.S (Bharatiya Nyaya Sanhita) Section 103 ಅಡಿಯಲ್ಲಿ ಮೊಕದ್ದಮೆ ದಾಖಲು ಮಾಡಿಸಲಿ. ಯಾರ್ಯಾರು ಅಲ್ಲಿ combing ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದಾರೋ, ಅವರ ಮೇಲೆ case book ಮಾಡಿಸಲಿ. ನ್ಯಾಯಾಂಗ ತನಿಖೆಯಲ್ಲಿ ಅವರು ನಿರಪರಾಧಿ ಮತ್ತು ನಿರ್ದೋಷಿಗಳು ಎಂಬುದನ್ನು prove ಮಾಡಲಿ. ಅವರು ಏಕೆ case book ಮಾಡಿಸಿಲ್ಲ. ಒಂದೊಂದು case ನಲ್ಲಿ ಒಂದು ರೀತಿ ಏಕೆ ತೆಗೆದುಕೊಳ್ಳುತ್ತಾರೆ? 2013-14ರಲ್ಲಿ ಕಾಂಗ್ರೆಸ್ ಸರ್ಕಾರವೇ ಅಧಿಕಾರದಲ್ಲಿತ್ತು. ತನಿಕೋಡ್‌ನಲ್ಲಿ ಇವರು ಅಲ್ಲಿ case book ಮಾಡಿಸಿ, ಶ್ರೀ ನವೀನ್ ನಾಯಕ್ ಎಂಬುವರನ್ನು ಜೈಲಿಗೆ ಕಳುಹಿಸಿದ್ದಾರೆ. ಅಲ್ಲಿ ಒಬ್ಬರ ಹತ್ಯೆಯಾಗಿದೆ. ಅವನು most wanted criminal. ಹಲವಾರು ಪೋಲೀಸ್

ಠಾಣೆಗಳಲ್ಲಿ ಮೊಕದ್ದಮೆ ದಾಖಲಾಗಿದ್ದ ವ್ಯಕ್ತಿ. ಆದರೆ ಇಲ್ಲಿ ಹತ್ಯೆಯಾದವರೊಬ್ಬರ ಮೇಲೂ ಯಾವುದೇ ಮೊಕದ್ದಮೆ ದಾಖಲಾಗಿಲ್ಲ. ಅದು ಯಾರೋ ಒಬ್ಬರು ಕುಟುಂಬಸ್ಥರ ಮೇಲೆ 2020 ರಲ್ಲಿ ಯಾವುದೋ ಒಂದು ಪ್ರಕರಣ ದಾಖಲಾಗಿದೆ. ಇನ್ಯಾರೋ ಒಬ್ಬರು ಓಡಿ ಹೋದವರ ಮೇಲೆ ಒಂದು ಪ್ರಕರಣ ದಾಖಲಾಗಿದೆ. ಆದರೆ ಈ ಹತ್ಯೆಗೆ ಒಳಗಾದ 3 ಜನರ ಮೇಲೆ ಅರಣ್ಯ ಇಲಾಖೆಯಾಗಲಿ ಅಥವಾ ಪೊಲೀಸ್ ಇಲಾಖೆಯಾಗಲಿ ಯಾವುದೇ ಮೊಕದ್ದಮೆಗಳನ್ನು ದಾಖಲಿಸಿಲ್ಲ. ಅಂದರೆ ಯಾವುದೇ ಕೇಸ್ ದಾಖಲಾಗಿಲ್ಲವೆಂದಾಗ ಅವರ್ಯಾರೂ Habitual Offenders ಅಲ್ಲ, Criminals ಅಲ್ಲ. ಹಾಗಿರಬೇಕಾದರೆ, ಅವೊತ್ತಿನ ದಿವಸ ಅಲ್ಲಿ most wanted criminal ಸತ್ತಾಗ ಅವೊತ್ತಿನ Section 302 of Indian Penal Code ಅಡಿಯಲ್ಲಿ book ಮಾಡಿದ್ದರು. ಆದರೆ ಇದರಲ್ಲಿ ಏಕೆ ಮೊಕದ್ದಮೆ ದಾಖಲಿಸಿಲ್ಲ.

**ಶ್ರೀ ರಾಮಲಿಂಗಾರೆಡ್ಡಿ (ಅರಣ್ಯ ಸಚಿವರು):-** ಹಿಂದಿನ background ಆಗಲಿ, ಅವರ ಮೇಲೆ ಯಾವುದೇ ಕೇಸ್ ಇಲ್ಲ. ಆದರೆ ಈಗ ದಾಖಲಾಗಿದೆ.

**ಶ್ರೀ ಸಿ.ಟಿ.ರವಿ:-** ನಾನು ಮಾನ್ಯ ಸಚಿವರನ್ನು ಕೇಳುತ್ತಿರುವುದು ಏನೆಂದರೆ, ಹತ್ಯೆ ಮಾಡಿದವರ ಮೇಲೆ ಏನು ಕೇಸ್ ದಾಖಲು ಮಾಡಿದ್ದಾರೆ?

**ಶ್ರೀ ರಾಮಲಿಂಗಾರೆಡ್ಡಿ:-** ಕೇಸ್ ದಾಖಲು ಮಾಡಿಲ್ಲ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, 3 ಜನ ಸತ್ತ ನಂತರವೂ ಈ ಗಳಿಗೆಯವರೆಗೂ ಏಕೆ ಮೊಕದ್ದಮೆ ದಾಖಲು ಮಾಡಿಲ್ಲ? ಹಾಗಿದ್ದರೆ ಈಗ ಇವರ ದೃಷ್ಟಿಯಲ್ಲಿ, ಅವರು ತಮ್ಮ ಆತ್ಮರಕ್ಷಣೆಗಾಗಿ ಅವರೇ ಮೊದಲು ಬಂದೂಕಿನಿಂದ ಗುಂಡು ಹಾರಿಸಿದ್ದರೆ, ಸಿಬ್ಬಂದಿಗಳು ನಾಲ್ಕೈದು ಜನ ಸಾಯಬೇಕಾಗಿತ್ತಲ್ಲವೇ? ಆದರೆ ಯಾರು ಸತ್ತಿದ್ದಾರೆ? ಯಾರಿಗೆ severe injury ಆಗಿದೆ ಹೇಳಬೇಕು. ಬಂದೂಕಿನಿಂದ ಗಾಯ ಆಗಿರುವ ಯಾರಾದರೂ ಒಬ್ಬರು ಸಿಬ್ಬಂದಿಯ ಹೆಸರು ಹೇಳಿ? ಯಾವ situation ನಲ್ಲಿ ಗುಂಡು ಹಾರಿಸುವುದು ಎಂದರೆ ನಮಗೆ ನಾವು ಬದುಕುವುದಕ್ಕೋಸ್ಕರ ಅನಿವಾರ್ಯ ಪರಿಸ್ಥಿತಿ ಬಂದಾಗ ಮಾತ್ರ ಸಿಬ್ಬಂದಿಗಳು ಗುಂಡು ಹಾರಿಸಬೇಕು. ಅಂತಹ ಅನಿವಾರ್ಯ ಪರಿಸ್ಥಿತಿ ಸೃಷ್ಟಿಯಾಗಿದೆ ಎಂದು ನಿಮ್ಮ ವರದಿಯಲ್ಲಿ ಕಾಣುತ್ತಿಲ್ಲ.

(ಮುಂದು)

(723)17.8.2026/4.10/ಎಂ.ಎಂ-ಎ.ಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ.ಟಿ. ರವಿ (ಮುಂದು):**

ಈ ವರದಿಯಲ್ಲಿ ಎಳ್ಳಷ್ಟೂ ಕೂಡ ಕಾಣುತ್ತಿಲ್ಲ. ನೀವು invisible, ಎತ್ತರದಲ್ಲಿದ್ದಾರೆ, ನಿಮ್ಮ ಅರಣ್ಯ ಇಲಾಖೆ ಸಿಬ್ಬಂದಿಗಳಿಗ್ಯಾರಿಗೂ ಕೂಡ ಗಂಭೀರ ಸ್ವರೂಪದ ಗಾಯವಾಗಿಲ್ಲ. ಇವರ ವರದಿ ಪ್ರಕಾರ ಅವರು ಎಷ್ಟು ಜನರಿದ್ದಾರೆ ಎನ್ನುವುದು ಗೊತ್ತಿಲ್ಲ ಎಂದರೂ ಕೂಡ ಕೇವಲ ಬೆಳಕನ್ನಾಧರಿಸಿ ಗುಂಡು ಹಾರಿಸುತ್ತಾರೆ. ಅಂದರೆ ಇದನ್ನೆಲ್ಲಾ ನೋಡಿದಾಗ fabricated ಎಂದು ಅನಿಸುವುದಿಲ್ಲವೇ? ಅದಕ್ಕೆ ನಾನು ಆಗ್ರಹ ಪಡಿಸುವುದಿಷ್ಟೇ, ಸರ್ಕಾರ; ಗೃಹ

ಸಚಿವರು ಮೊದಲು ಇವರ ಮೇಲೆ ಭಾರತೀಯ ನ್ಯಾಯ ಸಂಹಿತೆಯ ಕಲಂ 103 ಮತ್ತು 104ರಡಿ ಮೊಕದ್ದಮೆಯನ್ನು ದಾಖಲು ಮಾಡಿಸಿ ಇದಕ್ಕೆ ಸಂಬಂಧಪಟ್ಟವರನ್ನು ಅರೆಸ್ಟ್ ಮಾಡಬೇಕು. ನಿಷ್ಪಕ್ಷಪಾತ ನ್ಯಾಯಾಂಗ ತನಿಖೆ ನಡೆಸಲಿ. ಮ್ಯಾಜಿಸ್ಟ್ರೇಟ್ ತನಿಖೆಯಲ್ಲ, ಅರಣ್ಯ ಇಲಾಖೆಯ ತನಿಖೆ ಅಲ್ಲ, ಹಾಲಿ ಹೈಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ನಡೆಸಲಿ. ನೋಡಿ, ಚಪ್ಪಲಿಯ ಸೀಲ್ ಸಹ ತೆಗೆದಿಲ್ಲ. ಕಾಡಿಗೆ ಶಿಕಾರಿಗೆ ಹೋಗುವವನು ಹವಾಯಿ ಚಪ್ಪಲಿ ಹಾಕಿಕೊಂಡು ಹೋಗುವುದಿಲ್ಲ. ಅದು ಉಪಯೋಗಿಸದಿರುವ ಚಪ್ಪಲಿ. ಅವನು ಶಿಕಾರಿಗೆ ಹೋಗಿದ್ದನಾ ಅಥವಾ ಶಾಪಿಂಗ್‌ಗೆ ಹೋಗಿದ್ದನಾ? ಇವರು ಸೀಜ್ ಮಾಡಿರುವಂತಹ ಚಪ್ಪಲಿ ಉಪಯೋಗಿಸಿಯೇ ಇಲ್ಲ, ಅದರ ಸೀಲ್ ಸಹ ತೆಗೆದಿಲ್ಲ, ಅದರ ಮೇಲೆ ಕಾಲನ್ನೂ ಊರಿಲ್ಲ. ಅಂದರೆ ಅವನು ಕಾಡಿಗೆ ಶಾಪಿಂಗ್‌ಗೆ ಹೋಗಿದ್ದನಾ? ಅಥವಾ ಶಾಪಿಂಗ್‌ನಿಂದ ಬರುತ್ತಾ ಕಾಡಿನೊಳಗೆ ತಪ್ಪಿಸಿಕೊಂಡುಬಿಟ್ಟರಾ? ಇವರು ವಶಪಡಿಸಿಕೊಂಡಿರುವ ಪರಿಕರಗಳಂದ ಹಿಡಿದು ಆ ಬ್ಯಾಗ್, ಆ ಚಪ್ಪಲಿಯಲ್ಲಿ ಕಾಲೂರಿರುವ ಗುರುತೂ ಇಲ್ಲ. ಒಬ್ಬ ಶಿಕಾರಿಗೆ ಹೋಗುವವನು ಗನ್ ತೆಗೆದುಕೊಂಡು ಹೋಗಿದ್ದ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಮಾಂಸವನ್ನು ತುಂಬಿಕೊಂಡು ಬರುವುದಕ್ಕೆ ಚೀಲ, ಪಾತ್ರೆಗಳನ್ನು ತೆಗೆದುಕೊಂಡು ಹೋಗುತ್ತಾನೆ ಎಂದರೆ ಒಪ್ಪಿಕೊಳ್ಳುತ್ತೇನೆ. ಕತ್ತಿಯನ್ನು ತೆಗೆದುಕೊಂಡು ಹೋಗಿದ್ದ ಎಂದರೆ ಒಪ್ಪಿಕೊಳ್ಳುತ್ತೇನೆ. ಉಪಯೋಗಿಸದಿರುವ ಹೊಸ ಹವಾಯಿ ಚಪ್ಪಲಿಯನ್ನು ಏತಕ್ಕೆ ತೆಗೆದುಕೊಂಡು ಹೋಗುತ್ತಾನೆ? ಇದು ಸಂಶಯಾಸ್ಪದ ಎಂದು ಅನಿಸುವುದಿಲ್ಲವೇ? ಇದನ್ನೆಲ್ಲಾ ನೋಡಿದಾಗ ಮಾನ್ಯ ಸದಸ್ಯರಾದ ನವೀನ್‌ರವರು ಅನುಮಾನ ಪಟ್ಟಿರುವ ರೀತಿಯಲ್ಲಿ ಏನೋ ಇದೆ. ನಮ್ಮಲ್ಲಿ ಎರಡು wildlife sanctuary ಬರುತ್ತವೆ. ಕೇರಳದಿಂದ ವ್ಯವಸ್ಥಿತವಾಗಿ ಬಂದು ಕಾಡುಕೋಣವನ್ನು, ಸಾರಂಗವನ್ನು ಮತ್ತು ಜಿಂಕೆಗಳನ್ನು ಶಿಕಾರಿ ಮಾಡಿಕೊಂಡು ತೆಗೆದುಕೊಂಡು ಹೋಗುತ್ತಿದ್ದರು. ಅವರ ಜೊತೆಗೆ ಸಹಕರಿಸುತ್ತಿದ್ದವರು ಯಾರೆಂದರೆ ಅರಣ್ಯ ಇಲಾಖೆ ಸಿಬ್ಬಂದಿಗಳು. ನಮ್ಮಲ್ಲಿಗೆ ಕುದುರೆಮುಖ Kudremukha National Park, Bhadra Wildlife Sanctuary ಗೆ ರೈಫಲ್ ತೆಗೆದುಕೊಂಡು ಬರುತ್ತಿದ್ದರು. Telescope ಇರುವಂತಹ, correct range ಇರುವಂತಹ ಒಂದು ಪಾಯಿಂಟ್ ಸಹ ಆಚೆ, ಈಚೆ ಹೋಗದಿರುವಂತಹ 8 mm ರೈಫಲ್ ಒಂದನ್ನು ತೆಗೆದುಕೊಂಡು ಬಂದು ಶಿಕಾರಿ ಮಾಡಿಕೊಂಡು ಹೋಗುತ್ತಿದ್ದರು. ಆ ರೀತಿ ಇಲ್ಲಿ ಅನುಮಾನಾಸ್ಪದವಾಗಿ ಏನೋ ಇದೆ. ಆದ್ದರಿಂದ ಈ ವರದಿಯು ಸಮಾಧಾನಕರವಾಗಿಲ್ಲ, ಸಂವೇದನಾಶೀಲವಾದುದಲ್ಲ, ಮಾನವೀಯತೆಯಿಂದ ಕೂಡಿರುವಂತಹದ್ದಲ್ಲ. ಅದಕ್ಕೆ ನಾನು ಆಗ್ರಹಿಸುವುದೇನೆಂದರೆ, ಈ ಮ್ಯಾಜಿಸ್ಟ್ರೇಟ್ ತನಿಖೆಯನ್ನು ವಾಪಸ್ ತೆಗೆದುಕೊಳ್ಳಿ, ಹಾಲಿ ಹೈಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ನಡೆಸಿ. ಹತ್ಯೆಗೊಳಗಾಗಿರುವವ ಬಗ್ಗೆ ನಿಮಗೆ ಒಂದು ಸಣ್ಣ sympathy ಇಲ್ಲ. ನಿಷ್ಪಕ್ಷಪಾತವಾಗಿ; ನಿಮ್ಮ ರಿಪೋರ್ಟ್ ಪ್ರಕಾರ ಅವರು ಯಾರೂ habitual offenders ಅಲ್ಲ, ಕ್ರಿಮಿನಲ್ಸ್ ಅಲ್ಲ. ಅವರು 'ವೀರಪ್ಪನ್' ಸಹಚರರಾ ಎಂದು ಏನೂ ನಿಮ್ಮ ವರದಿಯಲ್ಲಿ ಇಲ್ಲ. ಏನಾದರೂ ಅವರು ನಿತ್ಯ ಶಿಕಾರಿ ಮಾಡುವವರಾಗಿದ್ದರೆ, ಅದನ್ನೇ ದಂಧೆ ಮಾಡಿಕೊಂಡಿರುವವರಾಗಿದ್ದರೆ ಅರಣ್ಯ ಇಲಾಖೆಯು ಅವರನ್ನು 'Noted Criminals' ಎಂದು

identify ಮಾಡಬೇಕಾಗಿತ್ತು. ಹಾಗಾಗಿ ನನಗೆ ಅನಿಸುವುದೇನೆಂದರೆ, ಇದರಿಂದ ಅರಣ್ಯ ಇಲಾಖೆಯ ಸಿಬ್ಬಂದಿಗಳ ಮನೋಸ್ಥೈರ್ಯ ಕುಸಿಯಬಾರದು ಎಂಬುದನ್ನು ಒಪ್ಪಿಕೊಳ್ಳುತ್ತೇನೆ. Shelter ನ್ನೂ ತೆಗೆದುಕೊಳ್ಳಬಾರದು. ಯಾರನ್ನೂ ಕೂಡ ಕೊಲ್ಲುವುದಕ್ಕೆ ಸಿಗುವಂತಹ ಲೈಸೆನ್ಸ್ ಎಂದು ಭಾವಿಸಬಾರದು. ಬರೀ ಅರಣ್ಯ ಇಲಾಖೆ ಸಿಬ್ಬಂದಿಗಳ ಕಾರಣದಿಂದ ಅರಣ್ಯ ಉಳಿದಿಲ್ಲ. ಅದು ಜನರ ಸಹಭಾಗಿತ್ವದಲ್ಲಿ ಉಳಿದಿದೆ. ಅರಣ್ಯ ಇಲಾಖೆ ಎನ್ನುವಂಥ ವ್ಯವಸ್ಥೆ ಇಲ್ಲದಿದ್ದಾಗಲೂ ಕೂಡ ಇದಕ್ಕಿಂತ ದಟ್ಟವಾದ ಅರಣ್ಯ ಇತ್ತು. ನಮ್ಮದು ಎಂದು ರಕ್ಷಣೆ ಮಾಡಿಕೊಂಡು ಬಂದಿದ್ದರು. ನಮ್ಮದು ಎಂಬ ಭಾವನೆ ಹೋದರೆ ಸಿಬ್ಬಂದಿಗಳಿಂದ ಅರಣ್ಯವನ್ನು ಉಳಿಸಿಕೊಳ್ಳುವುದಕ್ಕಾಗುವುದಿಲ್ಲ. ಅದರ ಹೆಸರಿನಲ್ಲಿ ಇನ್ನಷ್ಟು ಲೂಟಿ ಹೊಡೆಯಬಹುದಷ್ಟೇ. ಅದಕ್ಕೆ ನನ್ನ ಆಗ್ರಹವೇನೆಂದರೆ, ಸಂವೇದನೆ ತೋರಿಸಿ ನ್ಯಾಯಾಂಗ ತನಿಖೆ ಮಾಡಿಸಿ ಮತ್ತು ಆ ಕುಟುಂಬಕ್ಕೆ ಕನಿಷ್ಠ 50 ಲಕ್ಷ ರೂಪಾಯಿಗಳ ಪರಿಹಾರವನ್ನು ಘೋಷಣೆ ಮಾಡಿ. ಏತಕ್ಕೆ ಪರಿಹಾರ ಘೋಷಣೆ ಮಾಡಿಲ್ಲ? ಈಗ ಐದು ಲಕ್ಷ ರೂಪಾಯಿಗಳ ಪರಿಹಾರ ಕೊಟ್ಟಿದ್ದಾರೆ. ಅಲ್ಲಿನ ಎಂ.ಎಲ್.ಎ. ವೈಯಕ್ತಿಕವಾಗಿ 10 ಲಕ್ಷ ರೂಪಾಯಿಗಳನ್ನು ಕೊಡುತ್ತೇನೆ ಎಂದು ಹೇಳಿದ್ದಾರೆ. ಸರ್ಕಾರ ಬರೀ 5 ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ಆದ್ದರಿಂದ ಕನಿಷ್ಟ 50 ಲಕ್ಷ ರೂಪಾಯಿಗಳ ಪರಿಹಾರವನ್ನು ಘೋಷಣೆ ಮಾಡಿ, ಈ ವರದಿಯನ್ನು ವಾಪಸ್ ತೆಗೆದುಕೊಳ್ಳಿ. ಇದಿಷ್ಟು ನಮ್ಮ ಆಗ್ರಹವಾಗಿದೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. 15ನೇ ತಾರೀಖು ಬೆಳಗಿನ ಜಾವ ಸುಮಾರು 5 ಗಂಟೆಗೆ ಏನು ಈ ಘಟನೆ ನಡೆದಿದೆ ಇದರಲ್ಲಿ ನಾಲ್ಕು ಜನರು ಒಬ್ಬರು ಅಂತೋಣಿಸ್ವಾಮಿ ಬಿನ್ ಪೆರಿಯನಾಯಗಂ, ಇನ್ನೊಬ್ಬರು ಜಾನ್‌ರೋಸ್ ಪೀಟರ್ ಬಿನ್ ಯಾಕೂಬ್, ಕುಮಾರ್ ಬಿನ್ ಲೇಟ್ ಸವಾರಿಯಪ್ಪನ್ ಮತ್ತು ಮಹಿಮದಾಸ್ ಬಿನ್ ಬೆಂಜಮಿನ್ ಈ ನಾಲ್ಕು ಜನರು ಇದ್ದಂತಹ ಸಂದರ್ಭದಲ್ಲಿ ಮೂರು ಜನರು ಅರಣ್ಯ ಇಲಾಖೆ ಸಿಬ್ಬಂದಿಗಳಿಂದ ಎನ್‌ಕೌಂಟರ್ ಆಗಿದ್ದಾರೆ ಎಂದು ಏನು ಈ ವರದಿಯನ್ನು ಮಾನ್ಯ ಸಚಿವರು ಮಂಡಿಸಿದ್ದಾರೆ ಇದರ ಬಗ್ಗೆ ಎಲ್ಲರೂ ಕೂಡ ಅವರವರ angle ನಲ್ಲಿ ಚರ್ಚೆ ಮಾಡಿದ್ದಾರೆ. ಇದರಲ್ಲಿ ಬಹಳಷ್ಟು ನ್ಯೂನತೆಗಳೂ ಇವೆ, ಕೆಲವು ವಾಸ್ತವಾಂಶಗಳೂ ಕೂಡ ಇದರಲ್ಲಿ ಇದೆ ಎಂದು ನಾನು ಭಾವಿಸುತ್ತೇನೆ. ಏಕೆಂದರೆ, ಒಬ್ಬರ ಬಗ್ಗೆ ಮಾತ್ರ ಪೊಲೀಸ್ ಕೇಸ್ ಆಗಿದೆ, ಇನ್ನ್ಯಾರ ಮೇಲೂ ಇಲ್ಲ, ಯಾವುದೇ ಕ್ರಿಮಿನಲ್ ಕೇಸ್‌ಗಳಿರಲಿಲ್ಲ, ಇವೆಲ್ಲಾ ಏನೇ ಇದ್ದರೂ ಕೂಡ ನೂರು ಸಲ, ಇನ್ನೂರು ಸಲ ಕಳ್ಳತನ ಮಾಡಿದವನು ಒಂದು ಸಲವೂ ಸಿಕ್ಕಿಕೊಳ್ಳುವುದಿಲ್ಲ. ಕೆಲವರು ಒಂದೇ ಸಲಕ್ಕೆ ಸಿಕ್ಕಿಹಾಕಿಕೊಂಡು ಬಿಡುತ್ತಾರೆ. ಈ ನಾಲ್ಕು ಜನರು 14ನೇ ತಾರೀಖು ರಾತ್ರಿ 8 ಗಂಟೆಗೆ ಅರಣ್ಯಕ್ಕೆ ಹೋಗಿದ್ದರು. ಅದರ ಬಗ್ಗೆ ಅರಣ್ಯ ಇಲಾಖೆ ಸಿಬ್ಬಂದಿಗಳಿಗೆ ಮಾಹಿತಿ ಬಂತು. ಅವರು ಎರಡು ತಂಡಗಳಾಗಿ ಹುಡುಕುವುದಕ್ಕೆ ಪ್ರಯತ್ನ ಮಾಡಿದರು. ಬೆಳಗಿನ ಜಾವ 4 ಗಂಟೆಗೆ ಘಟನೆ ಗೋಚರವಾಯಿತು, ಅವರು ನೋಡಿದರು, ಅವರು ಆ ಕಡೆಯಿಂದ ಗುಂಡು ಹಾರಿಸಿದರು, ಗುಂಡು ಬಂದ ಕಡೆಗೆ ಇವರು ಗುಂಡು ಹಾರಿಸಿದರು. ಆ ಸಮಯದಲ್ಲಿ ಏನೋ ಒಂದು ಆಗಿದೆ. ನಾಲ್ಕು ಜನರಲ್ಲಿ

ಮೂರು ಜನರು ಇನ್ನೂ ಸತ್ತಿರಲಿಲ್ಲ, ಇವರು ಹೋಗಿ ನೋಡಿದರು, ಮೂರು ಜನರು ಒದ್ದಾಡುತ್ತಿದ್ದರು, ಒಬ್ಬನು ಓಡಿ ಹೋಗುತ್ತಿದ್ದನು. ಆ ಮೂರು ಜನರನ್ನು ಎತ್ತಿಕೊಂಡು ಹೋಗಿ ಸ್ಥಳೀಯ ಆಸ್ಪತ್ರೆಗೆ ಸೇರಿಸಿದರು. ಅಲ್ಲಿ ಅವರು ತೀರಿ ಹೋಗಿದ್ದಾರೆಂದು ಘೋಷಣೆ ಮಾಡಿದರು. ಅಲ್ಲಿಂದ ಮೈಸೂರಿನ ಆಸ್ಪತ್ರೆಗೆ ಸಾಗಿಸಿದರು. ಆದರೆ ಇವರು ಕೆಳಗಡೆ ನಿಂತಿದ್ದರು, ಅವರು ಮೇಲೆ ನಿಂತಿದ್ದರು, ಅವರು ಮೇಲಿನಿಂದ ಗುಂಡು ಹಾರಿಸಿದರು, ಇವರು ಕೆಳಗಡೆಯಿಂದ ಗುಂಡು ಹಾರಿಸಿದರು ಎಂದು ನಾವು ಇಲ್ಲಿ ಹೇಳುತ್ತಿದ್ದೇವಲ್ಲಾ ಇದಕ್ಕೆಲ್ಲಾ ಪ್ರತ್ಯಕ್ಷ ಸಾಕ್ಷಿ ಯಾರೆಂದರೆ ಓಡಿ ಹೋಗಿರುವ ಮಹಿಮದಾಸ್ ಬಿನ್ ಬೆಂಜಮಿನ್ ಎಂಬುವವನು ಇದಕ್ಕೆ ಪ್ರತ್ಯಕ್ಷ ಸಾಕ್ಷಿ.

(ಮುಂದು)

(724) 17-08-2026 4-20 KH/AK (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪುಟ್ಟಣ್ಣ (ಮುಂದು):**

ಅವರು ಎಷ್ಟು ಜನ ಹೋಗಿದ್ದರು. ಅಲ್ಲಿ ಏನು ನಡೆಯಿತು. ಇದು ಹೇಗೆ-ಹೇಗಾಯಿತು ಎಂದು ಅವನೊಬ್ಬನಿಗೆ ಗೊತ್ತಿರುವುದು. ನಾವು ಇಷ್ಟೆಲ್ಲಾ ಮಾತನಾಡುತ್ತಿದ್ದೇವೆ. ಅದರಲ್ಲಿ ಒಬ್ಬ ಓಡಿ ಹೋಗಿರುವವನು ಬದುಕಿದ್ದಾನೆಯಲ್ಲವೇ? ಅವನನ್ನು ಹಿಡಿದುಕೊಂಡು ಬಂದು ವಿಚಾರಣೆ ಮಾಡಿ. ದೊಡ್ಡ ದೊಡ್ಡ ಅಪರಾಧಿಗಳಿಗೆಲ್ಲಾ ಮಂಪರು ಪರೀಕ್ಷೆ ಮಾಡುತ್ತಿರಲ್ಲವೇ? ಇವನಿಗೂ ಮಂಪರು ಪರೀಕ್ಷೆ ಮಾಡಿ. ಸುಳ್ಳು ಹೇಳಿಬಿಡುತ್ತಾನೆಯೆಂದರೆ ಹೇಗೆ? ಅವನು 3 ಜನರ ಪರವಾಗಿ ಹೇಳಿ ಅರಣ್ಯ ಇಲಾಖೆಯ ವಿರುದ್ಧವಾಗಿ ಹೇಳಬಹುದು ಅಥವಾ 3 ಜನರ ವಿರುದ್ಧವೇ ಹೇಳಬಹುದು. ಅಲ್ಲಿ ಏನು ನಡೆದಿದೆ, ಏನು ಹೇಳುತ್ತಾನೆ ಎನ್ನುವುದು ಗೊತ್ತಿಲ್ಲ. ಅದರ ಸತ್ಯಾಸತ್ಯತೆ ಗೊತ್ತಾಗಬೇಕಲ್ಲವೇ? ಇವರು ಭೇಟೆಗೆ ಹೋಗಿರುವುದು, ಅಲ್ಲಿ ಮಾಂಸ ಸಿಕ್ಕಿರುವುದು, ಅದು ಯಾವುದರ ಮಾಂಸ ಎಂದು ಗೊತ್ತೇ ಇಲ್ಲ ಎಂದು ಮಾನ್ಯ ಎಸ್.ಎಲ್.ಭೋಜೇಗೌಡರವರು ಹೇಳುತ್ತಿದ್ದರು. ಈ ಅರಣ್ಯ ಇಲಾಖೆಯವರು ಜಿಂಕೆಯನ್ನು ನೋಡಿದ್ದಾರೆಯೇ ಹೊರತು ಚರ್ಮ ಕುಯ್ದು ಒಳಗಡೆ ಮಾಂಸ ನೋಡುವುದಿಲ್ಲ. ನನ್ನ ಭಾವನೆಯಲ್ಲಿ ಅವರದ್ದು ಅರಣ್ಯ ಕಾಯುವಂತಹ ಕೆಲಸವಲ್ಲವೇ? ಅಲ್ಲಿ ಏನಾಗುತ್ತದೆ ಎಂದು ನಾನು ನೋಡಿದ್ದೇನೆ. ಒಂದು ವರ್ಷದ ಹಿಂದೆ ನಾನು ಕಬಿನಿಗೆ ಭೇಟಿ ನೀಡಿದ್ದೆ. ಬೆಳಗ್ಗೆ 9-30, 10 ಗಂಟೆಗೆ ಒಂದು ಗೆಸ್ಟ್ ಹೌಸ್ ಹತ್ತಿರ ಟೀ ಕೊಟ್ಟರು. ಟೀ ಕೊಡುತ್ತಿರಬೇಕಾದರೆ, ಒಂದು ಗಾಡಿಯಲ್ಲಿ ಒಬ್ಬನನ್ನು ಹಾಕಿಕೊಂಡು ಬರುತ್ತಿದ್ದರು. ಅಲ್ಲಿ ಏನಾಯಿತೆಂದರೆ, ಇವರು ಕಾಡಿನಲ್ಲಿ ಹೋಗುತ್ತಿರುವಾಗ ಕರಡಿ ದಾಳಿ ಮಾಡಿ, ಒಂದು ಕಣ್ಣನ್ನು ಕಿತ್ತುಬಿಟ್ಟಿದೆ. ಅವನ ಕಣ್ಣು ಹೀಗೆ ನೇತಾಡುತ್ತಿದೆ. ಅವನನ್ನು ಕರೆದುಕೊಂಡು ಹೋಗುವುದಕ್ಕೆ ಫುಲ್ ಟೆನ್ಷನ್‌ನಲ್ಲಿ ಇದ್ದಾರೆ. ನಾವು ಹೋಗಿದ್ದಂತಹವರು ಅರ್ಜೆಂಟ್‌ಗೆ ಅವರ ಹತ್ತಿರ ದುಡ್ಡು ಇದೆಯೋ, ಇಲ್ಲವೋ ಎಂದು ತಿಳಿದುಕೊಂಡು ನಮ್ಮಿಂದ ಒಂದು ಲಕ್ಷ ಹಣವನ್ನು ಕೊಟ್ಟು

ಮೈಸೂರು ಆಸ್ಪತ್ರೆಗೆ ಸೇರಿಸಿ ಎಂದು ಹೇಳಿದೆ. ಅಲ್ಲಿಂದ ಬಂದು ಮಾನ್ಯ ಸಚಿವರಾದ ಈಶ್ವರ ಖಂಡ್ರೆಯವರನ್ನು ಭೇಟಿ ಮಾಡಿ ತಿಳಿಸಿದಾಗ ಸಂಪೂರ್ಣವಾಗಿ ಅಲ್ಲಿಗೆ ಆಗುವಂತಹ ವೆಚ್ಚವನ್ನು ಪೂರ್ಣವಾಗಿ ಕೊಡಿ ಎಂದು ಹೇಳಿದರು. ಸುಮಾರು 20 ರಿಂದ 25 ಲಕ್ಷ ರೂಪಾಯಿಗಳು ಆಗಿರಬೇಕು. ಅರಣ್ಯವನ್ನು ಕಾಯುತ್ತಿರುವವರು ಯಾರು ಶ್ರೀಮಂತರು ಅಲ್ಲ, ಮಧ್ಯಮವರ್ಗದವರು ಅಲ್ಲ. ಅತ್ಯಂತ ಕಡುಬಡವರು ಕೇವಲ 15 ರಿಂದ 16 ಸಾವಿರಗಳಿಗೆ ಕೆಲಸ ಮಾಡುತ್ತಿದ್ದಾರೆ. ಅವರು ಒಂದು ಬಾರಿ ಅಲ್ಲಿಗೆ ಹೋದರೆ, ಅವರು ಮನೆಗೆ ಹೋಗಲು ಆಗಿಲ್ಲ. ಅಲ್ಲಿಯೇ ಏನೋ ಮಾಡಿಕೊಂಡು ತಿಂದುಕೊಂಡು ಇರಬೇಕು. ಅವರ ಮಕ್ಕಳ ಭವಿಷ್ಯ ಏನು? ಅರಣ್ಯ ರಕ್ಷಕರಿಗೆ ಅಲ್ಲಿ ಏನು ಭವಿಷ್ಯ ಇದೆ. ಆದ್ದರಿಂದ, ಈ 3 ಜನರಿಗೆ ನ್ಯಾಯ ಸಿಗಬೇಕು. ನಾವು ಎಷ್ಟೇ ದುಡ್ಡು ಕೊಟ್ಟರೂ ಕೂಡ ಪ್ರಾಣ ತಂದು ಕೊಡುವುದಕ್ಕೆ ಆಗುವುದಿಲ್ಲ. ಇನ್ನೊಬ್ಬನು ಸಿಗಬೇಕೆನ್ನುವುದು ಒಂದು ಕಡೆಯಾದರೆ, ಅರಣ್ಯದಲ್ಲಿ ಕೆಲಸ ಮಾಡುವವರೇ ಅರಣ್ಯವನ್ನು ಕಾಯುವುದಕ್ಕೆ ಆಗುವುದಿಲ್ಲ. ಬಾರ್ಡರ್‌ನಲ್ಲಿ ರೈತರು ಮತ್ತು ಹಳ್ಳಿಯವರ ಸಹಕಾರ ಇಲ್ಲವೆಂದರೆ, ಯಾರು ಅರಣ್ಯವನ್ನು ಕಾಯುವುದಕ್ಕೆ ಸಾಧ್ಯವೇ ಇಲ್ಲ. ಇದನ್ನು ಸಹಭಾಗಿತ್ವದಲ್ಲಿ ಮಾಡಬೇಕು. ಹಳ್ಳಿಯಲ್ಲಿರುವಂತಹವರನ್ನು ಕೂಡ ಜೊತೆಗೆ ಸೇರಿಸಿಕೊಳ್ಳಬೇಕು. ಅರಣ್ಯ ರಕ್ಷಣೆಗೆ ಹೋಗುತ್ತಾರೆಯಲ್ಲವೇ? ಇವತ್ತು ಅವರೆಲ್ಲರೂ ಕೂಡ Daily Wages ಮೇಲೆ 15 ರಿಂದ 16 ಸಾವಿರಗಳಿಗೆ ಕೆಲಸ ಮಾಡುತ್ತಿದ್ದಾರೆ. ನಾನು ಅವರ ಹತ್ತಿರ ತಮಗೆ ಏನೇನು ಸೌಲಭ್ಯಗಳು ಇದೆ ಎಂದು ಕೇಳಿದೆ. ಅವರಿಗೆ ಹೆಲ್ತ್ ಇನ್ಸೂರೆನ್ಸ್ ಬಿಟ್ಟರೆ ಇನ್ನೇನೂ ಸೌಲಭ್ಯಗಳು ಇಲ್ಲ. ಅರಣ್ಯಕ್ಕೆ ಹೋಗುವುದು, ಸೊಳ್ಳೆಯಿಂದ ಕಚ್ಚಿಸಿಕೊಳ್ಳುವುದು, ಅಲ್ಲಿಯೇ ಒಂದ್ಚೂರು ತಿನ್ನುವುದು. ಬರುವುದು ಇಷ್ಟೇ ಇದೆ. ಇವತ್ತಿನ ದಿನ ಹಳ್ಳಿಗಳಿಗೂ ಕೌನ್ಸಿಲಿಂಗ್‌ಗಳನ್ನು ಮಾಡಿ, ಇವರ ಸಹಭಾಗಿತ್ವದಲ್ಲಿ ಅರಣ್ಯ ರಕ್ಷಣೆ ಮಾಡುವಂತಹ ಕೆಲಸ ಮಾಡಬೇಕು. ಇವರು ಯಾರ್ಯಾರು ಬೇಟೆಯಾಡುತ್ತಾರೆ ಎಂದು ತಮಗೆ ಗೊತ್ತಾಗಬೇಕಲ್ಲವೇ? ಅದು ಹೇಗೆ ಗೊತ್ತಾಗುತ್ತದೆ. ಒಬ್ಬ ನೂರು ಬಾರಿ ಹೋದರೂ ಗೊತ್ತಾಗುವುದಿಲ್ಲ. ಹಳ್ಳಿಗಳಲ್ಲಿ ಯಾರ್ಯಾರು ಬೇಟೆಯಾಡುತ್ತಾರೆ ಎಂದು ತಮಗೆ ಗೊತ್ತಾಗಬೇಕೆಂದರೆ, ಸ್ಥಳೀಯವಾಗಿ ಅರಣ್ಯ ಇಲಾಖೆಗೆ ಬೆಂಬಲ ಸಿಗಬೇಕಲ್ಲವೇ? ಅವರು ನಮ್ಮನ್ನು ದುಶ್ಮನ್‌ಗಳ ರೀತಿಯಲ್ಲಿ ನೋಡಿದರೆ ಹೇಗೆ ಬೆಂಬಲ ಸಿಗುತ್ತದೆ. ತಮಗೆ ಬೆಂಬಲ ಸಿಗುವುದಿಲ್ಲ. ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವಂತಹ ಪ್ರಯತ್ನವನ್ನು ಅರಣ್ಯ ಇಲಾಖೆ ಮಾಡಿ, ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಯಾರ್ಯಾರು ಈ ರೀತಿ ಬೇಟೆಯಾಡುತ್ತಾರೆ, ಅದರ ಬಗ್ಗೆ ಒಂದು ಆಂದೋಲನ ರೀತಿಯಲ್ಲಿ ಮಾಡಬೇಕು. ಹಳ್ಳಿಗಳಲ್ಲಿ ಯಾರ್ಯಾರು ಇದ್ದಾರೆ, ಅವರೆಲ್ಲರಿಗೂ ಕೂಡ educate ಮಾಡಬೇಕು. ಹಳ್ಳಿಗಳಿಗೆ ಹೋಗಿ ಈ ಅರಣ್ಯ ರಕ್ಷಣೆ ಬಗ್ಗೆ, ಪ್ರಾಣಿಗಳ ರಕ್ಷಣೆ ಬಗ್ಗೆ educate ಮಾಡಬೇಕು. ಕೆಲವು ಮಾನ್ಯ ಸದಸ್ಯರು ಮಾತನಾಡುವಾಗ ತಾವು ಆತ್ಮರಕ್ಷಣೆ ಎಂದು ಹೇಗೆ ಅಂದುಕೊಂಡಿದ್ದೀರಿ? ತಮಗೆ ಹೊಡೆದಿದ್ದರೇ, ನಿಮಗೆ ಏಟು ಆಗಿತ್ತೇ, ನಿಮಗೆ ಗಾಯ ಆಗಿತ್ತೇ ಎಂದು ಹೇಳುತ್ತಾರೆ. ಅವನು ಕೋಲು ತೆಗೆದುಕೊಂಡು ಹೊಡೆಯುತ್ತಿದ್ದಾನೆಯೇ?

ಅವನ ಹತ್ತಿರ ಗನ್ ಇದೆ. ನಾನು ಏಕೆ ಗಾಯ ಮಾಡಿಕೊಳ್ಳಲಿ. ಅವನು ಹೊಡೆದರೆ ನಾನೇ ಸತ್ತು ಹೋಗುತ್ತೇನೆ. ಒಂದು ಉದಾಹರಣೆ ಕೊಟ್ಟು ಹೇಳುತ್ತೇನೆ. ಅದಕ್ಕೂ ಇದಕ್ಕೂ ಸಂಬಂಧ ಇಲ್ಲ. ಹೇಗಾಗಿದೆ ಎಂದು ಹೇಳುತ್ತೇನೆ. ಒಬ್ಬ retired military officer ಅವನ ಮಗನನ್ನು ಪಿ.ಯು.ಸಿ., ಓದಿಸುತ್ತಿರುತ್ತಾನೆ. N.E.E.T. (National Eligibility cum Entrance Test) ಪರೀಕ್ಷೆಗಾಗಿ ಅವನನ್ನು ನೀಟ್ ಕೋಚಿಂಗ್‌ಗೆ ಕಳುಹಿಸುತ್ತಿರುತ್ತಾನೆ. ನೀಟ್ ಪರೀಕ್ಷೆಯಲ್ಲಿ 2 ಬಾರಿ ಫೇಲ್ ಆಗಿಬಿಡುತ್ತಾನೆ. 3ನೇ ಬಾರಿಗೆ ಅವರ ಅಪ್ಪ ಹೇಳುತ್ತಾನೆ. ಆತನು ಮಿಲ್ಟ್ರಿ ಮ್ಯಾನ್ ಆಗಿದ್ದರಿಂದ, ಅವನ ಹತ್ತಿರ ಗನ್ ಇಟ್ಟುಕೊಂಡಿದ್ದ. ಗನ್ ತೆಗೆದು ಮಗನೇ ನೋಡಪ್ಪ, 3ನೇ ಬಾರಿ ಪಾಸ್ ಆಗಬೇಕು. ಇಲ್ಲದಿದ್ದರೆ ನೀನು ಈ ಗನ್‌ನಲ್ಲಿ ಹೋಗಬೇಕು. ಅವನಿಗೆ ಬಂದೂಕನ್ನು ತೋರಿಸಿ ನಿನಗೆ ಹಾರಿಸುತ್ತೀನಿ ಎಂದು ಹೇಳಿದ. ಮಗ ಯೋಚನೆ ಮಾಡಿದ. ನನ್ನ ಕೈಯಲ್ಲಿ ನೀಟ್ ಪರೀಕ್ಷೆಯನ್ನು ಪಾಸ್ ಮಾಡುವುದಕ್ಕೆ ಆಗುವುದಿಲ್ಲ. ಏನು ಮಾಡಬೇಕು. ನಾನು ನಮ್ಮ ಅಪ್ಪನ ಕೈಯಲ್ಲಿ ಸಾಯಬೇಕು. ಇಲ್ಲದಿದ್ದರೆ ನನ್ನ ಕೈಯಲ್ಲಿ ನಮ್ಮ ಅಪ್ಪ ಸಾಯಬೇಕು ಎಂದು ಯೋಚನೆ ಮಾಡಿ, ಅವರ ಅಪ್ಪನಿಗೆ ಹೊಡೆದುಬಿಟ್ಟ. ಇಲ್ಲಿ ಹೇಗೆ ಎಂದರೆ, ಕತ್ತಲೆ ಮನೆ. ಕಾಡು ಅಲ್ಲವೇ? ಕತ್ತಲೆ, ಅವರು ಇವರಿಗೆ ಕಾಣುವುದಿಲ್ಲ. ಇವರು ಅವರಿಗೆ ಕಾಣುವುದಿಲ್ಲ. ಇವರು ಈ ಕಡೆಗೆ ಹೊಡೆಯಬೇಕು. ಅವರು ಆ ಕಡೆಗೆ ಹೊಡೆಯಬೇಕು. ಯಾರು ಯಾರಿಗೆ ಹೊಡೆಯುತ್ತಾರೆ ಎನ್ನುವುದು ಗೊತ್ತಾಗುವುದಿಲ್ಲ. ಆ ಬಂದೂಕು spread ಆಗುವಂತಹದ್ದು. ಒಂದು ಬಾರಿ ಗುಂಡು ಹಾರಿಸಿದರೆ 20 ಅಡಿಗೆ spread ಆಗುತ್ತದೆ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಎ.ಕೆ.47 ತರಹ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹಾಗಾಗಿ ಇವರು ಗುಂಡನ್ನು ಹಾರಿಸಿದರೆ ಬೇರೆ ಬೇರೆ ಕಡೆಗೆ ಏಟಾಗುತ್ತದೆ ಎಂದು ಅರಣ್ಯ ಇಲಾಖೆಯವರು ಒಂದು ಹೇಳಿಕೆಯನ್ನು ಮಾಡಿದ್ದಾರೆ. ಇದನ್ನು ಸುಳ್ಳು ಎಂದು ನಾನು ಹೇಳುವುದಿಲ್ಲ. ಅವರು ಹಾರಿಸಲಿಲ್ಲ ಎಂದು ಕೂಡ ಹೇಳುವುದಿಲ್ಲ. ಆ ಕಡೆಯ ಬೇಟೆಗಾರರು ತಪ್ಪಿಸಿಕೊಳ್ಳುವುದಕ್ಕೆ ಭಯದಿಂದಲೋ ಗುಂಡು ಹಾರಿಸಿರಬಹುದು. ಅದನ್ನು ಇಲ್ಲ ಎಂದು ಹೇಳುವುದಿಲ್ಲ. ಕೊನೆಯದಾಗಿ ಹೇಳುವುದೇನೆಂದರೆ, ಯಾರು ತಪ್ಪಿಸಿಕೊಂಡಿದ್ದಾನೆಯಲ್ಲವೇ?

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಪುಟ್ಟಣ್ಣನವರೇ, ಒಂದು ನಿಮಿಷ. ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರು ಯಾರು ಓಡಿ ಹೋಗಿದ್ದಾರೆ, ಅವರಿಗೆ ಮಂಪರು ಪರೀಕ್ಷೆ ಮಾಡಬೇಕೆಂದು ಹೇಳಿದರು. ಅದು ಸರಿ ಇದೆ. ಅದರ ಜೊತೆಗೆ ಈಗ ಯಾರು ಅಧಿಕಾರಿಗಳು ಹೊಡೆದಿದ್ದಾರೆ. ಅವರಿಗೂ ಮಂಪರು ಪರೀಕ್ಷೆ ಮಾಡಿದರೆ ಸತ್ಯಾಸತ್ಯತೆ ಗೊತ್ತಾಗುತ್ತದೆ ಎನ್ನುವುದು ನನ್ನ ಮನವಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಕಿಶೋರ್ ಕುಮಾರ್ ಪುತ್ತೂರ್‌ರವರೇ, ಒಂದು ನಿಮಿಷ ಕೇಳಿ. ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ತಾವು ಅರಣ್ಯ ರಕ್ಷಕರ ಮಂಪರು ಪರೀಕ್ಷೆಯನ್ನು ಮಾಡುವುದಕ್ಕೆ ಹೋದರೆ, ಆಗಲೂ ನಾನು ಮಾಡಲಿಲ್ಲ. ಅವರು ಹೊಡೆದರು. ನಾವು ಹೊಡೆಯಲಿಲ್ಲ ಎಂದೇ ಹೇಳುವುದು. ನಾನು ಹೇಳುವುದೇನೆಂದರೆ, 4 ಜನರಲ್ಲಿ ಒಬ್ಬ, ಅವನು ನೆರೆ-ಹೊರೆಯ ಹಳ್ಳಿಯವನು. ಅವನು ಬದುಕಿದ್ದಾನೆಯಲ್ಲವೇ? ಅವನ ಹತ್ತಿರ ಸತ್ಯ ಗೊತ್ತಿರುತ್ತದೆ. ನಾವು ಅರಣ್ಯ ಇಲಾಖೆಯವರು ಹೊಡೆದಿರುವುದು ಎಂದು ಅನುಮಾನಪಡುತ್ತಿದ್ದೇವೆ. ಈಗ ಉಳಿದುಕೊಂಡಿರುವವನು ಅವನೊಬ್ಬನಲ್ಲವೇ? ಓಡಿ ಹೋಗಿದ್ದು ಅವನಲ್ಲವೇ? ಅವನು ಹೇಳಿದರೆ ಅವನಿಂದ ಸತ್ಯ ಗೊತ್ತಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಇದು ಮೊನ್ನೆಯ ದಿವಸ ಆಗಿರುವಂತಹ ಘಟನೆ. ಮಾನ್ಯ ಪಿ.ಹೆಚ್.ಪೂಜಾರ್ ರವರು ಮೊನ್ನೆ ನಡೆದಿರುವಂತಹ ಘಟನೆಯನ್ನು ಇಷ್ಟು ದಿವಸ ಆಗಿದೆ ಎನ್ನುವ ರೀತಿಯಲ್ಲಿ ಹೇಳುತ್ತಿದ್ದರು. ಕಳೆದ ತಿಂಗಳ 15ನೇ ತಾರೀಖು ಅಲ್ಲ. ಈ ತಿಂಗಳ 15ನೇ ತಾರೀಖು ಎಂದು ಹೇಳಿದೆ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಪುಟ್ಟಣ್ಣ:-** ಮಾನ್ಯ ಪಿ.ಹೆಚ್.ಪೂಜಾರ್‌ರವರೇ, ನಾನು ಹೇಳುವುದೇನೆಂದರೆ, ನಾನು ತಮ್ಮ ಜೊತೆ ಹೇಳುತ್ತಿದ್ದೇನೆ. ಇದರಲ್ಲಿ ನಾನು ಯಾರನ್ನು ಬಿಡಿ ಎಂದು ಹೇಳುತ್ತಿಲ್ಲ. ಇದರಲ್ಲಿ ಯಾರು ತಪ್ಪು ಮಾಡಿದ್ದಾರೆ, ಅವರ ಮೇಲೆ ಕ್ರಮ ಕೈಗೊಳ್ಳಬೇಕೆನ್ನುವುದು ನನ್ನ ಒತ್ತಾಯ. ಆದರೆ, ಒಂದು ವಿಚಾರಯೇನೇಂದರೆ, ಸತ್ಯವನ್ನು ಅಲ್ಲಿ ಇಲ್ಲಿ ಹುಡುಕುವುದರ ಬದಲು, ಹಾಗೆಯೇ ಎಲ್ಲೆಲ್ಲೋ ಯಾವುದೋ angle ನಲ್ಲಿ ಹೋಗಿ ಹುಡುಕುವುದಕ್ಕಿಂತ 4 ಜನರಲ್ಲಿ ಒಬ್ಬ ಬದುಕಿದ್ದಾನೆಯಲ್ಲವೇ? ಇವನು ಬದುಕಿರುವುದರಿಂದ, ಈ ಕಡೆಯದ್ದು ಗೊತ್ತು, ಆ ಕಡೆಯದ್ದು ಗೊತ್ತು. ಆತನನ್ನು ವಿಚಾರಣೆ ಮಾಡಿ ಎನ್ನುವುದು ನನ್ನ ಒತ್ತಾಯ. ದಯಮಾಡಿ ಮಾನ್ಯ ಸಚಿವರು ಅವರು ಅಮಾಯಕರು ಇದ್ದರೆ ಅವರ ರಕ್ಷಣೆಗೆ ನೀವು ನಿಲ್ಲಬೇಕು. ಅವರಿಗೆ ಪರಿಹಾರ ಕೊಡಬೇಕು.

(ಮುಂದು)

(725) 17.8.2026 4.30 ಪಿಕೆ:ಆರ್‌ಎನ್ (ಸಭಾಪತಿಗಳ ಉಪಸ್ಥಿತಿ)

**ಶ್ರೀ ಪುಟ್ಟಣ್ಣ(ಮುಂದು):**

ಅದೇರೀತಿ, ಅರಣ್ಯ ಇಲಾಖೆಯ ಅಧಿಕಾರಿಗಳದ್ದು ತಪ್ಪಿಲ್ಲ ಎಂದಾದರೆ ಅವರ ಆತ್ಮಸ್ಥೈರ್ಯ ಕುಗ್ಗಿಸುವಂಥದ್ದೂ ಆಗಬಾರದು. ಅವರಲ್ಲಿ ಆತ್ಮಸ್ಥೈರ್ಯವನ್ನು ತುಂಬಬೇಕು. ಅವರು ತಪ್ಪು ಮಾಡಿದ್ದರೆ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಅತ್ಯುಗ್ರ ಕ್ರಮವನ್ನು ಕೈಗೊಳ್ಳಬೇಕೆಂದು ಹೇಳಬಯಸುತ್ತೇನೆ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಬಹಳಷ್ಟು ಜನ ಸದಸ್ಯರು ಮಾತನಾಡಿದ್ದಾರೆ. ಸದರಿ ವರದಿಯನ್ನು ನೋಡಿದರೆ, ಇದು ಅಧಿಕಾರಿಗಳನ್ನು ಕೇಂದ್ರಿಕೃತವಾಗಿ ತಯಾರು ಮಾಡಿದ ವರದಿ ಎನ್ನುವುದು ಗೊತ್ತಾಗುತ್ತದೆ. ಮೊದಲನೆ ಪುಟದಿಂದ ಹಿಡಿದು ಕೊನೆಯ ಪುಟದವರೆಗೆ ಇರುವ 24 ಬಿಂದುಗಳನ್ನು ನೋಡಿದರೆ ಇದು ಗೊತ್ತಾಗುತ್ತದೆ. ಕಾಡಿಗೆ ಬೇಟೆ ಆಡುವುದಕ್ಕೆ ಹೋಗಿದ್ದ 4 ಜನ ಅಮಾಯಕರ ಪರವಾದ ಒಂದು ವಿಚಾರ ಕೂಡ ಇಲ್ಲ. ಇದರ ಅರ್ಥ ಏನೆಂದರೆ, ಸರ್ಕಾರ ಅಥವಾ ಅಲ್ಲಿರುವ ಅಧಿಕಾರಿಗಳು ಹೇಗೆ prepare ಮಾಡಿಕೊಡಬೇಕೋ, ಆ ರೀತಿ ಪ್ರಿಪೇರ್ ಮಾಡಿ ಕಳುಹಿಸಿಕೊಟ್ಟಿರುವ ವರದಿಯಾಗಿದೆ. ಕಾಡಿಗೆ ಹೋಗಿದ್ದ 4 ಜನರನ್ನು ಅಮಾಯಕರು ಎಂದು ಹೇಳುವುದು ಬೇಡ. ಇವರಲ್ಲಿ ಒಬ್ಬ ತಪ್ಪಿಸಿಕೊಂಡು ಹೋಗಿದ್ದಾನೆ. ಇವರೆಲ್ಲರನ್ನು ಮುಗಿಸಲೇಬೇಕೆಂದು ಗುರಿ ಇಟ್ಟುಕೊಂಡು ಅವರನ್ನು ಹುಡುಕಿ ಹೊಡೆದಿದ್ದಾರೆ. ಅಲ್ಲಿ ಶಬ್ದ ಬಂತು, ನಾವು ಹೊಡೆದವು ಎಂದು ಅಧಿಕಾರಿಗಳು ಹೇಳಿದ್ದಾರೆ. ಅಂದರೆ ಅವರು ಶಬ್ದವೇದಿ ವಿದ್ಯೆ ಕಲಿತಿದ್ದವರೇ? ಅವರು ಏಕಲವ್ಯನ ಕಾಲದಲ್ಲಿದ್ದಾರೆಯೇ? ಕತ್ತಲು ಕಾಣುವುದಿಲ್ಲ ಸರಿ. ಹಾಗಾದರೆ ಕತ್ತಲಲ್ಲಿ 10 ಜನರಿದ್ದರೆ ಆ 10 ಜನರನ್ನು ಹೊಡೆದು ಬಿಡಬಹುದೇ? 4 ಜನ ಜನ ಇದ್ದರೆ 4 ಜನರನ್ನೂ ಹೊಡೆದು ಬಿಡುವುದೇ? ಇದರ ಅರ್ಥ ಏನು? ಆ ಗನ್ ಅನ್ನು ಏಕೆ ಉಪಯೋಗಿಸಿದರು? ಉದಾಹರಣೆಗೆ, spread ಆಗುವಂತಹ ಗನ್ ಅನ್ನು ಉಪಯೋಗಿಸಿದ್ದಾರೆ ಎಂದರೆ ಅಷ್ಟೂ ಜನರನ್ನು ಮುಗಿಸಬೇಕು ಎನ್ನುವುದೇ ಉದ್ದೇಶವಾಗಿರುತ್ತದೆ. ಎರಡನೆಯದಾಗಿ, ಹೆಣಗಳನ್ನು ಆಸ್ಪತ್ರೆಗೆ ಏಕೆ ತೆಗೆದುಕೊಂಡು ಹೋದರು? ವರದಿಯನ್ನು ಹೇಗೆ prepare ಮಾಡಿದ್ದಾರೆ ಎಂದರೆ, ಒದ್ದಾಡುತ್ತಿದ್ದರು, ಶಬ್ದ ಬರುತ್ತಿತ್ತು ಎಂದು ಹೇಳುತ್ತಾರೆ. ಕೆ.ಆರ್. ಆಸ್ಪತ್ರೆಗೆ ಹೋದಾಗ ಅಲ್ಲಿ ವೈದ್ಯರು ಇರಲಿಲ್ಲ ಎಂದು ಹೇಳಿದ್ದಾರೆ ಮತ್ತು ಹೆಣಗಳನ್ನು ಮೈಸೂರಿಗೆ ತೆಗೆದುಕೊಂಡು ಹೋಗಿದ್ದಾರೆ. ಒಂದು ವೇಳೆ ಅವರು ಬದುಕಿದ್ದರೂ ಸಹ ವೈದ್ಯರಿಲ್ಲದ ಕಾರಣ ಅವರ ಜೀವ ಹೋಗುತ್ತಿತ್ತು. ಅವರು ಸತ್ತು ಹೋಗಿದ್ದರೋ, ಬದುಕಿದ್ದರೋ ಅಥವಾ ಮಧ್ಯದಲ್ಲಿ ಜೀವ ಹೋಯಿತೇ? ವೈದ್ಯರು ಇಲ್ಲದೇ ಇದ್ದ ಕಾರಣಕ್ಕೆ ಜೀವ ಹೋಯಿತೇ? ಒಟ್ಟಾಗಿ ನೋಡಿದರೆ, ಈ ವರದಿಯನ್ನು ಕಥೆಯಂತೆ ಹೆಣೆದಿದ್ದಾರೆ. It is a well prepared report. ಅಧಿಕಾರಿಗಳನ್ನು ಹೇಗಾದರೂ ರಕ್ಷಣೆ ಮಾಡಬೇಕು ಎನ್ನುವುದು ಇದರಲ್ಲಿ unquestioned ಆಗಿ ಕಂಡು ಬರುತ್ತಿದೆ. ಏಕೆಂದರೆ ಅವರ ಮೇಲೆ ಎಫ್.ಐ.ಆರ್ ಆಗಿಲ್ಲ. ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರು, ಇದರಲ್ಲಿ ಉದ್ದೇಶಪೂರ್ವಕವಾಗಿ ಏನೋ ಮಾಡಿದ್ದಾರೆ ಎನ್ನುವುದು ಕಂಡುಬರುತ್ತಿದೆ ಎಂದು ಹೇಳಿದ್ದಾರೆ. ಯಾವೊಬ್ಬ ಎಂ.ಎಲ್.ಎ., ಕೂಡ, ಅಧಿಕಾರಿಗಳು ಮಾಡಿರುವುದು ಸರಿ ಎಂದು ಹೇಳುತ್ತಿಲ್ಲ. ನನಗೂ ಕಾಡಿನ ಬಗ್ಗೆ ಅಭಿಮಾನ ಇದೆ. ಕಾಡಿನ ಪ್ರಾಣಿಗಳು ಉಳಿಯಬೇಕು, ಕಾಡು ಉಳಿಯಬೇಕು ಎನ್ನುವುದು ನಮಗೂ ಗೊತ್ತಿದೆ. ಈ ಅಧಿಕಾರಿಗಳ ಮೇಲೆ ಎಫ್.ಐ.ಆರ್ ಕೂಡ ಆಗಿಲ್ಲ. 4 ಜನರ ಪೈಕಿ ಒಬ್ಬ ಪಿಸ್ತೂಲು ಇಟ್ಟುಕೊಂಡಿದ್ದ, ಮದ್ದು ಗುಂಡುಗಳನ್ನು ಇಟ್ಟುಕೊಂಡಿದ್ದ ಎಂದು ವರದಿಯಲ್ಲಿದೆ. ಇನ್ನುಳಿದಿರುವ 3 ಜನರ ಬಗ್ಗೆ ಇಂತಹ ಯಾವುದೇ ಕೇಸ್ ಇಲ್ಲ. ಅಂದರೆ, ಇವರು ಪ್ರೊಫೆಷನಲ್ಸ್ ಅಲ್ಲ. ಪ್ರೊಫೆಷನಲ್ಸ್ ಆಗಿದ್ದರೆ, ಅವನು ಏನೆಲ್ಲಾ prepare ಆಗಿರುತ್ತಿದ್ದ?

ಈ ಹತ್ಯಾಕಾಂಡವನ್ನು ಖಂಡಿಸಿ, ಸುಮಾರು ನಾಲ್ಕೈದು ಸಾವಿರ ಜನ ಆ ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ. ಇವರು ಪ್ರೊಫೆಷನಲ್ಸ್ ಆಗಿದ್ದರೆ, ಇನ್ಯಾವುದೋ ಕಾಡು ಪ್ರಾಣಿಗಳನ್ನು ಹೊಡೆದು ಅದರಿಂದ ಜೀವನ ನಡೆಸುವಂಥವರಾಗಿದ್ದರೆ ಇವರನ್ನೇ ಮುಗಿಸುತ್ತಿದ್ದರು. ಅವರು ಪ್ರೊಫೆಷನಲ್ಸ್ ಅಲ್ಲ. ಇಲ್ಲದೇ ಇದ್ದಿದ್ದರೆ ಈ ಅಧಿಕಾರಿಗಳೇ adjust ಮಾಡಿಕೊಂಡಿರುತ್ತಿದ್ದರು; ಅವರನ್ನು ಹಿಡಿಯುವುದಕ್ಕೆ ಹೋಗುತ್ತಿರಲಿಲ್ಲ. ಅಂದರೆ, ಇವರು ಕಾಡಿಗೆ ಹೋಗಿರುವುದು ಗೊತ್ತಾಗಿದೆ. ಇವರನ್ನು ಮುಗಿಸಲೇಬೇಕೆಂದು 10-12 ಜನ ಅಧಿಕಾರಿಗಳು ಹೋಗಿ, ಇವರೇ ಎಂದು ಪತ್ತೆ ಮಾಡಿ ಹೊಡೆದು ಸಾಯಿಸಿದ್ದಾರೆ. ಇದು ಓಪನ್ ಆಗಿ ಗೊತ್ತಾಗುತ್ತಿದೆ. It is a well prepared report. " ಪ್ರತಿ ದಾಳಿ ನಡೆಸಿದ್ದಾರೆ; ಸಣ್ಣಪುಟ್ಟ ಗಾಯ ಆಗಿದೆ" ಎಂದು ವರದಿಯಲ್ಲಿದೆ. ಇವತ್ತಿನ ಕಾಲದಲ್ಲಿ ಒಂದು ಚೂರು ತರುಚಿದರೂ ಸಾಕು, ಸಣ್ಣಪುಟ್ಟ ಗಾಯಗಳಾಗಿದ್ದರೂ ಸಾಕು ಈ ಕಳ್ಳ ಅಧಿಕಾರಿಗಳು ಆಸ್ಪತ್ರೆಗೆ ಹೋಗಿ ಅಡ್ಮಿಟ್ ಆಗುತ್ತಾರೆ ಎನ್ನುವುದು ಎಲ್ಲರಿಗೂ ಗೊತ್ತಿದೆ. 90% ಅಧಿಕಾರಿಗಳ ಬಗ್ಗೆ ನಾನು ಪ್ರಶ್ನಿಸುವುದಿಲ್ಲ. ಇದನ್ನು ಮಾಡಿರತಕ್ಕಂಥದ್ದೇನಿದೆ ಇದನ್ನು intentionally ಮಾಡಿದ್ದಾರೆ.

ಮಾನ್ಯ ಸಭಾಪತಿಗಳೆ, ಗನ್ ಅನ್ನು ಬಳಸಿಯೇ ಇಲ್ಲ. ಈ ಅಧಿಕಾರಿಗಳು ಎಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ? ಚಾಮರಾಜನಗರದ shootout ಬಗ್ಗೆ ತಮಿಳುನಾಡಿನ ಮುಖ್ಯಮಂತ್ರಿಗಳು, ಇದೊಂದು 'ಹತ್ಯಾಕಾಂಡ' ಎಂದು ಹೇಳಿದ್ದಾರೆ. ಇದನ್ನು ನೋಡಿದರೆ ಯಾರಿಗಾದರೂ, ಇದು ಸರ್ಕಾರ ಅಥವಾ ಅಧಿಕಾರಿಗಳು ಮಾಡಿರುವಂತಹ murder ಎನ್ನುವುದು ಗೊತ್ತಾಗುತ್ತದೆ. ಇದನ್ನು ಓಪನ್ ಆಗಿ ಎಲ್ಲರೂ ಹೇಳುತ್ತಿದ್ದಾರೆ. It is one sided. ಈ ಅಧಿಕಾರಿಗಳ ಮಾತನ್ನು ಕಟ್ಟಿಕೊಂಡು, ಅತ್ಯಂತ ಬಡ ಕುಟುಂಬದಿಂದ ಬಂದಿರುವಂತಹ ಅವರಿಗೆ ಸರ್ಕಾರ ರೂ. 5 ಲಕ್ಷ ಪರಿಹಾರ ಎಂದು ಕೊಟ್ಟಿದೆ. ಈ ಸರ್ಕಾರದ ಧೋರಣೆಯನ್ನು ಯಾರಾದರೂ ಮೆಚ್ಚುತ್ತಾರೆಯೇ? ಅಂದರೆ, ಯಾರು ತೀರಿಕೊಂಡಿದ್ದಾರೋ, ಅವರ ಮನೆಗೆ ರೂ. 5 ಲಕ್ಷ ಕೊಟ್ಟರೆ ಸಾಕೇ? ಇದು ನ್ಯಾಯ ಅನಿಸುತ್ತದೆಯೇ? ಒಬ್ಬ ಎಂ.ಎಲ್.ಎ. ರೂ. 10 ಲಕ್ಷ ಕೊಡುತ್ತೇನೆ ಎಂದು ಹೇಳುತ್ತಿರುವಾಗ, ಸರ್ಕಾರ ರೂ. 5 ಲಕ್ಷ ಕೊಡುವುದೇ? ಆ ಮೊತ್ತಕ್ಕೆ ಒಂದು ಗೌರವ ಬೇಡವೇ? ಆ ಪ್ರತಿ ಕುಟುಂಬಕ್ಕೆ ರೂ. 50 ಲಕ್ಷ ಕೊಡಬೇಕು. ಸತ್ತಿರುವವರಲ್ಲಿ ಒಬ್ಬರಿಗೆ 32 ವರ್ಷ, ಇನ್ನೊಬ್ಬರಿಗೆ 44 ವರ್ಷ, ಮತ್ತೊಬ್ಬರಿಗೆ 50 ವರ್ಷ ವಯಸ್ಸಾಗಿದೆ. ಅಂದರೆ 32 ವರ್ಷ ಮತ್ತು 44 ವರ್ಷದವರ ಜೀವನ ಈಗ ಪ್ರಾರಂಭವಾಗುತ್ತಿತ್ತು. ಆದರೆ ಅವರ ಜೀವನವೇ ಮುಗಿದಿದೆ. ಶೂಟ್ ಮಾಡಿ ಬಿಸಾಕಿದ್ದಾರೆ. ಅವರ ಕುಟುಂಬದ ಮಹಿಳೆಯರು, ನಾವೇ ಶೂಟ್ ಮಾಡಿ ರೂ. 10 ಲಕ್ಷ ಕೊಟ್ಟು ಬಿಡುತ್ತೇವೆ, ಇವರು ಹೋದ ಜೀವ ತಂದು ಕೊಡುತ್ತಾರೆಯೇ ಎಂದು ಪ್ರಶ್ನೆ ಕೇಳುತ್ತಿದ್ದಾರೆ. ರೂ. 50 ಲಕ್ಷ ಆ ಕುಟುಂಬಗಳಿಗೆ ಕೊಡಬೇಕು ಮತ್ತು ಆ ಮನೆಯ ಒಬ್ಬ ಸದಸ್ಯರಿಗೆ ಸರ್ಕಾರಿ ನೌಕರಿ ಕೊಡಬೇಕು.

ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರಿಗೆ ಗೊತ್ತಿರದೇ ಈ ಕೆಲಸ ಆಗಿದೆ. ಮಂತ್ರಿಗಳ ಬಗ್ಗೆ ನನಗೆ ಯಾವುದೇ ಅನುಮಾನ ಇಲ್ಲ. ಆದರೆ, ಸರ್ಕಾರದ ಧೋರಣೆ ಇದೇ ಆಗಿದ್ದರೆ ನನಗೆ ಗೊತ್ತಿಲ್ಲ. ಈ ವರದಿ one

sided report ಆಗಿದೆ. ಅಧಿಕಾರಿಗಳು ಹೇಳಿದ ಹಾಗೆ, ಅಧಿಕಾರಿಗಳನ್ನು ರಕ್ಷಣೆ ಮಾಡುವುದಕ್ಕೆ ತಯಾರು ಮಾಡಿರುವ ವರದಿಯಾಗಿದೆ. ಇದರಿಂದ ಸಮಾಜಕ್ಕೆ ಒಳ್ಳೆಯ ಸಂದೇಶ ಹೋಗುವುದಿಲ್ಲ. ಮಂತ್ರಿಗಳಿದ್ದು ಕೂಡ ಈ ವರದಿ ಸರಿಯಿದೆ ಎನ್ನುವುದಾದರೆ ಮಂತ್ರಿಗಳಿಗೂ ಒಳ್ಳೆಯ ಹೆಸರು ಬರುವುದಿಲ್ಲ. ಹಾಗಾಗಿ ಮಂತ್ರಿಗಳು ಈ ವರದಿಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡುತ್ತೇನೆ.

(ಮುಂದು)

(726) 17-8-2026 4.40 ಡಿಎಸ್-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಮಾನ್ಯ ಶಿವಣ್ಣರವರೇ, ಎಲ್ಲರು ಮಾತನಾಡಿರುವುದನ್ನು ತಾವು ಕೇಳಿದ್ದೀರಿ. ಅದು ಮತ್ತೆ ಪುನಾರವರ್ತನೆ ಆಗಬಾರದು. ಹೊಸ ವಿಚಾರವೇನಾದರೂ ಇದ್ದರೆ ಅದನ್ನು ಹೇಳಿ.

**ಶ್ರೀ ಶಿವಣ್ಣ ಬಿ.ಎಸ್.(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಾನು ಸಂವೇದನೆಯನ್ನು ನೋಡಿದೆ. ವಿರೋಧ ಪಕ್ಷದವರು, ಆಡಳಿತ ಪಕ್ಷದವರೆಲ್ಲಾ ಈ ಒಂದು ಘಟನಾವಳಿಯ ಬಗ್ಗೆ ಹೃದಯ ಪೂರ್ವಕ ಸಂವೇದನೆಯನ್ನು ವ್ಯಕ್ತಪಡಿಸಿದರು. ಇದೇ ಸಂವೇದನೆ ಜಂತರ್-ಮಂತರ್ ನಲ್ಲಿ ನೀಟ್ ಹಗರಣದ ಬಗ್ಗೆ ಪ್ರತಿಭಟನೆಯಲ್ಲಿ ಆಗಿರುವ ಘಟನೆಯ ಬಗ್ಗೆಯೂ ವಿಚಾರ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಏಕೆಂದರೆ ವಿದ್ಯಾರ್ಥಿಗಳು ಅಲ್ಲೇನು ಬೇಟೆಯಾಡುವುದಕ್ಕೆ ಹೋಗಿರಲಿಲ್ಲ. ನಾವು ಕಷ್ಟಪಟ್ಟು ಓದಿರುತ್ತೇವೆ, ನ್ಯಾಯಯುತವಾಗಿ ಪರೀಕ್ಷೆ ನಡೆಯಬೇಕು ಎನ್ನುವುದು ವಿದ್ಯಾರ್ಥಿಗಳ ಉದ್ದೇಶವಾಗಿರುತ್ತದೆ.

**ಶ್ರೀ ರಘು ಆರ್:-** ಮಾನ್ಯ ಸಭಾಪತಿಯವರೇ, ವಿಷಯಾಂತರ ಮಾಡುವುದಕ್ಕೆ ಅವಕಾಶ ಕೊಡಬೇಡಿ.

**ಸಭಾಪತಿಯವರು:-** ಮಾನ್ಯ ಶಿವಣ್ಣರವರೇ, ವಿಷಯಾಂತರ ಮಾಡುವುದಕ್ಕೆ ಹೋಗಬೇಡಿ. ದಯವಿಟ್ಟು ಅರಣ್ಯ ಇಲಾಖೆಯ ಬಗ್ಗೆ ಮಾತನಾಡಿ.

**ಶ್ರೀ ಶಿವಣ್ಣ ಬಿ.ಎಸ್.:-** ಮಾನ್ಯ ಸಭಾಪತಿಯವರೇ, ನಾನು ಕಂಪೇರ್ ಮಾಡುತ್ತಿದ್ದೇನೆ ಅಷ್ಟೆ. ನಾನು ಸಂವೇದನೆಯನ್ನು ಸ್ವಾಗತಿಸುತ್ತೇನೆ. ಮಾನವೀಯ ಸಂಬಂಧಗಳು, ಮೌಲ್ಯಗಳನ್ನು ನಾನು ಬಹಳ ಗೌರವಿಸುತ್ತೇನೆ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಈ ಹೇಳಿಕೆಗಳನ್ನು ಕೊಡುವುದಕ್ಕಿಂತ ಮುಂಚೆ ಮಾನ್ಯ ಪುಟ್ಟರಂಗ ಶೆಟ್ಟಿಯವರು ಸರ್ಕಾರದ ಸಚಿವರು, ಅವರ ಹೇಳಿಕೆಯನ್ನಾದರೂ ಅವರು ಗಮನಿಸಲಿ. ಅವರು ಈ ಹತ್ಯೆಯನ್ನು ಹೇಗೆ ಖಂಡಿಸಿದ್ದಾರೆ ಎಂಬುದನ್ನು ಗಮನಿಸಲಿ.

**ಶ್ರೀ ಶಿವಣ್ಣ ಬಿ.ಎಸ್.:-** ಮಾನ್ಯ ಸಭಾಪತಿಯವರೇ, ನಾನು ಮತ್ತೊಂದು ವಿಷಯವನ್ನು ಮಾನ್ಯ ಅರಣ್ಯ ಸಚಿವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಕುರಿಗಾಹಿಗಳು ಅವರ ಜೀವನ ಉದರ ನಿಮಿತ್ತಗೋಸ್ಕರ ಅವರು ಕುರಿಗಳನ್ನು ಕಾಯುವುದಕ್ಕೆ ಹೋಗುತ್ತಾರೆ. ಅರಣ್ಯ ಇಲಾಖೆಯ ಸಿಬ್ಬಂದಿಗಳು ಅವರಿಗೂ ಕೂಡ ತೊಂದರೆಗಳನ್ನು ಕೊಡುತ್ತಾರೆ. ಕುರಿಗಾಹಿಗಳಿಗೂ ಲೈಸೆನ್ಸ್ ಅನ್ನು ಕೊಡಬೇಕೆಂದು ತಮ್ಮ ಮೂಲಕ ಮನವಿ ಮಾಡುತ್ತೇನೆ. ಪರಿಹಾರ ಕೊಡುವುದು

ಸರ್ಕಾರದ ವಿವೇಚನೆಗೆ ಬಿಟ್ಟದ್ದು. ಆದರೆ ಮಾನವೀಯ ನೆಲೆಗಟ್ಟಿನಲ್ಲಿ ಇನ್ನು ಹೆಚ್ಚಿನ ಸಹಕಾರ ಕೊಟ್ಟಿದ್ದರೆ ಬಹಳ ಸಂತೋಷವಾಗುತ್ತಿತ್ತು. ಅರಣ್ಯ ಪ್ರೇರಿತರು, ಅರಣ್ಯ ರಕ್ಷಕರನ್ನು ಖಾಯಂಮಾತಿ ಮಾಡಿಲ್ಲ. ಮಾನ್ಯ ಪುಟ್ಟಣ್ಣರವರು ಹೇಳಿದ ಹಾಗೆ ಕೇವಲ 15,000 ರೂಪಾಯಿಗಳ ಸಂಬಳದಲ್ಲಿ ಅವರು ಜೀವನ ನಡೆಸುತ್ತಿದ್ದಾರೆ. ಮಾನವೀಯತೆ ದೃಷ್ಟಿಯಿಂದ ಅರಣ್ಯ ಪ್ರೇರಿತರು, ಅರಣ್ಯ ರಕ್ಷಕರನ್ನು ಖಾಯಂಮಾತಿ ಮಾಡುವ ನಿಲುವನ್ನು ಮಂಡಿಸಬೇಕಾಗುತ್ತದೆ. ಅವರಿಗೂ ಮಾನವೀಯತೆ ತೋರಿಸಬೇಕಲ್ಲವೇ? ಅಂತಹ ಮಾನವೀಯ ಮೌಲ್ಯಗಳನ್ನು ನಮ್ಮ ಸರ್ಕಾರ ಮಾಡಲಿ ಎಂದು ನಾನು ಕೇಳಿಕೊಳ್ಳುತ್ತೇನೆ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ, ನಮಸ್ಕಾರ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಶಿವಣ್ಣರವರು ಒಳ್ಳೆಯ ವಿಷಯವನ್ನು ಹೇಳಿದ್ದಾರೆ. ಕ್ರಿಶ್ಚಿಯನ್‌ರವರು ಎಂದರೂ ಅವರು shepherd ಗಳೇ ಆಗಿದ್ದಾರೆ. ಕ್ರಿಶ್ಚಿಯನ್‌ರವರನ್ನು shepherd ಗಳು ಎಂದು ಕರೆಯುತ್ತಾರೆ. ಕುರುಬರು, shepherd ಎಂದರೂ ಇವೆರಡು ಒಂದೇ. ಆದ್ದರಿಂದ ಯಾರು ಪ್ರಾಣ ಕಳೆದುಕೊಂಡಿದ್ದಾರಲ್ಲಾ ಅವರ ಪರವಾಗಿ ಅವರೂ ಕೂಡ ಮಾತನಾಡಬೇಕು. ಅದನ್ನು ಬಿಟ್ಟು ಬೇರೆ ದಾರಿ ತಪ್ಪಿಸುವುದು ಸರಿಯಲ್ಲ.

**ಶ್ರೀ ರಘು ಆರ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ನನಗೆ ಪ್ರಥಮ ಅವಕಾಶ ಕೊಟ್ಟಿದ್ದೀರಿ. ತಮಗೆ ಅತ್ಯಂತ ಧನ್ಯವಾದಗಳು. ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಇಷ್ಟು ಹೊತ್ತು ಅತ್ಯಂತ ಸಾಧ್ಯಾಂತವಾಗಿ ಚರ್ಚೆಯಾಗಿದೆ. ಒಂದು ಮಾನವೀಯ ನೆಲೆಗಟ್ಟಿನಲ್ಲಿ ಸದಸ್ಯರೆಲ್ಲರೂ ಸ್ಪಂದನೆ ಮಾಡಿದ್ದಾರೆ. ಇಲ್ಲಿ ನಡೆದಿರುವಂತಹ ಘಟನೆ ಸಂಪೂರ್ಣವಾಗಿ ಮೇಲ್ನೋಟಕ್ಕೆ ಉದ್ದೇಶ ಪೂರ್ವಕ ಹತ್ಯೆ ಎನ್ನುವಂಥದ್ದು ಬಹುಶಃ ಆ ಕಡೆ ಕುಳಿತಿರುವವರು ಕೂಡ ಒಪ್ಪಿಕೊಳ್ಳುತ್ತಾರೆ ಎಂದು ನಾನು ಅಂದುಕೊಂಡಿದ್ದೇನೆ. ಆದ್ದರಿಂದ ಹೇಳಿರುವುದನ್ನೇ ನಾನು ಮತ್ತೆ ಹೇಳುವುದಕ್ಕೆ ಹೋಗುವುದಿಲ್ಲ. ಸರ್ಕಾರ ಈ ವಿಚಾರವನ್ನು ಅತ್ಯಂತ ಗಂಭೀರವಾಗಿ ತೆಗೆದುಕೊಳ್ಳಬೇಕು. ಇದನ್ನು ಪ್ರತಿಷ್ಠೆಯನ್ನಾಗಿ ಮಾಡಿಕೊಳ್ಳಬಾರದು. ಒಂದು ಮಾನವೀಯ ನೆಲೆಗಟ್ಟಿನಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ, ಯಾರು ಹತ್ಯೆಗೀಡಾಗಿದ್ದಾರೆಯೋ ಅವರ ಹಿಂದೆ ಯಾವುದೇ ಕ್ರಿಮಿನಲ್ ಮೊಕದ್ದಮೆ ಇರಲಿಲ್ಲ ಎನ್ನುವುದು ಅತ್ಯಂತ ಸುಸ್ಪಷ್ಟವಾಗಿದೆ. ಆ ದೃಷ್ಟಿಯಲ್ಲಿ ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಎಂತಹ ಕ್ರಿಮಿನಲ್ ಅಥವಾ ಇನ್ನು ಯಾವುದೇ ಹಿನ್ನೆಲೆ ಇರತಕ್ಕಂಥವರನ್ನು ಕೂಡ ಬಹು ದೊಡ್ಡ underworld criminal ಗಳನ್ನು ಬಹುತೇಕವಾಗಿ ಎನ್ಕೌಂಟರ್ ಮಾಡಬೇಕಾದರೆ ಯಾವ ಸ್ಥಳದಲ್ಲಿ ಹೊಡೆಯುತ್ತಾರೆ ಎಂಬುದು ಗೊತ್ತಿದೆ. ಆದರೆ ನಾನು ಈ ಸಂದರ್ಭದಲ್ಲಿ ಏನು ಹೇಳುವುದಕ್ಕೆ ಬಯಸುತ್ತೇನೆ ಎಂದರೆ, ಇವತ್ತು ನಮ್ಮ ಅರಣ್ಯ ಸಂಪತ್ತು, ಅರಣ್ಯ ಜೀವಿಗಳು, ಈ ದೇಶದ ಪ್ರಕೃತಿಯ ಭವಿಷ್ಯತ್ತಿನ ಪೀಳಿಗೆಯ ಬಹು ದೊಡ್ಡ ಆಸ್ತಿಯಾಗಿದೆ. ಈ ದೃಷ್ಟಿಯಲ್ಲಿ ಕಾಡಂಚಿನಲ್ಲಿ ಯಾರು ಇವತ್ತು ವಾಸ ಮಾಡುತ್ತಿದ್ದಾರೆ, ರೈತರು ಯಾರಿದ್ದಾರೆ, ಕಾಡಿನ ಉತ್ಪನ್ನವನ್ನು ಅನುಸರಿಸಿ, ಅಂದರೆ ಅದರ ಆಧಾರದ ಮೇಲೆ ಯಾರು ಇವತ್ತು ಜೀವನ

ಮಾಡುತ್ತಿದ್ದಾರೆ ಅಂಥವರೆಲ್ಲರ ಸಮಗ್ರ ದೃಷ್ಟಿಯನ್ನಿಟ್ಟುಕೊಳ್ಳಬೇಕಾಗುತ್ತದೆ. ಮಾನ್ಯ ಭೋಜೇಗೌಡರವರು ಹೇಳಿದ ಹಾಗೆ, ಮೊದಲನೆಯದಾಗಿ ಮಾಂಸ, ಯಾವ ಮಾಂಸ ಎನ್ನುವುದನ್ನು ಮೇಲ್ನೋಟಕ್ಕಾದರೂ ವರದಿಯಲ್ಲಿ ಹಾಕಬೇಕಾಗಿತ್ತು. ಅಲ್ಲಿಂದ entire ಮಾನ್ಯ ಸಚಿವರು ಕೊಟ್ಟಿರುವ ವರದಿ ಅತ್ಯಂತ ಟೊಳ್ಳು ಮತ್ತು ಸಾಂದರ್ಭಿಕವಾಗಿ ತರಾತುರಿಯಲ್ಲಿ ಕೊಟ್ಟಿರುವಂತಹ ವರದಿ ಎಂದು ಸ್ಪಷ್ಟವಾಗಿದೆ. ಆದ್ದರಿಂದ ಈ ವರದಿಯನ್ನು ಸರ್ಕಾರ ವಾಪಸ್ ತೆಗೆದುಕೊಳ್ಳಬೇಕು. ಈ ರಾಜ್ಯದ ಜನತೆ ಮತ್ತು ಮಾಧ್ಯಮದವರು ಏಕೆ ನ್ಯಾಯಾಂಗ ತನಿಖೆಯಾಗಬೇಕೆಂದು ಹೇಳುತ್ತಿದ್ದಾರೆಂದರೆ, ಇದು ಕೇವಲ ಮೂರು ಜನರ ಹತ್ಯೆ ಅಷ್ಟೆ ಅಲ್ಲ, ಇಡೀ ಕಾಂಡಚಿನ ಚಟುವಟಿಕೆಗಳ ಮೇಲೆ ಗಂಭೀರ ಅಪವಾದವಾಗಿರುವುದನ್ನು ಬೆಳಕು ಚೆಲ್ಲುತ್ತದೆ. ಹೈಕೋರ್ಟ್ ನ್ಯಾಯಾಧೀಶರಿಂದ ಪಾರದರ್ಶಕವಾಗಿ ತನಿಖೆ ಮಾಡಿಸುವುದರಿಂದ ಬಹುಶಃ ಅಧಿಕಾರಿ ಮಟ್ಟದಲ್ಲಿ ಅಥವಾ ಮ್ಯಾಜಿಸ್ಟ್ರೇಟ್ ಮಟ್ಟದಲ್ಲಿ ತನಿಖೆಯಾಗಬೇಕಾಗುತ್ತದೆ. ಇದು ಒಂದು ಮಾಮೂಲಿ ಪ್ರಕರಣದ ರೀತಿಯಲ್ಲಿ ಒಂದಷ್ಟು ದಿನವಾದ ಮೇಲೆ ಮರೆಯಾಗಿಬಿಡುತ್ತದೆ. ಆ ದೃಷ್ಟಿಯಿಂದ ಇದು ಅತ್ಯಂತ ಸೂಕ್ಷ್ಮವಾದ ಪ್ರಕರಣವಾಗಿದೆ. ಯಾವುದಾದರೂ ಕಾಡಿನ ಪ್ರಾಣಿಯಾಗಿದ್ದರೆ, ಸತ್ತಂಥ ಪ್ರಾಣಿಯು ಕೂಡ ನಮಗೆ ಮುಖ್ಯವಾಗುತ್ತದೆ. ಆ ದೃಷ್ಟಿಯಿಂದ ಕೂಡ ಇದನ್ನು ತನಿಖೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ವಿಶೇಷವಾಗಿ ನನ್ನ ಮನವಿ ಏನೆಂದರೆ, ಈ ದೇಶದಲ್ಲಿ ಯಾರಾದರೂ ಸತ್ತರೆ ಐದು ಲಕ್ಷ ರೂಪಾಯಿಗಳು, ಹತ್ತು ಲಕ್ಷ ರೂಪಾಯಿಗಳು ಎಂದು ಪರಿಹಾರವನ್ನು ಕೊಡುತ್ತಾರೆ. ಅದು **[XXX]** ಲೆಕ್ಕ ರೀತಿಯಲ್ಲಿ ವ್ಯವಸ್ಥೆ ಆಗಿಬಿಟ್ಟಿದೆ. ಆ ದೃಷ್ಟಿಯಿಂದ ಇದೊಂದೇ ಪ್ರಕರಣ ಅಲ್ಲ, ಮೊನ್ನೆ ಮೈಸೂರಿನಲ್ಲಿ ಅರಮನೆ ನೋಡುವುದಕ್ಕೆ ಬಂದ ಒಬ್ಬ ಮಹಿಳೆ.....

**ಸಭಾಪತಿಯವರು:-** **[XXX]** ಎಂದು ಹೇಳಿರುವುದನ್ನು ಕಡತದಿಂದ ತೆಗೆದು ಹಾಕಿ.

**ಶ್ರೀ ರಘು ಆರ್.:-** ಮಾನ್ಯ ಸಭಾಪತಿಯವರೇ, ಸರ್ಕಾರದ ಮಟ್ಟದಲ್ಲಿ ಜೀವಗಳಿಗೆ ಬೆಲೆ ಇಲ್ಲ ಎಂದು ನಾನು ಹೇಳಬಯಸುತ್ತಿದ್ದೇನೆ. ಅರಮನೆ ನೋಡುವುದಕ್ಕೆ ಬಂದಂತಹ ಮಹಿಳೆ ಬಲೂನ್ ಮಾರುತ್ತಿದ್ದವನ ಗ್ಯಾಸ್ ಸಿಡಿದು ಸತ್ತು ಹೋಗಿಬಿಟ್ಟಳು. ಇವತ್ತಿನವರೆಗೂ ಸರ್ಕಾರ ಒಂದು ರೂಪಾಯಿ ಪರಿಹಾರವನ್ನು ಕೊಡಲಿಲ್ಲ. ಆದ್ದರಿಂದ ಕೆಲವು ಘಟನೆಗಳನ್ನೇ ಕೇಂದ್ರೀಕರಿಸಿ ನಾವು ಮಾತನಾಡುತ್ತೇವೆ. ಆದರೆ ಸರ್ಕಾರದ ನಿರ್ಲಕ್ಷ್ಯದಿಂದ ಅಥವಾ ಯಾವುದೋ ಅಧಿಕಾರಿಯ ನಿರ್ಲಕ್ಷ್ಯದಿಂದ ಕೆ.ಇ.ಬಿ. ಆಗಿರಬಹುದು, ರಸ್ತೆ ಸಾರಿಗೆ ಆಗಿರಬಹುದು, ಫುಟ್‌ಪಾತ್‌ನಲ್ಲಿ ಅಚಾತುರ್ಯದಿಂದ ಸಾಯುವಂಥವರು ಆಗಿರಬಹುದು, ಇವೆಲ್ಲವೂ ಸರ್ಕಾರದ ನಿರ್ಲಕ್ಷ್ಯದಿಂದ ಆಗುವಂತಹ ಯಾವುದೇ ಸಾವುಗಳಿಗೆ ಸರ್ಕಾರದಲ್ಲಿ ಬಹು ದೊಡ್ಡ ಬೆಲೆ ಇರಬೇಕು. ಅವರನ್ನು ಅವಲಂಬಿಸಿರುವಂಥವರು ಎಷ್ಟೋ ಜನರು ಇರುತ್ತಾರೆ. ಈ ಪ್ರಕರಣವನ್ನಿಟ್ಟುಕೊಂಡು ಸರ್ಕಾರ ಯೋಚನೆ ಮಾಡಬೇಕೆಂದು ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ಇವತ್ತು ಈ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಕೊಡಲೇಬೇಕು. ನ್ಯಾಯಾಂಗ ತನಿಖೆಗೆ ಕೊಡುವುದರಿಂದ ಒಂದು ಸ್ಪಷ್ಟವಾದ ಚಿತ್ರಣ ಸಿಗುತ್ತದೆ. ಇದು ಉದ್ದೇಶ ಪೂರ್ವಕವಾಗಿರುವಂತಹ ಕೊಲೆ, ದ್ವೇಷ ಅಥವಾ ಇನ್ನು ಯಾವುದೇ ಉದ್ದೇಶದಿಂದ ಆಗಿರಬಹುದು. ಮಾನ್ಯ ಪುಟ್ಟಣ್ಣರವರು ಹೇಳಿದ ಹಾಗೆ,

ಕಾಡಂಚಿನಲ್ಲಿ ಕೆಲಸ ಮಾಡುವಂತಹ ಸಿಬ್ಬಂದಿಗಳು ಬಹಳ ಕಡಿಮೆ ಇದ್ದಾರೆ. ದಿನಗೂಲಿ ಕನಿಷ್ಠ ವೇತನಕ್ಕಿಂತ ಕಡಿಮೆ ದರದಲ್ಲಿ ಕೆಲಸ ಮಾಡುತ್ತಿರುವಂತಹ ಬಡವರು ಇದ್ದಾರೆ. ಆ ದೃಷ್ಟಿಯಿಂದ ಅರಣ್ಯ ಇಲಾಖೆಯಲ್ಲಿ ಹೆಚ್ಚಿನ ಸಿಬ್ಬಂದಿಗಳು ಬೇಕಾಗುತ್ತದೆ. ತರಬೇತಿ ಸಿಬ್ಬಂದಿಗಳು ಬೇಕಾಗುತ್ತದೆ. ಈ ಪ್ರಕರಣದ ಬಗ್ಗೆ ಸರ್ಕಾರ ನ್ಯಾಯಾಂಗ ತನಿಖೆ ಮಾಡುವುದರಿಂದ ಸ್ಪಷ್ಟವಾದ ಒಂದು ಚಿತ್ರಣ ಹೊರ ಬರುತ್ತದೆ. ಇನ್ನು ಮುಂದೆ ಭವಿಷ್ಯತ್ತಿನಲ್ಲಿ ಇಂತಹ ಪ್ರಕರಣಗಳು ಮರುಕಳಿಸದಿರುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

---

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಇವತ್ತು ಈ ಘಟನೆಯಲ್ಲಿ ಯಾರು ಸಾವನ್ನಪ್ಪಿದ್ದಾರೆ ಆ ದುಃಖವನ್ನು ಭರಿಸುವಂತಹ ಶಕ್ತಿ ಆ ಕುಟುಂಬಗಳಿಗೆ ದೇವರು ನೀಡಲಿ ಎಂದು ಪ್ರಾರ್ಥನೆ ಮಾಡುತ್ತೇನೆ. ಈ ಘಟನೆ ನಡೆದು ಎರಡು ದಿನಗಳಾಗಿವೆ. 15ನೇ ತಾರೀಖು ಈ ಘಟನೆ ಆಗಿದೆ. ಈಗಾಗಲೇ ಸರ್ಕಾರ ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಈ ಘಟನೆ ಬಗ್ಗೆ ಜಿಲ್ಲಾ ದಂಡಾಧಿಕಾರಿಗಳಿಗೆ ತನಿಖೆ ಮಾಡಿ ವರದಿ ಕೊಡುವುದಕ್ಕೆ ಹೇಳಿದ್ದಾರೆ. ಈ ಘಟನೆ ಭಾನುವಾರ ನಡೆದಿದೆ. ಈ ದಿನ ಬೆಳಗ್ಗೆ ವರದಿ ಬಂದಿದೆ. ಸದನಕ್ಕೆ ಏನು ಮಾಹಿತಿ ಬೇಕಾಗಿತ್ತು ಆ ಮಾಹಿತಿಯನ್ನು ಸನ್ಮಾನ್ಯ ಸಚಿವರು ನೀಡಿದ್ದಾರೆ. ನಾವು ಇಲ್ಲಿ ಒಂದು ಅಂಶವನ್ನು ನೋಡಬಹುದು, ಅಧಿಕಾರಿಗಳು ಏನೆಲ್ಲಾ ಮಾಹಿತಿ ಬೇಕು ಅದನ್ನು ನೀಟಾಗಿ ಕೊಟ್ಟಿದ್ದಾರೆ. ಹೇಳಿಕೆಯಲ್ಲಿ 15 ಅಂಶಗಳನ್ನು ಕೊಟ್ಟಿದ್ದಾರೆ. ಇವರಿಗೆ ಯಾವುದೇ ರೀತಿಯಲ್ಲೂ ಕ್ರಿಮಿನಲ್ ಅಪರಾಧಗಳಿಲ್ಲ ಎಂದು ಹೇಳಿದ್ದಾರೆ. ಅಂದರೆ, ಅವರ ಉದ್ದೇಶ ಬೇರೆ ರೀತಿಯಲ್ಲಿ ಇದ್ದಿದ್ದರೆ ಈ ಪಾಯಿಂಟ್‌ಗಳನ್ನು ಅಧಿಕಾರಿಗಳು ಬರೆಯುತ್ತಿರಲಿಲ್ಲ. ಏಕೆಂದರೆ, ಏನು ಕ್ರಿಮಿನಲ್ ಅಪರಾಧ ಇಲ್ಲವೆಂದರೆ ಇವರು ಆ ಕೆಲಸದಲ್ಲಿ ಇಲ್ಲ ಎಂದು ಅನಿಸುತ್ತಿದೆ. ಅಧಿಕಾರಿಗಳಿಗೂ ಮತ್ತು ಇವರಿಗೂ ವೈಷಮ್ಯ ಇಲ್ಲ ಎಂದು ಅನಿಸುತ್ತಿದೆ. ಏಕೆಂದರೆ, ಇವರು ಪದೇ-ಪದೇ ಈ ರೀತಿ ಅಪರಾಧಗಳಲ್ಲಿ ಭಾಗಿಯಾಗಿ ಅಥವಾ ಪ್ರಾಣಿಗಳನ್ನು ಕೊಂದಿದ್ದರೆ ವೈಷಮ್ಯ ಬೆಳೆಯುತ್ತದೆ. ಇವರನ್ನು ಸಂಹಾರ ಮಾಡಬೇಕೆನ್ನುವ ಮನಸ್ಸು ಅಧಿಕಾರಿಗಳಿಗೆ ಬರುತ್ತದೆ. ಆದರೆ ಆ ರೀತಿಯೂ ಇಲ್ಲ. ಇವರು ಕ್ಲೀನ್ ಆಗಿ ಈ ಸದನಕ್ಕೆ ಏನು ಮಾಹಿತಿ ಬೇಕು ಅದನ್ನು ಸಂಪೂರ್ಣವಾಗಿ ವಿವರವಾದ ಮಾಹಿತಿಯನ್ನು ಸನ್ಮಾನ್ಯ ಸಚಿವರು ನೀಡಿದ್ದಾರೆ. ಅವರಿಗೆ ನಾನು ಧನ್ಯವಾದಗಳನ್ನು ತಿಳಿಸುತ್ತೇನೆ. ಇಲ್ಲಿ ಯಾವ ರೀತಿ ಆಗಿದೆ ಎಂದರೆ ಸಂಜೆ 8 ಗಂಟೆಗೆ ಮಾಹಿತಿ ಬರುತ್ತದೆ.

(ಮುಂದು)

(727)17-08-2026/4-50/bkp-vk (ಸಭಾಪತಿಯವರ ಉಪಸ್ಥಿತಿ)

**ಶ್ರೀ ರಾಮೋಜಿಗೌಡ(ಮುಂದು):**

ಸಭಾಪತಿಯವರೆ, ಸಂಜೆ 8-00 ಗಂಟೆಗೆ ಮಾಹಿತಿ ಬರುತ್ತದೆ. 10-12 ಜನ ಅರಣ್ಯಾಧಿಕಾರಿಗಳು ಹೋಗುತ್ತಾರೆ. ಆದರೆ, ಅವರಿಗೆ ಏನೂ ಕಾಣಿಸುವುದಿಲ್ಲ. ಏಕೆಂದರೆ, ಅದು ದಟ್ಟವಾದ ಕಾಡು ಆಗಿದ್ದರಿಂದ ಮತ್ತು ಕತ್ತಲು ಇರುವುದರಿಂದ ಯಾರು ಕಾಣಿಸಲಿಲ್ಲ. ಬರುತ್ತಾರೆ, ಬರುವಾಗ ಬೆಳಗ್ಗೆ 5-00 ಗಂಟೆಗೆ ಬೆಳಕು ಕಾಣಿಸುತ್ತದೆ, ಟಾರ್ಚ್ ಹಿಡಿದುಕೊಂಡು ಅಲ್ಲಿಗೆ ಹೋಗುತ್ತಾರೆ. ಏಕೆಂದರೆ, ಕತ್ತಲಿನಲ್ಲಿ ಎಷ್ಟು ದೂರ ಇದ್ದಾರೆ, ಯಾರು ಇದ್ದಾರೆಂದು ಏನೂ ಗೊತ್ತಾಗುವುದಿಲ್ಲ. ಅವರಿಗೆ ಶರಣಾಗತಿ ಆಗಿ ಎಂದು ವಾರ್ನ್ ಮಾಡಿದ್ದಾರೆ. ಆದರೆ, ಅವರು ಶರಣಾಗತಿಯಾಗದೆ ಅಧಿಕಾರಿಗಳ ಮೇಲೆ ಗುಂಡು ಹಾರಿಸಿದ್ದಾರೆ. ಆಗ ಅಧಿಕಾರಿಗಳು ತಮ್ಮ ಪ್ರಾಣ ರಕ್ಷಣೆಗೆ ಅವರ ಮೇಲೆ ಗುಂಡು ಹಾರಿಸಿದ್ದಾರೆ.

ಮಾನ್ಯ ಸಭಾಪತಿಯವರೆ, ಇಲ್ಲಿ ಸದನದಲ್ಲಿ ವಿರೋಧ ಪಕ್ಷ ಇರಬಹುದು, ಆಡಳಿತ ಪಕ್ಷ ಇರಬಹುದು, ನಿಜವಾಗಿ ಅಧಿಕಾರಿಗಳು ತಪ್ಪು ಮಾಡಿದರೆ ಅವರ ಮೇಲೆ ಶಿಕ್ಷೆಯಾಗಬೇಕು, ಮತ್ತೆ ಕಾಡು ರಕ್ಷಣೆ ಮಾಡುವುದು ಸಹ ನಮ್ಮ ಕರ್ತವ್ಯ ಆಗಿರುತ್ತದೆ. ನಾವು ಅಧಿಕಾರಿಗಳ ಆತ್ಮಸ್ಥೈರ್ಯವನ್ನು ಸಹ ಕುಗ್ಗಿಸಬಾರದು. ಕಾಡನ್ನು ಮತ್ತು ಕಾಡು ಪ್ರಾಣಿಗಳನ್ನು ರಕ್ಷಣೆ ಮಾಡಬೇಕು. ಮತ್ತೊಬ್ಬ ಮರಿ ವೀರಪ್ಪನ್ ಹುಟ್ಟಬಾರದು. ಮತ್ತೆ ಕೆಲವರು ಈ ವಿಷಯವಾಗಿ ಮಾತನಾಡುತ್ತಾ, ಪಾಪ, ಅವರು ಗುಂಡೇಟು ತಿಂದು ಒದ್ದಾಡುತ್ತಿದ್ದವರನ್ನು ಏತಕ್ಕೆ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕೆಂದು ಕೇಳಿದ್ದಾರೆ. ಇಂತಹ ವಿಷಯಗಳಲ್ಲಿ ಮಾನವೀಯತೆಯನ್ನು ಕಳೆದುಕೊಳ್ಳಬಾರದು. ನಾವು ಇವತ್ತು ಮಾತನಾಡುವಂತಹ ಸಂದರ್ಭಗಳಲ್ಲಿ ಯಾರೋ ಅಧಿಕಾರಿಗಳು ಸಾವನ್ನು ಅಪ್ಪಿದರೆ ನಾನು ಏತಕ್ಕೆ ಅವರನ್ನು ಕರೆದುಕೊಂಡು ಹೋಗಬೇಕು, ನಾನು ಅವರನ್ನು ಕರೆದುಕೊಂಡು ಹೋದರೆ ತಾನೆ... ಈ ವಿಚಾರದಲ್ಲಿ ಯಾವ ರೀತಿಯಲ್ಲಿ ಸಂಶಯ ಬರುತ್ತದೆ ಎಂದರೆ ಅಲ್ಲಿ ಸಾವು ಸಂಭವಿಸಿದರೆ, ಅವನ ಉದ್ದೇಶ ಬೇರೆ ಇತ್ತು ಎಂದು ಹೇಳಿ, ಅವನನ್ನು ಅಲ್ಲಿಯೇ ಬಿಡಬೇಕಾಗಿತ್ತು ಎಂದು ಹೇಳುತ್ತಾರೆ. ಅವರು ಸಾವನ್ನಪ್ಪಿರಲಿಲ್ಲ. ಈ ವರದಿಯ ಪ್ರಕಾರ ಆ ರೀತಿಯಲ್ಲಿ ಇದ್ದಾಗ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಹಾಗಾಗಿ, ಇಲ್ಲಿ ನಾವೆಲ್ಲರೂ ಒಂದು ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಈ ರೀತಿಯ ಘಟನೆಗಳು ಆಗಬಾರದು. ಈ ಬಗ್ಗೆ ನಮ್ಮ ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದರು. ಜಿಲ್ಲಾ ದಂಡಾಧಿಕಾರಿಗಳಿಂದ ಬರತಕ್ಕಂತಹ ವರದಿಯ ಮೇಲೆ ನಮಗೆ ನಂಬಿಕೆ ಇರುವುದಿಲ್ಲ. ಇದನ್ನು ನ್ಯಾಯಾಂಗಕ್ಕೆ ಒಪ್ಪಿಸಬೇಕೆಂದು ಹೇಳಿದರು. ಹೌದು. ಅದನ್ನೂ ಸಹ ಮಾಡಬಹುದು. ನಾವು ಸಹ ಅದಕ್ಕೆ ಸಹಮತವನ್ನು ವ್ಯಕ್ತ ಮಾಡುತ್ತೇವೆ. ಏಕೆಂದರೆ, ಇಂತಹ ಘಟನೆಗಳಾದಾಗ ಅದರ ಕ್ಲಿಯರ್ ರಿಪೋರ್ಟ್ ಬೇಕಾಗುತ್ತದೆ. ಹಾಗಾಗಿ, ಇವತ್ತು ಈ ಸಭೆಗೆ ಬೇಕಾಗಿರುವಂತಹ ಅದ್ಭುತ ವರದಿಯನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ. ಮತ್ತೆ ಅವರು ಶಕ್ತಿವಂತರಿದ್ದಾರೆ. ಪಾರದರ್ಶಕವಾಗಿ ಕೆಲಸ ಮಾಡುತ್ತಿದ್ದಾರೆ. ಪ್ರಮಾಣಿಕರಾಗಿದ್ದಾರೆ. ಅವರ ಮೇಲೆ ಅತೀವವಾದಂತಹ ನಂಬಿಕೆ, ವಿಶ್ವಾಸ ನಮಗೆ ಇದೆ.

ಹಾಗಾಗಿ, ಮುಂದಿನ ದಿನಗಳಲ್ಲಿ ಯಾರು ತಪ್ಪಿತಸ್ತ ಅಧಿಕಾರಿಗಳಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆಂದು ನನಗೆ ನಂಬಿಕೆ ಇದೆ.

**ಸಭಾಪತಿಯವರು:-** ಒಬ್ಬರು ಶ್ರೀಯುತ ಡಿ.ಎಸ್. ಅರುಣ್ ರವರು ಮತ್ತು ಡಾ|| ಧನಂಜಯ ಸರ್ಜಿಯವರು ನನಗೆ ಇಬ್ಬರು ಮಾನ್ಯ ಸದಸ್ಯರು ಆಪ್ತರಾಗಿದ್ದಾರೆ. ಅವರು ಮಾತನಾಡಬೇಕೆಂದು ಕೇಳಿದ್ದಾರೆ. ಹೀಗಾಗಿ, ಮೊದಲು ಶ್ರೀಯುತ ಅರುಣ್ ರವರೆ, ನೀವು 5 ನಿಮಿಷ ಮಾತನಾಡಿ. ಕೊನೆಯಲ್ಲಿ ಡಾ|| ಧನಂಜಯ ಸರ್ಜಿಯವರು ಮಾತನಾಡಲಿ.

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಧನ್ಯವಾದಗಳು. ನನ್ನ ಊರು ಅರಣ್ಯಕ್ಕೆ ಬಹಳ ಸಮೀಪ ಇರುವಂತಹ ಊರಾಗಿದೆ. ಹಾಗಾಗಿ, ಈ ವಿಚಾರದಲ್ಲಿ ಮಾತನಾಡಬೇಕೆನಿಸಿತು. ಸಾಕಷ್ಟು ಬಾರಿ ಅರಣ್ಯವನ್ನು ರಕ್ಷಿಸುವಂತಹವರು ಆ ಒಂದು ಊರಿನ ಜನರಾಗಿರುತ್ತಾರೆ. ಅಲ್ಲಿಗೆ ಅರಣ್ಯವನ್ನು ನೋಡಿಕೊಳ್ಳಲು ಅಧಿಕಾರಿಗಳು ವರ್ಗಾವಣೆಯಾಗಿ ಬರುತ್ತಾರೆ. ಇಲ್ಲಿ ಬಂದು ಕೆಲಸ ಮಾಡಬೇಕಾದರೆ ಸಾಕಷ್ಟು ವಿಷಯಗಳನ್ನೂ ಕೂಡ ಅಲ್ಲಿನ ಅರಣ್ಯಕ್ಕೆ ಹೊಂದಿಕೊಂಡಿರುವ ಗ್ರಾಮದ, ಬಹಳಷ್ಟು ಜನರು ಅವರಿಗೆ ಸಹಾಯ ಮಾಡಿ, ಅರಣ್ಯವನ್ನು ಯಾವ ರೀತಿಯಲ್ಲಿ ರಕ್ಷಣೆ ಮಾಡಬೇಕೆಂದು ಹೇಳುವುದು ತಲತಲಾಂತರದಿಂದ ನಡೆದುಕೊಂಡು ಬಂದಿರುವ ವಿಷಯವಾಗಿದೆ. ಯಾವ ಯಾವಾಗ ಸಮಸ್ಯೆಗಳು ಬರುತ್ತವೆ ಎಂದರೆ ಅರಣ್ಯಾಧಿಕಾರಿಗಳ ಜೊತೆಯಲ್ಲಿ ಅವರ ಸಂಬಂಧ, ಅರಣ್ಯಾಧಿಕಾರಿಗಳು ಬೇರೆ ಒಂದು ಉದ್ದೇಶವನ್ನಿಟ್ಟುಕೊಂಡು ಅಲ್ಲಿ ಒಳಗಡೆ ಕೆಲಸ ಮಾಡಬೇಕಾದರೆ ಅಲ್ಲಿನ ಗ್ರಾಮಸ್ಥರ ಜೊತೆ ಸಂಬಂಧ ಹಾಳಾದಾಗ ಈ ರೀತಿಯಲ್ಲಿ ತೊಂದರೆಗಳಾಗುತ್ತವೆ. ನಾನು ಈ ವಿಚಾರವಾಗಿ ಎರಡು ವಿಷಯಗಳನ್ನು ಮಾನ್ಯ ಸಚಿವರ ಗಮನಕ್ಕೆ ತರಲಿಕ್ಕೆ ಇಷ್ಟ ಪಡುತ್ತೇನೆ.

ಮೊದಲನೆಯದಾಗಿ, ಈ ಪ್ರಕರಣದಲ್ಲಿ ಅವರಿಗೆ ಗುಂಡು ಹೊಡೆಯಲು ಅಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟವರು ಯಾರು? 10+2=12 ಜನರಲ್ಲಿ ಯಾರು ಎನ್ನುವುದರ ಬಗ್ಗೆ ಮಾನ್ಯ ಸಚಿವರು ಕೊಟ್ಟಿರುವ ಮಾಹಿತಿಯಲ್ಲಿ ಎಲ್ಲಿಯೂ ಮಾಹಿತಿ ಇರುವುದಿಲ್ಲ. ಅವರನ್ನು ಫೈರ್ ಮಾಡಿ, ಎನ್ನುವುದರ ಬಗ್ಗೆ ಎಲ್ಲಿಯೂ ಮಾಹಿತಿ ಇರುವುದಿಲ್ಲ. ಯಾರಾದರೊಬ್ಬರು ಅಂದರೆ, head of that team, ಈ 10+2=12 ರ ಟೀಮ್‌ನಲ್ಲಿ ಯಾರು ಗುಂಡು ಹೊಡೆಯಲು ಆದೇಶ ಕೊಟ್ಟರು ಎನ್ನುವ ಮಾಹಿತಿ ಇರುವುದಿಲ್ಲ. ಎರಡನೆಯದಾಗಿ, ಇವತ್ತು technology ಬೆಳೆದಿದೆ. ನಾವು ಈಗ ಸಿಬ್ಬಂದಿಗಳನ್ನು ನೇಮಕ ಮಾಡಲಿಕ್ಕೆ ಸರ್ಕಾರದಿಂದ ಆಗುತ್ತಿಲ್ಲ. ಕೊನೆಯ ಪಕ್ಷ technology ಯನ್ನಾದರೂ ಬಳಸಿ, ಅಲ್ಲಿ ಒಂದು ವಾಹನ ವೇಗವಾಗಿ ಬರುತ್ತಿದ್ದರೆ, Body-Worn Cameras ಎಂದು ಹಾಕುತ್ತಾರೆ. ಆ Body-Worn Camera ಎನ್ನುವಂತಹದ್ದನ್ನು ನಮ್ಮ ಅರಣ್ಯಗಳಿಗೆ ಹಾಕಬೇಕು. ಏಕೆಂದರೆ, ಅತ್ಯಂತ ಬೆಲೆ

ಬಾಳುವಂತಹ ಸಂಪನ್ಮೂಲಗಳನ್ನು ಹೊಂದಿರುವಂತಹ ಅರಣ್ಯಗಳು ಈ ರಾಜ್ಯದಲ್ಲಿ ಇರುತ್ತವೆ. ನಾವು ಇದನ್ನು Geofencing, ಜೊತೆಗೆ ಈ ರೀತಿಯ ಟೆಕ್ನಾಲಜಿ, ಸಿ.ಸಿ.ಟಿ.ವಿ. ಈ ರೀತಿಯಲ್ಲಿ ತುಂಬಾ varieties of technology ಯನ್ನು ಬಳಸಿಕೊಂಡು ನಮ್ಮ ಅರಣ್ಯವನ್ನು ಸಂರಕ್ಷಣೆ ಮಾಡುವಂತಹ ಅವಶ್ಯಕತೆ ಇದೆ. ಇದರೊಳಗಡೆ ಪೂರ್ತಿ fabricated ಎನ್ನುವುದರೊಳಗಡೆ ನಮಗೆ ಎಲ್ಲಿಯೂ ಅನುಮಾನ ಕಾಣುತ್ತಿಲ್ಲ. ಹಾಗಾಗಿ, ಇದನ್ನು ದಯಮಾಡಿ ಇದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು, ಟೆಕ್ನಾಲಜಿಯನ್ನು ಬಳಸಿ, Body-Worn Camera ಎನ್ನುವುದನ್ನು ಬಳಸುವಂತಹದ್ದು ಆಗಬೇಕು. ಜೊತೆಗೆ ಈ ರೀತಿಯಲ್ಲಿ ಫೈರ್ ಮಾಡಲಿಕ್ಕೆ ಯಾರು ಆದೇಶ ಮಾಡಿದರು ಎನ್ನುವುದರ ಬಗ್ಗೆಯೂ ಸಹ ಸೂಕ್ತ ತನಿಖೆಯಾಗಬೇಕು. ಧನ್ಯವಾದಗಳು.

**ಡಾ|| ಧನಂಜಯ ಸರ್ಜಿ(ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ನಾನು ಕೊನೆಯ ಬ್ಯಾಟ್ಸ್‌ಮನ್ ಆಗಿರುತ್ತೇನೆ. ಹಾಗಾಗಿ, ಎಲ್ಲರೂ ಮಾತನಾಡಿದ ಮೇಲೆ ಉಳಿದ ವಿಚಾರಗಳನ್ನು ಹೇಳಿ ಎಂದು ಹೇಳುತ್ತೀರಿ.

ಮೊದಲನೆಯದಾಗಿ ಈ 3 ಜನ ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥನೆ ಮಾಡುತ್ತಾ, ಶ್ರೀಮಾನ್ ಪುಟ್ಟಣ್ಣನವರು ಹೇಳಿದ ಹಾಗೆ ಯಾರು ತಪ್ಪಿಸಿಕೊಂಡು ಹೋಗಿದ್ದಾರೋ ಅವನನ್ನು ಹಿಡಿದರೆ ಇದಕ್ಕೆ ಸರಿಯಾದ ಉತ್ತರ ಸಿಗುತ್ತದೆ ಎಂದು ಭಾವಿಸುತ್ತಾ, ಕಳೆದ ಎರಡು ವರ್ಷಗಳ ನನ್ನ ಅಧಿವೇಶನದ ಸಮಯದಲ್ಲಿ ನಾನು ಸುಮಾರು ಬಾರಿ ಪ್ರಾಣಿ ಮತ್ತು ಮಾನವ ಸಂಘರ್ಷದ ಬಗ್ಗೆ ಮಾತನಾಡಿದ್ದೆ. ಆಗಿನ ಅರಣ್ಯ ಸಚಿವರಾಗಿದ್ದ ಮಾನ್ಯ ಶ್ರೀ ಈಶ್ವರ್ ಖಂಡ್ರೆಯವರ ಜೊತೆ ಸುಮಾರು ಬಾರಿ ಸಂವಾದವನ್ನು ಮಾಡಿರುತ್ತೇನೆ. ಈ ರೀತಿಯಲ್ಲಿ ಯಾರಿಗೆ ಜೀವ ಹಾನಿಯಾಗುತ್ತದೋ ಅವರಿಗೆ ಒಳ್ಳೆಯ ಪರಿಹಾರ ಮೊತ್ತವನ್ನು ಘೋಷಿಸಬೇಕು. ಅದೇ ನಿಟ್ಟಿನಲ್ಲಿ ಇವತ್ತು ಅರಣ್ಯವನ್ನು ಕಾಪಾಡಬೇಕಾದರೆ ಅಲ್ಲಿಗೆ ಸುಸಜ್ಜಿತವಾದ ವಾಹನಗಳು ಮತ್ತು ಉಪಕರಣಗಳನ್ನು ಕೊಡಬೇಕೆಂದು ನಾನು ಸುಮಾರು ಬಾರಿ ಅವರಿಗೆ ವಿನಂತಿಯನ್ನು ಕೂಡ ಮಾಡಿದ್ದೆ. ಈ ಬಗ್ಗೆ ನಾನು ಎರಡು ಘಟನೆಗಳನ್ನು ತಮಗೆ ನೆನಪು ಮಾಡಿಕೊಡುವುದಕ್ಕೆ ಇಷ್ಟ ಪಡುತ್ತೇನೆ. ಒಬ್ಬ ವೈದ್ಯ ಶಿವಮೊಗ್ಗದ ಒಂದು ಮೃಗಾಲಯದಲ್ಲಿ ಸತ್ತು ಹೋಗಿದ್ದಕ್ಕೆ ಅವರಿಗೆ ಎಷ್ಟು ಹಣವನ್ನು ಘೋಷಣೆ ಮಾಡಿದ್ದರು ಎನ್ನುವುದನ್ನು ನಾವು ಪ್ರಶ್ನೆ ಮಾಡಬೇಕಾಗುತ್ತದೆ. ಅದೇ ರೀತಿಯಲ್ಲಿ ಡಾಕ್ಟರ್ ವಿನಯ್ ಎನ್ನುವವರು ಈ ಆನೆಯ ತುಳಿತಕ್ಕೆ ಒಳಗಾಗಿ ಚಿಕಿತ್ಸೆಗೆ ಸುಮಾರು ಒಂದು ಕೋಟಿಯವರೆಗೂ ಹಣ ಖರ್ಚು ಮಾಡಿದ ಹಣವನ್ನು ಸರ್ಕಾರ ತಕ್ಷಣ ಕೊಡುವುದಿಲ್ಲ. ಆದಾದ ಮೇಲೆ ಆ ಹಣವನ್ನು ಮರುಪಾವತಿ ಮಾಡುವಂತಹ ಸನ್ನಿವೇಶವನ್ನು ನಾನು ಈ ಸನ್ನಿವೇಶದಲ್ಲಿ ನೆನಪು ಮಾಡುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ಹೇಗೆ ಬೇರೆ ಜನರ ಜೀವ ಎಷ್ಟು ಮುಖ್ಯವೋ ಅದೇ ರೀತಿಯಲ್ಲಿ ಅರಣ್ಯ ಸಿಬ್ಬಂದಿಗಳ ಜೀವವೂ ಸಹ ಅಷ್ಟೇ ಮುಖ್ಯ ಎಂದು ಹೇಳಿ ಈ ಸಮಯದಲ್ಲಿ ಉಲ್ಲೇಖ ಮಾಡಲಿಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೆ, ಇದರಲ್ಲಿ ಕೆಲವೊಂದು ಪಾಯಿಂಟ್‌ಗಳನ್ನು ನಾವು ನೋಡಬೇಕಾಗುತ್ತದೆ. ಏನು slide-action gun ಎಂದು ಹೇಳಿ ಉಪಯೋಗ ಮಾಡಿದ್ದಾರೆ, ಬಹಳ ದೂರದಿಂದ ಫೈರ್ ಮಾಡುವಂತಹ capacity ಇದೆ, ಅದರ entry wound and exit wound ಗೆ ಯಾವ ಒಂದು direction ನಿಂದ ಹೊಡೆದಿದ್ದಾರೆ, ಹೊಡೆದಾಗ ಎಷ್ಟು ನಂಬರ್‌ಗಳು ಆ ಬಾಡಿಯೊಳಗಡೆ pellets ಗಳು ಸಿಕ್ಕಿ ಹಾಕಿಕೊಂಡಿವೆ, ಮತ್ತೆ ಯಾವ ಯಾವ organ injury ಯಾಗಿವೆಂದು ಹೇಳಿ ಕಂಡು ಹಿಡಿದರೆ ಎಷ್ಟು ಅಂತರದಿಂದ ಹೊಡೆದಿದ್ದಾರೆ, ಯಾವ organ damage ನಿಂದ ಆಗಿದೆ ಎನ್ನುವುದು ಪ್ರತಿಯೊಂದು ಪೋಸ್ಟ್‌ಮಾಟಮ್‌ನಲ್ಲಿ clear cut ಆಗಿ ಉತ್ತರ ಸಿಕ್ಕುತ್ತದೆ. ನಾನು ಇದರ ಬಗ್ಗೆ ಸುಮ್ಮನೆ ನೋಡುತ್ತಿದ್ದೆ. ಇದೇನು ಗನ್ ಉಪಯೋಗ ಮಾಡಿದ್ದಾರೆ, ಒಂದು ವೇಳೆ ಯಾರಿಗಾದರೂ ನಿಜವಾಗಿಯೂ ಸಾಯಿಸಬೇಕೆಂದು ಇದ್ದರೆ maximum distance ಎಷ್ಟು ಅಂತರ ಇರಬೇಕೆಂದು ನಾನು ನೋಡುತ್ತಿದ್ದೆ. ಇಲ್ಲಿಂದ ಆರೋಗ್ಯ ಮಂತ್ರಿಗಳು ಕೂತಿರುವ ದೂರ ಇದ್ದಲ್ಲಿ shoot ಮಾಡಿದರೆ ನಿಜವಾಗಿಯೂ ಜೀವ ಹೋಗಬಹುದು. ಆದರೆ, 140 ರಿಂದ 150 ಅಡಿಯವರೆಗೆ ಅದರ effect ತುಂಬಾ ಇರುತ್ತದೆ. ಅದಕ್ಕಿಂತಲೂ ದೂರವಾದರೆ ಅದರಲ್ಲಿ injury ಯಾಗಬಹುದೇ ಹೊರತು, ಜೀವಕ್ಕೆ ತೊಂದರೆಯಾಗುವುದು ಅಷ್ಟು ಸುಲಭವಲ್ಲ ಎನ್ನುವಂತಹ ಉಲ್ಲೇಖವನ್ನು ನಾನು ನೋಡಿದ್ದೇನೆ. ಏಕೆಂದರೆ, ಈ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಉಲ್ಲೇಖ ಮಾಡಿದ್ದಾರೆ. ಆ ಜನ ಗುಂಡು ಹಾರಿಸಿದ್ದರೆ different pieces ನಲ್ಲಿ ಅದು ಹೊರಗಡೆ shoot ಆಗುತ್ತದೆ. ಆ ರೀತಿಯಲ್ಲಿ shoot ಆದಾಗ ಹೇಗೆ 3 ಜನರು ತಮ್ಮ ಜೀವವನ್ನು ಕಳೆದುಕೊಳ್ಳಲಿಕ್ಕೆ ಸಾಧ್ಯ? ಎರಡನೆಯದಾಗಿ, ತಮ್ಮ ಉತ್ತರದಲ್ಲಿ ಏನು ಹೇಳಿದ್ದಾರೆ ಎಂದರೆ, ಅಲ್ಲಿ ಫೈರ್ ಮಾಡಿದ ಮೇಲೆ ಅಲ್ಲಿ 3 ಜನರು ನರಳಾಡುತ್ತಿದ್ದರು ಎಂದು ಹೇಳಲಾಗಿದೆ. ಅವರನ್ನು ಚಿಕಿತ್ಸೆಗೆಂದು ಪ್ರಾಥಮಿಕ ಚಿಕಿತ್ಸಾಲಯಕ್ಕೆ ಕರೆದುಕೊಂಡು ಹೋದಾಗ ಅವರು ಸತ್ತು ಹೋಗಿದ್ದಾರೆಂದು ಗೊತ್ತಾಯಿತು. ಖಂಡಿತವಾಗಿಯೂ post mortem ಮಾಡಿದಾಗ ಯಾವಾಗ ಸತ್ತು ಹೋದರು ಎಂದು ಸರಿಯಾದ ಸಮಯ ಗೊತ್ತಾಗುತ್ತದೆ. ಇಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾದ ವಿಷಯ ಏನೆಂದರೆ, ಆ ಅರಣ್ಯ ಪ್ರದೇಶ ಗ್ರಾಮದಿಂದ ನಾಲ್ಕುವರೆ ಕಿ.ಮೀ.ದೂರದಲ್ಲಿ ಇದೆ ಎಂದು ಹೇಳುತ್ತೀರಿ. ಅದು aerial distance ಆಗಿರುತ್ತದೆ. ಅದು ಕಾಡಿನಲ್ಲಿ ಇರುವಂತಹ ಅಂತರ ಆಗಿರುವುದಿಲ್ಲ. ಆ ನಿಟ್ಟಿನಲ್ಲಿ ಅರಣ್ಯದಿಂದ 4 ಕಿ.ಮೀ ದೂರ ಆ 3 ಜನರನ್ನು ಎತ್ತಿಕೊಂಡು ಕರೆದುಕೊಂಡು ಬರುವುದಕ್ಕೆ ಎಷ್ಟು ಸಮುಯವಾಗಿರಬಹುದು ಎನ್ನುವುದನ್ನೂ ಸಹ ನಾವು ನೋಡಬೇಕಾಗುತ್ತದೆ. ಏಕೆಂದರೆ, ಸಾಮಾನ್ಯವಾಗಿ ನಾವು ಹೈವೇ ರಸ್ತೆಯಲ್ಲಿಯೇ ವಾಕ್ ಮಾಡಿದರೆ 10 ನಿಮಿಷಕ್ಕೆ ಒಂದು ಕಿ.ಮೀ ಹೋಗಬಹುದು. ಈ ಅರಣ್ಯ ಪ್ರದೇಶದಲ್ಲಿ ಸತ್ತು ಹೋಗಿರುವಂತಹ ಈ 3 ದೇಹಗಳನ್ನು ಎತ್ತಿಕೊಂಡು ಹೋಗುವುದಕ್ಕೆ ಎಷ್ಟರಮಟ್ಟಿಗೆ ಸಮಯ ಆಗಿರಬಹುದು, ಎಷ್ಟು ಸಮಯ ಲ್ಯಾಪ್ಸ್

ಆಗಿರಬಹುದು, ಹಾಗಾಗಿ, ಖಂಡಿತವಾಗಿಯೂ ಸಹ post mortem report ನಲ್ಲಿ hundred percent ಇದನ್ನು ಎಷ್ಟು ದೂರದಿಂದ ಮಾಡಿದ್ದು, ಯಾರು ಮಾಡಿದ್ದು, ಯಾವ ಒಂದು ಬುಲೆಟ್‌ನಿಂದ ಫೈರ್ ಆಗಿದೆ ಎನ್ನುವಂತಹ ಪ್ರತಿಯೊಂದು ವಿಷಯವೂ ಕೂಡ ಗಮನಕ್ಕೆ ಬರುತ್ತದೆ. ಯಾವ ಸಮಯದಲ್ಲಿ ಸತ್ತು ಹೋಗಿದ್ದಾರೆನ್ನುವುದನ್ನು ನೋಡಬೇಕಾಗಿದೆ.

(ಮುಂದು)

(728) 17.08.2026 05.00 ಎಸ್‌ವಿ-ವಿಕೆ (ಸಭಾಪತಿಯವರ ಉಪಸ್ಥಿತಿ)

**ಡಾ: ಧನಂಜಯ ಸರ್ಜಿ (ಮುಂದು):**

ನಾನು ಮಾನ್ಯ ಅರಣ್ಯ ಸಚಿವರಲ್ಲಿ ಮಾಡುವ ವಿನಂತಿಯೇನೆಂದರೆ, ಇದು ನಿಷ್ಪಕ್ಷಪಾತವಾಗಿ enquiry ಆಗಬೇಕು. ನ್ಯಾಯಾಂಗ ತನಿಖೆಯಾಗಬೇಕೆಂದು ಈ ಸಮಯದಲ್ಲಿ ಆಗ್ರಹಿಸುತ್ತೇನೆ. ಅವರಿಗೆ ನೀಡುವ compensation ಆಗಿ ಹೆಚ್ಚು ಮೊತ್ತವನ್ನು ಕೊಡಬೇಕೆಂದು ಮತ್ತು ಅದಕ್ಕಿಂತ ಹೆಚ್ಚು ಮೊತ್ತವನ್ನು ಅರಣ್ಯ ಅಧಿಕಾರಿಗಳು ಅಥವಾ ಸಿಬ್ಬಂದಿಗಳು ಈ ರೀತಿಯ ಅನಾಹುತದಲ್ಲಿ ಜೀವವನ್ನು ಕಳೆದುಕೊಂಡರೆ, ಅವರಿಗೂ ನೀಡಬೇಕೆಂದು ಮಾನ್ಯ ಅರಣ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಹೆಚ್. ಪಿ. ಸುಧಾಮ್ ದಾಸ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಹನೂರು ವನ್ಯಜೀವಿ ವಲಯದಲ್ಲಿ ದಿನಾಂಕ 15.08.2026ರ ದುರದೃಷ್ಟಕರ ಘಟನೆಯ ಬಗ್ಗೆ ಬಹಳಷ್ಟು ಸದಸ್ಯರು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ. ಅಮೂಲ್ಯ ಸಲಹೆಗಳನ್ನೂ ಕೊಟ್ಟಿದ್ದಾರೆ. ಇವೆಲ್ಲದರ ಪೈಕಿ ಮಾನ್ಯ ಶಿವಕುಮಾರ್ ಮತ್ತು ಮಾನ್ಯ ಭೋಜೇಗೌಡರ ಬಹಳಷ್ಟು ಅಭಿಪ್ರಾಯಗಳಿಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಯಾವುದೇ ಅಂಶಗಳನ್ನು ಪುನರಾವರ್ತನೆ ಮಾಡಲಿಕ್ಕೆ ಹೋಗುವುದಿಲ್ಲ. ಈ ಸದನದ ಒಟ್ಟಾಭಿಪ್ರಾಯ ಏನೆಂದರೆ ಘಟನೆ ಕುರಿತಂತೆ ಅರಣ್ಯ ಇಲಾಖೆಯ ವೃತ್ತಿಪರತೆ ಪ್ರದರ್ಶಿಸಿಲ್ಲ. ತನಿಖೆ ಸತ್ಯವನ್ನು ಹೊರ ತೆಗೆಯುವುದರಲ್ಲಿ ಯಶಸ್ವಿಯಾಗಬೇಕು. ಅನಗತ್ಯವಾಗಿ ಯಾರನ್ನೂ ರಕ್ಷಣೆ ಮಾಡಬಾರದು, ಯಾರನ್ನೇ ಬಲಿಪಶು ಕೂಡ ಮಾಡಬಾರದು.

ಒಟ್ಟಾರೆ ಹೇಳುವುದಾದರೆ ಬಹಳ ಅಪರೂಪದ ಘಟನೆಗಳಲ್ಲಿ ಇದೂ ಒಂದು. ಅದರಲ್ಲಿಯೂ ಅರಣ್ಯ ಇಲಾಖೆಯಲ್ಲಿ ವೀರಪ್ಪನ್ ಕಾಲದ ನಂತರ ಕರ್ನಾಟಕದಲ್ಲಿ ಆಗಿರುವ ಅತ್ಯಂತ ಹೀನ ಪ್ರಥಮ ಘಟನೆ ಇದಾಗಿದೆ ಎಂದು ನಾನು ಭಾವಿಸುತ್ತೇನೆ. ಬೇರೆ ವೃತ್ತಿಪರ ಸಿಬ್ಬಂದಿಗಳಿರಲಿ, ತೀರಾ ಸಾಮಾನ್ಯ ಜ್ಞಾನವನ್ನು ಉಪಯೋಗಿಸಿ ಮಾನ್ಯ ಭೋಜೇಗೌಡರು ಕೆಲವು ಅಂಶಗಳನ್ನು ಎತ್ತಿದರು. ಏನೆಂದರೆ ಆ ಪ್ರದೇಶದಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ಅಲ್ಲಿ ವಾಸವಾಗಿರುವ ಜನಗಳ ಹಿನ್ನೆಲೆ ಸಾಮಾನ್ಯವಾಗಿ ಗೊತ್ತಿರುತ್ತದೆ. ಯಾರು ಯಾರು ಯಾವ ವೃತ್ತಿಗಳಲ್ಲಿ ತೊಡಗಿರುತ್ತಾರೆ, ಯಾರು ಯಾರಿಗೆ ಅರಣ್ಯಕ್ಕಾಗಲೀ, ವನ್ಯಜೀವಿಗಳಿಗಾಗಲೀ ಸಂಚಕಾರ ಎಸಗುವ

ಸಾಮರ್ಥ್ಯವಿದೆ ಎನ್ನುವ ಮಾಹಿತಿ ಯಾವುದೇ ವೃತ್ತಿಪರ ಅಧಿಕಾರಿಗಳಿಗೆ ತಿಳಿದಿರಬೇಕು. ಜೊತೆಗೆ ಇಂಥ ಒಂದು ಸಂದರ್ಭಗಳಲ್ಲಿ ಯಾವ ರೀತಿ ಪರಿಸ್ಥಿತಿಯನ್ನು ಎದುರಿಸಬೇಕೆನ್ನುವ ಪ್ರಾಥಮಿಕ ಜ್ಞಾನ ಕೂಡ ಈ ಸಿಬ್ಬಂದಿಗಳಿಗಿರಲಿಲ್ಲ ಎನ್ನುವುದು ಮೇಲ್ನೋಟಕ್ಕೆ ಗೋಚರವಾಗುತ್ತದೆ. ಇಲ್ಲ ಎಂದರೆ ಇಂಥ ಅತಿರೇಕದ ವರ್ತನೆಗೆ ಅರಣ್ಯ ಸಿಬ್ಬಂದಿ ಮುಂದಾಗುತ್ತಿರಲಿಲ್ಲ. ವರದಿಯಲ್ಲಿರುವ ಘಟನೆಯ ಪ್ರತಿಯೊಂದು ಅಂಶಗಳ ಬಗ್ಗೆ ವಿಮರ್ಶೆ ಮಾಡಿದ್ದಾರೆ. ನಮ್ಮ ಸರ್ಕಾರ ಖಂಡಿತ ಉನ್ನತ ಮಟ್ಟದ ತನಿಖೆ ಮಾಡಿ ಸತ್ಯಾಂಶವನ್ನು ಹೊರ ತೆಗೆಯುವುದರಲ್ಲಿ ಯಶಸ್ವಿಯಾಗುತ್ತದೆ ಎನ್ನುವ ಭರವಸೆ ನನಗೆ ಪೂರ್ಣವಾಗಿದೆ. ಈ ಸಂದರ್ಭದಲ್ಲಿ ಯಾರೂ ಕೂಡ ರಾಜಕೀಯ ಮಾಡುವ ಅವಶ್ಯಕತೆ ಇಲ್ಲ.

ಮಾನ್ಯ ವಿರೋಧ ಪಕ್ಷದ ನಾಯಕರು ಮಾತಿನ ಭರದಲ್ಲಿ ಸರ್ಕಾರಿ ಪ್ರಾಯೋಜಿತ ಹತ್ಯೆ ಎಂದು ಒಂದು ಮಾತನ್ನು ಹೇಳಿದರು. ಅವರು ಸ್ವಲ್ಪ ಜವಾಬ್ದಾರಿಯಿಂದ ಮಾತನಾಡಿದರೆ ಒಳ್ಳೆಯದು. ಏಕೆಂದರೆ ಚಾಮರಾಜನಗರದಲ್ಲಿ ಆಕ್ಸಿಜನ್ ಸಿಲಿಂಡರ್ ದುರಂತದಲ್ಲಿ 36 ಜನ ಸತ್ತಾಗಲೂ ಕೂಡ ಯಾರೂ ಇದು ಸರ್ಕಾರಿ ಪ್ರಾಯೋಜಿತ ಹತ್ಯೆ ಎಂದು ಹೇಳಲಿಕ್ಕೆ ಹೋಗಲಿಲ್ಲ. ನಮಗೆ ತಿಳಿದಿರುವಂತೆ ಯಾರೂ ಹೇಳಲು ಹೋಗಲಿಲ್ಲ. ಏಕೆಂದರೆ ಸಾವನ್ನು ಎಷ್ಟು ಗಾಂಭೀರ್ಯದಿಂದ ಗೌರವಿಸಬೇಕೋ, ಆ ಗೌರವವನ್ನು ನಾವೆಲ್ಲಾ ಕೊಡುತ್ತೇವೆ. ಜೀವ ಅಮೂಲ್ಯ ಎನ್ನುವುದನ್ನು ನಾವು ಯಾರೂ ಮರೆಯಬಾರದು. ಯಾವುದೇ ಹಂತದಲ್ಲಿಯೂ ಈ ರೀತಿಯ ಘಟನೆ ಪುನರಾವರ್ತನೆಯಾಗದ ರೀತಿ ಸರ್ಕಾರ ಕ್ರಮ ಕೈಗೊಳ್ಳಬೇಕಾಗುತ್ತದೆ. ಈ ವಿಷಯದಲ್ಲಿ ಏನಾದರೂ ಅರಣ್ಯ ಇಲಾಖೆಯಿಂದ ತಪ್ಪೆಸಗಿದ್ದರೆ ಖಂಡಿತ ಅವರ ಮೇಲೆ ಶಿಕ್ಷೆಯಾಗಲೇಬೇಕು. ಇಲ್ಲವಾದರೆ ಈಗಾಗಲೇ ಜನರು ಮತ್ತು ವನ್ಯಜೀವಿಗಳ ನಡುವಿನ ಸಂಘರ್ಷ ಏನಿದೆಯೋ, ಆ ರೀತಿ ಜನರು ಮತ್ತು ಅರಣ್ಯ ಇಲಾಖೆ ಸಿಬ್ಬಂದಿಗಳ ನಡುವೆ ಸಂಘರ್ಷ ಶುರುವಾಗುತ್ತದೆ. ಇದಕ್ಕೆ ಆಸ್ಪದ ಕೊಡದೆ ಇರುವ ರೀತಿ ನಮ್ಮ ಸರ್ಕಾರ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುತ್ತದೆ ಎನ್ನುವ ಭರವಸೆಯಿಂದ ನನ್ನೆರಡು ಮಾತನ್ನು ಮುಗಿಸುತ್ತೇನೆ.

**ಶ್ರೀ ರಾಮಲಿಂಗಾರೆಡ್ಡಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):-** ಮಾನ್ಯ ಸಭಾಪತಿಯವರೆ, ವಿಪಕ್ಷದ ನಾಯಕರಾದ ಮಾನ್ಯ ನಾರಾಯಣಸ್ವಾಮಿಯವರು ಸೇರಿದಂತೆ ಮಾನ್ಯ ರವಿಕುಮಾರ್, ಮಾನ್ಯ ಪಿ.ಹೆಚ್. ಪೂಜಾರ್, ಮಾನ್ಯ ಸಿ.ಟಿ.ರವಿಯವರು, ಮಾನ್ಯ ನಾಗರಾಜ್ ಅವರು, ಮಾನ್ಯ ಪುಟ್ಟಣ್ಣನವರು, ಮಾನ್ಯ ಕಿಶೋರ್ ಕುಮಾರ್ ಪುತ್ತೂರು, ಮಾನ್ಯ ಕೇಶವ ಪ್ರಸಾದ್, ಮಾನ್ಯ ನವೀನ್, ಮಾನ್ಯ ಶಿವಕುಮಾರ್, ಮಾನ್ಯ ಶಿವಣ್ಣ, ಮಾನ್ಯ ರಘು, ಮಾನ್ಯ ರಾಮೋಜಿಗೌಡರು, ಮಾನ್ಯ ಅರುಣ್, ಮಾನ್ಯ ಡಾ: ಧನಂಜಯ ಸರ್ಜಿ, ಮಾನ್ಯ ಸುಧಾಮ್ ದಾಸ್ ರವರು ಹೀಗೆ ಎಲ್ಲರೂ ಕೂಡ ಮಾತನಾಡಿದ್ದಾರೆ.

**ಶ್ರೀ ಎಸ್. ಎಲ್. ಭೋಜೇಗೌಡ:-** ಮಾನ್ಯ ಸಚಿವರೆ, ತಾವು ನನ್ನ ಹೆಸರನ್ನೇ ಬಿಟ್ಟಿರಿ?

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಭೋಜೇಗೌಡರು ಕೂಡ ಮಾತನಾಡಿದ್ದಾರೆ. ಅವರು ಬಹಳ emotional ಆಗಿ ಮಾತನಾಡಿದರು.

**ಸಭಾಪತಿಯವರು:-** ಮಾನ್ಯ ಭೋಜೇಗೌಡರದ್ದು powerful speech, ಅವರ emotions ನೋಡಿ ಬೆಲ್ ಬಳಿ ಹೋಗಿದ್ದ ಕೈಯನ್ನು ಹಿಂದೆ ತೆಗೆದುಕೊಂಡೆನು.

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಸಭಾಪತಿಯವರೆ, ಅನೇಕರು ಸರ್ಕಾರಿ ಪ್ರಾಯೋಜಿತ ಹತ್ಯೆ ಎಂದರು. ಉದ್ದೇಶಪೂರ್ವಕವಾಗಿ ಮಾಡಿದ್ದಾರೆ ಎಂದು ಹೇಳಿದರು. ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಅವರ ಮೇಲೆ ನಮಗೇನು ದ್ವೇಷವಿತ್ತು ಅಥವಾ ನಮ್ಮ ಅಧಿಕಾರಿಗಳಿಗೆ ಏನು ದ್ವೇಷವಿತ್ತು? ಏನೂ ಇಲ್ಲ. ಆ ರೀತಿ ಏನಾದರೂ ಇದ್ದಿದ್ದರೆ ಮೃತಪಟ್ಟ ಮೂರು ಜನರ ಕುಟುಂಬದವರೇ ಬಂದು ದೂರು ನೀಡುತ್ತಿದ್ದರು. ಹಿಂದೆ ಈ ರೀತಿ ಅವರಿಗೂ ಇವರಿಗೂ ಜಗಳವಾಗಿದ್ದರೆ ಅಥವಾ ಇನ್ನೇನಾದರೂ ಬೇರೆಯ ಕಾರಣಗಳು ಇದ್ದಿದ್ದರೆ ಅವರ ಕುಟುಂಬದವರೇ ದೂರು ನೀಡುತ್ತಿದ್ದರು. ಆ ಮೂರು ಕುಟುಂಬದವರು ಯಾರ ಮೇಲೆಯೂ ದೂರು ಕೊಟ್ಟಿರುವುದಿಲ್ಲ. ಅರಣ್ಯ ಇಲಾಖೆ ಅಧಿಕಾರಿಗಳು ಎಂದು ಕೊಟ್ಟಿದ್ದಾರೆ, ಅಷ್ಟೆ. ಇವರಿಗೂ ಅವರಿಗೂ ಯಾವ ದ್ವೇಷವೂ ಇಲ್ಲದೆ ಇರುವುದರಿಂದ ಉದ್ದೇಶಪೂರ್ವಕವಾಗಿ ಯಾವುದೇ ಕೊಲೆ ಆಗಿರುವುದಿಲ್ಲ.

ಮಾನ್ಯ ಸಭಾಪತಿಯವರೆ, ಆ ಪ್ರದೇಶದಲ್ಲಿ ಇದೇನೂ ಹೊಸತಲ್ಲ. ಇವತ್ತು ಪ್ರಜಾವಾಣಿಯಲ್ಲಿ "16 ವರ್ಷಗಳಲ್ಲಿ 278 ಕಳ್ಳಬೇಟೆ ಪ್ರಕರಣ" ಎಂದು ಒಂದು ಆರ್ಟಿಕಲ್ ಬಂದಿದ್ದು, ಅದೂ ಹನೂರು ಸುತ್ತಮುತ್ತಲಿನಲ್ಲಿಯೇ ಆಗಿರುವುದು. ನಾನು ನಮ್ಮ ಅಧಿಕಾರಿಗಳಿಗೆ ಕೇಳಿದಾಗ ಅವರು ನಿಜ ಎಂದು ಹೇಳಿದರು. ಚಾಮರಾಜನಗರ ಜಿಲ್ಲೆಯಲ್ಲಿ ಬೆಳಕಿಗೆ ಬಂದ ಪ್ರಕರಣಗಳು ಕೇವಲ ಶೇ.10 ರಷ್ಟು ಮಾತ್ರ. ಇನ್ನುಳಿದಿರುವಂಥದ್ದು ಹಾಗೆಯೇ ಮುಚ್ಚಿ ಹೋಗುತ್ತದೆ. ಪ್ರಪಂಚದಲ್ಲಿ 84 ಲಕ್ಷ ಜೀವರಾಶಿಗಳಿವೆ. ಸತ್ತು ಹೋದ ಮೂರು ಜನರಷ್ಟೇ ಅಲ್ಲ, ಪ್ರಾಣಿಗಳನ್ನು ಕೊಲ್ಲುವ ಅಧಿಕಾರ ಕೂಡ ಯಾರಿಗೂ ಇಲ್ಲ. 84 ಲಕ್ಷ ಜೀವರಾಶಿಗಳಲ್ಲಿ ಪ್ರಾಣಿಗಳಿರಬಹುದು, ಪಕ್ಷಿಗಳಿರಬಹುದು ಅಥವಾ ಮನುಷ್ಯರಿರಬಹುದು, ಯಾರಿಗೂ ಯಾರನ್ನೂ ಕೊಲ್ಲುವ ಅಧಿಕಾರವನ್ನು ಸೃಷ್ಟಿಕರ್ತ ಕೊಟ್ಟಿರುವುದಿಲ್ಲ. ಇದನ್ನು ಕೊನೆಯಲ್ಲಿ ಹೇಳುತ್ತೇನೆ.

ಇಲ್ಲಿ ಏನಾಗುತ್ತದೆಯೆಂದರೆ, ಬೆಳಗ್ಗೆ 08 ಗಂಟೆಗೆ ಬೇಟೆಗೆ ಹೋಗುತ್ತಿರುವುದರ ಬಗ್ಗೆ ಗೊತ್ತಾಗುತ್ತದೆ. ಪೊಲೀಸ್ ಇಲಾಖೆಯಲ್ಲಿ ಇದ್ದಂತೆ ನಮ್ಮ ಇಲಾಖೆಯಲ್ಲಿಯೂ informants ಇರುತ್ತಾರೆ. ಇವರು ಮಾಹಿತಿ ತಿಳಿದುಕೊಂಡು ಎರಡು ಜೀಪ್‌ಗಳಲ್ಲಿ ಹೋಗುತ್ತಾರೆ. ಅದೇನು 10, 20 ಅಥವಾ 100,200 ಎಕರೆಗಳ ಕಾಡಲ್ಲ. ಇದರ ವ್ಯಾಪ್ತಿ ನೂರಾರು ಚದರ ಕಿಲೋಮೀಟರ್‌ಗಳಿರುತ್ತವೆ. ಇವರು ಹೋಗುತ್ತಾರೆ, ಆದರೆ ಇಂಥ ಕಡೆ ಎಂದು identification ಮಾಡುವುದಕ್ಕೆ ಇವರಿಗೂ ಆಗುವುದಿಲ್ಲ. ಕಾಡಿನಲ್ಲಿ ಬೇಟೆ ಮಾಡುವವರು ಹೆಡ್‌ಲೈಟ್ ಹಾಕಿಕೊಂಡಿರುತ್ತಾರೆ ಅಥವಾ ಬ್ಯಾಟರಿ ಹಿಡಿದುಕೊಂಡು ಹೋಗುತ್ತಿರುತ್ತಾರೆ. ಬೆಳಗಿನ ಜಾವ 5 ಗಂಟೆ ಸುಮಾರಿನಲ್ಲಿ ಇವರಿಗೆ ಬ್ಯಾಟರಿ ಬೆಳಕು ಕಾಣಿಸುತ್ತದೆ. ಕರಡಿ ಕಲ್ಲು ಎನ್ನುವ ಎತ್ತರವಾದ ಪ್ರದೇಶಕ್ಕೆ ಬರುತ್ತಾರೆ. ಅವರ ಬ್ಯಾಟರಿ ಬೆಳಕನ್ನು ಫಾಲೋ ಮಾಡಿಕೊಂಡು ಇವರೂ ಹೋಗುತ್ತಾರೆ. ಹೋದಂಥ ಸಂದರ್ಭದಲ್ಲಿ ಇವರು

ಬಂದಿರುವುದೂ ಗೊತ್ತಾಗುತ್ತದೆ. ಅವರು ಬಂದಿರುವುದೂ ಗೊತ್ತಾಗುತ್ತದೆ. ಆಗ ಇವರು ಎಚ್ಚರಿಕೆ ಕೊಡುತ್ತಾರೆ. ಯಾರು ನೀವು? ಏನು, ಎತ್ತ ಎಂದು ಕೂಗಿ ಶರಣಾಗುವುದಕ್ಕೆ ಹೇಳುತ್ತಾರೆ.

**(ಮುಂದು)**

(729) 17-8-2026 (5.10) ಕೆಜಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ರಾಮಲಿಂಗ ರೆಡ್ಡಿ (ಮುಂದು):-**

ಅದೇರೀತಿ ಸಹಜವಾಗಿ ನಡೆದಿರುವುದಾಗಿದೆ. ಆಮೇಲೆ ಅವರು ಇವರ ಮೇಲೆ ಗುಂಡು ಹಾರಿಸಿದ್ದಾರೆ. ನಾನು ಆಗಲೇ ಹೇಳಿದಂತೆ, ಇವರ ಬಳಿ slide action gun ಇರುತ್ತದೆ. ಇವರು ಮೂರು ರೌಂಡು ಹತ್ತಿರದಿಂದಲೇ ಇರಬಹುದು ಇವರು ಗುಂಡು ಹಾರಿಸಿದ್ದಾರೆ. ಅವರಿಗೆ ಏಟು ಬಿದ್ದು ಗಾಯಗಳಾದ ಸಂದರ್ಭದಲ್ಲಿ ಕೂಗಾಡಿದ್ದಾರೆ. ನಂತರ ಇವರು ಬ್ಯಾಟರಿ ಹಿಡಿದುಕೊಂಡು ಅಲ್ಲಿಗೆ ಹೋಗಿ ನೋಡಿದಾಗ ಅವರಿಗೆ ರಕ್ತ ಬರುತ್ತಿತ್ತು. ಇವರ ಬಳಿ ಎರಡು ಜೀಪ್ ಗಳು ಇದ್ದವು. ಇವರನ್ನು ಎತ್ತಿಕೊಂಡು ಹೋಗುವಂತಹದ್ದು ಏನು ಇರಲಿಲ್ಲ. ಅಲ್ಲಿಗೆ ಒಟ್ಟು 12 ಜನ ಸಿಬ್ಬಂದಿಯವರು ಹೋಗಿದ್ದಾರೆ. ಅವರಲ್ಲಿ 2 ಜನ ಸಿಬ್ಬಂದಿಯನ್ನು watchtower ಮೇಲೆ ಬಿಟ್ಟಿದ್ದರು. ಇನ್ನಿಬ್ಬರು ಚಾಲಕರು ಇರುತ್ತಾರೆ. ಅಲ್ಲಿಗೆ ಎರಡು ತಂಡವಾಗಿ ಹೋಗಿದ್ದರು. ನಂತರ ಅಲ್ಲಿ ಎಲ್ಲರೂ ಒಂದು ಕಡೆ ಸೇರಿಕೊಳ್ಳುತ್ತಾರೆ. ನಂತರ ಇವರನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗುತ್ತಾರೆ. ಅರಣ್ಯ ಸಿಬ್ಬಂದಿ ವೈದ್ಯರಲ್ಲವಲ್ಲ. ಹಾಗಾಗಿ ಅವರಿಗೂ ಸಹ ಅವರು ಸತ್ತಿದ್ದಾರೋ ಅಥವಾ ಬದುಕಿದ್ದಾರೋ ಎಂದು ಗೊತ್ತಾಗಿಲ್ಲ. ಹನೂರಿಗೆ ಹೋಗುತ್ತಾರೆ ಅಲ್ಲಿಯೂ ಸಹ ವೈದ್ಯರು ಇರುವುದಿಲ್ಲ. ನಂತರ ಕೊಳ್ಳೆಗಾಲಕ್ಕೆ ಹೋಗುತ್ತಾರೆ. ಅಲ್ಲಿ ಪರೀಕ್ಷೆ ಮಾಡಿದಾಗ ಏನಾಗುತ್ತದೆ.,

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದು ಒಬ್ಬರ ಅಭಿಪ್ರಾಯ ಅಲ್ಲ. ಎಲ್ಲರೂ ಒಕ್ಕೊರಲ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ. ಈ ಪ್ರಕರಣದಲ್ಲಿ ಪರಿಶುದ್ಧವಾದ ತನಿಖೆಯಾಗಬೇಕು ಎನ್ನುವ ಭರವಸೆಯನ್ನು ಮಾನ್ಯ ಸಚಿವರು ನೀಡಬೇಕು. ಮತ್ತೇ ಅದನ್ನೇ ವಾಪಸ್ ಹೇಳುತ್ತಿದ್ದರೆ, ಸ್ವಲ್ಪ ನೋವಾಗುತ್ತದೆ.

**ಶ್ರೀ ರಾಮಲಿಂಗ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಅದಕ್ಕೆ ಕೊನೆಯಲ್ಲಿ ಹೇಳುತ್ತೇನೆ. ನಾನು ಅವರೆಲ್ಲರೂ ಮಾತನಾಡುವ ಸಂದರ್ಭದಲ್ಲಿ ಏನು ಮಾತನಾಡಲಿಲ್ಲ. ನಾನು ವರದಿಯನ್ನು ಕೊಡುವುದಕ್ಕಿಂತ ಮುಂಚೆ ಅಲ್ಲಿ ಇರುವಂತಹ ಅಧಿಕಾರಿಗಳ ಹಾಗೂ ಈ ಇಲಾಖೆಯ ಉನ್ನತ ಅಧಿಕಾರಿಗಳಿಂದ ಮಾಹಿತಿಯನ್ನು ತೆಗೆದುಕೊಂಡಿದ್ದೇನೆ. ಇದು ನಿಜಾಂಶಕ್ಕೆ ಹತ್ತಿರವಾಗಿರುವಂತಹ ವರದಿಯಾಗಿದೆ. ನಾನು ಮೊದಲು ಮಾತನಾಡುತ್ತೇನೆ.

ನಂತರ ಅವರು ಮಾತನಾಡಲಿ. ಆನಂತರ ಇವರನ್ನು ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಸೇರಿಸುತ್ತಾರೆ. ಇಬ್ಬರು ಅಲ್ಲಿಯೇ ತೀರಿಹೋಗಿರುತ್ತಾರೆ. ಅರಣ್ಯ ಸಿಬ್ಬಂದಿ ವೈದ್ಯರಲ್ಲವಲ್ಲ. ಇನ್ನೊಬ್ಬರಿಗೆ ಗಾಯಗಳು ಆಗಿರುತ್ತವೆಂದು ತೆಗೆದುಕೊಂಡು ಹೋಗುತ್ತಾರೆ. ಕೊಳ್ಳೆಗಾಲದ ಆಸ್ಪತ್ರೆಗೆ ಹೋಗುವಷ್ಟರಲ್ಲಿ ಮೂರು ಜನರು ತೀರಿಹೋಗಿದ್ದಾರೆಂದು ಹೇಳುತ್ತಾರೆ. ನಂತರ ಪೋಲಿಸರು ತೀರ್ಮಾನ ಮಾಡಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ತೆಗೆದುಕೊಂಡು ಹೋಗುತ್ತಾರೆ. ಈಗ ಮಾನ್ಯ ಸದಸ್ಯರಾದ ಪುಟ್ಟಣ್ಣನವರು ಹೇಳಿದಂತೆ, ಶ್ರೀ ಮಹಿಮದಾಸರವರು ನಿನ್ನೆ ದಿವಸ ಮಧ್ಯಾಹ್ನದವರೆಗೂ ಆಸ್ಪತ್ರೆಯಲ್ಲಿದ್ದರು. ಈ ಮನುಷ್ಯನಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಇವರು ನಿನ್ನೆ ಆಚೆಗೆ ಹೋಗಿದ್ದಾರೆ. ಏಕೆಂದರೆ, case registration ಆಗಿದೆ. ಆ ಕಾರಣದಿಂದ ಇನ್ನು ಅರೆಸ್ಟ್ ಮಾಡಬಹುದು ಎನ್ನುವ ಭಯದಿಂದ ಹೋಗಿರಬೇಕು. ಆದರೂ ಸಹ, ಆತ ಎಲ್ಲಿದ್ದಾನೆಂದು ಹುಡುಕುತ್ತೇವೆ. ಆ ವ್ಯಕ್ತಿ ಸಿಕ್ಕರೆ ನಿಜಾಂಶ ಏನೆಂದು ಸರಿಯಾಗಿ ತಿಳಿಯುತ್ತದೆ. ಶ್ರೀ ಮಹಿಮದಾಸರವರು ಬಂದರೆ ವಸ್ತುಸ್ಥಿತಿ ಏನಿದೆ ಎಂದು ನೂರಕ್ಕೆ ನೂರು ಭಾಗ ಇವರು ಬೇಟೆಯಾಡುವುದಕ್ಕೆ ಹೋಗಿದ್ದರೆ ಅಥವಾ ಉದ್ದೇಶ ಪೂರ್ವಕವಾಗಿ ನಮ್ಮ ಅರಣ್ಯ ಇಲಾಖೆಯವರನ್ನು ಏನಾದರೂ.... ಇದೆಲ್ಲಾ ಆಮೇಲೆ ಗೊತ್ತಾಗುತ್ತದೆ.

ಮಾನ್ಯ ಸಭಾಪತಿಯವರೇ, ಇನ್ನೂ ಮಾನ್ಯ ಸದಸ್ಯರುಗಳು ಅವರ ಜಾತಿ ಬಗ್ಗೆ ಹೇಳಿದ್ದಾರೆ. ಆದರೆ, ಇಲ್ಲಿ ಏನಾಗುತ್ತದೆ ಎಂದರೆ, ಪೊಲೀಸರು ಮಹಜರ್ ಮಾಡುವ ಸಂದರ್ಭದಲ್ಲಿ ಊರು, ಜಾತಿ, ವೃತ್ತಿ, ಎಲ್ಲಾ ವಿವರಗಳನ್ನು ತೆಗೆದುಕೊಳ್ಳುತ್ತಾರೆ. ಅವರು ಕ್ರಿಶ್ಚಿಯನ್ ಎಂದ ತಕ್ಷಣ ಅದರಲ್ಲಿ ಮರೆಮಾಚುವುದು ಏನಿಲ್ಲ. ಇದೆಲ್ಲಾ ಪೋಲೀಸ್ ಇಲಾಖೆಯಲ್ಲಿ ಇದ್ದೇ ಇರುತ್ತದೆ. ಘಟನೆಗೆ ಸಂಬಂಧಪಟ್ಟ ವ್ಯಕ್ತಿಯ ಜಾತಿ, ಅವರು ಏನು ಕೆಲಸ ಮಾಡುತ್ತಾರೆ, ಅವರ ಮನೆ ಎಲ್ಲಿದೆ ಎಂಬ ಎಲ್ಲಾ ವಿವರಗಳು ಇದ್ದೇ ಇರುತ್ತದೆ. ಇದರಲ್ಲಿ ಬೇರೆ ಏನಿಲ್ಲ. ಇದರಲ್ಲಿ ಅವರ ಮೇಲೆ ಯಾವುದೇ ಹಳೆಯ ದ್ವೇಷ ಇಲ್ಲವೆಂದು ಹೇಳಿದ್ದೇನೆ. ಒಂದು ವೇಳೆ, ಆ ರೀತಿ ಏನಾದರೂ ಇದ್ದಿದರೆ, ಅವರ ಕುಟುಂಬದವರು ಏನಾದರೊಂದು ಕಾರಣವನ್ನು ಕೊಡಬಹುದಾಗಿತ್ತು. ಆ ರೀತಿ ಅವರು ಏನು ಕೊಟ್ಟಿರುವುದಿಲ್ಲ. ಒಂದು ದೂರನ್ನು ಮಾತ್ರ ಕೊಟ್ಟಿದ್ದಾರೆ. ನಂತರ ನಾವು ಅರಣ್ಯ ಕಾಯಿದೆ ಪ್ರಕಾರ, ಒಂದು ದೂರನ್ನು ಸತ್ತಿರುವವರ ಹಾಗೂ ಶ್ರೀ ಮಹಿಮದಾಸರವರ ಮೇಲೆ ಕೊಡಲಾಗಿದೆ.

ಮಾನ್ಯ ಸಭಾಪತಿಯವರೇ, ಈ ಸತ್ತಿರುವ ವ್ಯಕ್ತಿಗಳ ಕುಟುಂಬದವರು ನಮ್ಮ ಹಸುಗಳು ಕಳೆದುಹೋಗಿದ್ದು, ಅವುಗಳನ್ನು ಹುಡುಕುವುದಕ್ಕೆ ಹೋಗಿದ್ದೇವೆಂದು ಹೇಳುತ್ತಾರೆ. ಒಂದು ವೇಳೆ ಹಸುಗಳು ಕಳೆದು ಹೋಗಿದ್ದರೆ, ಅವುಗಳನ್ನು ಹುಡುಕುವುದಕ್ಕೆ ಹೋಗುವವರು ಅಡಿಗೆ ಸಾಮಾನುಗಳನ್ನು ಏತಕ್ಕೆ ತೆಗೆದುಕೊಂಡು ಹೋಗುತ್ತಾರೆ?

ಅವರು ಅಡಿಗೆ ಸಾಮಾನುಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಅವರ ಬಳಿ head battery ಇರುತ್ತದೆ, ಮದ್ದಿನ ಬಾಕ್ಸ್ ಇರುತ್ತದೆ, ಮದ್ದಿನ ಪೌಡರ್ ಇರುತ್ತದೆ. ನಾಡ ಬಂದೂಕಿಗೆ ಬಳಸುವ 38 ಗುಂಡುಗಳು ಸಹ ಇವರ ಬಳಿ ಇರುತ್ತವೆ. ಅವರು ಇವುಗಳೆಲ್ಲವನ್ನು ತೆಗೆದುಕೊಂಡು ಹೋಗಿರುತ್ತಾರೆ. ಮಾನ್ಯ ಸದಸ್ಯರು ಅವರು ಬಳಸಿದ್ದ ಹಳೆಯ ಚಪ್ಪಲಿಗಳ ಬಗ್ಗೆ ಹೇಳಿದ್ದಾರೆ. ಆದರೆ, ಅವರು ಬಳಸಿದ್ದ ಚಪ್ಪಲಿಗಳು ಇವು.

(ಈ ಹಂತದಲ್ಲಿ ಮಾನ್ಯ ಸಚಿವರು 4 ಜೊತೆ ಚಪ್ಪಲಿಗಳು ಇರುವಂತಹ ಒಂದು ಫೋಟೋ ಪ್ರತಿಯನ್ನು ಸದನಕ್ಕೆ ತೋರಿಸಿದರು)

ಈ ಜೊತೆ ಚಪ್ಪಲಿಗಳು ಹಳೆಯದ್ದಾಗಿವೆ. ಮಾನ್ಯ ಸದಸ್ಯರು ಯಾರೋ ಒಬ್ಬರು ಈ ಚಪ್ಪಲಿಗಳನ್ನು ಅವರು ಬಳಸಿದ್ದರು ಎಂದು ತೋರಿಸಿದರು.

**ಸಭಾಪತಿಯವರು:-** ಮಾನ್ಯ ಸಚಿವರೇ, ಆ ಫೋಟೋವನ್ನು ಕಳುಹಿಸಿಕೊಡಿ.

**ಶ್ರೀ ರಾಮಲಿಂಗ ರೆಡ್ಡಿ:-** ಮಾನ್ಯ ಸಭಾಪತಿಯವರೇ, ನಮ್ಮ ಇಲಾಖೆಯವರು ಉದ್ದೇಶ ಪೂರ್ವಕವಾಗಿ ಅಲ್ಲಿ ಏನು ಮಾಡುವುದಕ್ಕೆ ಹೋಗಿರುವುದಿಲ್ಲ. ಅವರ self protection ಗೆ ಅವರು shoot ಮಾಡಿದ್ದಾರೆ. ಆಮೇಲೆ ಇದರಲ್ಲಿ ಯಾವುದೇ ಹಳೆಯ ದ್ವೇಷ ಇಲ್ಲ. ಮಾನ್ಯ ಸದಸ್ಯರುಗಳಿಗೆ ನನ್ನ ಈ ಉತ್ತರದಿಂದ ಸಮಾಧಾನ ತಂದಿರಬಹುದೆಂದು ಅನಿಸುತ್ತದೆ. ಇದರಲ್ಲಿ ಯಾವುದೇ ದ್ವೇಷ ಇಲ್ಲ. ಆ ರೀತಿ ವೈಮಸ್ಸು ಇದ್ದಿದ್ದರೆ. ..

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು judicial enquiry ಮಾಡಿಸುತ್ತಾರೋ ಅಥವಾ ಇಲ್ಲವೋ ಅದನ್ನು ಹೇಳಲಿ.

**ಶ್ರೀ ರಾಮಲಿಂಗ ರೆಡ್ಡಿ:-** ಮಾನ್ಯ ಸಭಾಪತಿಯವರೇ, ನಾನು ಮೊನ್ನೆ ದಿವಸ ಕೋಲಾರದಲ್ಲಿದ್ದೆ. ನಾನು ಕೋಲಾರದಲ್ಲಿದ್ದಾಗ ನಮ್ಮ ಮುಖ್ಯಮಂತ್ರಿಗಳಿಗೆ ನಮ್ಮ ಹಿರಿಯ ಅಧಿಕಾರಿಗಳು…,

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಪರಿಹಾರದ ಬಗ್ಗೆ ಹಾಗೂ judicial enquiry ಬಗ್ಗೆ ಉಲ್ಲೇಖ ಮಾಡಿಲ್ಲ.

**ಶ್ರೀ ರಾಮಲಿಂಗ ರೆಡ್ಡಿ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡಿದ ಮೇಲೆ ಅವರು ಮಾತನಾಡಲಿ. ನಾನು Independence Day Celebrations ಗಾಗಿ ಕೋಲಾರಕ್ಕೆ ಹೋಗಿದ್ದೆ. ಅಷ್ಟರಲ್ಲಿ ನಮ್ಮ ಹಿರಿಯ ಅಧಿಕಾರಿಗಳಿಗೆ ಬೆಳಗ್ಗೆ ವಿಷಯ ಗೊತ್ತಾಗಿ ಅವರು ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದ್ದರು. ಆಗ ಮಾನ್ಯ ಮುಖ್ಯಮಂತ್ರಿಯವರು Magistrate ತನಿಖೆ ಮಾಡಿ ಎಂದು ಹೇಳಿದ್ದಾರೆ. ಎ.ಸಿ. ರವರು Probationary I.A.S. officer ಆಗಿದ್ದು, ಜಿಲ್ಲಾಧಿಕಾರಿಯವರು ಇವರನ್ನು ತನಿಖಾಧಿಕಾರಿಗಳನ್ನಾಗಿ ನೇಮಕ

ಮಾಡಿದ್ದಾರೆ. ಒಂದು ವಾರ ಟೈಮ್ ಕೊಟ್ಟಿದ್ದಾರೆ. ಅವರು ಅಲ್ಲಿಗೆ ಹೋಗಿ ಮಹಜರ್ ಮಾಡಿದ್ದಾರೆ. ಅಲ್ಲಿ ಸಿಕ್ಕ ಮಾಂಸವನ್ನು ಲ್ಯಾಬ್‌ಗೆ ಕಳುಹಿಸಿದ್ದಾರೆ. ಆಗಲೇ ಮಾನ್ಯ ಸದಸ್ಯರುಗಳು ಅದು ಯಾವ ಮಾಂಸ ಎಂದು ಅನುಮಾನ ಬಿದ್ದರು. ಇದೆಲ್ಲಾ ಲ್ಯಾಬ್‌ನಲ್ಲಿ clarify ಆಗಬೇಕು. ಆ ಮಾಂಸವನ್ನು ನೋಡಿದ ತಕ್ಷಣ ಹೇಳುವುದಕ್ಕೆ ಆಗುವುದಿಲ್ಲ. ಅದು ಲ್ಯಾಬ್‌ಗೆ ಹೋಗಿದೆ. ಅದು ಸುಮಾರು 34 1/4 ಕೆ.ಜಿ.ಯಷ್ಟು ಮಾಂಸ ಇತ್ತು. ಮತ್ತೆ pellet gun ನ್ನು ಸಹ ಲ್ಯಾಬ್ ಗೆ ಕಳುಹಿಸಿದ್ದೇವೆ. ಈಗ ತನಿಖೆ ನಡೆಯುತ್ತಿದೆ. ಈಗ ತನಿಖೆಯಾಗಲಿ. ಮಾನ್ಯ ಸದಸ್ಯರುಗಳಿಗೆ ಅದರಿಂದ ಸಮಾಧಾನ ಇಲ್ಲವೆಂದರೆ, ನಂತರ ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಮಾತನಾಡಿ ಯಾವ ತನಿಖೆ ಮಾಡೋಣವೆಂದು ಚರ್ಚೆ ಮಾಡೋಣ. ಈಗ ನಾನು ಎಲ್ಲಾ ಮಾಧ್ಯಮಗಳಿಗೂ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ನಮ್ಮ ಅಧಿಕಾರಿಗಳು ದುರುದ್ದೇಶ ಇಟ್ಟುಕೊಂಡು ಏನಾದರೂ ಅವರ ಮೇಲೆ fire ಮಾಡಿದ್ದರೆ, ನಾನು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಈಗ ತೀರಿ ಹೋಗಿರುವಂತಹ ಮೂರು ಜನರು ಏನಾದರೂ ಭೇಟೆಗೆ ಹೋಗಿದ್ದರೆ, ಆಗ ನಾವು ಬೇರೆ ರೀತಿಯ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಹಾಗಾಗಿ, ಈಗ ತನಿಖೆಯಾಗಬೇಕು. ಶ್ರೀ ಮಹಿಮದಾಸ ಸಿಗಬೇಕು. ಆಗ ಸ್ಪಷ್ಟವಾಗಿ ನಾವು ಏನು ನಿಲುವು ತೆಗೆದುಕೊಳ್ಳಬೇಕೆಂದು ತೀರ್ಮಾನವಾಗುತ್ತದೆ. ನಮ್ಮ ಅಧಿಕಾರಿಗಳು ಏನಾದರೂ ಉದ್ದೇಶ ಪೂರ್ವಕವಾಗಿ ಮಾಡಿದ್ದರೆ ಅವರ ಮೇಲೆ ಕ್ರಮತೆಗೆದುಕೊಳ್ಳುತ್ತೇವೆ. ಆಗ ನಾವು ಸತ್ತವರ ಕುಟುಂಬಕ್ಕೆ ಏನಾದರೂ ಪರಿಹಾರ ಕೊಡುವುದಕ್ಕೂ ಯೋಚನೆ ಮಾಡಬಹುದು. ಇಲ್ಲವೆಂದರೆ, ನಮ್ಮ ಅಧಿಕಾರಿಗಳ ಮೇಲೆಯೂ ಸಹ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, action ಎನ್ನುವುದು O.K. ಆದರೆ, ಏನು action ಎನ್ನುವುದು ಇಲ್ಲ. ಈಗ ಮಾನ್ಯ ಸಚಿವರು ಸದನಕ್ಕೆ ಒಪ್ಪಿಸಿರುವಂತಹ ವರದಿ, ಇದು ಮಾನ್ಯ ಸಚಿವರ ವರದಿ ಅಲ್ಲ. ಇದನ್ನು ಅರಣ್ಯ ಇಲಾಖೆಯ ಅಧಿಕಾರಿಗಳೆ ತಯಾರು ಮಾಡಿಕೊಟ್ಟಿರುವಂತಹ ವರದಿಯಾಗಿದೆ.

**ಶ್ರೀ ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಎಲ್ಲಾವನ್ನು ಅಧಿಕಾರಿಗಳೆ ತಯಾರು ಮಾಡಿ ಕೊಡುತ್ತಾರೆ. ಮಾನ್ಯ ಸಚಿವರುಗಳು ಬರೆಯುತ್ತಾರೆಯೆ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸಚಿವರು ಎಲ್ಲಾವನ್ನು ಹೇಳಿದರು. ನನಗೆ ಮಾನ್ಯ ಸಚಿವರ ಮೇಲೆ ಬಹಳ ಗೌರವ ಇದೆ. ಮಾನ್ಯ ಸಚಿವರು ನಾಡಿನಲ್ಲೇ ಇದ್ದರು. ಅವರನ್ನು

ಕಾಡಿಗೆ ಯಾರು ಕಳುಹಿಸಿದರೋ ನನಗೆ ಗೊತ್ತಿಲ್ಲ. ಮಾನ್ಯ ಸಚಿವರೆ ಈ ಖಾತೆಯನ್ನು ಕೇಳ ತೆಗೆದುಕೊಂಡರೋ ಅಥವಾ ಯಾರಾದರೂ ಅವರನ್ನು ಕಾಡಿಗೆ ಕಳುಹಿಸಬೇಕೆಂದು ಕಳುಹಿಸಿದರೋ ಗೊತ್ತಿಲ್ಲ. ಈ ಎರಡು ದಿವಸಗಳಲ್ಲಿಯೇ ಮಾನ್ಯ ಸಚಿವರ ಮೇಲೆ ಇದು., ನಾವು ಮಾನ್ಯ ಸಚಿವರನ್ನು ಅನುಮಾನ ಪಡುವುದಿಲ್ಲ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಈಗ ಮಾನ್ಯ ಸಚಿವರು ಮುಂದೆ ಏನಾದರೂ ಬೇಕಾದರೆ, ತನಿಖೆ ಮಾಡಿಸುತ್ತೇನೆಂಬ ಮಾತನ್ನು ಹೇಳಿದ್ದಾರೆ. ಈ ಮಧ್ಯೆ ಮಾನ್ಯ ಮುಖ್ಯಮಂತ್ರಿಯವರು ಒಂದು ತನಿಖೆಯನ್ನು ಮಾಡಿಸುತ್ತಿದ್ದಾರೆಂದು ಮಾನ್ಯ ಸಚಿವರು ಹೇಳಿದ್ದಾರೆ ಅಲ್ಲವೇ;

**ಶ್ರೀ ರಾಮಲಿಂಗ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ ತನಿಖೆ ಪ್ರಾರಂಭವಾಗಿ 3 ದಿವಸಗಳು ಆಗಿವೆ. ಇನ್ನೂ 4 ದಿವಸಗಳಲ್ಲಿ ವರದಿ ಬರುತ್ತದೆ. ಇನ್ನೂ ಅಧಿವೇಶನ ಎರಡು ವಾರಗಳ ಕಾಲ ಇರುತ್ತದೆ. ಆಮೇಲೆ ಬೇಕಾದರೆ, ಅವರಿಗೆ ಸಮಾಧಾನ ಇಲ್ಲವೆಂದರೆ, ನಾವು ಮುಖ್ಯಮಂತ್ರಿಯವರ ಬಳಿ ಚರ್ಚೆ ಮಾಡಿ ಒಂದು ತೀರ್ಮಾನ ತೆಗೆದುಕೊಳ್ಳೋಣ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಸಮಾಧಾನಕರ ಪ್ರಶ್ನೆ ಏನೆಂದರೆ, ಇದು ಗೊಂದಲದ ಗೂಡು. ಇಲ್ಲಿ ಪ್ರತ್ಯಕ್ಷದರ್ಶಿಗಳು ಯಾರು ಇಲ್ಲ. ಅಧಿಕಾರಿಗಳಿಂದ ಮೂರು ಜನರ ಪ್ರಾಣ ಹೋದ ಕಾರಣದಿಂದ, ಅಧಿಕಾರಿಗಳು ಅವರನ್ನು ಅವರು ರಕ್ಷಣೆ ಮಾಡಿಕೊಳ್ಳುವುದಕ್ಕೆ ಯಾವ ರೀತಿ ವರದಿ ತಯಾರು ಮಾಡಬೇಕೋ ಅದನ್ನು ಮಾನ್ಯ ಸಚಿವರಿಗೆ ತಯಾರು ಮಾಡಿ ಒಪ್ಪಿಸಿದ್ದಾರೆ. ಮಾನ್ಯ ಸಚಿವರು ಅದನ್ನು ಸದನಕ್ಕೆ ಒಪ್ಪಿಸಿದ್ದಾರೆ. ಆದರೆ, ಇಲ್ಲಿ ಅನೇಕ ಅನುಮಾನಗಳು ಇವೆ. ಅದಕ್ಕೆ ಉತ್ತರ ಇಲ್ಲ. ಮಾನ್ಯ ಸಚಿವರು ಈಗ ನಡೆಯುತ್ತಿರುವ ತನಿಖೆಯ ವರದಿ ಬರಲಿ ಎಂದು ಹೇಳುತ್ತಾರೆ. ಈ ತನಿಖೆಯಿಂದ ಸತ್ಯಾಂಶ ಬರುತ್ತದೆ ಎಂದು ನನಗೆ ಅನಿಸುವುದಿಲ್ಲ. ಏಕೆಂದರೆ, ಬೆಳಗ್ಗೆ 5 ಗಂಟೆಯಲ್ಲಿ ಅವರಿಗೆ ಶರಣರಾಗಿ ಎಂದು ಹೇಳಿದ್ದಾರೆ, ಅವರು ಶರಣರಾಗಲಿಲ್ಲವೆಂದರೆ ಪರವಾಗಿಲ್ಲ. ಏಕೆಂದರೆ, ಅವರು ಎಲ್ಲಿಗೂ ಓಡಿಹೋಗುವುದಕ್ಕೆ ಆಗುತ್ತಿರಲಿಲ್ಲ. ಏಕೆಂದರೆ, ಅವರು 4 ಜನರು ಇದ್ದರು. ಅಲ್ಲಿ 12 ಜನ ಅಧಿಕಾರಿಗಳು ಇದ್ದರು. ಅಧಿಕಾರಿಗಳು safe distance ಅನ್ನು ಇಟ್ಟುಕೊಂಡು ಅವರನ್ನು ಕವರ್ ಮಾಡಿ ಬೆಳಗ್ಗೆ ಅಷ್ಟೊತ್ತಿಗೆ ಅವರನ್ನು ಹಿಡಿದುಕೊಂಡು ಬಂದು ಅವರಿಗೆ ಶಿಕ್ಷೆ ಕೊಡಬಹುದಾಗಿತ್ತು. ಈ ವರದಿಯಲ್ಲಿ ನಾವು ಗುಂಡು ಹಾರಿಸಿದೆವು ಅದು ಬೆಲ್ಟ್‌ನಿಂದ ತಳಗಡೆಗೆ ಬಿದ್ದಿಲ್ಲ, ಮೇಲೆ ಬಿದ್ದಿದೆ ಎಂದು ನಿಖರವಾಗಿ ಹೇಳುತ್ತಾರೆ. ಇದು ಎಂತಹ ವರದಿ. ನಾನು ನೋಡಿದ್ದೇನೆ. ನನ್ನ ಬಳಿ ಫೋಟೋಗಳು

ಇವೆ. ಗುಂಡು ನೇರವಾಗಿ ಮೇಲಿನ ಭಾಗಕ್ಕೆ ಬಿದ್ದಿವೆ. ಈಗ ಮಾನ್ಯ ಸದಸ್ಯರಾದ ಡಾ॥ ಧನಂಜಯ ಸರ್ಜಿಯವರು 50 ಅಡಿ ಅಥವಾ 100 ಅಡಿ ಇರಬಹುದು ನೇರವಾಗಿ ಗುಂಡು ಹೊಡೆದಾಗ ಸಾಯಬಹುದು ಎಂದು ಹೇಳಿದರು.

(ಮುಂದು)

**(730) 17.08.2026/5.20/ಎಂವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ಮುಂದು):**

ಇಲ್ಲವೆಂದರೆ ಗಾಯಗಳಾಗಬಹುದೇ ಹೊರತು, ಸಾವು ಬರುವುದಿಲ್ಲ. ನಾನು ಇನ್ನೊಂದು ಕೇಳಬೇಕಾಗುತ್ತದೆ. ಈಗ ಮೂರು ಜನರನ್ನು ಹೊಡೆದುಬಿಟ್ಟು, ಅಲ್ಲಿದ್ದಂತಹ ನಾಲ್ಕನೆಯವನನ್ನು ಏಕೆ ಬಿಟ್ಟು ಬಿಟ್ಟರು? ಈಗ ಅದು ತಾಪತ್ರಯವಲ್ಲವೇ?

**ಶ್ರೀ ಬಿ.ಝಡ್. ಜಮೀರ್ ಅಹಮದ್ ಖಾನ್ (ವಸತಿ ಸಚಿವರು):-** ಮಾನ್ಯ ಸಭಾಪತಿಯವರೇ, ಹಾಗಾದರೆ, ಅವನನ್ನು ಸಹ ಹೊಡೆಯಬೇಕಾಗಿತ್ತೆ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈಗ ಅವನಿಂದ ಅನೇಕ ಸತ್ಯಗಳು ಹೊರಗೆ ಬಂದುಬಿಡುತ್ತವೆ.

**ಶ್ರೀ ಬಿ.ಝಡ್. ಜಮೀರ್ ಅಹಮದ್ ಖಾನ್:-** ಮಾನ್ಯ ಸಭಾಪತಿಯವರೇ, ಸತ್ಯ ಹೊರಗೆ ಬರಲಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸತ್ಯ ಹೊರಗೆ ಬರಲಿ ಎಂದು ಅವನನ್ನು ಬಿಟ್ಟಿದ್ದಾರೆಯೇ?

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, **(ಗೊಂದಲ)** ಅದರ ವಿಚಾರವೇನು?

**ಶ್ರೀ ಬಿ.ಝಡ್. ಜಮೀರ್ ಅಹಮದ್ ಖಾನ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ನಾಲ್ಕನೆಯವನು ಬದುಕಿದ್ದಾನೆ. ಮತ್ತೆ ಅವನು abscond ಆಗಿದ್ದಾನೆ. ಅವನು ಸಿಕ್ಕಿದ ಮೇಲೆ ಇರುವ ಸತ್ಯಾಂಶ ಹೊರಗೆ ಬರುತ್ತದೆಂದು ಮಾನ್ಯ ಸಚಿವರು ಹೇಳಿದ್ದಾರೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ಉತ್ತರ ಸರಿಯಾಗಿಲ್ಲ. ಯಾವ ವರದಿಯಾದರೂ ಬರಲಿ. ಈಗ ಮಾನ್ಯ ಸಚಿವರು ಕೊಟ್ಟಿರುವಂತಹ ವರದಿ ಯಾವ ರೀತಿಯಾದರೂ ಬರಲಿ. ಅವರು ನೇರವಾಗಿ ಹೇಳಲಿ. ಶೂಟೌಟ್ ಮಾಡಬೇಕಾದರೆ ಅದಕ್ಕೆ permission ಯಾರು ಕೊಟ್ಟರು? ಅವರು ಏನಾದರೂ ಮಾನ್ಯ ಮಂತ್ರಿಗಳಿಂದ permission ತೆಗೆದುಕೊಂಡಿದ್ದಾರೆಯೆ?

**ಶ್ರೀಮತಿ ಎ.ವಿ. ಗಾಯತ್ರಿ ಶಾಂತೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಹೇಗೆ ಕೊಡುತ್ತಾರೆ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದು ಅವರಿಗೆ ಬರುವುದೇ ಇಲ್ಲ. ಆದರೆ, ಅವರ ಶೂಟೌಟ್‌ಗೆ ಯಾರು ಆದೇಶ ಕೊಟ್ಟರು ಎಂದು ಹೇಳಲಿ.

**ಡಾ: ಯತೀಂದ್ರ. ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಕಾನೂನಿನಲ್ಲಿ self defense ಗೆ ಅವಕಾಶವಿದೆ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ಅದು law and order ವಿಚಾರವಾಗಿರುತ್ತದೆ. **(ಗೊಂದಲ)** ಮಾನ್ಯ ಮಂತ್ರಿಗಳಿಂದ permission ತೆಗೆದುಕೊಂಡು shoot out ಮಾಡುವುದೆಂದರೆ ಅದು ಹಾಸ್ಯಾಸ್ಪದ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆ ರೀತಿ ಹೇಳುವುದು ಬಹಳ ಸುಲಭದ ಮಾತು. ಆದುದರಿಂದ, ಸದನಕ್ಕೆ ಅವರು ಏನು ಸಮಜಾಯಿಷಿಯನ್ನು ನೀಡಿದ್ದಾರೆ, ಇದು ನಮಗೆ ಸಹಮತ ಇಲ್ಲ. ಅವರು ಇದನ್ನು ಜುಡಿಶಿಯಲ್ ತನಿಖೆಗೆ ಕೊಡಬೇಕೆಂಬುದು ನಮ್ಮ ಒತ್ತಾಯ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಒಂದು ವಿಚಾರವನ್ನು ಮಾತನಾಡಿದ್ದಾರೆ. ಅಂದರೆ, ಶ್ರೀ ಮಹಿಮದಾಸ್ ಎಂಬುವವರು ಆಸ್ಪತ್ರೆಯಲ್ಲಿ ಚಿಕಿತ್ಸೆಗೆಂದು ಸೇರಿಕೊಂಡಿದ್ದರು ಆದರೆ ಅವರು ಓಡಿ ಹೋಗಿದ್ದಾರೆಂದು ಹೇಳಿದ್ದಾರೆ. ಈ ಮಾತು ಎಷ್ಟು ಹಾಸ್ಯಾಸ್ಪದವಾಗಿದೆ ಎಂದರೆ, ಇಂತಹ heinous case ಗಳಲ್ಲಿ ಅವನು ಆಸ್ಪತ್ರೆಗೆ ಸೇರಿದ್ದಾನೆಂದರೆ forthwith ಅಲ್ಲಿಗೆ ಪೊಲೀಸ್ ಮತ್ತು ಅರಣ್ಯ ಸಿಬ್ಬಂದಿಗಳನ್ನು ನಿಯೋಜಿಸಬೇಕಾಗಿತ್ತು. ಅವನು ಅವರ full protection ನಲ್ಲಿ ಇರಬೇಕು. ಏಕೆಂದರೆ, ಅವನೇ main evidence. ಅವನು ಹೊರಗಡೆ ಓಡಿ ಹೋಗುವುದಕ್ಕೆ ಹೇಗೆ ಬಿಟ್ಟರು? ಅವನು ಏನಾದರೂ ಓಡಿ ಹೋಗಿದ್ದಾನೋ ಅಥವಾ ಅವನನ್ನು ಓಡಿಸಿದ್ದಾರೆಯೋ? ನೂರಕ್ಕೆ ನೂರು ಇವರುಗಳೇ ಓಡಿಸಿರುತ್ತಾರೆ. How can it be possible sir? ಅಲ್ಲಿ ಮೂರು murder ಆಗಿದೆ. ಅಲ್ಲಿ ಗುಂಡೇಟಿನಿಂದ murder ಆಗಿದೆ. ಈಗ injured ಆಸ್ಪತ್ರೆಯಲ್ಲಿ admit ಆದಂತಹವನನ್ನು ಆಸ್ಪತ್ರೆಯಿಂದ ಹೋಗುವುದಕ್ಕೆ ಬಿಟ್ಟರು ಎಂದರೆ, ಇಲಾಖೆಯ ಅಧಿಕಾರಿಗಳು ಮತ್ತು ಪೊಲೀಸ್ ಅಧಿಕಾರಿಗಳು ಏನು ಮಾಡುತ್ತಿದ್ದರು? ಇದು ಬಹಳ ಹಾಸ್ಯಾಸ್ಪದವಾಗಿದೆ. ಇದರಲ್ಲಿ ಅವರ involvement ನೂರಕ್ಕೆ ನೂರು ಇದೆ ಎಂದು ಗೊತ್ತಾಗುತ್ತದೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇದನ್ನು ಸಂಪೂರ್ಣವಾಗಿ ಅಧಿಕಾರಿಗಳು ತಯಾರಿಸಿರುವಂಥದ್ದು.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅವನು ಹೋಗಿಬಿಟ್ಟಿದ್ದಾನೆಂದು ಹೇಳಿದ್ದಾರೆ. ಅವನು ಹೋಗಿಬಿಟ್ಟ ಎಂದರೆ, ಅದು ಏನು ಮಕ್ಕಳಾಟಿಕೆಯೇ? ಈ ವಿಚಾರದಲ್ಲಿ ಎರಡು ರೀತಿಯಲ್ಲಿ ಹೇಳುತ್ತಾರೆ. ಈಗ ಇದರ ವಿಚಾರಣೆಗೆ Taluk Executive Magistrate ಅನ್ನು appoint ಮಾಡಿದ್ದಾರೆ. Who is he? Taluk Executive Magistrate, ಅವರು ನಮ್ಮ ಅಧಿಕಾರಿಗಳೇ. ಇವತ್ತು ಏನಾದರೂ ಅಧಿಕಾರಿಗಳನ್ನು ರಕ್ಷಣೆ

ಮಾಡುವುದಕ್ಕೆ ಅದು ಒಂದು ನಿಮಿಷದ ಕೆಲಸ. ಇಲ್ಲಿ ಏನು ಹೇಳುತ್ತಾರೆಂದರೆ, ಪ್ರತಿದಾಳಿ ನಡೆಸಿರುವುದನ್ನು ಉದ್ದೇಶಪೂರ್ವಕವಾಗಿ ಮಾಡಿಲ್ಲವೆಂದು ಈಗಾಗಲೇ conclusion ಗೆ ಬಂದುಬಿಟ್ಟಿದ್ದಾರೆ. ಈ ರೀತಿ ಬಂದಾದ ಮೇಲೆ ಕೊನೆಗೆ ಏನು ಹೇಳುತ್ತಾರೆಂದರೆ, ಸಿಬ್ಬಂದಿಯ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಹೇಳುತ್ತಾರೆ. ಅವರು ಏನು ಸೂಕ್ತ ಕ್ರಮ ಕೈಗೊಳ್ಳುತ್ತಾರೆ? ಹಾಗಾಗಿ, ಇಡೀ ಸದನ including, ಆಡಳಿತ ಪಕ್ಷದವರು ಮತ್ತು ವಿರೋಧ ಪಕ್ಷದವರು ಸೇರಿಕೊಳ್ಳಬೇಕು. ನಾನೇನು ಅಧಿಕಾರಿಗಳದ್ದು ತಪ್ಪು ಎಂದು ಹೇಳುವುದಿಲ್ಲ. ಅವರು ಅಲ್ಲಿಗೆ ಏತಕ್ಕೆ ಹೋಗಿದ್ದಾರೆಂದರೆ, ಅವರು ಹೇಳಿದಂತೆ, just because... ಅವರು ಪಾತ್ರೆ ಪಗಡೆ ಅಕ್ಕಿಯನ್ನು ತೆಗೆದುಕೊಂಡು ಹೋಗಿದ್ದಾರೆಂದು. ಅವರು ಅದನ್ನು ತೆಗೆದುಕೊಂಡು ಹೋಗಲಿ. ಅದನ್ನು ತೆಗೆದುಕೊಂಡು ಹೋದ ಮಾತ್ರಕ್ಕೆ ಅವರಿಗೆ ಗುಂಡು ಹೊಡೆಯಬೇಕೆಂದು ಇದೆಯೇ? ಶಿಕಾರಿ ಮಾಡಿದರೆ ಗುಂಡು ಹೊಡೆಯಬೇಕೆಂದು ಇದೆಯೇ? ಅದಕ್ಕೂ ಬೇರೆ ರೀತಿಯ ಶಿಕ್ಷೆ ಇದೆ. ಆ ರೀತಿಯ ಶಿಕ್ಷೆ ಕೊಟ್ಟಿದ್ದರೆ ನಾವುಗಳು ಯಾರೂ ಕೇಳುತ್ತಿರಲಿಲ್ಲ. ಇಡೀ ಸದನ ಒಕ್ಕೊರಲಿನಿಂದ ಅಭಿಪ್ರಾಯ ನೀಡುತ್ತಿದೆ. ಮತ್ತೆ ನಮಗೆ ವಿಶ್ವಾಸವಿದೆ. ಆದರೆ, ನ್ಯಾಯಾಂಗ ತನಿಖೆ ಮಾಡುವುದಕ್ಕೆ ಏನು ಕಷ್ಟ? ಈ ನಾಡಿನ ಜನರ ರಕ್ಷಣೆಗೋಸ್ಕರ ಮತ್ತು ಈಗ ಹೋಗಿರುವಂತಹ ಆ ಬಡಪಾಯಿಗಳ ಆತ್ಮಕ್ಕೆ ಶಾಂತಿ ಸಿಗುವುದಕ್ಕೋಸ್ಕರ, ಆ ಕುಟುಂಬಗಳಿಗೆ ನ್ಯಾಯ ಕೊಡುವುದಕ್ಕೋಸ್ಕರ ದಯಮಾಡಿ ನ್ಯಾಯಾಂಗ ತನಿಖೆ ಆಗಲೇಬೇಕು. ಈ judicial probe ಆದರೆ ಮಾತ್ರ ಸರ್ಕಾರ ನ್ಯಾಯ ಕೊಟ್ಟಂತೆ ಆಗುತ್ತದೆ. ಇದರಿಂದ ಸರ್ಕಾರ ಕಪ್ಪು ಚುಕ್ಕೆ ತೆಗೆದುಕೊಳ್ಳುವುದು ಬೇಡ. ಮಾನ್ಯ ಸಚಿವರು ಒಳ್ಳೆಯ ಸಚಿವರು ಮತ್ತು ಅನುಭವ ಇರುವಂತಹ ಸಚಿವರಾಗಿರುವುದರಿಂದ ದಯಮಾಡಿ ಅವರು ಕಪ್ಪು ಚುಕ್ಕೆ ತೆಗೆದುಕೊಳ್ಳುವುದು ಬೇಡವೆಂಬುದು ನನ್ನ ಮನದಾಳದ ಮಾತು.

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ನಿರ್ಣಯಕ್ಕೆ ಬಂದು ಅದರ ತನಿಖೆ ಮಾಡುವುದರಲ್ಲಿ ಅರ್ಥವಿಲ್ಲ. ಈ ರೀತಿಯ ಪ್ರಕರಣವಾದಾಗ ಅವರು ಏನು ಮಾಡಬೇಕಾಗಿತ್ತು ಎಂದರೆ, ಕನಿಷ್ಠ ಸಂಶಯಾಸ್ಪದ ಸಾವು ಎಂದು ಮೊಕದ್ದಮೆಯನ್ನು ದಾಖಲು ಮಾಡಬೇಕಾಗಿತ್ತು. ಆದರೆ, ಅವರು ಏನು ಮಾಡಿದರು ಎಂದರೆ, ಆತ್ಮರಕ್ಷಣೆಗಾಗಿ ಎಂದು ನಿರ್ಣಯಕ್ಕೆ ಬಂದಿದ್ದಾರೆ. ಆತ್ಮರಕ್ಷಣೆಗೆ ನಿರ್ಣಯ ಎಂಬುದು ಅದರ ತನಿಖೆಯ ನಂತರ ಗೊತ್ತಾಗಲಿ. ಅಂದರೆ, ಅವರು ಆತ್ಮರಕ್ಷಣೆಗೆ ಮಾಡಿದ್ದಾರೋ purposefully ಮಾಡಿದ್ದಾರೋ ಅಥವಾ ಬೇರೆ ಯಾವ ಕಾರಣಕ್ಕೆ ಮಾಡಿದ್ದಾರೋ. ಅವರು ಆ ಕ್ಷಣಕ್ಕೆ ಸಂಶಯಾಸ್ಪದ ಸಾವು ಎಂದು ದಾಖಲಿಸಿಕೊಂಡು, ಅದನ್ನು ತನಿಖೆಯ ಆಯಾಮವನ್ನು ಮುಕ್ತವಾಗಿ ಇಟ್ಟುಕೊಳ್ಳುವುದಕ್ಕೆ ಬರುತ್ತಿತ್ತು. ಆದರೆ, ಅವರು ಈಗ ಏನು ಮಾಡಿದ್ದಾರೆಂದರೆ, ನಿರ್ಣಯಕ್ಕೆ ಬಂದು ಆ ಲೈನ್‌ನಲ್ಲಿ ತೆಗೆದುಕೊಂಡು ಹೋಗುತ್ತಿದ್ದಾರೆ. ಈಗ ಏನು ಚಪ್ಪಲಿ ಬಗ್ಗೆ ಹೇಳಿದ್ದಾರೆ, ಅದರ ಜೊತೆಗೆ ಬ್ಯಾಗ್ ಇದೆ. ಮತ್ತೆ ಅದರ ಜೊತೆಗೆ ಕತ್ತಿ, ಚಾಕು ಮತ್ತು ಚೂರಿ ಇವೆಲ್ಲಾ ಇದೆ. ಅದರ ಜೊತೆಯಲ್ಲಿಯೇ ಚಪ್ಪಲಿ ಇರುವುದು. ನಾನು ಆ ಫೋಟೋವನ್ನೇ ಮಾನ್ಯ ಸಭಾಪತಿಗಳಿಗೆ ನೀಡಿದ್ದು.

**ಸಭಾಪತಿಯವರು:-** ನಾನು ಅದನ್ನು ಅವರಿಗೆ ಕಳುಹಿಸಿಕೊಟ್ಟಿದ್ದೇನೆ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಆದರೆ ಈ ಹೊಸ ಚಪ್ಪಲಿ ಎಲ್ಲಿಂದ ಬಂತೋ ಎಂದು ನನಗೆ ಗೊತ್ತಿಲ್ಲ. ಅದು ಪತ್ರಿಕೆಯಲ್ಲಿ ಬಂದಿದ್ದನ್ನೇ ನಾನು ಅದನ್ನು ಪ್ರಿಂಟ್ ತೆಗೆಯಿಸಿ ತಮಗೆ ಕೊಟ್ಟಿದ್ದು. ಆದುದರಿಂದ, ಇದಕ್ಕೆ Magistrate ತನಿಖೆಯಿಂದ ಪರಿಹಾರವಿಲ್ಲ. ಇದಕ್ಕೆ ನಿಷ್ಪಕ್ಷಪಾತವಾಗಿ ತನಿಖೆ ಆಗಬೇಕೆಂದು ಇದೆಯೇ? ಈಗ ಯಾರೇ ತಪ್ಪು ಮಾಡಿದ್ದರೂ ಸಹ ಶಿಕ್ಷೆ ಆಗಬೇಕೆಂದು ಇದೆಯೇ? ಆ ರೀತಿ ಇದ್ದರೆ ಹಾಲಿ ಹೈಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ನಡೆಸಲಿ. ಇಲ್ಲದೇ ಇದ್ದರೆ, ನೋಡಿ ಬಡವನ ಶಾಪ ಇದೆಯಲ್ಲಾ ಅದರಿಂದ ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಅವರು ಕಾನೂನು ಕುಣಿಕೆಯಿಂದ ತಪ್ಪಿಸಿಕೊಳ್ಳಬಹುದು. ಆದರೆ, ಅವರ ಶಾಪದಿಂದ ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಮಾನ್ಯ ಸಚಿವರು ತಪ್ಪು ಮಾಡಿದ್ದಾರೆಂದು ಹೇಳುತ್ತಿಲ್ಲ. ಈಗ ಯಾರೋ ಮಾಡಿರುವ ತಪ್ಪನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಹೋಗಿ, ಆ ಪಾಪದ ಕೊಡವನ್ನು ಸರ್ಕಾರ ಏಕೆ ಅನುಭವಿಸಬೇಕು? ಸರ್ಕಾರ ಕೇವಲ ಅರಣ್ಯ ಸಿಬ್ಬಂದಿಗಳಿಗೆ ಮಾತ್ರವಲ್ಲ. ಈಗ ಸತ್ತಿರುವಂತಹವರಿಗೂ ಸಹ ಸರ್ಕಾರವೆ. ಅವರಿಗೆ ಮತ್ತು ಅವರ ಕುಟುಂಬ ವರ್ಗದವರಿಗೆ ನ್ಯಾಯ ಕೊಡಬೇಕಾಗಿರುವುದು ಸರ್ಕಾರದ ಜವಾಬ್ದಾರಿ. ಹಾಗಾಗಿ, ಇದಕ್ಕೆ ನ್ಯಾಯಾಂಗ ತನಿಖೆಯನ್ನು ಘೋಷಣೆ ಮಾಡಲಿ. ಆಗ ನಾನು Section 302 ಎಂದು ಹೇಳಿದ್ದೆ. ಕನಿಷ್ಠ ಸಂಶಯಾಸ್ಪದ ಸಾವು ಎಂದು ಆ ಆಯಾಮದಲ್ಲಿ ಇಟ್ಟುಕೊಂಡು ತನಿಖೆ ನಡೆಸಲಿ. ಯಾವ ಹಿನ್ನೆಲೆಯಲ್ಲಿ ಬಂದಿದ್ದರು ಎಂಬುದು ಸಮಗ್ರ ತನಿಖೆಯಲ್ಲಿ ಗೊತ್ತಾಗಲಿ. ಇದರಲ್ಲಿ ಇಲಾಖೆಯ ಅಧಿಕಾರಿಗಳು ಕೊಟ್ಟಿರುವಂತಹ ವರದಿ ಬಿಟ್ಟರೆ, ಮಾನ್ಯ ಸಚಿವರಿಂದ ಸ್ವತಂತ್ರವಾಗಿರುವಂಥದ್ದು ಏನಾದರೂ ಒಂದು ಅಕ್ಷರ ಇದೆಯೇ? ಅರಣ್ಯ ಇಲಾಖೆಯ ನಿವೃತ್ತಿ ಹೊಂದಿರುವಂತಹ ಅಧಿಕಾರಿಗಳು ಎಷ್ಟು ಬೀಟೆ ಮರದ furniture, ಎಷ್ಟು ಸಾಗುವಾನಿ ಮರ ಮತ್ತೆ ಯಾವ್ಯಾವ ರೀತಿಯದು ಬೇಕು? ಅಂದರೆ, ಅವರು ಕದಿಯದೆ ಮತ್ತು ಅರಣ್ಯ ಇಲಾಖೆಯನ್ನು ಲೂಟಿ ಹೊಡೆಯದೇ ಅವರ ಮನೆಗೆ ಬೀಟೆ ಮತ್ತು ಸಾಗುವಾನಿ ಮರ ಬಂದಿದೆಯೇ? ಅವರು ಏನಾದರೂ ದುಡ್ಡು ಕೊಟ್ಟು ಕೊಂಡುಕೊಂಡಿದ್ದಾರೆಯೇ? ಅವರೆಲ್ಲರೂ ಸಹ ಪ್ರಾಮಾಣಿಕರು ಎಂದು Certificate ಕೊಡುವುದಕ್ಕೆ ಆಗುತ್ತದೆಯೇ? ಆದರೆ ಅಲ್ಲೊಬ್ಬ ಇಲ್ಲೊಬ್ಬ ಪ್ರಾಮಾಣಿಕರು ಇರಬಹುದು. ಅವರ ಸಂಬಳದಲ್ಲಿ ಬೆಂಗಳೂರಿನಲ್ಲಿ ವಿವಿಧ ಬಡಾವಣೆಗಳಲ್ಲಿ ನಿವೇಶನ ತೆಗೆದುಕೊಂಡು ಮನೆ ಕಟ್ಟುವುದಕ್ಕೆ ಆಗುತ್ತದೆಯೇ? ಆ ರೀತಿ ಸಾಧ್ಯವಿದೆಯೇ? ಅವರನ್ನು ಏಕೆ ಶೇಕಡಾ 100ರಷ್ಟು ಪ್ರಾಮಾಣಿಕರು ಎಂದು ಹೇಳುತ್ತಾರೆ. ಅಲ್ಲೊಬ್ಬ ಇಲ್ಲೊಬ್ಬ ಪ್ರಾಮಾಣಿಕರು ಇದ್ದಾರೆ. ಎಲ್ಲರೂ ಪ್ರಾಮಾಣಿಕರು ಅಲ್ಲ. ಹಾಗಾಗಿ, ಈ ಘಟನೆಯನ್ನು ಸಂಶಯಾಸ್ಪದವಾಗಿ ಇರತಕ್ಕಂತಹ ಘಟನೆ ಎಂದು ನಿರ್ಣಯಕ್ಕೆ ಬರಬೇಕು. ಇದನ್ನು ಮುಕ್ತವಾಗಿ ಇಟ್ಟುಕೊಂಡು ಅದರ ಆಧಾರದ ಮೇಲೆ ತನಿಖೆ ನಡೆಸಲಿ. ಇದರ ಬಗ್ಗೆ ಈಗಲೇ ತೀರ್ಮಾನಕ್ಕೆ ಬರುವುದು ಬೇಡ. ಇದನ್ನು judicial ತನಿಖೆಗೆ ಆದೇಶ ಮಾಡಬೇಕೆಂಬುದು ನಮ್ಮ ಆಗ್ರಹ.

**ಸಭಾಪತಿಯವರು:-** ಮಾನ್ಯ ಸಚಿವರು ಅದಕ್ಕೆ ಉತ್ತರ ಹೇಳಲಿ. ಅವರು clarification ಕೊಡಲಿ.

**ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,ಮಾನ್ಯ ಸಚಿವರು ಒಂದೇ ಬಾರಿಗೆ ಈ ರೀತಿಯ conclusion ಗೆ ಬಂದು ಅಧಿಕಾರಿಗಳು ಮಾಡಿರುವುದು ಸರಿ, ನಾಲ್ಕು ಜನ ಯಾರು ಅಮಾಯಕರು ಇದ್ದಾರೆ ಅವರು ಮಾಡಿರುವುದು ತಪ್ಪು ಎಂದು conclusion ಗೆ ಬಂದು ಈ ರೀತಿಯ ವರದಿಯನ್ನು ಕೊಟ್ಟಿದ್ದಾರೆ, ಇದನ್ನು ನಾವು ಖಂಡಿತವಾಗಿ ಒಪ್ಪುವುದಕ್ಕೆ ಸಾಧ್ಯವಿಲ್ಲ. ಈಗ ಉದಾಹರಣೆಗೆ; ಶ್ರೀ ಮಹಿಮದಾಸ್ ಓಡಿ ಹೋಗಿದ್ದಾರೆ. ಈಗ ಓಡಿ ಹೋಗಿರುವಂತಹ ಶ್ರೀ ಮಹಿಮದಾಸ್ ಪೊಲೀಸರಿಗೆ ಸಿಗುವುದಿಲ್ಲ. ಆದರೆ, ಜಿಲ್ಲಾ ಉಸ್ತುವಾರಿ ಸಚಿವರಿಗೆ ಸಿಕ್ಕಿದ್ದಾರೆಂದರೆ, ಅದು ಹೇಗೆ ಸಾಧ್ಯ? ಅವರು ಜಿಲ್ಲಾ ಉಸ್ತುವಾರಿ ಸಚಿವರಿಗೆ ಸಿಕ್ಕಿದ್ದಾರೆ. ಅವರು ಏನೇನು ಆಗಿದೆ ಎಂದು ಹೇಳಿದ್ದಾರೆ. ಅವರು ಏನು ಹೇಳಿದ್ದಾರೆಂದು ನಮಗೆ ಗೊತ್ತಿಲ್ಲ. ಅವರು ಜಿಲ್ಲಾ ಉಸ್ತುವಾರಿ ಸಚಿವರಿಗೆ ಸಿಗುತ್ತಾರೆ. ಆಮೇಲೆ ಅಲ್ಲಿಂದ ಹೋದಮೇಲೆ ಪೊಲೀಸರು ನಮಗೆ ಸಿಕ್ಕಿಲ್ಲ ತಪ್ಪಿಸಿಕೊಂಡಿದ್ದಾನೆಂದು ಹೇಳುತ್ತಾರೆ. ಇದೆಲ್ಲಾ ಟಿ.ವಿ.ಗಳಲ್ಲಿ ಬರುತ್ತಿದೆ. ಶ್ರೀ ಮಹಿಮದಾಸ್ ಜಿಲ್ಲಾ ಉಸ್ತುವಾರಿ ಸಚಿವರಿಗೆ ಭೇಟಿ ಮಾಡಿ ಏನೇನು ಆಗಿದೆ ಎಂದು ಹೇಳಿ ಹೋಗಿದ್ದಾರೆ. ಅಂದರೆ, ಜಿಲ್ಲಾ ಉಸ್ತುವಾರಿ ಸಚಿವರಿಗೆ ಸಿಗುತ್ತಾರೆ. ಆದರೆ, ಪೊಲೀಸ್‌ನವರಿಗೆ ಸಿಗುವುದಿಲ್ಲ. ಅವರನ್ನು ಏನಾದರೂ ಓಡುವುದಕ್ಕೆ ಬಿಟ್ಟಿದ್ದಾರೆಯೇ? ಇದೆಲ್ಲಾ ಹೊರಗಡೆಗೆ ಬರಬೇಕೆಂದರೆ, Magistrate ಕಡೆಯಿಂದ ತನಿಖೆ ಮಾಡಿದರೆ ಇದು ಸಾಧ್ಯವಿಲ್ಲ. ಒಂದು ಸ್ವತಂತ್ರವಾಗಿರುವಂತಹ, at present sitting Judge ಅವರಿಂದ enquiry ಮಾಡಿಸಲಿ. ಒಂದೇ ಬಾರಿಗೆ conclusion ಗೆ ಬರುವುದು ಬೇಡ. It is deep rooted. ಇದು ಬಹಳ ದೊಡ್ಡ ಮಟ್ಟದಲ್ಲಿ ಆಗಿರುವಂತಹ plan ಆಗಿದೆ. ಹಾಗಾಗಿ, ಮಾನ್ಯ ಸಚಿವರು ಇದರ ಬಗ್ಗೆ conclusion ಗೆ ಬರಬಾರದು ಮತ್ತು ಇದಕ್ಕೆ stick on ಆಗಬಾರದು. ಅವರು ಇದನ್ನು Judicial Enquiry ಗೆ ನೀಡಲಿ.

(ಮುಂದು)

(731) 17.08.2026 ವೈಎಲ್-ಎಂಡಿ 5.30 (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ರವಿಕುಮಾರ್ (ಮುಂದು):**

ಜೊತೆಗೆ ಅಧಿಕಾರಿಗಳು ತಪ್ಪೇ ಮಾಡಿಲ್ಲ, ಅವರು ಮಾಡಿರುವುದೇ ಸರಿ, ನಾಗರಿಕರು ಮಾಡಿರುವುದೇ ತಪ್ಪು. ಆದರೂ ರೂ.5 ಲಕ್ಷ ಪರಿಹಾರ ನೀಡುತ್ತೇವೆ ಎಂದು ಹೇಳಿ, ರೂ.5 ಲಕ್ಷ ಕೊಟ್ಟು ಕೈತೊಳೆದುಕೊಳ್ಳುವುದೇನಿದೆ, ಇದು ಇಡೀ ರಾಜ್ಯಕ್ಕೆ, ರೈತರಿಗೆ, ಬಡ ವರ್ಗದವರಿಗೆ ಮಾಡಿರುವಂಥ ದೊಡ್ಡ ಅನ್ಯಾಯವಾಗಿದೆ. ಇದನ್ನು ಒಪ್ಪಲಿಕ್ಕೆ ಸಾಧ್ಯವಿಲ್ಲ.

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ತಾನೇ ಎಲ್ಲರೂ ಮಾತನಾಡಿದಂಥ ವಿಚಾರವನ್ನು ನೋಡಿದಾಗ, ಎಲ್ಲಿಯೋ ಒಂದು ಕಡೆ ನಾವೆಲ್ಲರೂ ಕುಳಿತುಕೊಂಡು ಮರ್ಡರ್ ಆಗಿರಬಹುದು ಎಂದು ಮಾತನಾಡುವುದು ಸರಿಯಾಗಿಲ್ಲ ಎನ್ನುವುದು ನನ್ನ ಭಾವನೆ. ಈಗಾಗಲೇ ಆದೇಶ ಕೊಟ್ಟು, ತನಿಖೆ ನಡೆಯುತ್ತಿರುವ ಸಂದರ್ಭದಲ್ಲಿ ಅವರ ಮೇಲೆ influence ಆಗುವ ರೀತಿ ನಾವು ತೀರ್ಮಾನ ಮಾಡುವುದನ್ನು ಒಪ್ಪಲಿಕ್ಕೆ ಸಾಧ್ಯವಿಲ್ಲ ಎನ್ನುವಂಥ ಮಾತನ್ನು ಹೇಳುತ್ತೇನೆ. ಏಕೆಂದರೆ, ಎ.ಸಿ. ಮೂಲಕ ತನಿಖೆ

ಮಾಡಿ, let him give a fair and transparent report. ಅವರು ವರದಿಯನ್ನು ನೀಡಲಿ. ವರದಿ ಬಂದ ಮೇಲೆ ಸರಿಯಾಗಿದೆಯೇ, ಇಲ್ಲವೇ ಎಂಬುದನ್ನು ನ್ಯಾಯಾಂಗದ ಮೂಲಕ ಅಥವಾ ಬೇರೆ ಅಧಿಕಾರಿಗಳಿಗೆ ವಹಿಸಬೇಕೇ ಎಂಬುದನ್ನು ಆನಂತರ ತೀರ್ಮಾನ ಮಾಡಬಹುದು. ಈಗಾಗಲೇ ತನಿಖೆ ಮಾಡುವ ಸಂದರ್ಭದಲ್ಲಿ ಅದು influence ಆಗುವ ರೀತಿ ಮಾಡುವುದು ಅಥವಾ ಇಂತಹ ದಿಕ್ಕಿನಲ್ಲಿಯೇ ತನಿಖೆ ಮಾಡಬೇಕೆಂದು ಹೇಳುವುದನ್ನು ನೋಡಿದಾಗ, ಎಲ್ಲಿಯೋ ಒಂದು ಕಡೆ ಅದು ತಪ್ಪಾಗುತ್ತದೆ ಎಂದು ಭಾವಿಸುತ್ತೇನೆ. ಹಾಗಾಗಿ, ಸರ್ಕಾರಕ್ಕೆ ಹೇಳುವುದೇನೆಂದರೆ, we want to know the truth of the matter. Prima-facie ಏನಾಗಿದೆ ಎಂಬುದನ್ನು ತಿಳಿದುಕೊಳ್ಳಲು ಎ.ಸಿ. ಮೂಲಕ ತನಿಖೆ ಮಾಡಿಸುತ್ತಿದ್ದಾರೆ. ಅದು ಬಂದ ತಕ್ಷಣವೇ ಮತ್ತೆ ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಕ್ಯಾಬಿನೆಟ್‌ನಲ್ಲಿ ಕುಳಿತುಕೊಂಡು ತೀರ್ಮಾನ ಮಾಡಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ರಾಮಲಿಂಗಾ ರೆಡ್ಡಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಹೇಳಿದ ಹಾಗೆ ಸತ್ತ ನಾಗರಿಕರಿಗೂ ಹಾಗೂ ನಮ್ಮ ಅಧಿಕಾರಿಗಳಿಗೂ ಯಾವುದೇ ದ್ವೇಷ ಇರಲಿಲ್ಲ. ಆ ರೀತಿ ಏನಾದರೂ ಆಗಿದ್ದರೆ ಅವರ ಮನೆಯವರೇ ಇಷ್ಟು ಹೊತ್ತಿಗೆ ದೂರು ನೀಡುತ್ತಿದ್ದರು. ಇದೇ 15ನೇ ತಾರೀಖಿನಂದು ಘಟನೆ ನಡೆದಿದ್ದು, ಇವತ್ತಿಗೆ ಮೂರು ದಿವಸಗಳಾಗಿವೆ. ಯಾರೂ ಸಹ ಬಂದು ದೂರು ನೀಡಿಲ್ಲ.

**ಸಭಾಪತಿಯವರು:-** ಅವರ ಕುಟುಂಬಸ್ಥರು ಬಂದು ದೂರು ನೀಡಿಲ್ಲವೇ?

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಜನರಲ್ ಆಗಿ ದೂರು ನೀಡಿದ್ದಾರೆ. ಅದೇನೆಂದರೆ, ಹಸು ಮೇಯಿಸುವುದಕ್ಕೆ ಹೋಗಿದ್ದ ಸಂದರ್ಭದಲ್ಲಿ ಈ ರೀತಿ ಘಟನೆ ನಡೆದಿದೆ ಎಂದು ದೂರು ನೀಡಿಲ್ಲ. ಆ ರೀತಿ ಏನಾದರೂ ದ್ವೇಷ ಇದ್ದಿದ್ದರೆ ಗೊತ್ತಾಗುತ್ತಿತ್ತು ಅಲ್ಲವೇ? ಬೇಕಾದರೆ ಎಫ್.ಐ.ಆರ್. ಪ್ರತಿಯನ್ನು ತಮಗೆ ಕಳುಹಿಸಿಕೊಡುತ್ತೇನೆ. ಹಾಗಾಗಿ, ಇಲಾಖಾ version ಈ ರೀತಿ ಇದ್ದು, ಸತ್ತು ಹೋದವರ version ಪ್ರಕಾರ specific ಯಾರ ಮೇಲೆ ಕೂಡ ದೂರು ನೀಡಿಲ್ಲ, ಅರಣ್ಯ ಇಲಾಖೆಯವರು ಅವರನ್ನು ಕರೆದುಕೊಂಡು ಹೋಗಿ, ಈ ರೀತಿ ಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ ಅಷ್ಟೇ. ಜೊತೆಗೆ ಕಾನೂನಿನಲ್ಲಿ ಪೊಲೀಸ್ ಇಲಾಖೆಯವರಿಗೆ ಮತ್ತು ಅರಣ್ಯ ಸಿಬ್ಬಂದಿಗಳಿಗೆ ಆತ್ಮರಕ್ಷಣೆಗೆ ಗುಂಡು ಹಾರಿಸಲು ಅವಕಾಶ ಕೂಡ ಇದೆ. ಅದರಂತೆ ಅರಣ್ಯ ಸಿಬ್ಬಂದಿಗಳು ಗುಂಡು ಹಾರಿಸಿದ್ದು, ಆ ನಾಗರಿಕರು ಹತ್ತಿರ ಬಂದಿದ್ದಾರೆ, ಅವರು ಸಹ ಗುಂಡು ಹಾರಿಸಲು ಪ್ರಯತ್ನ ಮಾಡಿದ್ದಾರೆ, ಹಾಗಾಗಿ, ಅರಣ್ಯ ಸಿಬ್ಬಂದಿಗಳು ಆತ್ಮ ರಕ್ಷಣೆಗಾಗಿ ಗುಂಡು ಹಾರಿಸಿದ್ದು, ಈಗ ಎ.ಸಿ. ಯವರಿಂದ ತನಿಖೆಯಾಗುತ್ತಿದೆ. ಅವರಿಗೆ magistrate powers ಇದ್ದು, ಜಿಲ್ಲಾಧಿಕಾರಿಗಳು ಅವರಿಗೆ ಅದರ ಜವಾಬ್ದಾರಿಯನ್ನು ಕೊಟ್ಟಿದ್ದಾರೆ. 3 ದಿವಸಗಳೊಳಗೆ ವರದಿ ಬರುತ್ತದೆ. ವರದಿ ಬಂದ ಮೇಲೆ ಸಮಾಧಾನವಾಗಲಿಲ್ಲವೆಂದರೆ, ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ, ನಂತರ ಮಾತನಾಡಲಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ವರದಿ ಸರಿಯಾಗಿ ಬರುವುದಿಲ್ಲ. ದಯವಿಟ್ಟು ನ್ಯಾಯಾಂಗ ತನಿಖೆಗೆ ಕೊಡಲಿ. ಹಾಗೆಂದು ತಾವು announce ಮಾಡಿ. ಅವರಿಗೆ clean chit ಕೊಡುವುದಾದರೆ, ಕೊಡಲಿ. ಅರಣ್ಯ ಸಿಬ್ಬಂದಿಗಳು ತಪ್ಪು ಮಾಡಿಲ್ಲ ಎಂದು ಹೇಳುವುದಾದರೆ, ಹೇಳಲಿ. ಈ ರೀತಿಯ ಸರ್ಕಾರದ ವರದಿಯನ್ನು ನಾವು ಒಪ್ಪಿಕೊಂಡು ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ದಯವಿಟ್ಟು ತಾವು ಆ ನ್ಯಾಯಾಂಗ ತನಿಖೆಗೆ ವಹಿಸುವಂತೆ announce ಮಾಡಿ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ದಯವಿಟ್ಟು ನಾನು ಹೇಳುವುದನ್ನು ಕೇಳಿ. ಸದರಿ ವಿಚಾರವಾಗಿ ಸುಮಾರು ಎರಡು-ಮೂರು ಗಂಟೆಗಳ ಕಾಲ ಸಾಕಷ್ಟು ಚರ್ಚೆ ನಡೆದಿದೆ. ಹಾಗೆಯೇ ಮಾನ್ಯ ಸಚಿವರು ಹೇಳಿದ ಹಾಗೆ ಮೂರು ದಿನಗಳೊಳಗೆ ವರದಿ ಬರುತ್ತದೆ. ಅಲ್ಲಿಯವರೆಗೂ ಸದನ ನಡೆಯುವುದರಿಂದ ತಮಗೆ ಆ ವರದಿ ಸಮಾಧಾನವಾಗಲಿಲ್ಲವೆಂದರೆ, ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ, ಏನೂ ಮಾಡಬೇಕೆಂಬುದನ್ನು ತಿಳಿಸುತ್ತೇನೆ ಎಂದು ಹೇಳಿದ್ದಾರೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಸರ್ಕಾರ ಕೊಟ್ಟಿರುವಂಥ ಉತ್ತರದಲ್ಲಿಯೇ conclusion ಏನೆಂಬುದು ಇದ್ದು, ಮುಂದೆ ಸಹ 'ಆತ್ಮ ರಕ್ಷಣೆಗಾಗಿ ಗುಂಡು ಹಾರಿಸಿದ್ದು, 3 ಜನ ಮರಣ ಹೊಂದಿದ್ದಾರೆ' ಎನ್ನುವ ರೀತಿಯೇ ವರದಿ ಬರುವುದು.

**ಸಭಾಪತಿಯವರು:-** ಆ ರೀತಿ ಏನಿಲ್ಲ, ತನಿಖೆ ನಡೆಯುತ್ತಿದೆ.

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಆತ್ಮ ರಕ್ಷಣೆಗಾಗಿ ಗುಂಡು ಹಾರಿಸಿದ್ದೇವೆ ಎಂದು ನಮ್ಮ ಅರಣ್ಯ ಸಿಬ್ಬಂದಿಗಳು ಹೇಳಿದ್ದು, ಅದು ಸರಿಯೇ, ತಪ್ಪೇ ಎಂದು ಯಾರು ತೀರ್ಮಾನ ಮಾಡಬೇಕು? ಅದನ್ನು Magistrate ನವರು ತೀರ್ಮಾನ ಮಾಡಲಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನ್ಯಾಯಾಂಗ ತನಿಖೆಗೆ ಕೊಡಲಿ.

**ಸಭಾಪತಿಯವರು:-** ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿರವರೇ, ಕೇವಲ 3 ದಿವಸಗಳೊಳಗೆ ವರದಿ ಬರುತ್ತದೆ ಅಲ್ಲವೇ? ಆಮೇಲೆ ಸಹ ಸದನ ನಡೆಯುತ್ತಿರುತ್ತದೆ ಅಲ್ಲವೇ?

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಒಂದು ವೇಳೆ ಅಧಿಕಾರಿಗಳ ತಪ್ಪಾಗಿದ್ದರೆ ಅವರ ಮೇಲೆ ಖಂಡಿತ ಕ್ರಮ ಕೈಗೊಳ್ಳುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಇದರಲ್ಲಿ ಮಾನ್ಯ ಸಚಿವರ ತಪ್ಪಾಗಿದೆ ಎಂದು ಹೇಳುತ್ತಿಲ್ಲ. ಅಧಿಕಾರಿಗಳ ರಕ್ಷಣೆ ಮಾಡುವುದು ಬೇಡ ಎಂದು ಹೇಳುತ್ತಿದ್ದೇನೆ. ಆ ಅಧಿಕಾರಿಗಳು ಸಹ ತಪ್ಪು ಮಾಡಿದ್ದಾರೆಯೋ, ಇಲ್ಲವೋ ಸರಿಯಾಗಿ ಗೊತ್ತಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದ ಹಾಗೆ, ಈಗ ಕೊಟ್ಟಿರುವ ವರದಿ ಸರ್ಕಾರದ ವರದಿಯೇ ಅಥವಾ ಅಧಿಕಾರಿಗಳು ಕೊಟ್ಟಿರುವ ವರದಿಯೇ

ಎಂಬುದನ್ನು ಹೇಳಲಿ. ಸರ್ಕಾರ ಎಂದ ಮೇಲೆ ಅಧಿಕಾರಿಗಳು ಒಳಗೊಂಡಂತೆ ಸರ್ಕಾರ ಎಂದು ಹೇಳಲಿ. ಅದನ್ನು ಬಿಟ್ಟು ಅಧಿಕಾರಿಗಳು ಕೊಟ್ಟಿರುವಂಥ ವರದಿ ಎಂದು ಹೇಳಿದ್ದಾರೆ.

**(ಗೊಂದಲ)**

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ):-** ಈ ಘಟನೆ ಬಗ್ಗೆ ದಂಡನಾಧಿಕಾರಿಗಳಿಂದ ವರದಿ ಸ್ವೀಕೃತಗೊಂಡ ನಂತರ ಕಾನೂನು ರೀತಿಯಲ್ಲಿ ಮುಂದಿನ ಕ್ರಮಕೈಗೊಳ್ಳಲಾಗುವುದು. **(ಗೊಂದಲ)** ಒಂದು ವೇಳೆ ಅರಣ್ಯ ಇಲಾಖೆ ಸಿಬ್ಬಂದಿ ತಪ್ಪಾಗಿದ್ದರೆ, **(ಗೊಂದಲ)** ಆ ಸಿಬ್ಬಂದಿ ಮೇಲೆ ಕ್ರಮ ಕೈಗೊಳ್ಳಲಾಗುವುದು.

**ಶ್ರೀ ಶರಣ ಪ್ರಕಾಶ್ ಆರ್. ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು):-** ಆದರೆ, ಸತ್ಯಾಸತ್ಯತೆ ಬಗ್ಗೆ ತನಿಖೆಯಾಗಲಿ ಎಂದು ಹೇಳುತ್ತಿದ್ದೇವೆ.

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಯವರೇ, ವರದಿ ಸ್ವೀಕೃತಗೊಂಡ ನಂತರ ಕಾನೂನು ರೀತಿ ಮುಂದಿನ ಕ್ರಮಕೈಗೊಳ್ಳಲಾಗುವುದು. ಒಂದು ವೇಳೆ ಅರಣ್ಯ ಇಲಾಖೆಯ ಸಿಬ್ಬಂದಿಯ ತಪ್ಪು ಆ ತನಿಖೆಯಿಂದ ಸಾಬೀತಾದರೆ, ಆ ಸಿಬ್ಬಂದಿಯವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ನಾನೇ ಕೊಟ್ಟಿರುವಂಥ ವರದಿಯಲ್ಲಿದೆ, ನೋಡಲಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದರಲ್ಲಿಯೇ confusion ಇದೆ. ಅದಕ್ಕಾಗಿಯೇ ನಾನು ಕೇಳುತ್ತಿರುವುದು. ಆ ವರದಿಯನ್ನು ಬಿಟ್ಟು, ನ್ಯಾಯಾಂಗ ತನಿಖೆಗೆ ಕೊಡಲಿ. ನಂತರ ಆದೇಶ ಬರುತ್ತದೆ, ಅದನ್ನು ನೋಡಿಕೊಂಡು ತೀರ್ಮಾನ ಕೈಗೊಳ್ಳಲಿ. ಒಂದು ವೇಳೆ ಅರಣ್ಯ ಸಿಬ್ಬಂದಿಗಳು ತಪ್ಪು ಮಾಡಿಲ್ಲವೆಂದರೆ, ಅವರ ಮೇಲೆ ಉಗ್ರ ಕ್ರಮ ಕೈಗೊಳ್ಳಬೇಕಾಗಿಲ್ಲ.

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಈಗ ಕೊಟ್ಟಿರುವ ವರದಿಯಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ ನೋಡಲಿ. ಅರಣ್ಯ ಇಲಾಖೆಯ ಸಿಬ್ಬಂದಿಯವರು ತಪ್ಪು ಎಂದು ತನಿಖೆ ವರದಿಯಲ್ಲಿ ಸಾಬೀತಾದರೆ, ಆ ಸಿಬ್ಬಂದಿಯವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಸ್ಪಷ್ಟವಾಗಿ ತಿಳಿಸಿದ್ದೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಯಾವ ವರದಿಯಲ್ಲಿ ಸೂಕ್ತವಾಗಿ ಕ್ರಮ ಕೈಗೊಳ್ಳಲಾಗುವುದು? ಸರ್ಕಾರವು ಏನೂ expect ಮಾಡುತ್ತಿದೆ, ಆ ವರದಿಯ ಪ್ರಕಾರ ಕ್ರಮ ಕೈಗೊಳ್ಳುತ್ತಾರೆ.

**(ಗೊಂದಲ)**

**ಶ್ರೀ ಯತೀಂದ್ರ ಎಸ್. (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಅದೇನು investigation report ಆಗಿಲ್ಲ. ನೋಟ್ ಕೊಟ್ಟಿದ್ದಕ್ಕೆ ಅಷ್ಟೇ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಈಗಾಗಲೇ ಮಾನ್ಯ ಸಚಿವರು 'ಯಾರು ತಪ್ಪು ಮಾಡಿದ್ದಾರೆ, ಅವರ ಮೇಲೆ ಕಾನೂನ ಪ್ರಕಾರ ಶಿಕ್ಷೆ ವಿಧಿಸುತ್ತೇವೆ, ೩ ದಿವಸಗಳವರೆಗೂ wait ಮಾಡಿ, ವರದಿ

ಬರಲಿ, ಅದು ಸಮಾಧಾನವಾಗಲಿಲ್ಲವೆಂದರೆ, ಮತ್ತೇ ಏನು ಮಾಡಬಹುದೆಂದು ಹೇಳುತ್ತೇನೆ' ಎಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನ್ಯಾಯಾಂಗ ತನಿಖೆಯಾಗಲಿ ಎಲ್ಲರೂ safe ಆಗುತ್ತಾರೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, 3 ದಿವಸಗಳೊಳಗೆ ವರದಿ ಬರುತ್ತದೆ ಎಂದು ತಾವು ಏನು ಹೇಳುತ್ತೀರಿ. ಈ ವರದಿಯು clean chit ಬರುತ್ತದೆ.

**ಸಭಾಪತಿಯವರು:-** ಮೊದಲು ವರದಿ ಬರಲಿ ಇರಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಯಾರ ಮೇಲೆ ಕ್ರಮ ಕೈಗೊಳ್ಳುತ್ತಾರೆ? ಏಕೆಂದರೆ, ಇದರಲ್ಲಿಯೇ confusion ಇದೆ. ಅವರು ಸರ್ಕಾರದ ಅಧಿಕಾರಿಗಳೇ ಆಗಿರಬಹುದು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಸರ್ಕಾರ ದೋಷಮುಕ್ತವಾಗಲಿ ಎಂಬುದು ನಮ್ಮ ಅಭಿಪ್ರಾಯ.

**ಶ್ರೀ ರಾಮೋಜಿಗೌಡ:-** ಮಾನ್ಯ ಸಭಾಪತಿಯವರೇ, ತಪ್ಪು ಮಾಡಿದರೆ ಕ್ರಮ ಕೈಗೊಳ್ಳಲಾಗುವುದು ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. **(ಗೊಂದಲ)** ಹಾಗಾಗಿ, ದಯವಿಟ್ಟು 3 ದಿವಸಗಳವರೆಗೂ ಕಾಲಾವಕಾಶ ಕೊಡಲಿ. **(ಗೊಂದಲ)** ವರದಿ ಬರಲಿ, ಆ ವರದಿಯಲ್ಲಿ ಏನಾದರೂ doubt ಕಂಡು ಬಂದರೆ ಮತ್ತೆ ಚರ್ಚೆ ಮಾಡೋಣ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇಂತಹ ವರದಿಯನ್ನು ಒಪ್ಪಲು ಸಾಧ್ಯವಿಲ್ಲ. ನ್ಯಾಯಾಂಗ ತನಿಖೆ ಆಗಬೇಕು.

**(ಗೊಂದಲ)**

**ಶ್ರೀ ರಾಮೋಜಿಗೌಡ:-** ಮಾನ್ಯ ಸಭಾಪತಿಯವರೇ, ವರದಿ ಬರಲಿ ನಂತರ ಏನಾಗುತ್ತದೆ ಎಂಬುದನ್ನು ನೋಡೋಣ. 3 ದಿವಸಗಳವರೆಗೂ ಕಾಯುವುದಕ್ಕೆ ಏನು ಸಮಸ್ಯೆ. ಅಧಿವೇಶನ ಮುಗಿಯುವುದಕ್ಕೆ ಇನ್ನೂ 15 ದಿನಗಳು ಸಮಯ ಇದೆ ಅಲ್ಲವೇ?

**(ಗೊಂದಲ)**

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶ್ರೀ ನವೀನ್ ನಾಯಕರ ಮೇಲೆ ಅವರೇ ಕೇಸ್ ಹಾಕಿಸಿ ಅವರನ್ನು ಜೈಲಿಗೆ ಹಾಕಿಸಿದ್ದು.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಕೈ ಮುಗಿದು ಪ್ರಾರ್ಥಿಸುತ್ತೇನೆ. ಸರ್ಕಾರದ ಮೇಲೆ ಕಪ್ಪು ಚುಕ್ಕೆ ಬರಬಾರದು. ಮಾನ್ಯ ಸಚಿವರು ನಿಷ್ಕಲ್ಮಶರಾಗಿದ್ದಾರೆ.

**(ಗೊಂದಲ)**

**ಶ್ರೀ ರಾಮೋಜಿಗೌಡ:-** ಮಾನ್ಯ ಸಭಾಪತಿಯವರೇ, ಅದೇ ರೀತಿ ಅರಣ್ಯ ಅಧಿಕಾರಿಗಳ ಮೇಲೆಯೂ ಕಪ್ಪು ಚುಕ್ಕೆ ಬರಬಾರದು. ಅಧಿಕಾರಿಗಳ ಆತ್ಮಸ್ಥೈರ್ಯ ಕುಗ್ಗಬಾರದು.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, Judicial inquiry ಗೆ ವಹಿಸಲಿ.

**(ಗೊಂದಲ)**

**ಶ್ರೀ ರಾಮೋಜಿಗೌಡ:-** ಮಾನ್ಯ ಸಭಾಪತಿಯವರೇ, ಅರಣ್ಯ ಉಳಿಯಬೇಕು, ಪ್ರಾಣಿ-ಪಕ್ಷಿ ಉಳಿಯಬೇಕು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನ್ಯಾಯಾಂಗ ತನಿಖೆಯಾಗಲೇಬೇಕು.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಗಲಾಟೆ ಮಾಡಲೇಬೇಕೆಂದು ತೀರ್ಮಾನ ಮಾಡಿಕೊಂಡು ಬಂದಿದ್ದಾರೆ. ಈಗಾಗಲೇ ಮಾನ್ಯ ಸಚಿವರು 3 ದಿವಸಗಳವರೆಗೂ ಕಾಲಾವಕಾಶ ಕೊಡಿ, ವರದಿ ಬರುತ್ತದೆ ಎಂದು ಹೇಳಿದ್ದಾರೆ. ಆದರೂ ಅವರಿಗೆ ಸಮಾಧಾನವಾಗುತ್ತಿಲ್ಲ. ಅವರೆಲ್ಲರ ನಿರ್ಧಾರದಿಂದ assumption ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ರಾಜಕೀಯ ಮಾಡುವುದು ಬೇಡ.

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಘೋಷಣೆ ಕೂಗುತ್ತಿದ್ದರು)**

**(ಗೊಂದಲ)**

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಸುತ್ತೋಲೆ ಪ್ರಕಾರ ಕ್ರಮ ಕೈಗೊಳ್ಳಬೇಕು.

**(ಗೊಂದಲ)**

**ಶ್ರೀಮತಿ ಬಲ್ಕೀಸ್ ಬಾನು:-** ಮಾನ್ಯ ಸಭಾಪತಿಯವರೇ, ವರದಿ ಬಂದ ಮೇಲೆ ಮತ್ತೆ ಚರ್ಚೆಗೆ ಅವಕಾಶ ಇದೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ.

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಘೋಷಣೆ ಕೂಗುತ್ತಿದ್ದರು)**

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಬಲ್ಕೀಸ್ ಬಾನುರವರು ಘೋಷಣೆ ಕೂಗಿದರು)**

**ಶ್ರೀ ಯತೀಂದ್ರ ಎಸ್.:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ನೀಡಿದರೂ ಕೂಡ ಸದನವನ್ನು disturb ಮಾಡುತ್ತಿದ್ದಾರೆ. ಯಾವ ರೀತಿ ಉತ್ತರ ನೀಡಿದರೂ ಅವರಿಗೂ ಸಮಾಧಾನವಾಗುತ್ತಿಲ್ಲ. ಇದು ಸರಿಯಿಲ್ಲ. **(ಗೊಂದಲ)** ಮೂರು ದಿವಸಗಳು ಕಾಯಿರಿಯೆಂದು ಅರಣ್ಯ ಸಚಿವರು ಹೇಳುತ್ತಿದ್ದಾರೆ. ತನಿಖಾ ವರದಿಯು ಬರುತ್ತದೆ. ನಂತರ ನ್ಯಾಯಾಂಗ ತನಿಖೆಗೆ ನೀಡಲು ತೀರ್ಮಾನ ಕೈಗೊಳ್ಳಲಾಗುವುದು.

(ಮುಂದು)

(732) 17.08.2026/5.40/ಎಸ್‌ಕೆ-ಕೆಎಸ್ **(ಸಭಾಪತಿಯವರ ಉಪಸ್ಥಿತಿ)**

**(ಗೊಂದಲ)**

**ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ವಿಧಾನಸಭೆಯಲ್ಲಿ ಮಾನ್ಯ ಅರಣ್ಯ ಸಚಿವರು ಕೊಟ್ಟಂತಹ ಹೇಳಿಕೆಯನ್ನು ಅಲ್ಲಿ ಒಪ್ಪಿದ್ದಾರೆ. ಇಲ್ಲಿ ನೀವು ಏತಕ್ಕೆ ರಾಜಕೀಯ ಮಾಡುತ್ತೀರಿ. ಅಲ್ಲಿ ಅದನ್ನು ಒಪ್ಪಿಲ್ಲವೇ? ಮಾನ್ಯ ಸಚಿವರು ನೀಡಿರುವ ಉತ್ತರವನ್ನು ವಿರೋಧ ಪಕ್ಷದವರು ಒಪ್ಪಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಕೆಳಮನೆಯಲ್ಲಿ ವಿರೋಧ ಪಕ್ಷದವರು ಒಪ್ಪಿದ್ದಾರೆ.

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಈಗ ಅಲ್ಲಿ ಒಪ್ಪಿದ್ದರೆ, ಈ ಸದನದೊಳಗಡೆ...

**(ಗೊಂದಲ)**

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-**ವಿರೋಧ ಪಕ್ಷದವರ ವರ್ತನೆ ಸರಿಯಿಲ್ಲ.

**ಡಾ॥ ಯತೀಂದ್ರ ಎಸ್. (ವಿಧಾನಸಭಾ ಕ್ಷೇತ್ರ):-** ಮೂರು ದಿವಸ ಕಾದಿದರೆ ಏನು ತೊಂದರೆಯಾಗುತ್ತಿದೆ ಎಂಬುದು ಅರ್ಥವಾಗುತ್ತಿಲ್ಲ.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರೆಲ್ಲರೂ ನ್ಯಾಯಾಂಗ ತನಿಖೆ ಆಗಲೇಬೇಕು ಎಂದು ಘೋಷಣೆ ಕೂಗಿದರು)**

**ಶ್ರೀಮತಿ ಬಲ್ಕೀಸ್ ಬಾನು:-** ಈಗಾಗಲೇ ತೀರ್ಮಾನ ಮಾಡಿದಂತಹ ತನಿಖೆ ನಡೆಯಲಿ.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಘೋಷಣೆಗಳನ್ನು ಕೂಗಿದರು)**

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷದ ಮಾನ್ಯ ಸದಸ್ಯರೆಲ್ಲರೂ Magistrate Report ಬರಲಿ ಎಂದು ಘೋಷಣೆ ಕೂಗಿದರು)**

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರೆಲ್ಲರೂ ನ್ಯಾಯಾಂಗ ತನಿಖೆಯಾಗಬೇಕು ಎಂದು ಘೋಷಣೆ ಕೂಗಿದರು)**

**ಸಭಾಪತಿಯವರು:-** ಈಗ ಸದನವನ್ನು ನಾಳೆ ಮಂಗಳವಾರ ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

(ಸದನವು ಸಂಜೆ 5 ಗಂಟೆ 42 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 18ನೇ ಆಗಸ್ಟ್ ಮಾಹೆ 2026ರ ಮಂಗಳವಾರ ಬೆಳಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

****[XXX] ಈ ಚಿಹ್ನೆಯು ಮಾನ್ಯ ಸಭಾಪತಿಯವರು ಕಡತದಿಂದ ತೆಗೆದುಹಾಕಲಾಗಿರುವ ಪದಗಳು ಎಂಬುದನ್ನು ಸೂಚಿಸುತ್ತದೆ.**